ನಿಡುಗಲ್ಲು ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ

(೨೦೧೬-೧೭ನೇ ಸಾಲಿನ ಎಂ.ಫಿಲ್. ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ವೀರೇಶ ಯಾದವ ಪಿ.ಎಸ್.

ಮಾರ್ಗದರ್ಶಕರು
ಡಾ. ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೬-೧೭

ನಿಡುಗಲ್ಲು ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ

(೨೦೧೬-೧೭ನೇ ಸಾಲಿನ ಎಂ.ಫಿಲ್. ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ವೀರೇಶ ಯಾದವ ಪಿ.ಎಸ್.

ಮಾರ್ಗದರ್ಶಕರು

ಡಾ. ಕಲವೀರ ಮನ್ವಾಚಾರ

ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-೫೮೩೨೭೬

೨೦೧೬-೧೭

ಸಂಶೋಧಕರ ಪ್ರಮಾಣ ಪತ್ರ

'ನಿಡುಗಲ್ಲು ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ' ಎಂಬ ಶೀರ್ಷಿಕೆಯ ಸಂಶೋಧನ ಸಂಪ್ರಬಂಧವನ್ನು ಪ್ರಾಧ್ಯಾಪಕರಾದ **ಡಾ. ಕಲವೀರ ಮನ್ವಾಚಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್., ಪದವಿಗಾಗಿ ಸಲ್ಲಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ:

ವೀರೇಶ ಯಾದವ ಪಿ.ಎಸ್.
ಸಂಶೋಧನ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವೀರೇಶ ಯಾದವ ಪಿ.ಎಸ್. ಇವರು ಸಿದ್ಧಪಡಿಸಿ ಸಾದರಪಡಿಸಿದ **'ನಿಡುಗಲ್ಲು ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ'** ಎಂಬ ಶೀರ್ಷಿಕೆಯ ಸಂಶೋಧನ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್., ಪದವಿಗಾಗಿ ಸಲ್ಲಿಸಿರುತ್ತಾರೆ. ಪ್ರಸ್ತುತ ಸಂಪ್ರಬಂಧವನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ : ವಿದ್ಯಾರಣ್ಯ
ದಿನಾಂಕ:

ಡಾ. ಕಲವೀರ ಮನ್ವಾಚಾರ
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ವಿದ್ಯಾರಣ್ಯ – ೫೮೩ ೨೭೬

ನಿಡುಗಲ್ಲು ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹು ಪ್ರಚಲಿತವಾಗಿದೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ಈ ರಾಜಕೀಯ ಇತಿಹಾಸವೇ ಪ್ರಧಾನವಾಗಿದ್ದು, ಗ್ರಂಥದ ಕೊನೆಯಲ್ಲಿ ಆ ನಾಡಿನ ಕಲೆ, ಧರ್ಮ ಇತ್ಯಾದಿಗಳನ್ನು ಕುರಿತ ವಿಷಯಗಳ ಒಂದು ಅನುಬಂಧದ ರೂಪದಲ್ಲಿರುವುದುಂಟು. ಅಥವಾ ಅವುಗಳನ್ನು ನಿರೂಪಿಸುವ ಒಂದೆರೆಡು ಅಧ್ಯಾಯಗಳು ಬಂದಿರುವುದುಂಟು. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ. ಅಲ್ಲಿ ಬದುಕಿದ ಜನ, ಹೀಗೆ ಬದುಕಿದ ಜನರ ಒಂದು ಗಣನೀಯವಾದ ಭಾಗ. ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ. ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು, ಅದರ ಜೀವನ ಮೌಲ್ಯಗಳು, ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ. ಜನತೆಯ ಜೀವನವನ್ನು ಕುರಿತಾದ ಇಂತಹ ಅಧ್ಯಯನವನ್ನು ಸಾಮಾಜಿಕ ಅಧ್ಯಯನವೆಂದು, ಸಾಂಸ್ಕೃತಿಕ ಅಧ್ಯಯನವೆಂದು ಕರೆಯಬಹುದು. ಇಂತಹ ಅಧ್ಯಯನವು ರಾಜಕೀಯ ಅಧ್ಯಯನಕ್ಕಿಂತ ಶ್ರೇಷ್ಠವೆನ್ನುವ ಭಾವನೆ ನಮಗಿಲ್ಲ. ನಿಜವಾದ ವಿದ್ಯಾರ್ಥಿಗೆ ಯಾವ ಅಧ್ಯಯನವು ಇನ್ನೊಂದಕ್ಕಿಂತ ಹೆಚ್ಚಲ್ಲ, ಕಡಿಮೆಯೂ ಅಲ್ಲ.

ಅಧ್ಯಯನದ ಉದ್ದೇಶ

ಒಂದು ನಾಡಿನ ಚರಿತ್ರೆಯೆಂದರೆ ಅಲ್ಲಿ ಬಾಳಿದ ಜನಾಂಗದ ಚರಿತ್ರೆ. ಇಂತಹ ಜನಾಂಗ ಒಂದೆಡೆ ನಿಂತು ವಿಶಿಷ್ಟ ಬದುಕನ್ನು ಬದುಕಿರುತ್ತವೆ. ವಿಶಿಷ್ಟ ಸಂಸ್ಕೃತಿಯನ್ನು ಬೆಳೆಸಿರುತ್ತವೆ.

ಈ ಸಮಷ್ಟಿ ಸಂಸ್ಕೃತಿಯನ್ನು ಬೆಳೆಸಿರುತ್ತದೆ. ಈ ಸಮಷ್ಟಿ ಸಂಸ್ಕೃತಿಯನ್ನು ರೂಪಿಸುವಲ್ಲಿ ಆಯಾ ಜನಾಂಗಗಳಿಗೆ ಆಶ್ರಯ ನೀಡಿದ ಗ್ರಾಮ ಪಟ್ಟಣಗಳು ಮಹತ್ವದ ಪಾತ್ರ ವಹಿಸುತ್ತವೆ. ಈ ಮಾತಿಗೆ ಇತಿಹಾಸ ಪ್ರಸಿದ್ಧವಾದ ಬೆಬಿಲೋನಿಯಾ, ನಲಂದ, ವಿಕ್ರಮಶಿಲಾ, ಮೆಕ್ಕ, ಕಾಶಿ, ಶೃಂಗೇರಿ, ಕಲ್ಯಾಣ, ವಿಜಯನಗರ, ಶ್ರವಣಬೆಳಗೊಳ ಮುಂತಾದ ಪಟ್ಟಣಗಳನ್ನು ಹೆಸರಿಸಬಹುದು. ಇಂತಹ ಪಟ್ಟಣಗಳು ಆ ನಾಡಿನ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ, ನೆಲೆಬೆಲೆಗಳನ್ನು ಪ್ರತಿನಿಧಿಸುತ್ತವೆ. ಒಟ್ಟಿನಲ್ಲಿ ಈ ಸ್ಥಳಗಳು ಸಂಸ್ಕೃತಿಯ ಸಂವೇಧನೆಯ ಭೌತಿಕ ಪಟ್ಟಣಗಳೆನಿಸದೆ ಭೌದ್ಧಿಕ ಪಟ್ಟಣಗಳೆನಿಸಿ ನಾಡ ನುಡಿಯಾಗಿ ನಿಲ್ಲುತ್ತವೆ. ನಾಡ ಹಣೆಬರಹವನ್ನು ನಿರ್ಧರಿಸುತ್ತವೆ.

ಕಳೆದ ದಶಕಗಳಿಂದ ಇತಿಹಾಸವನ್ನು ನೋಡುವ ದೃಷ್ಟಿಯಲ್ಲಿ ಗಮನಾರ್ಹವಾದ ಬದಲಾವಣೆಗಳಾಗುತ್ತಿವೆ. ಇತಿಹಾಸ ರಚನೆಯ ಆಕರಗಳನ್ನು ಹೊಸ ಹೊಸ ರೀತಿಯಿಂದ ಅವುಗಳ ವಿವಿಧ ಮಗ್ಗಲುಗಳನ್ನು ಅಭ್ಯಸಿಸುವ ದೃಷ್ಟಿಕೋನ ಬೆಳೆದಿದೆ. ಕೇವಲ ರಾಜಕೀಯ ಚರಿತ್ರೆಯ ಅಧ್ಯಯನ ಮಾತ್ರವಲ್ಲದೆ ಸಾಂಸ್ಕೃತಿಕ ಇತಿಹಾಸ ರಚನೆಯ ಹಾದಿ ಹಿಡಿದಿರುವುದು ಕಂಡುಬರುತ್ತದೆ. ಎಲ್ಲಾ ಕ್ಷೇತ್ರದ ವಿದ್ವಾಂಸರೂ ಸಹ ಹಲವು ರೀತಿಗಳಲ್ಲಿ ಇತಿಹಾಸದ ಕಡೆಗೆ ಗಮನ ತೋರುತ್ತಿದ್ದಾರೆ. ಈ ಕಾರಣದಿಂದಾಗಿ ಇತಿಹಾಸ ಜನಾನುಮತವನ್ನು ಪಡೆದು ಸಾಮಾನ್ಯ ಜನರಲ್ಲಿ ಇತಿಹಾಸದ ಬಗೆಗೆ ಅರಿವು ಮೂಡುತ್ತದೆ. ಇದರ ಫಲವಾಗಿ ಐತಿಹಾಸಿಕ ಆಕರಗಳನ್ನು ಪ್ರಮುಖವೆನಿಸುವ ಶಾಸನಗಳನ್ನು ಐತಿಹಾಸಿಕ ನಗರ ಪಟ್ಟಣಗಳನ್ನು ವಿವಿಧ ದೃಷ್ಟಿಯಲ್ಲಿ ಅಧ್ಯಯನ ಮಾಡುವುದಾಗಿದೆ.

ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಅಧ್ಯಯನದ ಸಂದರ್ಭದಲ್ಲಿ ಸ್ಥಳೀಯ ಅರಸರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಇತ್ತೀಚೆಗೆ ಬೆಳಕು ಕಾಣದ ಹಲವಾರು ಸ್ಥಳೀಯ ಅರಸರ ವೈಶಿಷ್ಟ್ಯಪೂರ್ಣ ಇತಿಹಾಸ ಬೆಳಕು ಕಾಣುತ್ತಿದೆ. ಇಂತಹ ಅಧ್ಯಯನದಲ್ಲಿ ಇಂದು ಬರೀ ಶಾಸನಗಳನ್ನೇ ಅಲ್ಲದೆ, ಸಾಹಿತ್ಯ, ಜಾನಪದ, ಆಯಾ ಪ್ರದೇಶದ ಕ್ಷೇತ್ರಕಾರ್ಯಗಳಲ್ಲಿ ಪ್ರತ್ಯಕ್ಷ ಸಾಕ್ಷಿಗಳಾಗಿ ಸಿಗುವ ಕೋಟೆ, ಕೊತ್ತಲ, ದೇವಾಲಯ, ಅಳಿದುಳಿದ ಕಟ್ಟಡಗಳು, ಅವಶೇಷಗಳು ಭೌಗೋಳಿಕ ಅಂಶಗಳನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳಲಾಗಿದೆ. ಮಧ್ಯಕಾಲೀನ ಸಂದರ್ಭದಲ್ಲಿ ರಚಿತವಾದ ಸಣ್ಣಪುಟ್ಟ ಕೃತಿಗಳು ಇಂತಹ ಅಧ್ಯಯನಕ್ಕೆ ನೆರವಾಗುವ ಹಲವು ವಿಷಯಗಳತ್ತ ಬೆಳಕು ಚೆಲ್ಲುತ್ತವೆ. ಈ ನಿಟ್ಟಿನಲ್ಲಿ ನಿಡುಗಲ್ಲಿನ ಅಧ್ಯಯನವೂ ಸಹ ಗಣನೀಯವಾಗಿದೆ.

ಈಗಾಗಲೇ ಪ್ರಾದೇಶಿಕ ಪಾಳೆಗಾರರ, ಅರಸರ ವಿಷಯಗಳನ್ನು ಮತ್ತು ಅವರ ಇತಿಹಾಸವನ್ನು ಕುರಿತು ಹಾಗೂ ಸಾಂಸ್ಕೃತಿಕ ಹಳ್ಳಿಗಳನ್ನು ಕುರಿತ ಸಂಶೋಧನೆಗಳು ನಡೆದಿವೆ. ಜೊತೆಗೆ ಅವುಗಳ ಅಧ್ಯಯನದ ಅಗತ್ಯತೆಯನ್ನು ಸಹ ತೋರಿಸಿಕೊಟ್ಟಿವೆ. ಬಳ್ಳಿಗಾವೆ, ಶ್ರವಣಬೆಳಗೊಳ,

ಮಲಿಗೆರೆ, ಹೆಂಜೇರು (ಹೇಮಾವತಿ) ಹಾಗಲವಾಡಿ ಪಾಳೇಗಾರರ ಅಧ್ಯಯನ ಮುಂತಾದ ಸ್ಥಳೀಯ ಅರಸರ ಮತ್ತು ಸ್ಥಳಗಳ ಅಧ್ಯಯನ ನಮ್ಮ ಹಿರಿಯ ಸಂಸ್ಕೃತಿ ಮತ್ತು ಇತಿಹಾಸಕ್ಕೆ ಎಷ್ಟು ಅವಶ್ಯಕ ಎಂಬುದನ್ನು ಶಾಸನಗಳ ಹಿನ್ನೆಲೆಯಲ್ಲಿ ಅರಿಯಲು ಅವಕಾಶ ಈ ಸಂಶೋಧನೆಯಲ್ಲಿ ನಡೆದಿದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ನಿಡುಗಲ್ಲು ದುರ್ಗವು ತುಮಕೂರು ಜಿಲ್ಲೆಯ ಒಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಾಗೂ ಯಾತ್ರಸ್ಥಳ. ಇದು ಸುಂದರ ಗಿರಿಧಾಮವಾಗಿದ್ದು, ಪುರಾಣದಲ್ಲೂ, ಶ್ರಾದ್ಧಮಂತ್ರಗಳಲ್ಲಿಯೂ ಸಹ ಹೆಸರಿಸಲ್ಪಟ್ಟಿದೆ. ಇಷ್ಟೊಂದು ಐತಿಹಾಸಿಕ ಮಹತ್ವ ಪಡೆದ ಪ್ರದೇಶವಾಗಿದ್ದು, ಇಂದಿಗೂ ಸಹ ಹೆಸರುವಾಸಿಯಾಗಿದೆ. ಸುಮಾರು ಒಂಭತ್ತನೇ ಶತಮಾನದಿಂದ ಹದಿನೆಂಟನೇ ಶತಮಾನದವರೆಗೆ ಪ್ರಸಿದ್ಧ ಇತಿಹಾಸವಿರುವ ನಿಡುಗಲ್ಲು ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಮುಂತಾದ ಮಹತ್ವದ ವಿಷಯಗಳನ್ನು ತನ್ನ ಗರ್ಭದಲ್ಲಿ ಅಡಗಿಟ್ಟುಕೊಂಡಿದೆ. ಆ ಕಾರಣವಾಗಿ ಅದನ್ನು ನನ್ನ ಸಂಶೋಧನೆಯಲ್ಲಿ ಶಾಸನಗಳ ಹಿನ್ನೆಲೆಯಲ್ಲಿ ಮುಖ್ಯವಾಗಿ ಅಧ್ಯಯನ ಮಾಡಬೇಕೆಂಬುದು ನನ್ನ ಅಧ್ಯಯನದ ಮುಖ್ಯ ಉದ್ಧೇಶವಾಗದೆ.

ನಿಡುಗಲ್ಲು ಕರ್ನಾಟಕದ ಗಡಿಭಾಗದಲ್ಲಿರುವುದುರಿಂದ ಸಂಪೂರ್ಣ ಆಂಧ್ರಪ್ರದೇಶದಿಂದ ಸುತ್ತುವರಿದಿದೆ. ಇದುವರೆಗೂ ಯಾವುದೇ ಪ್ರಾಚ್ಯ ಇಲಾಖೆಯಾಗಲಿ, ಹಿರಿಯ ವಿದ್ವಾಂಸರಾಗಲಿ ಇತ್ತ ಗಮನ ಹರಿಸಿಲ್ಲ. ಹಾಗಾಗಿ ಅಲಕ್ಷ್ಯಕ್ಕೆ ಒಳಗಾದ ಒಂದು ಉತ್ತಮ ಪ್ರದೇಶದ ಇತಿಹಾಸವನ್ನು ಕಟ್ಟಿಕೊಡುವುದು ಒಬ್ಬ ಸಂಶೋಧಕನ ಕೆಲಸವೆಂದು ಭಾವಿಸಿದ್ದೇನೆ. ಜೊತೆಗೆ ಇಂಥ ವಿಷಯವಾಗಿ ಹಿರಿಯ ಸಂಶೋಧಕರು, ಸಾಹಿತಿಗಳು, ಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕ್ಕೋಸ್ಕರ ದುಡಿಯುತ್ತಲಿದ್ದು, ಕೆಲ ಯುವ ವಿದ್ವಾಂಸರು ಇದು ಲೌಕಿಕವಾಗಿ ಪ್ರಯೋಜನವಿಲ್ಲದ ಕ್ಷೇತ್ರವೆಂದು ಕೈಬಿಡುತ್ತಾ ಸಾಗಿದ್ದಾರೆ. ಇಂತಹ ಸಮಯದಲ್ಲಿ ಅದರ ಕಡೆ ಗಮನಹರಿಸುವುದು ಒಳ್ಳೆಯ ಕಾರ್ಯವೆಂಬುದು ಅಧ್ಯಯನದ ನಿಲುವು ಆಗಿದೆ.

ನಿಡುಗಲ್ಲು ಒಂದು ದುರ್ಗವೆ ಆದರೂ ಒಂದು ಊರು, ಒಂದು ಸೀಮೆ, ಒಂದು ಪ್ರಾಂತ್ಯ, ಒಂದು ರಾಜಧಾನಿ, ಪ್ರಾಚೀನ ಪಟ್ಟಣ, ಒಂದು ಪಾಳೆಯಪಟ್ಟು, ಒಂದು ಸಂಸ್ಥಾನ. ಹಾಗಾಗಿ ಇಂದಿನ ಅದರ ಸ್ವರೂಪವನ್ನು ಅದರ ಹಿಂದಿನ ಗತಚರಿತ್ರೆಯ ಮುಖವನ್ನು ವಿಶ್ಲೇಷಿಸುವ ಪ್ರಯತ್ನ ಈ ಅಧ್ಯಯನದ ಉದ್ದೇಶಗಳಲ್ಲೊಂದು. ನಿಡುಗಲ್ಲು ಪಾಳೆಪಟ್ಟು ಅಥವಾ ನಿಡುಗಲ್ಲು ಕರ್ನಾಟಕದ ದ್ವಿಭಾಷಾ ಪ್ರಾಂತ್ಯವಾಗಿದ್ದು, ನಿಡಗಲ್ಲಿನ ಅರಸರು, ಪಾಳೆಗಾರರು ಹೆಚ್ಚಿಗೆ ಆಂಧ್ರಪದೇಶಕ್ಕೆ ಹೊಂದಿಕೊಂಡಂತೆ ಆಳ್ವಿಕೆ ಮಾಡಿದವರು. ಹೆಂಜೇರು, ಮಡಕಶಿರಾ, ಶಿವುರಾಪಟ್ಟಣ, ಪೆನಾಗೊಂಡ, ರಾಯದುರ್ಗ, ಕಲ್ಯಾಣದುರ್ಗ ಮುಂತಾದ ಕಡೆಗಳಲ್ಲಿ ಕನ್ನಡ ತೆಲುಗು ದ್ವಿಭಾಷಾ ಪ್ರದೇಶವನ್ನು ಆಳಿದವರು. ಹಾಗಾಗಿ ನನ್ನ ಸಂಶೋಧನೆಗೆ ಒಂದು ಮಿತಿ

ಸೃಷ್ಟಿಸಿಕೊಂಡು ನಿಡಗಲ್ಲಿನ ಶಾಸನಗಳನ್ನು ಮುಖ್ಯವಾಗಿ ಸಾಮಾಜಿಕ ಮತ್ತು ಧಾರ್ಮಿಕ ಆಕರಗಳಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳುತ್ತೇನೆ.

ಶಾಸನಗಳನ್ನೇ ಮೂಲಸಾಮಗ್ರಿಯಾಗಿಟ್ಟುಕೊಂಡು ಅಧ್ಯಯನ ಮಾಡಿದರೆ ಆ ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಅಸಮಗ್ರವಾಗುತ್ತದೆ. ಆದ್ದರಿಂದ ಅವುಗಳ ಸಮಕಾಲೀನವಾದ ಕೋಟೆ, ಕೊತ್ತಲ, ದೇವಾಲಯಗಳು, ಜನಪದ ಐತಿಹ್ಯಗಳು ಮತ್ತು ಸಾಂಸ್ಕೃತಿಕ ಆಚರಣೆಗಳು ಅಲ್ಲಿನ ಸಾಮಾಜಿಕ ಸಾಂಸ್ಕೃತಿಕ ಸ್ವರೂಪ ಮುಂತಾದ ಅಂಶಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಚರ್ಚಿಸಿ ಸಮಗ್ರತೆ ತರುವುದು ಸಹ ಅಧ್ಯಯನದ ವ್ಯಾಪ್ತಿಯಾಗಿದೆ. ಪ್ರಸ್ತುತ ಅಧ್ಯಯನವು ಈ ಪ್ರದೇಶದ ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳನ್ನಾಧರಿಸಿರುವುದರಿಂದ ಇದು ಸಮಷ್ಟಿ ಜೀವನದಲ್ಲಿ ಅವಿರ್ಭವಿಸಿ ವ್ಯಷ್ಟಿ ಜೀವನದ ಉನ್ನತಿಗೆ ಸಾಧ್ಯವಾಗಿದೆ ಎನ್ನಬಹುದು. ಒಂದು ಪ್ರದೇಶದ ಜನರ ನಂಬಿಕೆಗಳು, ಜೀವನ ಮೌಲ್ಯಗಳು, ಸಾಹಿತ್ಯ ಕಲೆ, ಧರ್ಮ ಇತ್ಯಾದಿಗಳನ್ನು ಹೊಳಗೊಂಡ ಶಾಸನಾಧರಗಳು ಬಹುಮುಖ್ಯ ಐತಿಹಾಸಿಕ ಆಧಾರಗಳಾಗಿವೆ.

ಒಟ್ಟಾರೆಯಾಗಿ ಪರಮಪಾವನ ಕ್ಷೇತ್ರವಾಗಿ, ಕಲೆಯ ನೆಲೆಯಾಗಿ, ನಿಸರ್ಗ ಸೌಂದರ್ಯದ ತವರಾಗಿ, ಪವಿತ್ರ ಕ್ಷೇತ್ರವಾಗಿ ಅನೇಕ ಭಕ್ತರ ಚೇತನಗಳನ್ನು ಪಾವನಗೊಳಿಸಿದೆ. ಬಸದಿಗಳ, ದೇವಾಲಯಗಳ ಬೀಡಾಗಿ ಅಗಣಿತ ಧರ್ಮನಿಷ್ಠ ಭಕ್ತರಿಂದ ಪೂಜೆಗೊಳ್ಳುವ ಪುನೀತ ಸ್ಥಳಗಳಲ್ಲಿ ಒಂದಾದ ನಿಡುಗಲ್ಲು ಇತಿಹಾಸದ ಸಾಲಿನಲ್ಲಿ ಚರಿತ್ರೆಯಾಗಿ ಕಂಡರೂ ಸಮಷ್ಟಿಯಲ್ಲಿ ನಾಡಿನ ಇತಿಹಾಸವನ್ನೇ ಒಳಗೊಂಡಿದೆ. ಈ ಸ್ಥಳ ಆ ಪ್ರದೇಶದ ಜನರ ವಿಶಿಷ್ಟ ಜೀವನದ ಮಹಾಮೌಲ್ಯಗಳನ್ನು ಗರ್ಭೀಕರಿಸಿಕೊಂಡು ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಈ ನಿಟ್ಟಿನಲ್ಲಿ ಕಾಣಿಕೆ ಇತ್ತಿರುವ ಈ ಸ್ಥಳದ ಮಹತ್ವವನ್ನು ನೆಲದ ಮರೆಯ ನಿಧಾನದಂತೆ ಹೊರತೆಗೆಯುವುದೇ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಸಾಮಾನ್ಯ ಅರ್ಥದಲ್ಲಿ ವ್ಯಾಪ್ತಿ ಎಂದರೆ ಎಲ್ಲೆ, ಮೇರೆ, ಗಡಿ, ವೈಶಾಲ್ಯತೆ ಅಥವಾ ಸೀಮಾರೇಖೆ ಎಂದಾಗುತ್ತದೆ. ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹಳ ಮುಖ್ಯ. ನಿರ್ದಿಷ್ಟ ಹಾಗೂ ಉದ್ದೇಶಪೂರಕವಾದ ಸಂಶೋಧನೆ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಒಂದು ಚೌಕಟ್ಟು ಅಗತ್ಯ. ಈ ಚೌಕಟ್ಟಿನ ಕ್ರಮಬದ್ಧತೆ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನ ಮಿತಿಯನ್ನು ತೀವ್ರಗೊಳಿಸುವುದಲ್ಲದೇ ಸಂಶೋಧಕನನ್ನು ದಾರಿ ತಪ್ಪಿಸುತ್ತದೆ.

ನಿಡುಗಲ್ಲಿನಲ್ಲಿ ಕ್ರಿ.ಶ. ೯ನೇ ಶತಮಾನದಿಂದ ಆರಂಭವಾಗಿ ೧೭ನೇ ಶತಮಾನದವರೆಗೆ ಶಾಸನಗಳು ದೊರಕುತ್ತವೆ. ಇವುಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡು ನಿಡುಗಲ್ಲು ಅರಸರ

ಪಾಳೆಗಾರರ ಆಳ್ವಿಕೆ, ಕೊಡುಗೆಗಳು, ದೇವಾಲಯಗಳು, ಸಾಮಾಜಿಕ ವ್ಯವಸ್ಥೆ, ತೆರಿಗೆ ಪದ್ಧತಿ, ಅಂದಿನ ಜೈನಧರ್ಮ, ಶೈವ ಧರ್ಮ, ವೈಷ್ಣವ ಧರ್ಮಕ್ಕೆ ಅರಸರ ಕೊಡುಗೆಗಳು, ಪ್ರೋತ್ಸಾಹಗಳು, ಸಾಂಸ್ಕೃತಿಕ ಆಚರಣೆಗಳು ಅಂದಿನ ಶಿಕ್ಷಣ ವ್ಯವಸ್ಥೆಯನ್ನು ಅಧ್ಯಯನ ಕೈಗೊಳ್ಳುವುದು ನನ್ನ ಸಂಶೋಧನೆಯ ಮುಖ್ಯ ವ್ಯಾಪ್ತಿಯಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯ ಶೀರ್ಷಿಕೆಯು ನಿಡುಗಲ್ಲು ದುರ್ಗದ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದ್ದು, ನಿಡುಗಲ್ಲು ಶಾಸನಗಳೊಂದಿಗೆ ಇಲ್ಲಿನ ಆಳ್ವಿಕೆಗೆ ಸಂಬಂಧಿಸಿದಂತೆ ಗಡಿನಾಡ ಪ್ರಾಂತ್ಯದ ಈ ಪ್ರದೇಶದ ಆಂಧ್ರಪ್ರದೇಶದ ಶಾಸನಗಳನ್ನು ಅಲ್ಲಿರುವ ನಿಡುಗಲ್ಲು ಗೆ ಸಂಬಂಧಿಸಿದಂತೆ ವಿಚಾರಗಳನ್ನು ಕಾಲ, ಆಳ್ವಿಕೆ, ದಾನ, ದತ್ತಿಗಳ ಉಲ್ಲೇಖಗಳ ಕೆಲವು ಮಾಹಿತಿಗಳನ್ನು ಆನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

ನಿಡುಗಲ್ಲು ಅಧ್ಯಯನವು ಶಾಸನಗಳ ದಾಖಲಾತಿ ಮತ್ತು ವಿವರಣೆಗಳನ್ನೊಳಗೊಂಡಂತೆ ವಿವರಣಾತ್ಮಕವಾಗಿರುತ್ತವೆ. ಮುಖ್ಯವಾಗಿ ನಿಡುಗಲ್ಲು ಅರಸರ ಮತ್ತು ಪಾಳೇಗಾರರ ಆಡಳಿತ, ಸಾಮಾಜಿಕ, ಧಾರ್ಮಿಕ ಕೊಡುಗೆಗಳು ಮತ್ತು ಸ್ಥಳೀಯವಾಗಿ ಇವರ ಪ್ರಭುತ್ವವನ್ನು ಕುರಿತಂತೆ ಸಂಶೋಧನಾತ್ಮಕವಾಗಿ ಅದ್ಯಯನ ಕೈಗೊಳ್ಳಲಾಗಿದೆ. ಪ್ರಸ್ತುತ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ನಾಲ್ಕು ಅಧ್ಯಾಯಗಳಾಗಿ ವಿಭಾಗಿಸಲಾಗಿದ್ದು, ಪ್ರತಿಯೊಂದು ಅಧ್ಯಯನವು ಉಪಶೀರ್ಷಿಕೆಗಳನ್ನೊಳಗೊಂಡಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ವಿಷಯಗಳನ್ನೊಳಗೊಂಡಿದೆ. ಈ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಈ ಹಿಂದೆ ನಡೆದಿರುವ ನಿಡುಗಲ್ಲು ಅರಸರ ಬಗ್ಗೆ ಅಧ್ಯಯನಗಳ ಕುರಿತು ಮತ್ತು ಇಲ್ಲಿನ ಮಹತ್ವಗಳ ಕುರಿತು ಚರ್ಚಿಸಲಾಗಿದೆ. ಈ ವಿವರಗಳು ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಅಗತ್ಯವಾದ ಹಿನ್ನೆಲೆಯಲ್ಲಿ ರೂಪಿಸಿದೆ ಎಂದು ಹೇಳಬಹುದು.

ಎರಡನೆಯ ಅಧ್ಯಾಯವು ನಿಡುಗಲ್ಲು ಚರಿತ್ರೆಗೆ ಸ್ಥಳೀಯ ಮನೆತನಗಳ ಕೊಡುಗೆ ಶೀರ್ಷಿಕೆಯಿಂದಾಗಿ ಮತ್ತು ರಾಜಕೀಯ ಚರಿತ್ರೆ, ಪಾಳೇಗಾರರ ಆಳ್ವಿಕೆ ಎಂದು ಅಭ್ಯಸಿಸಲಾಗಿದೆ. ಇಲ್ಲಿ ನಿಡುಗಲ್ಲು ಅರಸರು ಸ್ಥಳೀಯವಾಗಿ ಸಾಮಾಜಿಕ ಮತ್ತು ಧಾರ್ಮಿಕವಾಗಿ ನೀಡಿದ ಕೊಡುಗೆಗಳು, ಅಂದಿನ ರಾಜಕೀಯ ಇತಿಹಾಸ, ಪಾಳೇಗಾರರ ಆಳ್ವಿಕೆ ಕಾಲದಲ್ಲಿ ನಿಡುಗಲ್ಲಿಗೆ ನೀಡಿದ ಕೊಡುಗೆಗಳನ್ನು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ನಿಡುಗಲ್ಲು ಶಾಸನಗಳ ಧಾರ್ಮಿಕ ಇತಿಹಾಸವೆಂದು ಅಧ್ಯಯನ ಕೈಗೊಳ್ಳಲಾಗಿದೆ. ಇಲ್ಲಿ ಅಂದಿನ ರಾಜಪ್ರಭುತ್ವ, ಪಾಳೆಗಾರರು, ಧಾರ್ಮಿಕವಾಗಿ

ನಿಡುಗಲ್ಲಿಗೆ ನೀಡಿದ ಕೊಡುಗೆಗಳನ್ನು ಚರ್ಚಿಸಿದೆ. ಮತ್ತು ಶೈವ ಕೊಟ್ಟುತ್ತೋಣೆ ಮತ್ತು ನಿಡುಗಲ್ಲಿನ ಸಂಬಂಧವನ್ನು ಶೈವಧರ್ಮದ ಹಿನ್ನೆಲೆಯಲ್ಲಿ ತಿಳಿಸಲಾಗಿದೆ. ಮತ್ತು ಜೈನಯತಿಗಳ ಪರಿಚಯ, ವೈಷ್ಣವ ಧರ್ಮದ ಪರಿಚಯ ಮತ್ತು ದೇವಾಲಯಗಳನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ನಿಡುಗಲ್ಲು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇಲ್ಲಿ ನಿಡುಗಲ್ಲಿನ ಇಂದಿನ ಸಾಮಾಜಿಕ ಸ್ಥಿತಿಗತಿ ಬಗ್ಗೆ ಚರ್ಚಿಸಲಾಗಿದೆ. ಮತ್ತು ನಿಡುಗಲ್ಲು ದುರ್ಗದಲ್ಲಿ ಪ್ರಚಲಿತದಲ್ಲಿರುವ ಸಾಂಸ್ಕೃತಿಕ ಆಚರಣೆಗಳನ್ನು ಮತ್ತು ಅಂದಿನ ತೆರಿಗೆ ಪದ್ಧತಿ ಕುರಿತು ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ನಂತರ ಸಮಾರೋಪವನ್ನು ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಂಡ ಫಲಿತಗಳು ಹಾಗೂ ಮಿತಿಗಳನ್ನು ಕುರಿತು ವಿವೇಚಿಸಲಾಗಿದೆ. ಹಾಗೆಯೆ ಅನುಬಂಧದಲ್ಲಿ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ನಿಡುಗಲ್ಲಿನ ದೇವಾಲಯಗಳ, ಶಾಸನಗಳ ಚಿತ್ರಪಟಗಳ ಮತ್ತು ನಿಡುಗಲ್ಲು ದುರ್ಗದ ನಕ್ಷೆ ಕೊಡಲಾಗಿದೆ.

ಅಧ್ಯಯನದ ವಿಧಾನ

ಯಾವುದೇ ಒಂದು ಕಾರ್ಯವು ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತಿಮುಖ್ಯ. ಇದೇ ರೀತಿ ಸಂಶೋಧಕನ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನಕ್ರಮ ಬಹಳ ಅವಶ್ಯಕವಾದುದು. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ನಿಡುಗಲ್ಲು ಗೆ ಸಂಬಂಧಿಸಿದಂತೆ ಮಾಹಿತಿ ಪಡೆದುಕೊಳ್ಳಲಾಯಿತು. ಈಗಾಗಲೇ ಸಂಶೋಧನೆ ಆಗಿರುವ ವಿಷಯಗಳೊಂದಿಗೆ ಮಾರ್ಗದರ್ಶಕರೊಂದಿಗೆ ಸಲಹೆಯನ್ನು ಪಡೆದುಕೊಂಡು ಮತ್ತು ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ವಿಷಯದ ಆಯ್ಕೆಯ ನಂತರ ನಿಡುಗಲ್ಲು ದುರ್ಗದ ಶಾಸನಗಳಿಗೆ ಸಂಬಂಧಿಸಿದಂತೆ ವಿಷಯ ಸಂಗ್ರಹಿಸುವುದರ ಜೊತೆಗೆ ಅಲ್ಲಲ್ಲಿ ಬಂದ ಬಿಡಿಲೇಖನಗಳನ್ನು, ನಿಬಂಧಗಳನ್ನು, ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಯಿತು. ನಂತರ ಅಧ್ಯಯನ ಮಾಡಿ ನಿಡುಗಲ್ಲು ಅರಸರ, ಪಾಳೆಗಾರರ ಶಾಸನ ಮತ್ತು ಇತರ ಆಕರಗಳಿಂದ ದೊರೆತ ಅಂಶಗಳನ್ನು ಕಾಲಾನುಕ್ರಮದಲ್ಲಿ ದಾಖಲಿಸಿಕೊಳ್ಳಲಾಯಿತು. ತದನಂತರ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಗ್ರಂಥಾಲಯದ ಕಾರ್ಯವನ್ನು ಕೈಗೊಳ್ಳಲಾಯಿತು. ತುಮಕೂರು ಜಿಲ್ಲಾ ಸಾರ್ವಜನಿಕ ಕೇಂದ್ರ ಗ್ರಂಥಾಲಯ, ಪಾವಗಡ ತಾಲೂಕು ಸಾರ್ವಜನಿಕ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯಗಳಿಗೆ ಭೇಟಿ ನೀಡಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಾಸನ ದಾಖಲೆಗಳನ್ನು ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಯಿತು. ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ ಇತರೆಡೆ ದೊರೆತ ಅನೇಕ ಗ್ರಂಥಗಳನ್ನು ಸಂಗ್ರಹಿಸಿಕೊಂಡು ಅಧ್ಯಯನ ಕ್ಷೇತ್ರಕಾರ್ಯದೊಂದಿಗೆ ಕೈಗೊಂಡಿದ್ದೇನೆ.

ಅಧ್ಯಯನದ ಸಮೀಕ್ಷೆ

ನಿಡುಗಲ್ಲು ದುರ್ಗವು ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಇಂತಹ ವಿಸ್ತಾರವಾದ ಇತಿಹಾಸವನ್ನು ಹೊಂದಿರುವ ನಿಡುಗಲ್ಲಿನ ಬಗ್ಗೆ ಇದುವರೆಗೆ ಕೆಲವು ಅಧ್ಯಯನಗಳು, ಸಂಶೋಧನೆಗಳು ನಡೆದು ಬೆರಳೆಣಿಕೆಯಷ್ಟು ಕೃತಿಗಳು, ಪ್ರಬಂಧಗಳು, ಲೇಖನಗಳು, ಲಾವಣಿಗಳು, ಜಾನಪದ ಗೀತೆಗಳು, ಕಾದಂಬರಿಗಳಂತಹ ಮುಂತಾದ ಪ್ರಕಾರಗಳು ರಚನೆಯಾಗಿವೆ. ಇವುಗಳಲ್ಲಿ ಕೆಲವು ವೈಚಾರಿಕ ಮತ್ತು ಚಾರಿತ್ರಿಕ ವಸ್ತು ಬಗೆಗಿನ ಖಚಿತ ವಿಶ್ಲೇಷಣೆಯಿಲ್ಲದೆ ಸೊರಗಿದ್ದರೂ ವಿವಿಧ ಕಾಲಘಟ್ಟಗಳಲ್ಲಿ ಆದ ಒಟ್ಟಾರೆ ಬದಲಾವಣೆ ಸ್ಥಿತ್ಯಂತರಗಳನ್ನು ಸ್ಥೂಲವಾಗಿಯಾದರೂ ತಿಳಿದುಕೊಳ್ಳಲು ಸಹಾಯಕವಾಗಿವೆ.

ಆರ್. ನರಸಿಂಹಾಚಾರ್ಯರು ನಿಡುಗಲ್ಲಿನ ಬಗೆಗೆ ಮೊದಲ ಬಾರಿಗೆ ಚರ್ಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮೈಸೂರು ಪುರಾತತ್ವ ಇಲಾಖೆಯ (ಎಂ.ಎಂ.ಆರ್) ವಾರ್ಷಿಕ ವರದಿಗಳಲ್ಲಿ ನಿಡುಗಲ್ಲು ಇತಿಹಾಸದ ಬಗೆಗೆ ಗಮನಾರ್ಹ ಲೇಖನಗಳನ್ನು ಪ್ರಕಟಿಸಿದ್ದಾರೆ. ಶಾಸನಗಳ ಪರಿವೀಕ್ಷಣೆಗೆಂದು ನಿಡುಗಲ್ಲಿಗೆ ಬಂದಾಗ ಅಲ್ಲಿನ ಶಾಸನಗಳನ್ನು ಪತ್ತೆ ಹಚ್ಚಿ ಓದಿ ಕೋಟೆಗಳು, ದೇವಾಲಯಗಳು, ಅದರೊಳಗಿನ ಮೂರ್ತಿಗಳು ಮುಂತಾದ ಅವಶೇಷಗಳನ್ನು ಪಟ್ಟಿಮಾಡಿದ್ಧಾರೆ. ಮತ್ತು ಇವರ 'ಶಾಸನ ಪದ್ಯಮಂಜರಿ' ಕೃತಿಯಲ್ಲಿ ನಿಡುಗಲ್ಲು ಶಾಸನಗಳಲ್ಲಿ ಬರುವ ಸಾಹಿತ್ಯಾಂಶಗಳು, ವರ್ಣನೆ ಮುಂತಾದ ಛಂದಸ್ಸನ್ನು ಗುರುತಿಸಿದ್ದಾರೆ. ಜೊತೆಗೆ ಇವರು ಬರೆದ 'ನಿಡುಗಲ್ಲು ಕೈಫಿಯತ್ತು' ಎನ್ನುವ ಲೇಖನ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ಲೇಖನ ನಿಡುಗಲ್ಲಿನ ಪ್ರಾಥಮಿಕವಾಗಿ ಅರ್ಥ ಮಾಡಿಕೊಂಡು ಮುಂದಿನ ಅಧ್ಯಯನದಲ್ಲಿ ತೊಡಗಲು ಸಹಾಯಕವಾಗಿದೆ. 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಉಮಾಪತಿಯವರ 'ನಿಡುಗಲ್ಲು ಕೈಫಿಯತ್ತು' ಎನ್ನುವ ಲೇಖನದಲ್ಲಿ ಸ್ಥಳಪುರಾಣ, ಐತಿಹ್ಯ ಮತ್ತು ಸ್ಥಳೀಯರ ಹೇಳಿಕೆ ಹಾಗೂ ಶಾಸನಗಳ ಹಿನ್ನೆಲೆಯಲ್ಲಿ ನಿಡುಗಲ್ಲಿನ ಚರಿತ್ರೆಯನ್ನು ಚರ್ಚಿಸಿದ್ದಾರೆ. ಡಾ. ಲಕ್ಷ್ಮಣ ತೆಲಗಾವಿ ಅವರ ಸಂಪಾದಕತ್ವದಲ್ಲಿ ಹೊರಬಂದಿರುವ 'ಹರತಿಯ ಸಿರಿ' ಎಂಬ ಲೇಖನದಲ್ಲಿ ಹರತಿಯ ಪಾಳೆಗಾರರು ಮತ್ತು ನಿಡುಗಲ್ಲು ಪಾಳೆಗಾರರ ಬಗ್ಗೆ ಹಲವಾರು ವಿದ್ವಾಂಸರೊಂದಿಗೆ ಚರ್ಚಿಸಿ ಇವರ ಪೂರ್ವಿಕರ ಆಡಳಿತ ವಿಭಾಗಗಳ ಮೂಲದ ಬಗ್ಗೆ ಹೇಳಲಾಗಿದೆ. ತಾ.ಸ. ಪುಷ್ಪ ಅವರು ಬರೆದಿರುವ 'ನಿಡುಗಲ್ಲು ವೈಭವ' ಕಾದಂಬರಿ ಐತಿಹಾಸಿಕ ಮಹತ್ವವನ್ನೊಳಗೊಂಡು ನಿಡುಗಲ್ಲಿನ ಕಥೆ, ಹಾಡು, ಶಾಸಾಂಶನಗಳ ಹಿನ್ನೆಲೆಯಲ್ಲಿ ರಚನೆಯಾಗಿದೆ. ಚಾರಿತ್ರಿಕ ಅಂಶಗಳೊಂದಿಗೆ, ವಿವಿಧ ಐತಿಹ್ಯಗಳನ್ನು ಆಧಾರಿಸಿ ರಚಿಸಿದಂತಹ ಕಾದಂಬರಿಯಾಗಿದೆ.

ಕೆ.ಆರ್. ಗಣೇಶ್ ಅವರ 'ಆಂಧ್ರಪ್ರದೇಶದ ಕನ್ನಡದ ಶಾಸನಗಳು' ಎನ್ನುವ ಸಂಶೋಧನ ನಿಬಂಧವು ಆಂಧ್ರಪ್ರದೇಶದ ಗಡಿಭಾಗದ ಶಾಸನಗಳ ಸಾಂಸ್ಕೃತಿಕ ಅಧ್ಯಯನವಾಗಿದೆ. ನಿಡುಗಲ್ಲು

ಚೋಳರ ಆಳ್ವಿಕೆಗೆ ಒಳಪಟ್ಟಿದ್ದರಿಂದ ಚೋಳರ, ನೋಳಂಬರ, ಸಾಧನೆ, ಕೊಡುಗೆಗಳ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿದ್ದಾರೆ. ಡಾ. ಡಿ.ವಿ. ಪರಮಶಿವಮೂರ್ತಿಯವರ 'ಸಂಶೋಧನೆಯ ಸಿರಿ' ಎನ್ನುವ ಸಂಶೋಧನಾ ಲೇಖನಗಳ ಸಂಗ್ರಹದಲ್ಲಿ ನಿಡುಗಲ್ಲು ಪಾಳೆಗಾರರು ಮತ್ತು ಹರತಿ ಪಾಳೆಗಾರರ ಬಗ್ಗೆ ಗಂಭೀರವಾದ ಚರ್ಚೆ, ಕ್ಷೇತ್ರಕಾರ್ಯ ಕೈಗೊಂಡು ಸ್ಪಷ್ಟಪಡಿಸಿದ್ದಾರೆ. ಚೆಲುವರಾಜನ್ ವಿ.ಆರ್. ಅವರ 'ಪಾವಗಡ ತಾಲೂಕು ದರ್ಶನ' ಎನ್ನುವ ಕೃತಿಯಲ್ಲಿ ನಿಡುಗಲ್ಲಿನ ಬಗ್ಗೆ ಕೆಲವು ಮಾಹಿತಿಯನ್ನು ನೀಡಿದ್ದಾರೆ.

ಮೇಲೆ ತಿಳಿಸಿದ ನಿಬಂಧಗಳಾಗಲಿ, ಕೃತಿಗಳಾಗಲಿ ಅಥವಾ ಲೇಖನಗಳಾಗಲಿ, ನಿಡುಗಲ್ಲು ಇತಿಹಾಸದ ಬಗೆಗೆ ವ್ಯಾಪಕ ಅಧ್ಯಯನ ನಡೆಸಿಲ್ಲ. ಅವು ಯಾವುದಾದರೂ ಒಂದು ವಿಷಯದ ಬಗೆಗೆ ಕೆಲವು ಮಿತಿಯಲ್ಲಿ ಊಹಾತ್ಮಕ ಚರ್ಚೆ ನಡೆಸಿವೆ. ಶಾಸನಗಳಿಂದ ಮೊದಲುಗೊಂಡು ನಿಡುಗಲ್ಲಿನ ಇತಿಹಾಸ, ದೇವಾಲಯಗಳು, ಸಾಂಸ್ಕೃತಿಕ ಆಚರಣೆಗಳು, ಸಾಮಾಜಿಕ ಸ್ವರೂಪ ಮುಂತಾದ ಸಾಮಾಜಿಕ ಧಾರ್ಮಿಕ ಅಂಶಗಳನ್ನು ಒಂದೆಡೆ ಕ್ರೋಢೀಕರಿಸಿ ಅವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದಂತೆಯೇ ಎಂಬುದು ನನ್ನ ಅಧ್ಯಯನದ ಮುಖ್ಯ ಗುರಿಯಾಗಿದೆ.

ಅಧ್ಯಾಯ ಎರಡು

ಪ್ರಾದೇಶಿಕ ಚರಿತ್ರೆಗೆ ಸ್ಥಳೀಯ ಮನೆತನಗಳ ಕೊಡುಗೆ

ಅಧ್ಯಾಯ ಎರಡು

ಪ್ರಾದೇಶಿಕ ಚರಿತ್ರೆಗೆ ಸ್ಥಳೀಯ ಮನೆತನಗಳ ಕೊಡುಗೆ

ಒಂದು ಪ್ರದೇಶದ ಇತಿಹಾಸವು ಹುಟ್ಟಿಬೆಳೆಯಲು ಅಲ್ಲಿನ ಭೌಗೋಳಿಕ ಲಕ್ಷಣಗಳು ಪ್ರಮುಖ ಪಾತ್ರವಹಿಸುತ್ತವೆ. ಅಲ್ಲಿ ಹುಟ್ಟುವ, ಹರಿಯುವ ನದಿಗಳು, ತೊರೆ, ಹಳ್ಳ, ಭೂಗರ್ಭ ಸಂಪತ್ತು, ಅರಣ್ಯಸಂಪತ್ತು, ಬೆಟ್ಟಗುಡ್ಡ, ವಾಯುಗುಣ ಇವು ಮಾನವನ ವಿಕಾಸಕ್ಕೆ ಪೂರಕವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ನಿಡುಗಲ್ಲು ಪ್ರದೇಶವು ಬಹಳ ಉದ್ದವಾದ ಕಗ್ಗಲ್ಲು ಬೆಟ್ಟಸಾಲುಗಳಿಂದ ಕೂಡಿದ್ದು, ಅವು ಆದಿಮಾನವನ ಜೀವನ ವಿಕಾಸಕ್ಕೆ ಪ್ರಶಸ್ತ್ಯ ಸ್ಥಳವಾಗಿದ್ದವು. ನಿಡುಗಲ್ಲಿನ ಆಸುಪಾಸಿನಲ್ಲಿ ಶಿಲಾಯುಗದ ಕಾಲದ ಆಯುಧ ನಿರ್ಮಾಣ ಘಟಕಗಳಿಗೆ ಉಪಯುಕ್ತವಾದ ಅಗ್ನಿಶಿಲೆಯ ಮಾದರಿಯಾದ ಗ್ರಾನೈಟ್ ಹಲವಡೆ ದೊರೆಯುತ್ತದೆ. ಜೊತೆಗೆ ಅಲ್ಲಲ್ಲಿ ದೊರಕುವ ಬೆಣಚುಕಲ್ಲು ಮತ್ತು ಮೃದುಕಲ್ಲು ಬಹಳ ಉಪಯುಕ್ತವಾಗಿದ್ದವೆಂದು ಹೇಳಬಹುದು. ನಿಡುಗಲ್ಲು ಪ್ರದೇಶದಲ್ಲಿ ದೊರೆಯುವ ಪುರಾತತ್ವ ಅವಶೇಷಗಳ ಅಧ್ಯಯನದಿಂದಾಗಿ ಆ ಪ್ರದೇಶದ ಮಾನವನ ಇತಿಹಾಸವನ್ನು ಶಿಲಾಯುಗಕ್ಕೆ ಕೊಂಡಯ್ಯಬಹುದು. ಅದನ್ನು ಹಳೆಶಿಲಾಯುಗ, ನೂತನಶಿಲಾಯುಗ, ತಾಮ್ರಶಿಲಾಯುಗ ಮತ್ತು ಬೃಹತ್ ಶಿಲಾಯುಗವೆಂದು ವಿಂಗಡಿಸಬಹುದು. ಈ ವಿಂಗಡಣೆಯ ಹಾಗೂ ಇದುವರೆಗೆ ದೊರೆತಿರುವ ಮತ್ತು ಕ್ಷೇತ್ರ ಕಾರ್ಯದಲ್ಲಿ ಗಮನಿಸಿದ ಸಾಕ್ಷ್ಯಗಳ ಆಧಾರದ ಹಿನ್ನೆಲೆಯಲ್ಲಿ ಮುಂದಿನ ವಿಷಯಗಳನ್ನು ಕಾಣಬಹುದು.

ನಿಡುಗಲ್ಲು ದುರ್ಗವು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಪಾವಗಡ–ಚಿತ್ರದುರ್ಗ ಹೆದ್ದಾರಿಯಲ್ಲಿ ಪಾವಗಡ ಪಟ್ಟಣದಿಂದ ಪಶ್ಚಿಮಕ್ಕೆ ಸುಮಾರು ೬೦ ಕಿ.ಮೀ. ದೂರದಲ್ಲಿರುವ ಪ್ರಸ್ತುತ ಒಂದು ಸಣ್ಣ ಹಳ್ಳಿ ಹಾಗೂ ನಾಮಮಾತ್ರ ಹೋಬಳಿ ಕೇಂದ್ರ. ಅಸಂಖ್ಯ ಗುಡ್ಡಗಾಡಿನಲ್ಲು ನಟ್ಟನಡುವೆ ನಿರ್ಜನ ನಿರಾಳ ಪ್ರದೇಶದಿಂದ ಸುತ್ತುವರಿಯಲ್ಪಟ್ಟು

ಸಮುದ್ರಮಟ್ಟದಿಂದ “೩೭೨೨ ಅಡಿಗಳಷ್ಟು ಎತ್ತರಕ್ಕೆ ಮೊನಚಾಗಿ ಚಾಚಿಕೊಂಡು ಸುತ್ತಲಿನ ಪ್ರದೇಶಕ್ಕೆ ಎದ್ದು ಕಾಣುವಂತಿದೆ.” ಈ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಸಮೀಪ ನಿಡಿದಾದ ಕಲ್ಲುಳ್ಳ ಬೆಟ್ಟದಿಂದ ಈ ಹೆಸರು ಬಂದಿದೆ.

ತುಮಕೂರಿನ ‘ಹಂಪಿ’ ಎಂದು ಕರೆಯಬಹುದಾದ ನಿಡುಗಲ್ಲು ದುರ್ಗಕ್ಕೆ ನಿಡುಗಲ್ಲು ಎಂದು ಹೆಸರು ಬರುವುದಕ್ಕಿಂತ ಮುಂಚೆ ಪೂರ್ವದಲ್ಲಿ ಇದಕ್ಕೆ ಬೇರೆ ಬೇರೆ ಹೆಸರುಗಳಿದ್ದುದಾಗಿ ಶಾಸನಗಳಿಂದ ಮತ್ತು ಇತರ ಆಧಾರಗಳಿಂದ ತಿಳಿದುಬರುತ್ತದೆ. ಪುರಾತನ ಐತಿಹ್ಯಗಳಲ್ಲಿ ಬರುವ ನೀಲಾವತಿ ಪಟ್ಟಣ ಇದೇ ಎಂದು ಖಚಿತವಾಗಿ ಹೇಳುವುದಕ್ಕೆ “ವಜ್ರಮುಕುಟರಾಯನ ಪುತ್ರರಾದ ಚೋರನಾಯಕರು ಚಿತ್ರಶೇಖರ ಮತ್ತು ಸೋಮಶೇಖರ ಇವರಿಂದ ಈ ಪಟ್ಟಣ ಆಳಲ್ಪಡುತ್ತಿದ್ದತೆಂದೂ ಚೋರ ಕಥೆಯೂ ಉದ್ಘೋಷಿಸುತ್ತದೆ.” ಇದೇ ಕಥೆಯಲ್ಲಿ ನೀಲಾವತಿ ಇದ್ದ ಪಟ್ಟಣವೇ ನಿಡುಗಲ್ಲು. ಹೇಮಾವತಿ ಇದ್ದ ಪಟ್ಟಣ ಹೇಮವತಿ (ಹೆಂಜೇರು), ರತ್ನಾವತಿ ಇದ್ದ ಪಟ್ಟಣ ರತ್ನಗಿರಿ ಎಂದು ತಿಳಿದುಬರುತ್ತದೆ. ಈ ಮೂರು ಜನ ಒಬ್ಬ ರಾಜನ ಮಕ್ಕಳಾಗಿದ್ದು, ಮೂವರು ಅಕ್ಕತಂಗಿಯರೆಂದು ಈ ಕಥೆ ತಿಳಿಸುತ್ತದೆ. ತದನಂತರ ನಿಡುಗಲ್ಲು ದುರ್ಗಕ್ಕೆ ಬಹುಕಾಲದವರೆಗೆ ನೀಲಾವತಿ ಪಟ್ಟಣವೆಂದೇ ಕರೆಯುತ್ತಿದ್ದಂತೆ ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ಅನೇಕ ಶಾಸನಗಳಲ್ಲಿ ನೀಲಾಂಜನಗಿರಿ ಎನ್ನುವ ಉಲ್ಲೇಖ ಸಿಗುತ್ತದೆ.

“ನೀಲಾ ಎಂದರೆ ಒಂದು ಬೆಟ್ಟ. ಸಾವಾಧಾನವಾದದ್ದು, ಶಾಂತಿಯುತವಾದದ್ದು, ಎನ್ನುವ ಅರ್ಥವನ್ನು ಕೊಡುತ್ತದೆ. ಹಿಂದೆ ಅನೇಕ ಸಿದ್ದರು. ತಪಸ್ವಿಗಳು, ವಾಸವಾಗಿದ್ದ ಈ ದುರ್ಗಕ್ಕೆ ಉತ್ತಮ ವಾತಾವರಣವೆಂದರೆ ಈ ‘ಶಾಂತಿ’ಯ ವಾತಾವರಣ ಎಂದು ಹೇಳಬಹುದು.” ಆ ಕಾರಣಕ್ಕಾಗಿಯೋ ಮತ್ತೊಂದು ಕಾರಣ ನೀಲಾವತಿ ಎನ್ನುವ ಸುಂದರಿ ಈ ಪಟ್ಟಣದಲ್ಲಿ ವಾಸವಾಗಿದ್ದುದಕ್ಕೂ ಈ ಹೆಸರು ಬಂದಿರಲು ಸಾಧ್ಯವಿದೆ.

ತದನಂತರ “ಕಾಳಂಜನಗಿರಿ, ಕಾಳಂಜನ ಬೆಟ್ಟ, ಕಾಳಂಜನ ದುರ್ಗ, ಕಾಳಾಂಜನಾದ್ರಿ ಎನ್ನುವ ಉಲ್ಲೇಖವಿರುವ ಅನೇಕ ಶಾಸನಗಳನ್ನು ನಾವು ಕಾಣುತ್ತೇವೆ. ಹರಿವಂಶದಲ್ಲಿ ಶ್ರಾದ್ಧ ಫಲವನ್ನು ಹೇಳುವಾಗ ಬಂದಿರುವ ಒಂದು ಶ್ಲೋಕದಲ್ಲಿ ಕಾಳಂಜನ ಗಿರಿ ಎನ್ನುವ ಉಲ್ಲೇಖವಿರುವುದನ್ನು ನಾವು ಕಾಣುತ್ತೇವೆ. ಅದರ ಕಥಾ ಸಾರಾಂಶ ಹೀಗಿದೆ. ‘ದಶಾವರ್ಣ ದೇಶದಲ್ಲಿ ಒಬ್ಬ ಬ್ರಾಹ್ಮಣನ ಶುಶ್ರೂಷೆ ಮಾಡಿಕೊಂಡಿದ್ದ ಏಳು ಜನ ಬೇಡರು ಗುರುಗಳ ಗೋವನ್ನು ವಧೆಮಾಡಿ ತಿನ್ನುತ್ತಾರೆ. ಆ ದೋಷವನ್ನು ಕಳೆದುಕೊಳ್ಳಲು ತಮ್ಮ ತಪ್ಪಿಗಾಗಿ ಪಶ್ಚಾತ್ತಾಪ ಪಡುತ್ತಾ ಈ ಕಾಳಂಜನ ಗಿರಿಗೆ ಬಂದು, ಬಹುಕಾಲವಿದ್ದು, ಮೃಗಜನ್ಮ ಕಳೆದುಕೊಳ್ಳುತ್ತಾರೆ’ ಎನ್ನುವ ಕಥೆಯನ್ನು ನೋಡಿದಾಗ ನಿಡುಗಲ್ಲಿನ ಕಾಳಂಜನ ಗಿರಿ ಎನ್ನುವ ಹೆಸರು ಎಷ್ಟು ಪುರಾತನವಾದುದು ಎಂದು ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಶ್ರೀರಾಮನು ಸೀತಾನ್ವೇಷಣೆಗೆ ಈ ಬೆಟ್ಟಕ್ಕೆ ಬಂದುದಾಗಿ ಹೇಳುವ ಕಥೆಯೂ ಇದೆ. ಅಂದರೆ ರಾಮಾಯಣ

ಕಾಲದಲ್ಲಿ ಈ ಕ್ಷೇತ್ರ ಪ್ರಸಿದ್ಧಿಯಲ್ಲಿತ್ತು ಮತ್ತು ಕಾಳಂಜನಗಿರಿ ಎಂಬ ಹೆಸರನ್ನು ಹೊಂದಿತ್ತು ಎಂದು ತಿಳಿದುಬರುತ್ತದೆ. ಮುಂದೆ ಅನೇಕ ಶಾಸನಗಳಲ್ಲಿ ಕಾಳಂಜನ ಗಿರಿ ಎಂದೇ ಉಲ್ಲೇಖಗೊಂಡಿರುವುದು ಇತ್ತೀಚಿನವರೆಗೂ ಕಂಡುಬರುತ್ತದೆ.

ಈ ಅರ್ಥಗಳನ್ನು ಇಟ್ಟುಕೊಂಡು ನೋಡಿದಾಗ ಕಾಳಂಜನಗಿರಿ ಎಂದರೆ ಒಂದು ಕಾಡು, ಒಂದು ಬೆಟ್ಟ ಎಂದು ಹೇಳಬಹುದು. ಮತ್ತು ಹಂಪೆಯ ಹತ್ತಿರದ ಬೆಟ್ಟ ಎಂದಾಗ ಅನೇಕ ದುರ್ಗಗಳು ಕಂಡುಬಂದರೂ ಇತಿಹಾಸ ಪ್ರಸಿದ್ಧವಾದ ಅದು ವಿಜಯನಗರ ರಾಜ್ಯದ ಅಧೀನದಲ್ಲಿದ್ದ ಪ್ರದೇಶವಾಗಿದ್ದುದರಿಂದ ಈ ಹೆಸರು ಬಂದಿರಬಹುದು. ಜೊತೆಗೆ ಆ ಬೆಟ್ಟದಲ್ಲಿ ಇರುವ ರಾಮಾಯಣದ ಕಾಲದಲ್ಲೇ ಶ್ರೀರಾಮನಿಂದ ಲಿಂಗ ಪ್ರತಿಷ್ಠಾಪಿಸಲ್ಪಟ್ಟಿತು ಎಂದು ಹೇಳುವ ಕಾಳಹಸ್ತೇಶ್ವರ ದೇವಾಲಯಕ್ಕೆ ಈ ಹೆಸರಿನ ಹಿನ್ನೆಲೆ ಇರಬಹುದು. ತಿರುಪತಿ ತಿಮ್ಮಪ್ಪನ ಬೆಟ್ಟಗಳಲ್ಲೂ ಕಾಳಹಸ್ತೇಶ್ವರ ದೇವಾಲಯವಿದ್ದು ಇಲ್ಲಿಗೂ ಸಂಬಂಧವಿದೆ ಎಂಬ ಐತಿಹ್ಯ ಕಾಣಬಹುದು.

ಕ್ರಿ.ಶ. ೧೭೦೦ರಲ್ಲಿ ನಿಡುಗಲ್ಲಿನಲ್ಲಿ ವಾಸವಾಗಿದ್ದ ಕವಿ, ಶಿಕ್ಷಕ ಚೆನ್ನಪ್ಪ ಅವರು ಬರೆದಿರುವ 'ನಿಡುಗಲ್ಲು ದುರ್ಗಾಷ್ಟಕ' ಎನ್ನುವ ಹಾಡೊಂದರಲ್ಲಿ 'ಕಾಳಂಜನಾದ್ರಿ' ಎನ್ನುವ ಪದದ ಉಲ್ಲೇಖವನ್ನು ನಾವು ಕಾಣುತ್ತೇವೆ. ಈ ಹೆಸರು ವರ್ಣನಾತ್ಮಕ ಮತ್ತು ಭಾವನಾತ್ಮಕ ಸನ್ನಿವೇಶಗಳನ್ನು ಹೇಳುವಾಗ ಉಲ್ಲೇಖಗೊಂಡಿದೆ.

ತದನಂತರ ನಿಡುಗಲ್ಲು ಎನ್ನುವ ಹೆಸರು ಈ ಪಟ್ಟಣ ಮತ್ತು ದುರ್ಗಕ್ಕೆ ಬಂದುದರ ಹಿನ್ನೆಲೆ ಸ್ಪಷ್ಟವಾಗಿ ಕಾಣುವುದಿಲ್ಲ. ಈ ದುರ್ಗಾ ಒಂದು ಆಯಕಟ್ಟಿನ ಬೆಟ್ಟಸಾಲಿನಲ್ಲಿದ್ದು ಎಲ್ಲಾ ಬೆಟ್ಟಗಳಿಗಿಂತ ಎತ್ತರವಾದುದ್ದಾಗಿಯೂ, ನಿಡಿದಾಗಿಯೂ ಇದೆ. ಅದು ಏರುಕಡಿದಾಗಿ ಇಳಿಜಾರಾಗಿ ನೆರವಾಗಿರುವುದರಿಂದ ಈ ಹೆಸರು ಬಂದಿದೆ ಎಂದು ಹೇಳಬಹುದು. ನಿಡಿದಾದ ಕಲ್ಲು ಎನ್ನುವ ಅರ್ಥದಲ್ಲಿ ಇದನ್ನು ನಿಡುಗಲ್ಲು ಎಂದು ಕರೆಯಲಾಗಿದೆ.

ಶಾಸನಗಳಲ್ಲಿ 'ಹರತಿ–ನಿಡುಗಲ್ಲು' ಎಂದು ಉಲ್ಲೇಖ ಹೊಂದಿದೆ. ಇದಕ್ಕೆ ಕಾರಣ ವಿಜಾಪುರದ ಹರತಿ ಸಾರವಾಡದ ಕಡೆಯಿಂದ ಬಂದ ಕೆಲವು ಪಾಳೆಗಾರರಲ್ಲಿ ತಿಮ್ಮಣ್ಣ ನಾಯಕ ಎನ್ನುವವನು ಹಿರಿಯೂರು ತಾಲ್ಲೂಕಿನ ಹರ್ತಿಕೋಟೆಯನ್ನು ಕೆಲವು ಕಾಲ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದನು. ತದನಂತರ ನಿಡುಗಲ್ಲು ಕೇಂದ್ರ ಸ್ಥಳವಾಗಿರುತ್ತದೆ. ಇವರು ಮೂಲತಃ ಹರತಿ ವಂಶದವರಾದುದರಿಂದ 'ಹರತಿ', 'ನಿಡುಗಲ್ಲು' ಎಂದು ಹೆಸರು ಬಂದಿತು.

ಆದರೆ ಅದು ಬಹುಕಾಲ ಉಳಿಯದೆ ಈಗ ನಿಡುಗಲ್ಲು ಎನ್ನುವ ಹೆಸರನ್ನೇ ಅದು ಹೊಂದಿದೆ. ಈ ಊರು ಮೂರು ಸ್ಥಳಗಳಲ್ಲಿ ಹರಡಿಕೊಂಡಿರುವದರಿಂದ ಕೋಟೆ ಒಳಗೆ ಬೆಟ್ಟದಲ್ಲಿರುವ ಗ್ರಾಮಕ್ಕೆ 'ಮೇಗಳ ಪೇಟೆ' ಎಂದೂ, ಬೆಟ್ಟದ ಬುಡದಲ್ಲಿರುವ ಗ್ರಾಮಕ್ಕೆ

'ನಿಡುಗಲ್ಲು' ಗ್ರಾಮ ಎಂದೂ ಅದರ ಪಕ್ಕ ಇರುವ ಮತ್ತೊಂದು ಗ್ರಾಮಕ್ಕೆ 'ದೇವರಾಯನ ರೂಪ್ಪ' ಎಂದೂ ಹೆಸರಿಸಿ ಕರೆಯುವುದುಂಟು. ಇವು ಸರ್ಕಾರಿ ದಾಖಲೆಗಳಲ್ಲೂ ಹೀಗೆಯೇ ಉಲ್ಲೇಖಗೊಂಡಿವೆ.

ಈ ಮೇಲಿನ ಎಲ್ಲ ಅಂಶಗಳ ಅವಲೋಕನೆಯಿಂದ ಸ್ಪಷ್ಟವಾಗುವುದೇನೆಂದರೆ ಪುರಾಣ ಕಾಲದಿಂದ, ರಾಮಾಯಣ ಕಾಲದಿಂದ ಈ ಬೆಟ್ಟ ಮತ್ತು ಪಟ್ಟಣ ಹಂತ ಹಂತವಾಗಿ ಕಾಲಕ್ರಮೇಣ ತನ್ನ ಹೆಸರನ್ನು ಬದಲಾಯಿಸುತ್ತಾ ತನ್ನ ಹೆಸರಿಗೆ ಅನೇಕ ಔಚಿತ್ಯಗಳನ್ನು ಕಲ್ಪಿಸಿಕೊಂಡು ಇಂದಿಗೂ ತನ್ನ ಮಹತ್ವ ಸಾರುತ್ತಿರುವುದು ಗಮನಾರ್ಹವಾಗಿದೆ.

ರಾಜಕೀಯ ಕೊಡುಗೆ:

ಇತಿಹಾಸವು ಕಳೆದುಹೋದ ಮಾನವನ ಬದುಕಿನ ಕಥೆಯನ್ನು ಸಾಕ್ಷ್ಯಾಧಾರಗಳ ಸಮೇತ ಲಿಖಿತ ರೂಪದಲ್ಲಿ ಮಾಡಿಸುವಂತಹದು. ಮಾನವನ ಕಥೆಯನ್ನು ಅದರ ನಿಜರೂಪದಲ್ಲಿ ನಿರೂಪಿಸುವ ಉದ್ದೇಶಗಳನ್ನು ಅದು ಹೊಂದಿರುತ್ತದೆ. ಇದಕ್ಕಾಗಿ ಅದು ಶಾಸನಗಳನ್ನು ಪಾಳು ದೇಗುಲಗಳನ್ನು, ತಾಮ್ರಪಟಗಳನ್ನು, ವಿದೇಶಿ ಬರಹ ರೂಪದ ಲೇಖನಗಳನ್ನು ನಾಣ್ಯಗಳನ್ನು, ಕೈಫಿಯತ್ತುಗಳನ್ನು, ರಾಜನಿಷ್ಠ ಕವಿ ಬರಹಗಳನ್ನು ಇತ್ಯಾದಿಗಳನ್ನು ಗಮನಿಸುತ್ತೇವೆ. ಅಂದರೆ ತಾವು ನಿರೂಪಿಸುತ್ತಿರುವ ವಿಚಾರವನ್ನು ನಿದರ್ಶನ ಪೂರಕವಾಗಿ ಹೇಳಿದರೆ ಮಾತ್ರ ಅದು ಇತಿಹಾಸ ಎನಿಸಿಕೊಳ್ಳುತ್ತದೆ. ಜನಪದ ಸಾಹಿತ್ಯವು ಮಾನವನ ಬದುಕಿನ ಕಥೆಯನ್ನೇ ನಿರೂಪಿಸಿದರೂ ಅದರ ಉದ್ದೇಶ ಇತಿಹಾಸಕ್ಕಿಂತ ಭಿನ್ನವಾದದು. ಮಾನವ ತನ್ನ ಬದುಕಿನಲ್ಲಿ ಕಂಡ, ಹೇಳಿದ, ಅನುಭವಿಸಿದ, ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ಇನ್ನೊಬ್ಬರ ಮನವರಿಯುವಂತೆ ಜನಪದ ಸಾಹಿತ್ಯ ಹೇಳುತ್ತದೆ. ಅದು ಸುಖದ ವಿವರಣೆ, ಹೊರಗಿನ ಕಥಾನಕವೂ, ಕಲ್ಪನೆಯ ಕಗ್ಗವೂ ಆಗಿರಬಹುದು. ಒಟ್ಟಾರೆಯಾಗಿ ಅನುಭವ ಸಾಮರಸ್ಯವನ್ನು ಸಹೃದಯನಿಗೆ ರಂಜಕ ಶೈಲಿಯಲ್ಲಿ ಒಪ್ಪಿಸುವುದೇ ಇಲ್ಲಿ ಮಾನ್ಯವಾಗುತ್ತದೆ.

ಇತಿಹಾಸಕ್ಕೆ ವಸ್ತುವಾಗುವ ಅನೇಕ ವಿಚಾರಗಳು ಜನಪದ ಸಾಹಿತ್ಯದ ಒಂದು ಅಂಗವಾಗಿರುವ ಜನಪದ ಗೀತೆಗಳಲ್ಲಿ ರೋಚಕವಾಗುತ್ತವೆ. ಆ ವಿಚಾರಗಳನ್ನು ತಳಮಟ್ಟ ಶೋಧಿಸುವ ಅದರ ನಿಜಾನಿಜಗಳನ್ನು ಕೆದಕಿ ನೋಡುವ ಉದ್ದೇಶ ಇಲ್ಲಿ ನಡೆದಿದೆ. ಜನಪದ ಸಾಹಿತ್ಯದ ಮೂಲಕ ನಿಡುಗಲ್ಲಿನ ಐತಿಹಾಸಿಕ ವಿಚಾರಗಳನ್ನು ಅವಲೋಕಿಸುವ ಕೆಲಸ ಇಲ್ಲಿ ನಡೆದಿದೆ.

ನೊಳಂಬ-ಪಲ್ಲವ

ಐತಿಹಾಸಿಕ ಆಧಾರಗಳ ಮೇಲೆ ಹೇಳಬೇಕೆಂದರೆ ಈ ತಾಲೂಕಿನ ಭಾಗವು ಮೊದಲು ಗಂಗ ಮನೆತನದ ರಾಜರಿಗೆ ಸೇರಿದ್ದಿತು. ಕ್ರಿ.ಶ. ೪೮೨ ತಾಮ್ರ ಶಾಸನದ ಪ್ರಕಾರ ಗಂಗರ ದುರ್ವಿನೀತನಿಗೆ ಈ ಪ್ರಾಂತ್ಯವನ್ನೊಳಗೊಂಡ ತುಮಕೂರು ಜಿಲ್ಲೆ ಸೇರಿತ್ತೆಂದು ತಿಳಿದುಬರುತ್ತದೆ. ಸುಮಾರು ಐದು ಶತಮಾನಗಳ ಕಾಲ ಈ ಪ್ರದೇಶವು ಗಂಗರ ಅಧೀನದಲ್ಲಿತ್ತು ಎನ್ನುವ

ವಿಚಾರವನ್ನು ಪಾವಗಡ ತಾಲೂಕಿನ ಒಂದೇ ಕಾಲಮಾನದ ಮೂರು ಶಾಸನಗಳು ತಿಳಿಸುವುದರ ಜೊತೆಗೆ ಶ್ರೀಪುರುಷನ ವಿಚಾರವನ್ನು ತಿಳಿಸುತ್ತದೆ. ಹಾಗಾಗಿ "ಹೇಮಾವತಿಯ ನೊಳಂಬ-ಪಲ್ಲವರ, ಗಂಗರಸರ ಅಧಿಕಾರತ್ವವನ್ನು ಒಪ್ಪಿಕೊಂಡು ಹೇಮಾವತಿಯನ್ನು ಆಳುತ್ತಿದ್ದಾಗ ಈ ಭಾಗವು ನೊಳಂಬವಾಗಿ ೩೨,೦೦೦ ನಾಡಿಗೆ ಸೇರಿದ್ದಿತು" ಎಂದು ತಿಳಿದುಬರುತ್ತದೆ.

"ಕ್ರಿ.ಶ. ೮೮೦ರಲ್ಲಿ ರಚಿತಗೊಂಡ ಪಾವಗಡ ತಾಲೂಕಿನ ನಿಡುಗಲ್ಲಿನ ಶಾಸನವೊಂದು ನೋಳಂಬರ ಅತಿ ಪ್ರಬಲ ದೊರೆ 'ಮಹೇಂದ್ರ'ನು ಹೇಮಾವತಿಯಲ್ಲಿ ರಾಜ್ಯಭಾರ ಮಾಡುವ ಸಂದರ್ಭದಲ್ಲಿ ಅವನು ಅಧೀನದೊರೆ 'ಬಿದಿಯ ಚೋರರಸನು' ನಿಡುಗಲ್ಲಿನಲ್ಲಿ ದೊರೆಯಾಗಿದ್ದಂತೆ ತಿಳಿಸುತ್ತದೆ." ಹಾಗೂ ಕ್ರಿ.ಶ. ೯೩೫ರ ಮತ್ತೊಂದು ಶಾಸನ ವೀರನೊಳಂಬನ ಹೆಸರನ್ನು ಹೇಳುತ್ತಾ 'ಪೊಂಗಸೇದೇವನ ಮಗ ಪೊನ್ನಯ್ಯ' ಎಂದಷ್ಟೇ ತಿಳಿಸುತ್ತದೆ. ಉಳಿದಂತೆ ಯಾವ ಶಾಸನಗಳೂ ಪ್ರತ್ಯೇಕವಾಗಿ ನೊಳಂಬ ಪಲ್ಲವ ಎಂದು ಹೆಸರಿಸುವುದಿಲ್ಲವಾದರೂ ನಿಡುಗಲ್ಲು ರಾಜಧಾನಿಯಾಗುವುದಕ್ಕೆ ಮುಂಚೆ ಹೇಂಜೇರನ್ನು ರಾಜಧಾನಿಯಾಗಿ ಮಾಡಿಕೊಂಡ ಈ ಮನೆತನದವರು ಅದರ ಅಧೀನದಲ್ಲಿಯೇ ನಿಡುಗಲ್ಲನ್ನು ಆಳಿದಂತೆ ಅನೇಕ ಶಾಸನಗಳು ತಿಳಿಸುತ್ತವೆ.

ಸುಮಾರು ಮೂರು ಶತಮಾನಗಳ ಕಾಲ ಕರ್ನಾಟಕದ ಇತಿಹಾಸದಲ್ಲಿ ಮೆರೆದ ಸಾಮಂತ ದೊರೆಗಳಲ್ಲಿ ಈ ನೊಳಂಬ-ಪಲ್ಲವರ ಸ್ಥಾನ ವಿಶಿಷ್ಟವಾದುದು. ಬಾಣರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು ಮೊದಲಾದ ರಾಜಕುಲಗಳು ಇವರೊಡನೆ ವಿವಾಹ ಸಂಬಂಧವನ್ನು ಬೆಳೆಸಿದ್ದರು. ಮೊದಲು ಹೇಮಾವತಿ ಮತ್ತು ನಿಡುಗಲ್ಲಿನಲ್ಲಿ ಆಳಿದ ಈ ವಂಶದ ಪ್ರಬಲ ದೊರೆ ಮೊದಲೇ ಹೇಳಿದಂತೆ ಮಹೇಂದ್ರ ಇವನು ಆಂಧ್ರದ ಕಂಬದೂರು ಮತ್ತು ಹೇಮಾವತಿಯಲ್ಲಿ ಹಾಗೂ ನಿಡುಗಲ್ಲಿನಲ್ಲಿ ಆಳ್ವಿಕೆ ಮಾಡಿದಂತೆ ಹಾಗೂ ಪರಿಗಿಯನ್ನು ಕೆಲವು ಕಾಲ ರಾಜಧಾನಿ ಮಾಡಿಕೊಂಡಂತೆ ಆಂಧ್ರದ ಶಾಸನಗಳಿಂದ ತಿಳಿದುಬರುತ್ತದೆ.

ನೊಳಂಬರ ಮಹೇಂದ್ರನ ಕಾಲದ ಎರಡು ಹಳಗನ್ನಡ ಶಾಸನಗಳು ಪಾವಗಡ ತಾಲೂಕಿನ ದೊರೆತಿವೆ. ಮೊದಲ ಶಾಸನವು ಗುಂಡ್ಲಹಳ್ಳಿಯಲ್ಲಿ ಅಕ್ಕಲೇಟಿ ಎಂಬ ರಾಣಿಯು ದೊಡ್ಡ ಕೆರೆಯನ್ನು ಕಟ್ಟಿಸಿದತೆ ತಿಳಿಸುವ ಇದರ ಕಾಲ ಕ್ರಿ.ಶ. ೮೭೨ ಆಗಿರುತ್ತದೆ. ಹಾಗೂ ಎರಡನೇ ಶಾಸನ ನಿಡುಗಲ್ಲು ಬೆಟ್ಟದ ಮೇಲಿರುವ ಕಾಳಸ್ತೀಶ್ವರನ ದೇವಾಲಯದ ಮುಂಭಾಗದಲ್ಲಿದೆ. ಇದರ ಕಾಲ ಕ್ರಿ.ಶ. ೮೮೦ ಆಗದ್ದು, ನೊಳಂಬ ಮಹೇಂದ್ರನ ದಂಡಾಧಿಕಾರಿ ಬಿದಿಯ ಚೋರರಸ ರಾಜ್ಯಭಾರ ಮಾಡುವ ಸಂದರ್ಭದಲ್ಲಿ ಜಿಕ್ಕಿಯೇ ವೈಜ್ಜರ ಮಗ ಚಂದ್ರಶೇಖರ ಮಡಿದಂತೆ ತಿಳಿಸುತ್ತದೆ. ಮುಂದೆ ನೊಳಂಬರ ಮಹೇಂದ್ರನ ಕಾಲದಲ್ಲಿ ಗಂಗರಿಗೂ ನೊಳಂಬರಿಗೂ ಅವ್ಯಾಹತವಾಗಿ ಯುದ್ಧಗಳು ನಡೆದು, ಹೇಮಾವತಿಯಲ್ಲಿ ನಡೆದ ಯುದ್ಧಗಳು ಮಹೇಂದ್ರನೂ, ದಂಡನಾಯಕನಾದ ಬಿದಿಚೋರರಸನೂ ಹತರಾದರು. ನಂತರ ಗಂಗರ ಮಾರಸಿಂಹನ

ಕಾಲದಲ್ಲಿ ನೊಳಂಬ ವಂಶವನ್ನ ನಿರ್ಮೂಲನ ಮಾಡಲು ಹೊರಟು ನೊಳಂಬ ರಾಜಕುಮಾರರನ್ನೆಲ್ಲಾ ಸಂಹರಿಸಿ 'ನೊಳಂಬ ಕುಲಾಂತಕ' ಎಂಬ ಬಿರುದನ್ನೇ ಧರಿಸಿದನೆಂದು ತಿಳಿದುಬರುತ್ತದೆ. ತದನಂತರ ಈ ಪ್ರದೇಶದಲ್ಲಿ ನೊಳಂಬರ ಯಾವುದೇ ದಾಖಲೆಗಳಾಗಲಿ ಕಂಡುಬಂದಿಲ್ಲ. ನೊಳಂಬರ ಕೊನೆಯ ಸಂತತಿ ಪೂರ್ವದ ಕಡೆ ಸಾಗುತ್ತಾ ಕ್ರಿ.ಶ. ೧೨ನೇ ಶತಮಾನದ ವೇಳೆಗೆ ತುಂಗಭದ್ರ ನದಿಯ ದಡದಲ್ಲಿರುವ ಕಂಪ್ಲಿಯಲ್ಲಿ ನೆಲೆಯೂರಿ ಚೋಳರಿಗೂ ಚಾಲುಕ್ಯರಿಗೂ ನಡೆದ ಯುದ್ಧದಲ್ಲಿ ನೊಳಂಬರು ಮರೆಯಾದರೆಂದು ತೋರುತ್ತದೆ. ಹೀಗಾಗಿ ನೊಳಂಬವಾಡಿಯು ನೊಳಂಬರಿಂದ ಮುಕ್ತಾಯವಾಯಿತು.

ನಂತರ ಬಂದ ಚೋಳರು ಹೊಯ್ಸಳರೊಳನೆ, ಗಂಗರೊಡನೆ, ಚಾಲುಕ್ಯರೊಡನೆ ಹೋರಾಡುತ್ತಾ, ಒಂದನೇ ರಾಜರಾಜನು ಕ್ರಿ.ಶ. ೧೦೧೬ರಲ್ಲಿ ಮರಣ ಹೊಂದಿದಾಗ ಯುವರಾಜ ರಾಜೇಂದ್ರಚೋಳನು ನೊಳಂಬವಾಡಿ ಮುಂತಾದವನ್ನು ಗೆದ್ದುಕೊಂಡನು. ಮುಂದೆ ರಾಜ್ಯ ವಿಸ್ತರಿಸುತ್ತಾ ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆಯ ಪೆನಗೊಂಡ, ಹಿಂದೂಪುರ, ಮಡಕಶಿರಾ ಮತ್ತು ಚಿತ್ರದುರ್ಗದ ಕೆಲವು ಭಾಗಗಳು ಹಾಗೂ ಪಾವಗಡ ತಾಲೂಕಿನ ನಿಡುಗಲ್ಲಿನ ಭೂಭಾಗಗಳನ್ನು ವಶಪಡಿಸಿಕೊಂಡನು. ತದನಂತರ ಅದನ್ನು ತಮ್ಮವರೇ ಆದ ಕರಿಕಾಲ ಚೋಳರೆಂದು ಕರೆದುಕೊಳ್ಳುತ್ತಿದ್ದ ನಿಡುಗಲ್ಲಿನ ಚೋಳರಿಗೆ ಧಾರೆ ಎರೆದಿರಬಹುದು. ಮುಂದೆ ಅವರೆ ನಿಡುಗಲ್ಲು ಚೋಳರೆಂದು ಪ್ರಸಿದ್ಧರಾದರು.

ನಿಡುಗಲ್ಲಿನ ಚೋಳರು

ಸುಮಾರು ಕ್ರಿ.ಶ. ೧೦೬೪ರ ವೇಳೆಗೆ ಉತ್ತರದಲ್ಲಿ ಕಲ್ಯಾಣದ ಚಾಲುಕ್ಯರು, ದಕ್ಷಿಣದಲ್ಲಿ ತಮಿಳ ಚೋಳರು, ದ್ವಾರಸಮುದ್ರದ ಹೊಯ್ಸಳರೂ ಪ್ರಬಲರಾಗುತ್ತ ಒಬ್ಬರ ಮೇಲೊಬ್ಬರು ಯುದ್ಧ ಮಾಡುತ್ತಾ ಭೂ ಆಕ್ರಮಣದಲ್ಲಿ ತೊಡಗಿದ್ದ ಸಂದರ್ಭದಲ್ಲಿ ದಕ್ಷಿಣ ಪಥದಲ್ಲಿ ಶಾಂತಿ ಇಲ್ಲದಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ನಿಡುಗಲ್ಲು ಚೋಳರು ಒಮ್ಮೆಲೆ ಇತಿಹಾಸದಲ್ಲಿ ಕಂಡುಬಾರದಿರುವುದು ಆಶ್ಚರ್ಯದ ಸಂಗತಿಯಾಗಿ ಕಂಡುಬರುತ್ತದೆ. ಇವರ ಮೂಲ ತಮಿಳುನಾಡು ಎಂದಿಟ್ಟುಕೊಂಡರೂ ನಿಡುಗಲ್ಲು, ಪಾವಗಡ ತಾಲೂಕಿನ ಸುತ್ತಲೂ ಪ್ರಬಲರಾದ ರಾಜರಿದ್ದರೂ, ಮುನ್ನೂರು ಮೈಲುಗಳ ದೂರದಿಂದ ಬಂದು ನಿಡುಗಲ್ಲಿನಲ್ಲಿ ನೆಲೆಸಿದುದು ಒಂದು ಪ್ರಶ್ನೆಯಾಗಿ ಉಳಿಯುತ್ತದೆ.

ಕ್ರಿ.ಶ. ೧೧ನೇ ಶತಮಾನದ ಪ್ರಾರಂಭದಿಂದ ೧೩ನೆಯ ಶತಮಾನದ ಅಂತ್ಯದವರೆಗೆ ಸುಮಾರು ಮೂರು ಶತಮಾನಗಳ ಕಾಲ ಚೋಳರೆಂದು ಕರೆದುಕೊಳ್ಳುತ್ತಿದ್ದ ಅರಸು ಮನೆತನದವರು, ಕರ್ನಾಟಕದ ದಕ್ಷಿಣ ಪೂರ್ವಭಾಗ ಮತ್ತು ಆಂಧ್ರಪ್ರದೇಶದ ಪಶ್ಚಿಮ ಭಾಗದಲ್ಲಿ ಪ್ರಭಾವಯುತವಾಗಿ ಆಳ್ವಿಕೆ ನಡೆಸಿದರು. ಇವರನ್ನು ಸಾಮಾನ್ಯವಾಗಿ ನಿಡುಗಲ್ಲಿನ ಚೋಳರೆಂದೇ ಕರೆಯಲಾಗುತ್ತಿದೆ. ಹಾಗೆಯೇ ಒರೆಯೂರು ಪುರವರೇಶ್ವರರು, ಮಹಾಮಂಡಲೇಶ್ವರರು ಎಂದು ಕರೆದುಕೊಳ್ಳುವ

ಚೋಳ ಮನೆತನದವರು, ಕಣೆಕಲ್ಲು-೩೦೦, ಅವರು ಹೇಮಾವತಿಯನ್ನು ರಾಜಧಾನಿಯದ್ದಾಗಿ ಮಾಡಿಕೊಂಡು ಆಳುತ್ತಾರೆಂದು ಆಂಧ್ರದ ಗುತ್ತಿ, ಕಲ್ಯಾಣದುರ್ಗ, ರಾಯದುರ್ಗ, ಮಡಕಶಿರ ತಾಲೂಕಿನ ಶಾಸನಗಳಿಂದ ತಿಳಿಯುತ್ತದೆ. ನಿಡುಗಲ್ಲಿನ ಚೋಳರು ತುಮಕೂರು ಜಿಲ್ಲೆಯ ಪಾವಗಡ ಮತ್ತು ಸಿರಾ ತಾಲೂಕಿನ ಶಾಸನಗಳಲ್ಲಿ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ತಾಲೂಕಿನ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ವೀರಪಾಂಡ್ಯ ಇರುಂಗೋಳ ಎನ್ನುವವನು ಕ್ರಿ.ಶ. ೧೧೨೮ರ ಸಮಯದಲ್ಲಿ ರೊದ್ದ-೩೦೦, ಸೀರ್ಯ-೩೦೦, ಸಿಂದವಾಡಿ ೧೦೦೦ ಎಂಬ ನಾಡುಗಳಿಗೆ ಅರಸನಾಗಿದ್ದನೆಂದು ಉಲ್ಲೇಖವೊಂದು ತಿಳಿಸುತ್ತದೆ. ಹೀಗಾಗಿ ಇವರು ತಮ್ಮ ರಾಜಕೀಯ ಪ್ರಾತಿನಿಧ್ಯವನ್ನು ರೊದ್ದ ಪ್ರದೇಶದಲ್ಲಿ ಆರಂಭಿಸಿದ್ದರಿಂದ ಇವರ ಮೊದಲ ಆಡಳಿತ ವಿಭಾಗವು ರೊದ್ದ ಆಗಿತ್ತೇ ಹೊರತು ನಿಡುಗಲ್ಲು ಅಲ್ಲವೆಂದು ತಿಳಿದುಬರುತ್ತದೆ. ಅಲ್ಲಿಂದ ಪ್ರಬಲರಾಗಿ ಮುಂದೆ ರೊದ್ದದ ಗೋವರೆಂದೇ ಕರೆದುಕೊಂಡಿದ್ದಾರೆ. ಆದರೆ ನಿಡುಗಲ್ಲು ಬೆಟ್ಟದಮೇಲಿನ ಕ್ರಿ.ಶ. ೮೮೦ ಶಾಸನವೊಂದು ಸಾಮಂತರಾಗಿದ್ದ ಚೋಳರ ಆಳ್ವಿಕೆಯನ್ನು ೮ನೇ ಶತಮಾನಕ್ಕೆ ಕೊಂಡೊಯ್ಯುತ್ತದೆ. ಹಾಗೂ ಪಲ್ಲವರ ಸಾಮಂತನಾಗಿದ್ದ ಚೋಳರ ಬಿದಿಯ ಚೋಳರಸ ಕಾಳಹಸ್ತೀಶ್ವರ ದೇವಾಲಯವನ್ನು ನಿರ್ಮಿಸಿದಂತೆ ತಿಳಿಸುತ್ತದೆ. ಹೀಗಾಗಿ ನಿಡುಗಲ್ಲಿನ ಚೋಳರು ಪಲ್ಲವರ ಸಾಮಂತರಾಗಿದ್ದುಕೊಂಡು ಆಳ್ವಿಕೆ ನಡೆಸುತ್ತಿದ್ದರೆಂದು ತಿಳಿದುಯುತ್ತದೆ. ಮುಂದೆ ಸುಮಾರು ಕ್ರಿ.ಶ. ೧೧೦೬ರವರೆಗೆ ಇವರ ಯಾವುದೇ ಕುರುಹು ಸಿಗುವುದಿಲ್ಲ.

ಕ್ರಿ.ಶ. ೧೧೦೬ರಲ್ಲಿ ಇರುಂಗೋಳ ಚೋಳಮಹಾರಾಜನು ಪ್ರಥಮ ಮಹಾಮಂಡಲೇಶ್ವರ ಆಗಿದ್ದಂತೆ ಚೋಳ ಶಾಸನವೊಂದು ಸಾರಿದ್ದು, ಇವನ ತಂದೆ ಗೋವಿಂದ, ತಾಯಿ ಮಹಾದೇವಿ ಎಂದು ತಿಳಿಸುತ್ತದೆ. ನಿಡುಗಲ್ಲಿನ ಚೋಳರಿಗೆ ಚೋಳ ಮಹಾಮಂಡಲೇಶ್ವರ, ಒರೆಯೂರ ಪುರವರೇಶ್ವರ, ರೊದ್ದದಗೋವ, ಅರವತ್ತಾರು ಮಂಡಳಕರಗಂಡ, ಚೋಳಮಹಾರಾಜ, ಇತ್ಯಾದಿ ಬಿರುದುಗಳಿರುವುದನ್ನು ಇಲ್ಲಿ ದೊರೆತಿರುವುದಾಗಿ ಶಾಸನಗಳಿಂದ ತಿಳಿಯಬಹುದು.

ಇವರು ತಮ್ಮ ಶಾಸನಗಳಲ್ಲಿ ಚೋಳ ವಂಶಜರೆಂದು ಕರೆದುಕೊಂಡಿದ್ದಾರೆ. ಅಲ್ಲದೇ ಇವರ ಬಿರುದುಗಳಲ್ಲೊಂದಾದ 'ಒರೆಯೂರ' ಪುರಾವಧೀಶ್ವರ ಎಂಬುದು ಇವರ ಮೂಲ ಚೋಳ ಸಂತತಿಗೆ ಸೇರಿಸಬಹುದಾದರೂ ಇವರು ಮೂಲತಃ ತಮಿಳುನಾಡಿನ ಚೋಳ ಮನೆತನದವರೋ ಅಥವಾ ತೆಲುಗು ಚೋಡ ಮನೆತನಕ್ಕೆ ಸೇರಿದವರೋ ಎಂಬುದು ಮಾತ್ರ ಸ್ಪಷ್ಟವಾಗಿಲ್ಲ. ಆದರೆ ನಿಡುಗಲ್ಲು ಪ್ರಾಂತ್ಯದಲ್ಲಿ ಹಾಗೂ ಪಕ್ಕದ ಆಂಧ್ರಪ್ರದೇಶದ ಮಡಕಶಿರಾ, ಗುತ್ತಿ, ಕಲ್ಯಾಣದುರ್ಗ, ಮುಂತಾದ ಕಡೆ ಸಿಕ್ಕಿರುವ ಚೋಳರಿಗೆ ಸೇರಿದ ಸುಮಾರು ಐವತ್ತು ಶಾಸನಗಳು ಸಹ ಕನ್ನಡದಲ್ಲಿಯೇ ಇವೆ ಎನ್ನುವುದನ್ನು ಗಮನಿಸಿದರೆ ಇವರ ಮೂಲ ಕರ್ನಾಟಕದ ದಕ್ಷಿಣಭಾಗವೇ ಇರಬಹುದು. ಇಲ್ಲವೇ ಅವರ ಶಾಖೆಗಳಲ್ಲಿ ಇದೂ ಒಂದಾಗಿರಬಹುದು ಎಂದು ಕಾಣುತ್ತದೆ.

ಸದ್ಯದ ನಿಡುಗಲ್ಲು ಚೋಳರ ವಂಶಾವಳಿಯನ್ನು ತಿಳಿಯುವ ಕ್ರಿ.ಶ. ೧೨೪೮ರ ಶಾಸನವೊಂದು 'ಜನತಾ ಸ್ತುತ್ಯಾಜಟಖ್ಯಾ ಚವಾವಕನೂಜಂ ಬ್ರಹ್ಮಭೋಗೀಂದ್ರನತನ ಪುತ್ರಂ ಕಲಿಮಂಗಿಯಾತನ ಸುತಂ ಬೀಚಿ ತನ್ನಂದನ ಗೋವಿಂದ ಮಹೀಪನಾತನ ಸುಪುತ್ರಂ ತಾನಿರುಂಗ್ಗೋಳನಾತನ ಸೂಮಪ್ರಿಯ ಭೋಗನಾತನ ಮಗಂ ಬ್ರಹ್ಮಭೂಪಾಳಕಂ' ಎಂದು ವರ್ಣಿಸುತ್ತದೆ. ಇದನ್ನು ಇರುಂಗೊಳಚೋಳನು ಹಾಕಿಸಿದ್ದು, ಅವನನ್ನು ಅದರಲ್ಲಿ ಪ್ರಪ್ರಥಮ ಮಹಾಮಂಡಲೇಶ್ವರನಿವನೆಂದು ಹೇಳುತ್ತದೆ.

ಇದುವರೆಗೂ ದೊರೆತ ಚೋಳರ ಶಾಸನಗಳ ಆಧಾರದ ಮೇಲೆ ಇವರ ವಂಶಾವಳಿಯನ್ನು ಈ ರೀತಿ ಚಿತ್ರಿಸಬಹುದಾಗಿದೆ.

ಜಟ ಚೋಳ
|
ಬ್ರಹ್ಮಭೋಗೇಂದ್ರ
|
ಮಂಗರಸ (ಮಂಗಿ)
|
ಬೀಚ ಅಥವಾ ಬಿಟ್ಟಿದೇವ
|
ಗೋವಿಂದ ದೇವ
|
ಇರುಂಗೋಳ ದೇವ ಚೋಳ
|
ಮಲ್ಲಿದೇವ ಚೋಳ
|
ಭೋಗದೇವ ಚೋಳ
|
ಬಮ್ಮದೇವ ಚೋಳ
|
ಇರುಂಗೋಳ ದೇವ ಚೋಳ
|
ಬೊಮ್ಮ
|
ಗಣೇಶ್ವರ

ನಿಡುಗಲ್ಲಿನಲ್ಲಿ ದೊರೆತಿರುವ ಚೋಳರ ಶಾಸನಗಳಲ್ಲಿ ಜಟ ಮತ್ತು ಬ್ರಹ್ಮಬೋಗೇಂದ್ರರ ಶಾಸನವಾಗಲಿ ಅವರ ಆಳ್ವಿಕೆ, ಸಾಧನೆ, ಹೋರಾಟದ ಯಾವುದೇ ವಿಚಾರಗಳು ಲಭ್ಯವಿಲ್ಲ. ಚೋಳ ಮಹಾರಾಜನೆಂದು, ಮಹಾಮಂಡಲೇಶ್ವರನೆಂದು ಕರೆಸಿಕೊಳ್ಳುವ ಮಂಗರಸನು ರೊದ್ದ-೩೦೦ ಮತ್ತು ಕಣಿಕಲ್ಲು ೩೦೦ನ್ನು ಆಳುತ್ತಿದ್ದನೆಂದು ಕ್ರಿ.ಶ.೧೦೭೮ರ ಗುತ್ತಿ ತಾಲೂಕಿನ ಶಾಸನವೊಂದು ತಿಳಿಸುತ್ತದೆ. ಈ ಶಾಸನವೊಂದು ತಿಳಿಸುತ್ತದೆ. ಈ ಶಾಸನವೂ ತ್ರಿಭುವನಮಲ್ಲನ ಪಾದಪದ್ಮೋಪ ಜೀವಿಯೆಂದು ಕರೆಯುತ್ತದೆ. ಉಳಿದಂತೆ ಮಂಗಸನ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ.

ಮತ್ತೆ ಈ ದೊರೆಗಳು ಪ್ರಸಿದ್ಧಿಗೆ ಬರುವುದು ಮಂಗರಸನ ಮರಿಮಗನಾದ ಒಂದನೆಯ ಇರುಂಗೊಳದೇವ ಚೋಳ ಮಹಾರಾಜನ ಕಾಲದಲ್ಲಿ. ಇವನು ಕಣೆಕಲ್ಲು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನೆಂದು ಕಲ್ಯಾಣದುರ್ಗ ತಾಲ್ಲೂಕಿನ ಕ್ರಿ.ಶ. ೧೧೨೫ರ ಶಾಸನವೊಂದು ತಿಳಿಸುತ್ತದೆ. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಶಾಸನವೊಂದು ಒಂದನೆಯ ಇರುಂಗೋಳ ಕ್ರಿ.ಶ. ೧೧೧೯ರಲ್ಲಿ ಆಳ್ವಿಕೆ ಮಾಡುತ್ತಿದ್ದಂತೆ ಸ್ಪಷ್ಟವಾಗಿ ತಿಳಿಸುತ್ತದೆ.

ಕ್ರಿ.ಶ. ೧೧೩೮ರಲ್ಲಿ ಕಲ್ಯಾಣ ಚಾಲುಕ್ಯರ ಜಗದೇಕಮಲ್ಲನು ದೊರೆಯಾಗಿದ್ದಾಗ, ಮೊದಲನೆಯ ಇರುಂಗೋಳನು ಗೋವಿಂದವಾಡಿಯಲ್ಲಿ ಆಳುತ್ತಿದ್ದಂತೆ ಕಲ್ಯಾಣದುರ್ಗದ ಶಾಸನವೊಂದು ತಿಳಿಸುತ್ತದೆ. ಒಂದನೆ ಇರುಂಗೋಳನ ತಂದೆ ಗೋವಿಂದ ದೇವನ ಕಾಲದಲ್ಲೇ ಈ ಚೋಳರಾಜರು ಹೊಯ್ಸಳರೊಡನೆ ಹೋರಾಡಿದಂತೆ ಕಂಡುಬರುತ್ತದೆ. ಒಂದನೇ ಇರುಂಗೋಳನು ವಿಕ್ರಮಾದಿತ್ಯನಿಗೆ ಕರ್ನಾಟಕ, ಆಂಧ್ರ, ದ್ರಾವಿಡ, ಗೌಡ, ಕಳಿಂಗ, ಅಂಗ, ದೇಶದವನೂ ಗೆದ್ದುಕೊಟ್ಟಂತೆ ಗೋವಿಂದವಾಡದ ಶಾಸನವೊಂದು ತಿಳಿಸುತ್ತದೆ.

ಇರುಂಗೋಳನು ಹೊಯ್ಸಳರೊಡನೆ ಸದಾ ಕಾದಾಡುತ್ತಿದ್ದನು. ಇವನ ಮಗನಾದ ಮಲ್ಲಿದೇವನು ಚಾಲುಕ್ಯ ವಿಕ್ರಮಾದಿತ್ಯನು ಕ್ರಿ.ಶ. ೧೧೪೭ರಲ್ಲಿ ಎರಡನೇ ಜಗದೇಕಮಲ್ಲನ ಸಾಮಂತನಾಗಿದ್ದನು. ಇವನ ಮಂತ್ರಿ ತಂತ್ರಪಾಲನ ಶೌರ್ಯ ಪರಾಕ್ರಮಗಳೂ ಉಜ್ವಲವಾಗಿ ವರ್ಣಿತವಾಗಿವೆ. ಇವನು ನಿಡುಗಲ್ಲಿನ ದೇವತೆಯ ಹೆಸರಿಗೆ ಅನೇಕ ದತ್ತಿಗಳನ್ನು ಬಿಟ್ಟಿದ್ದನೆಂಬ ಹೇಳಿಕೆ ಇದೆ. ಮಲ್ಲಿದೇವನಿಗೆ ಲಕ್ಷ್ಮಾದೇವಿ, ಸೀತಾದೇವಿ ಎಂಬಿಬ್ಬರು ರಾಣಿಯರು ಬಮ್ಮ ಎಂಬ ಮಗನೂ ಇದ್ದನೆಂದು ಈ ಶಾಸನದಿಂದ ತಿಳಿದುಬರುತ್ತದೆ.

"ಕ್ರಿ.ಶ. ೧೧೫೦ರ ನಿಡುಗಲ್ಲಿನ ಶಾಸನವೊಂದು ಮಲ್ಲಿದೇವನು ಕುರಿತದ್ದಾಗಿದ್ದು, ಆ ಶಾಸನದಲ್ಲಿ ಮಲ್ಲಿದೇವನು, ಸತ್ಯಾಶ್ರಯ ಕುಲತಿಲಕ ಚಾಳುಕ್ಯಾಭರಣಂ ಎಂದು ಹೊಗಳುತ್ತದೆ. ಇವನು ಕಲ್ಯಾಣದಲ್ಲಿ ಸುಖ ಸಂತೋಷದಿಂದ ಹೆಂಜೇರು ಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದಂತಹ ಸಮಯದಲ್ಲಿ ಇವನ ಸೇನಾಧಿಪತಿ ಮಹಾತಂತ್ರಪಾಲನಾದ ನಾಮಣನು ನಿಡುಗಲ್ಲಿನಲ್ಲಿ ಶ್ರೀ ನಾಗೇಶ್ವರ ದೇವರ ನೈವೇದ್ಯಕ್ಕೆ, ಅಂಗಭೋಗ, ರಂಗಭೋಗ, ನಂದಾದೀವಿಗೆಗೆ ಪಾತ್ರಪಾವುಳಕ್ಕೆ, ಬ್ರಾಹ್ಮಣರ ತಪೋಧನರ ಆಹಾರನ್ನದಾನಕ್ಕೆ ಮುತ್ತೂಕೂರಿನ, ಮೂಡಣ ನಾಗಸಮುದ್ರದದ ಬಳಿ ಕನ್ನೆಗೆರೆಯನ್ನು ಕಟ್ಟಿಸಿ ದಾನದತ್ತಿಗಳನ್ನು ಕೊಟ್ಟುದಾಗಿಯೂ ಮತ್ತು ವಿವಿಧ ಸುಂಕಗಳನ್ನು ಆ ದೇವಾಲಯಕ್ಕೆ ಕೊಡಬೇಕೆಂದು ಶಾಸನವನ್ನು ಹಾಕಿಸಿದ್ದಾನೆ. ಕ್ರಿ.ಶ. ೧೧೬೭ನೆಯ ಶಾಸನವೊಂದು ಜಗದೇಕಮಲ್ಲಿದೇವಾ ಚೋಳ 'ಅರವತ್ತು ನಾಲ್ವರಂ ಮಂಡಳಿಕರ ಗಂಡ ! ಬಂಟರಬಾವ' ಮುಂತಾಗಿ ಮಲ್ಲಿದೇವನನ್ನು ಹೊಗಳುತ್ತದೆ. ಹಾಗೂ ಅವನ ಹೆಂಡತಿ ಲಕ್ಷ್ಮೀದೇವಿಯ ವಿಚಾರ ಮತ್ತು ಆಕೆಯು ನಿಡುಗಲ್ಲು ಸಮೀಪದ ಅರಸೀಕೆರೆ ಶ್ರೀ ಮಲ್ಲಿಕಾರ್ಜುನ ದೇವರಿಗೆ ವಿವಿಧ ದಾನದತ್ತಿಗಳನ್ನು ಕೊಟ್ಟಂತೆ ತಿಳಿಸುತ್ತದೆ." ೧೮

ಈ ಎರಡು ಶಾಸನಗಳನ್ನು ಗಮನಿಸಿದಾಗ ಹೊಯ್ಸಳ ವಿಷ್ಣುವರ್ಧನನಿಂದ ಗೋವಿಂದವಾಡಿಯೂ ಆಕ್ರಮಣಕ್ಕೆ ತುತ್ತಾದ ಮೇಲೆ ಈ ಚೋಳ ದೊರೆಗಳು ಈಗಿನ ಆಂಧ್ರದ ಮಡಕಶಿರಾ ತಾಲೂಕಿನ ಹೆಂಜೇರಿಗೆ (ಹೇಮಾವತಿ) ತಮ್ಮ ರಾಜಧಾನಿಯನ್ನು ಬದಲಿಸಿಕೊಂಡಂತೆ ಕಾಣುತ್ತದೆ. ಮಲ್ಲಿದೇವ ಚೋಳಮಹಾರಾಜನು 'ಶೀರ್ಯಾ' (ಶಿರಾ) ನಾಡಿನ ರಾಜಧಾನಿ ಹೆಂಜೇರಿನಲ್ಲಿ ಆಳುತ್ತಿದ್ದನೆಂದು ಶಾಸನಗಳು ತಿಳಿಸುತ್ತವೆ. ಮತ್ತೆ ಮತ್ತೆ ರಾಜಧಾನಿಗಳು ಹೀಗೆ ಬದಲಾವಣೆಗೆ ಕಾರಣಗಳು ತಿಳಿಯುವುದಿಲ್ಲ. ಹಾಗೆಯೇ ಮಲ್ಲಿದೇವ ಚೋಳ ಮಹಾರಾಜನನ್ನು ಶಾಸನಗಳು ವೀರನೊಳಂಬ, ಜಗದೇಕಮಲ್ಲ, ತ್ರಿಭುವನಮಲ್ಲ, ಮಲ್ಲಿದೇವ ಎಂದು ಎರಡು ಬಗೆಯಲ್ಲಿ ಹೇಳುವುದೇಕೆಂಬುದು ರಹಸ್ಯವಾಗಿದೆ. ಇವನಿಗೆ ಸೇರಿದ ಶಾಸನವೊಂದು ಮೊದಲನೆಯ ಇರುಂಗೊಳನ ತಂದೆ ಗೋವಿಂದ ಮತ್ತು ತಾಯಿ ಮಹಾದೇವಿಯನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಹಾಗೂ ಮಲ್ಲಿದೇವನ ತಾಯಿ ಬೊಮ್ಮಲದೆವಿ, ಹೆಂಡತಿ ಲಕ್ಷ್ಮಾದೇವಿ ಎಂಬುದನ್ನು ಸಹ ಈ ಶಾಸನವೂ ಸ್ಪಷ್ಟಪಡಿಸುತ್ತದೆ. ಕ್ರಿ.ಶ. ೧೧೬೭ ಮತ್ತು ಕ್ರಿ.ಶ, ೧೧೫೭ರ ಶಾಸನಗಳು ಸಹಾ ಮಲ್ಲಿದೇವನ ವಿಚಾರವಾಗಿ ತಿಳಿಸುತ್ತದೆ. ಮಲ್ಲಿದೇವನ ಪಟ್ಟದರಾಣಿ ಲಕ್ಷ್ಮೀದೇವಿ ಮತ್ತು ಮಲ್ಲಿದೇವರಸರು ಸೀರ್ಯನಾಡಿನ ಮಲೆಯೂರಿನಲ್ಲಿ ಪಂಚದೇವಾಯತ ಗುಡಿಗಳನ್ನು ಕಟ್ಟಿಸುತ್ತಾರೆ. ಆ ಗುಡಿಯಲ್ಲಿನ ಇರುಂಗೋಳೇಶ್ವರ ಮಲ್ಲಿದೇವನ ಶಾಸನಗಳು ದೊರೆಯುವುದಿಲ್ಲ.

ಕ್ರಿ.ಶ. ೧೧೮೫ರ ಸಮಯಕ್ಕೆ ಹೆಂಜೇರನ್ನು ಭೋಗದೇವ ಚೋಳ ಮಹಾರಾಜನು ಆಳುತ್ತಿರುತ್ತಾನೆ. ಇವನನ್ನು ಮಲ್ಲಿದೇವನೊಂದಿಗೆ ಸಮೀಕರಿಸಿ ಹೇಳಲಾಗಿದೆ. ಆದರೆ ಐತಿಹಾಸಿಕವಾಗಿ ಈ ಸಮೀಕರಣವು ಅಸಾಧ್ಯವಾಗುತ್ತದೆ ಎಂದು ಹೇಳಬಹುದು. ಕಾರಣ ಈ ಇಬ್ಬರು ರಾಜರಿಗೂ ತಮ್ಮದೇ ಆದ ಬೇರೆ ಬೇರೆ ವ್ಯತ್ಯಾಸಗಳಿವೆ. ಸದ್ಯಕ್ಕೆ ಈ ಭೋಗದೇವ ಚೋಳನ ಶಾಸನಗಳು ನಿಡುಗಲ್ಲಿನಲ್ಲಿ ದೊರೆತಿಲ್ಲವಾದರೂ ಕ್ರಿ.ಶ. ೧೧೮೯ರಿಂದ ೧೧೯೯ರ ಅವಧಿಯಲ್ಲಿ ದೊರಕುವ ಮೂರು ಶಾಸನಗಳಲ್ಲಿ ಕಾಣಿಸಿಕೊಳ್ಳುವ ಭೋಗದೇವಾ ಇರುಂಗೊಳನ ಮಗ ಬಹುಶಃ ಮಲ್ಲಿದೇವನ ನಂತರ ಹೆಂಜೇರಿನ ಒಡೆತನವನ್ನು ಪಡೆದವನಾಗಿದ್ದಾನೆ.

ಎರಡನೆಯ ಇರುಂಗೋಳನು ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು ಇವರಿಬ್ಬರಿಗೂ ಅಧೀನನಾಗದೆ ರಾಜ್ಯವನ್ನು ಆಳಿದಂತೆ ತೋರುತ್ತದೆ. ಇವನ ಯಾವ ಶಾಸನಗಳಲ್ಲೂ ಚಕ್ರವರ್ತಿಯ ಹೆಸರೇ ಕಂಡುಬರುವುದಿಲ್ಲ. ಆದರೆ 'ಮಹಾಮಂಡಳೇಶ್ವರ'ನೆಂಬುದು ಮಾತ್ರ ಎಲ್ಲಾ ಶಾಸನಗಳಲ್ಲಿ ಕಾಣುತ್ತದೆ. 'ದಾನವ ಮುರಾರಿ' ಎಂಬುದು ಇವನ ಮತ್ತೊಂದು ಬಿರುದು. ಕ್ರಿ.ಶ. ೧೨೪೮ರ ನಿಡುಗಲ್ಲಿನ ಶಾಸನವೊಂದು ಇವರ ತಂದೆಯಾದ ಬಮ್ಮದೇವರಿಂದ ಬಿಲ್ವಿದ್ಯೆ ಮತ್ತು ಆಯುಧಗಳ ಬಳಕೆಯನ್ನು ಕಲಿಯುತ್ತಿದ್ದಂತೆ ತಿಳಿಸುತ್ತದೆ. ಜೊತೆಗೆ ಅವನ ಕಾರ್ಯ ಸಾಧನೆಗಳನ್ನು ಸಹ ರೀತಿ ಬಣ್ಣಿಸಿದೆ. ಇವನ ಕಾಲದಲ್ಲಿ ಈ ಚೋಳರು 'ನಿಡುಗಲ್ಲಿನ' ದೊರೆಗಳೆಂದೇ ಪ್ರಸಿದ್ಧರಾಗಿದ್ದರು. ನಿಡುಗಲ್ಲು ಮತ್ತು ಅಲ್ಲಿನ ಕೋಟೆಯನ್ನು ನಿಡುಗಲ್ಲಿನ ಎರಡು ಶಾಸನಗಳು ವರ್ಣಿಸಿವೆ. ಹೀಗೆ ಪುಂಕಾನುಪುಂಕವಾಗಿ ನಿಡುಗಲ್ಲಿನ ಶಾಸನಗಳು ಇರುಂಗೋಳನನ್ನು ಹೊಗಳಿರುವುದನ್ನು ನೋಡಿದರೆ ಚೋಳರಲ್ಲಿ ಇವನೇ ಅತಿ ಶ್ರೇಷ್ಠನೂ, ಬಲಿಷ್ಠನೂ ಆಗಿರುವುದರಲ್ಲಿ ಅನುಮಾನವಿಲ್ಲ.

ಈ ಇರುಂಗೋಳನ ಮಗ 'ತ್ರಿಪುರಾಂತಕದೇವ' ಅಥವಾ 'ಬೊಮ್ಮ' ಎಂಬುವವನು ದುರ್ಗವನ್ನು ಆಳುತಿದ್ದನೆಂದು ಶಿರಾ ತಾಲ್ಲೂಕಿನ ಶಾಸನವೊಂದು ತಿಳಿಸುತ್ತದೆ. ಬಹುಶಃ ತಂದೆಯ ಕಾಲದಲ್ಲೇ ಮಗನಿಗೆ ರಾಜ್ಯದ ಭಾಗವೊಂದನ್ನು ಆಳಲು ನಿಯೋಜಿಸಿರಬೇಕು. ಏಕೆಂದರೆ ಕ್ರಿ.ಶ. ೧೨೭೭ರವರೆಗೂ ಎರಡನೇ ಇರುಂಗೋಳದವನು ನಿಡುಗಲ್ಲನ್ನು ಆಳುತ್ತಿದ್ದನೆಂದು ಶಾಸನಗಳು ತಿಳಿಸುತ್ತವೆ.

ಈ ಚೋಳ ಮಹಾರಾಜರ ಕೊನೆಯ ದೊರೆ ಗಣೇಶ್ವರದೇವನ ಕಾಲದ ಕ್ರಿ.ಶ. ೧೨೯೨ರಲ್ಲಿ ರಚಿತವಾದ ಪಾವಗಡದ ಒಂದು ಶಾಸನದಲ್ಲಿ ಈ ಚೋಳ ಮನೆತನದ ವಂಶಾವಳಿಯನ್ನು ಕೊಡಲಾಗಿದೆ. ಜೊತೆಗೆ ನಿಡುಗಲ್ಲಿನ ಸೋಮನಾಥ ದೇವರಿಗೆ ಕೊಟ್ಟ ದಾನ ದತ್ತಿಗಳ ವಿಚಾರವಾಗಿಯೂ ಮತ್ತು ನಿಡುಗಲ್ಲಿನ ಸುಂಕದ ವಿಚಾರವಾಗಿಯೂ ಈ ಶಾಸನ ಬಹಳ ಸವಿಸ್ತಾರವಾಗಿ ತಿಳಿಸುತ್ತದೆ. ಶಿರಾ ತಾಲೂಕಿನ ಶಾಸನವೊಂದರಲ್ಲಿ ಗಣೇಶ್ವರನ ಆಳ್ವಿಕೆಯ ವಿಚಾರ ಕಂಡುಬರುತ್ತದೆ. ಗಣೇಶ್ವರ ನಂತರ ಈ ಚೋಳ ಸಂತತಿಯವರು ಕಣ್ಮರೆಯಾಗುತ್ತಾರೆ. ಚೋಳರ ಕಿರುಕುಳವನ್ನು ಸಹಿಸದ ಹೊಯ್ಸಳ ಇಮ್ಮಡಿ ನರಸಿಂಹ ಕ್ರಿ.ಶ. ೧೨೮೫ರಲ್ಲಿ ನಿಡುಗಲ್ಲನ್ನು ನೆಲಸಮ ಮಾಡಿದ ವಿಚಾರ ತಿಳಿದುಬರುತ್ತದೆ. ಇದರೊಂದಿಗೆ ಈ ಚೋಳವಂಶದ ಆಳ್ವಿಕೆಯೇ ಕೊನೆಗೊಂಡಿರಬೇಕು. ಅದೇ ವೇಳೆಗೆ ಸೆವುಣರ ಆಕ್ರಮಣದಿಂದ ರಾಯದುರ್ಗ, ಕಲ್ಯಾಣದುರ್ಗ, ಮಡಕಶಿರಾ, ಶಿರಾ, ಮೊಳಕಾಲ್ಮೂರು ತಾಲ್ಲೂಕುಗಳು ಅರಾಜಕತೆಗೆ ಒಳಗಾದ ಸಮಯದಲ್ಲಿ ನಿಡುಗಲ್ಲಿನ ದೊರೆಗಳು ಸಹ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ. ಈ ಕಾರಣವಾಗಿ ಕ್ರಿ.ಶ. ೧೩೪೦ರ ಹೊತ್ತಿಗೆ ಹೊಯ್ಸಳರ ಮಹಾಸಾಮಂತಾಧಿಪತಿಯಾದ ಚಿಕ್ಕಬೊಮ್ಮಯ್ಯ ನಾಯಕ, ನಿಡುಗಲ್ಲನ್ನು ಆಳುತ್ತಿದ್ದನೆಂದು ಕಲ್ಯಾಣದುರ್ಗ ತಾಲ್ಲೂಕಿನ ಶಾಸನವೊಂದು ತಿಳಿಸುತ್ತದೆ.

ತೆಲಗು ಭಾಷೆಯ ಇತಿಹಾಸಕಾರರು ನಿಡುಗಲ್ಲು–ಹೆಂಜೇರಿನ ಈ ಚೋಳ ಮಹಾರಾಜರನ್ನು ತೆಲಗಿನವರೆಂದೂ ಕರೆಯುತ್ತಾರೆ. ಆದರೆ ತೆಲುಗಿಗೂ ಇವರಿಗೂ ಸಂಬಂಧವಿಲ್ಲ. ತಮಿಳು ದೇಶದ ಒರೆಯೂರು ಪುರದವರೆಂದು ಹೇಳಿಕೊಂಡರು ಇವರ ಶಾಸನಗಳೆಲ್ಲಾ ಕನ್ನಡದಲ್ಲಿವೆ. ಜೊತೆಗೆ ಕನ್ನಡ ಮತ್ತೆ ತೆಲುಗು ಎರಡು ಭಾಷೆಗಳಲ್ಲಿ ಇವರ ಶಾಸನಗಳೂ ದೊರಕುತ್ತವೆ. ಹೆಂಜೇರಿನ ನೊಳಂಬೇಶ್ವರ ದೇವಾಲಯದಲ್ಲಿದ್ದ 'ಮಹಾಘಟಿಕಸ್ಥಾನ' ಇವರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು. ಜೊತೆಗೆ ಇವರು ಅದಕ್ಕೆ ಅನೇಕ ದಾನದತ್ತಿಗಳನ್ನು ನೀಡಿದ್ದಾರೆ. ಆಕಸ್ಮಿಕವಾಗಿ ಆಂಧ್ರಪ್ರದೇಶದಲ್ಲಿ ಸೇರಿಹೋಗಿರುವ ಕನ್ನಡ ಭಾಷಾ ಪ್ರದೇಶಗಳಿಂದ ರೊದ್ದನಾಡು, ಕಣೆಯಕಲ್ಲುನಾಡು ಮೊದಲಾದವುಗಳನ್ನು ಆಳುತ್ತಿದ್ದ ಈ ಚೋಳ ಮಹಾರಾಜರ ವಂಶವನ್ನು ಇನ್ನೂ ಮುಂದಾದರೂ ಇತಿಹಾಸಕಾರರು ಕನ್ನಡ ಚೋಳರು ಎಂದು ಗುರುತಿಸುವುದರಲ್ಲಿ ತಪ್ಪಿಲ್ಲ.

ಕಲ್ಯಾಣದ ಚಾಲುಕ್ಯರು

ರಾಷ್ಟ್ರಕೂಟರ ಚಕ್ರವರ್ತಿ ಇಮ್ಮಡಿ ಕರ್ಕನನ್ನು ಸೋಲಿಸಿ ಚಾಲುಕ್ಯ ವಂಶವನ್ನು ಮತ್ತೆ ಸ್ಥಾಪಿಸಿದ ಕೀರ್ತಿ ಇಮ್ಮಡಿ ತೈಲಪನಿಗೆ ಸಲ್ಲುತ್ತದೆ. ಕ್ರಿ.ಶ. ೯೭೩ರಲ್ಲಿ ಎರಡನೇ ತೈಲಪನು ಪಟ್ಟವೇರಿದಾಗ ಗಂಗರು ಮತ್ತು ಚೋಳರೊಂದಿಗೆ ಯುದ್ಧಗಳನ್ನು ನಡೆಸಬೇಕಾಯಿತು. ಅನಂತಪುರ ಜಿಲ್ಲೆಯ ರೊದ್ದದ ಶಾಸನವೊಂದರ ಪ್ರಕಾರ ಚೋಳರ ರಾಜನನ್ನು ಸೋಲಿಸಿದ ಎರಡನೇ ತೈಲಪನು ರೊದ್ದದಲ್ಲಿ ಕ್ರಿ.ಶ. ೯೯೨ರಲ್ಲಿ ಬೀಡುಬಿಟ್ಟಿದ್ದ. ಇವನ ಮಗ ಸತ್ಯಾಶ್ರಯ ಇರಿವಬೆಡಂಗನ ಕೆಲವು ಶಾಸನಗಳು ಆಂಧ್ರದಲ್ಲಿ ದೊರೆಯುತ್ತವೆ.

ನಿಡುಗಲ್ಲಿನಲ್ಲಿ ಸಧ್ಯಕ್ಕೆ ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದಂತೆ ಸಿಗುವ ಶಾಸನವೊಂದು 'ಪರಮ ಭಟ್ಟಾರಕ ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣಂ ಶ್ರೀ ಪ್ರತಾಪ ಚಕ್ರವರ್ತಿ' ಜಗದೇಕಮಲ್ಲನು ಕಲ್ಯಾಣದಲ್ಲಿ ಸುಖ ಸಂತೋಷವಾಗಿ ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿಸುತ್ತದೆ. ಇದೇ ಶಾಸನದಲ್ಲಿ ಬರುವ ಚೋಳರ ಮಲ್ಲಿದೇವನು ಕಲ್ಯಾಣದ ಚಾಲುಕ್ಯರ ಅರಸೊತ್ತಿಗೆಗೆ ಪರಮ ನಿಷ್ಠಾವಂತನಾಗಿದ್ದನು. ಇವನು ಇಮ್ಮಡಿ ಜಗದೇಕಮಲ್ಲನ 'ಪಾದಪದಮೋಪಜೀವಿ' ಎಂದು ಹೇಳಿಕೊಂಡಿದ್ದಾನೆ. ಚಾಲುಕ್ಯರ ಜಗದೇಕಮಲ್ಲನೂ ಶಾಂತಿಪ್ರಿಯನೂ, ಮಹಾವಿದ್ಯಾವಂತನೂ, ಮೇಧಾವಿಯೂ ಆಗಿದ್ದನೆಂದು ತಿಳಿದುಬರುತ್ತದೆ. ಈತನ ಕಾಲದಲ್ಲಿ ಯಾದವರ ಸೇವುಣ ಪಟ್ಟಾಭಿಷಕ್ತ ರಾಣಿಯ ಮಗ ಕಪ್ಪದೇವರಸ, ಬಮ್ಮದೇವರಸ, ಶಿಲಾಹಾರವಂಶದ ವಿಜಯಾದಿತ್ಯಾ, ನೊಳಂಬವಾಡಿಯ ವೀರಪಾಂಡ್ಯದೇವ ಮತ್ತು ನಿಡುಗಲ್ಲಿನ ಮಲ್ಲಿದೇವ ಚೋಳ ಮೊದಲಾದವರೂ ಜಗದೇಕಮಲ್ಲನ ಮಹಾಮಂಡಳೇಶ್ವರರಾಗಿದ್ದರು.

ನಿಡುಗಲ್ಲು ಕಲ್ಯಾಣಚಾಲುಕ್ಯರ ಅಧೀನದಲ್ಲಿದ್ದ ಸಂದರ್ಭದಲ್ಲಿಯೇ ಅವರ ಮಹಾ ಮಂಡಲೇಶ್ವರ ಮಲ್ಲಿದೇವಚೋಳನು ನಿಡುಗಲ್ಲಿನಲ್ಲಿ 'ನಾಗೇಶ್ವರ' ಎನ್ನುವ ದೇವಾಲಯವೊಂದನ್ನು ನಿರ್ಮಿಸಿ, ಅದಕ್ಕೆ ಅವನ ತಂತ್ರಪಾಲ ನಾಮಣ್ಣನ ಮುಖಾಂತರ ಅನೇಕ ದಾನದತ್ತಿಗಳನ್ನು ಕೊಟ್ಟಂತೆಯೂ, ಒಂದು ಕೆರೆಯನ್ನು ಕಟ್ಟಿಸಿದಂತೆಯೂ ತಿಳಿಸುತ್ತದೆ. ಮಲ್ಲಿದೇವನಿಗೆ ಲಕ್ಷ್ಮಾದೇವಿ, ಸೀತಾದೇವಿ ಎಂಬಿಬ್ಬರು ರಾಣಿಯರಿದ್ದರು. ಕಲ್ಯಾಣದ ಜಗದೇಕಮಲ್ಲನ ಪ್ರೋತ್ಸಾಹದಿಂದ ಈ ಮಲ್ಲಿದೇವನ ಪ್ರಿಯ ಅರಸಿ ಸೀತಾದೇವಿ, ಹೇಮಾವತಿ ಪಟ್ಟಣದಲ್ಲಿರುವ ಈಶ್ವರ ದೇವಾಲಯಕ್ಕೆ ದತ್ತಿ ನೀಡಿದ್ದಾಗಿಯೂ ಮತ್ತು ಪ್ರೌಢ ವಿದ್ಯಭ್ಯಾಸ ಕೇಂದ್ರವಾದ ಘಟಿಕಾಸ್ಥಾನವನ್ನು ಸ್ಥಾಪಿಸಿ ಕರ್ನಾಟಕದ ನಾನಾ ಭಾಗಗಳಿಂದ ಪಂಡಿತರನ್ನು ಕವಿಗಳನ್ನು ಕಂಡು ಗೌರವಿಸಿ ವಿದ್ಯಾ ಪ್ರಚಾರ ಕಾರ್ಯವನ್ನು ಕೈಗೊಂಡು ಶ್ಲಾಘನೆಗೆ ಪಾತ್ರವಾಗಿದ್ದಾಳೆ.

ಜಗದೇಕಮಲ್ಲನ ನಂತರ ಮುಮ್ಮಡಿ ತೈಲಪನೂ ಪಟ್ಟಾಭಿಷಕ್ತನಾದನು. ಇವನು ೨ನೇ ಸೋಮೇಶ್ವರನ ಎರಡನೆಯ ಮಗ. ಇವನ ಕಾಲಕ್ಕಾಗಲೇ ಚಾಲುಕ್ಯ ಚಕ್ರವರ್ತಿಗಳ ಕೀರ್ತಿ, ಪ್ರತಿಷ್ಠೆಗಳು ಇಳಿಮುಖವಾಗುತ್ತಿತ್ತು. ಚಾಲುಕ್ಯರ ಕುಮಾರಸಾರ ಮತ್ತು ೨ನೇ ಕುಲೋತ್ತುಂಗನು

ತೈಲಪನ ಮೇಲೆ ಬಿದ್ದಾಗ ನಿಡುಗಲ್ಲಿನ ಮಲ್ಲಿದೇವ ಚೋಳನು ತಂತ್ರಪಾಲ ನಾಮಣ್ಣನೂ ತಮ್ಮ ಚಾಲುಕ್ಯ ದೊರೆಗಳಿಗೆ ದ್ರೋಹ ಬಗೆದು ಕುಲೋತ್ತುಂಗನ ಸಹಾಯಕ್ಕೆ ನಿಂತರು. ಅವನು ಸೋತ ನಂತರ ಮಲ್ಲಿದೇವನು ತೈಲಪನ ಸಾಮಂತನಾದನು ಎಂಬುದು ವಿವಾದಾಸ್ಪದ ಸಂಗತಿಯಾಗಿದ್ದು, ಇದಕ್ಕೆ ನಿಖರವಾದ ಯಾವುದೇ ಆಧಾರ ದೊರೆಯುವುದಿಲ್ಲ.

ಕ್ರಿ.ಶ. ೧೧೬೨ನೆಯ ವರ್ಷ ಚಾಲುಕ್ಯರ ಚರಿತ್ರೆಯಲ್ಲಿ ಒಂದು ಸಂದಿಗ್ಧ ಕಾಲ. ಇದೇ ತೈಲಪನ ಕೊನೆಯ ಆಳ್ವಿಕೆಯು ಕೂಡ. ಮತ್ತು ಕಲಚೂರಿ ಬಿಜ್ಜಳನೂ ರಾಜ್ಯ ಪಡೆದ ಮೊದಲನೆ ವರ್ಷ. ತೈಲಪನೂ ಕಾಕತೀಯ ದೊರೆಗಳಿಂದ ಸೋತುಹೋದಾಗ ಬಿಜ್ಜಳನೂ ಸಾಮಂತರನ್ನು, ಮಾಂಡಳಿಕರನ್ನು ಗುರಿಮಾಡಿ ದಂಗೆ ಎದ್ದನು. ಆ ದಂಗೆಯಲ್ಲಿ ಬಿಜ್ಜಳನ ಪರವಾಗಿ ಕೆಲಸ ಮಾಡಿದ ಮಲ್ಲಿದೇವನನ್ನು ನೋಡಿದರೆ ಇವನು ತಮ್ಮ ಉಭಯ ಪಾರ್ಶ್ವಗಳಲ್ಲಿದ್ದ ಬಲಿಷ್ಠ ದೊರೆಗಳು ಯಾವ ಕಡೆ ಎಳೆದರೆ ಆ ಕಡೆ ಹೋಗಿ ಅವರೊಡನೆ ಸಹಕರಿಸಿಕೊಂಡಂತೆ ಕಾಣುತ್ತದೆ. ಆದ್ದರಿಂದಲೇ ಮಾಂಡಲಿಕರಲ್ಲಿಯೇ ಅತಿ ಹೆಚ್ಚು ವರ್ಷಗಳ ಕಾಲ ಅಧಿಕಾರ ಹಿಡಿಯಲು ಇವನಿಗೆ ಸಾಧ್ಯವಾಯಿತು. ಅದೇ ವೇಳೆಗೆ ಅಂದರೆ ಕ್ರಿ.ಶ. ೧೧೬೨ರ ಸಮಯಕ್ಕೆ ಚಾಲುಕ್ಯ ರಾಜ್ಯದ ಪೂರ್ವ ಭೂಭಾಗವು ಬಿಜ್ಜಳನ ಕೈಸೇರಿತು. ಕೊಂಗಲಿ-೫೦೦, ನೊಳಂಬವಾಡಿ-೩೦೦೦೦, ಕಂಡಬಾಳಿ-೧೦೦೦, ನಾಡಿನ ಒಡೆಯನಾಗಿದ್ದ ವೀರಪಾಂಡ್ಯನು ಮತ್ತು ಸಿಂದೆವಾಡಿಯ ಬೊಮ್ಮರಸದೇವನು ಬೇರೆ ದಾರಿ ಕಾಣದೆ ಬಿಜ್ಜಳನಿಗೆ ತಲೆ ಬಾಗಿದರು.

ಆದರೆ ಬಿಜ್ಜಳನಿಗೆ ಇನ್ನೂ ಚಾಲುಕ್ಯರ ಕೆಲವು ಭಾಗ ಸಂಪೂರ್ಣ ವಶವಾಗಿರಲಿಲ್ಲ. ಅನಂತಪುರ ಜಿಲ್ಲೆಯ ಕೆಲವು ಭಾಗಗಳು, ಸೀರ್ಯಾನಾಡು, ಬಳ್ಳಾರಿ ಜಿಲ್ಲೆಯ ಗೋವಿಂದವಾಡಿ, ಹೆಂಜೆರು, ನಿಡುಗಲ್ಲು ಪ್ರಾಂತ್ಯಗಳ ಪ್ರಭುವಾಗಿದ್ದ ಮಲ್ಲಿದೇವ ಚೋಳನು ಮಾತ್ರ ಚಾಲುಕ್ಯ ರಾಜ್ಯದ ಅನಧಿಕೃತ ದೊರೆ ಬಿಜ್ಜಳನಿಗೆ ವಿಧೇಯನಾಗಲಿಲ್ಲ. ಇವರಿಬ್ಬರ ಮಧ್ಯೆ ಒಳಜಗಳಗಳು ಸಂಭವಿಸಿದರು. ಕೂಡ ಬಿಜ್ಜಳನು ರಾಜ್ಯವನ್ನು ಗೆಲ್ಲಲು ಮಾಡಿದ ಪ್ರಯತ್ನ ಫಲಿಸಿದಂತೆ ಕಾಣುವುದಿಲ್ಲ.

ಅನೇಕ ರಾಜರನ್ನು ಗೆದ್ದು ಪ್ರಬಲರಾದ ಸಾಮಂತರನ್ನು ತಲೆತಗ್ಗಿಸುವಂತೆ ಮಾಡಿದ ಬಿಜ್ಜಳನಿಗೆ ಈ ಪ್ರಾಂತ್ಯದ ಅಧಿಕಾರವನ್ನು ಹಿಡಿಯಲು ಆದ ತೊಂದರೆ ಏನೋ ತಿಳಿಯದು. ಒಟ್ಟಾರೆ ಚಾಲುಕ್ಯರ ಸಾಮಂತ ಮಲ್ಲಿದೇವನು ಜಗದೇಕಮಲ್ಲನಿಗೂ ಮುಮ್ಮಡಿ ತೈಲಪನಿಗೂ, ನಾಲ್ವಡಿ ಸೋಮೇಶ್ವರನಿಗೂ ಸಾಮಂತನಾಗಿದ್ದು ಚಾಲುಕ್ಯರ ರಾಜ್ಯದ ಮೂವರು ಚಕ್ರವರ್ತಿಗಳ ರಾಜ್ಯಭಾರದಲ್ಲೇ ಸುಮಾರು ಐವತ್ತು ವರ್ಷಗಳಷ್ಟು ಕಾಲ ರಾಜ್ಯವಾಳಿದಂತೆ ತೋರುತ್ತದೆ. ಇವನು ಇಷ್ಟು ವರ್ಷಗಳ ಕಾಲ ರಾಜ್ಯದ ಸೂತ್ರ ಹಿಡಿದಿರುವುದನ್ನು ನೋಡಿದರೆ ಒಳ್ಳೆಯ ನೈಪುಣ್ಯ ಮತ್ತು ರಾಜತಾಂತ್ರಿಕತೆಯ ಗುಣಗಳನ್ನು ಹೊಂದಿದ್ದನೆಂದು ತಿಳಿಯಬಹುದು.

ಕಲ್ಯಾಣದ ಚಾಲುಕ್ಯರ ಜಗದೇಕಮಲ್ಲನು ಈ ಮಲ್ಲಿದೇವ ಸಾಮಂತನ ಮುಖಾಂತರ ನಿಡುಗಲ್ಲನ್ನು ತನ್ನ ಅಧೀನದಲ್ಲಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದನು. ಹಾಗೆಯೇ ಮಲ್ಲಿದೇವನು ತನ್ನ ರಾಜನಿಗೂ ಅಷ್ಟೇ ನಿಷ್ಠಾವಂತನೂ ಆಗಿದ್ದನು ಎಂಬುದಕ್ಕೆ ಯಾವುದೇ ಅನುಮಾನವಿಲ್ಲ. ನಂತರ ಕಲ್ಯಾಣದ ಚಾಲುಕ್ಯರಿಗೂ ಹೊಯ್ಸಳರಿಗೂ ಯುದ್ಧಗಳು ಸಂಭವಿಸಿ ಅದರಲ್ಲಿ ಇಮ್ಮಡಿ ಇರುಂಗೋಳನ ಮತ್ತು ಹೊಯ್ಸಳರ ವಿಷ್ಣುವರ್ಧನಿಗೆ ಸಂಬಂಧಿಸಿದ ಕೆಲವು ಶಾಸನ ದೊರೆಯುತ್ತವೆ.

ಹೊಯ್ಸಳರು:

ನಿಡುಗಲ್ಲಿನಲ್ಲಿ ಹೊಯ್ಸಳರ ಯಾವುದೇ ರಾಜನಾಗಲಿ, ಮಾಂಡಲೀಕನಾಗಲಿ, ಸಾಮಂತನಾಗಲಿ ಆಳ್ವಿಕೆ ನಡೆಸಿದಂತೆ ಕಂಡುಬರುವುದಿಲ್ಲ. ಆದರೂ ಕರ್ನಾಟಕ ಇತಿಹಾಸದಲ್ಲಿ ತಮ್ಮದೆ ಆದ ವಿಶಿಷ್ಟ ಸ್ಥಾನವನ್ನು ಹೊಂದಿದ ಮತ್ತು ಕನ್ನಡ ನಾಡಿಗೆ ಅನೇಕ ಕೊಡುಗೆ ಕೊಟ್ಟ ಪ್ರಮುಖ ರಾಜಮನೆತನಗಳಲ್ಲಿ ಇವರೂ ಒಬ್ಬರಾಗಿರುತ್ತಾರೆ. ಹಾಗೂ ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಯುದ್ಧ ಮುಂತಾದ ಕ್ರಿಯೆಗಳಿಂದ ಕಾಣಿಸಿಕೊಂಡ ಇವರು ನಿಡುಗಲ್ಲಿಗೂ ಅನೇಕ ವೇಳೆ ದಾಳಿ ಮಾಡಿದ್ದಾರೆ. ಅದರ ಅಕ್ಕಪಕ್ಕದ ಪ್ರದೇಶಗಳನ್ನು ವಶಪಡಿಸಿಕೊಂಡಂತೆ ಕಂಡುಬರುತ್ತದೆ.

ಹೊಯ್ಸಳ ದೊರೆಗಳು, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಶ. ೧೧೨೫-೨೬ರ ಅವಧಿಯಲ್ಲಿ ಸ್ವತಂತ್ರ ದೊರೆಗಳಾಗಲು ಪ್ರಯತ್ನಿಸಿದರು. ಆಗ ಕಲ್ಯಾಣಿ ಚಾಲುಕ್ಯರ ಮಹಾಮಂಡಳೇಶ್ವರನಾಗಿದ್ದ ಇರುಂಗೋಳದೇವ ಮತ್ತು ಅವನ ಹಿರಿಯರು ಹೊಯ್ಸಳರ ವಿರುದ್ಧ ಹೋರಾಡಿದಂತೆ ತೋರುತ್ತದೆ. ಕಣೆಕಲ್ಲು-೩೦೦, ಸೀರೆನಾಡು, ರೊದ್ದನಾಡು, ಆಕ್ರಮಿಸಿದ್ದ ಈ ಚೋಳರನ್ನು ಹೊಯ್ಸಳರು ಎದುರಿಸಿ ಸೋಲಿಸಿದರೆಂದು ಹೊಯ್ಸಳರ ಶಾಸನಗಳು ತಿಳಿಸುತ್ತವೆ. ಶ್ರವಣಬೆಳಗೋಳದ ವಿಷ್ಣುವರ್ಧನನ ಶಾಸನವೊಂದರಲ್ಲಿ 'ಹೆಂಜೇರುದಿಸಾಪಟ್ಟು, ಗೋವಿಂದವಾಡಿ ಭಯಂಕರ, ರೊದ್ದವ ತುಳಿವ' ಎನ್ನುವ ಅವನ ಬಿರುದುಗಳು ಕಂಡುಬರುತ್ತವೆ. ಇದರಿಂದ ನಿಡುಗಲ್ಲಿಗೆ ಹತ್ತಿರವಿದ್ದ ಮತ್ತು ನಿಡುಗಲ್ಲ ಚೋಳರೇ ಆಳತ್ತಿದ್ದ ಈ ಪ್ರದೇಶವನ್ನು ವಿಷ್ಣುವರ್ಧನನು ಪ್ರವೇಶಿಸಿದಂತೆ ಕಂಡುಬರುತ್ತದೆ. ಚೋಳವಂಶದ ಒಬ್ಬ ಅರಸು 'ಇರುಂಗೋಳ' ಎನ್ನುವನನು ವಿಷ್ಣುವರ್ಧನನಿಂದ ಸೋಲಿಸಲ್ಪಟ್ಟವನೆಂದು ತಿಳಿದುಬರುತ್ತದೆ. ಅಲ್ಲದೆ ಶ್ರವಣಬೆಳಗೋಳದ ಶಾಸನವೊಂದು ವಿಷ್ಣುವರ್ಧನನ್ನು 'ಇರುಂಗೋಳಕ್ಷೋಣಿಪತಿ ಮಗ ಮೃಗಾರಾತಿರುತುಳಂ' ಎಂದು ಹೊಗಳಿದೆ. ರೊದ್ದದ ಗೋವ ಎಂದು ಕರೆಸಿಕೊಂಡ ಇರುಂಗೋಳನು ಕಲ್ಯಾಣಿ ಚಾಲುಕ್ಯರ ಮೂರನೇ ಸೋಮೇಶ್ವರ ಆಳ್ವಿಕೆಯಲ್ಲಿ (ಕ್ರಿ.ಶ. ೧೧೨೭-೧೧೩೯) ಹೊಯ್ಸಳರ ವಿಷ್ಣುವರ್ಧನನಿಂದ ಆಕ್ರಮಣಕ್ಕೆ ಒಳಗಾದಂತೆ ತೋರುತ್ತದೆ.

ಚಾಲುಕ್ಯ ಜಗದೇಕಮಲ್ಲನು ಕ್ರಿ.ಶ. ೧೧೪೭ರಲ್ಲಿ ಹೆಂಜೇರಿನಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆ ವೇಳೆ ನಿಡುಗಲ್ಲಿನಲ್ಲಿ ಅವನ ಸಾಮಾಂತನಾಗಿ ಮಲ್ಲಿದೇವ ಚೋಳನು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಹೊಯ್ಸಳರ ಒಂದನೇ ನರಸಿಂಹ ಹಲವು ಸಲ ದಾಳಿ ಮಾಡಿದ್ದನೆಂದು ತಿಳಿದುಬರುತ್ತದೆ

ಹೊಯ್ಸಳರ ವಿಷ್ಣುವರ್ಧನನಿಂದ 'ಗೋವಿಂದವಾಡಿ' ಆಕ್ರಮಣಕ್ಕೆ ತುತ್ತಾದ ಮೇಲೆಯೇ ಈ ಚೋಳರು ತಮ್ಮ ರಾಜಧಾನಿಯನ್ನು ಹೆಂಜೇರಿಗೆ ಬದಲಾಯಿಸಿಕೊಂಡಿರಬೇಕು. ಹೀಗೆ ಪದೇ ಪದೇ ಚೋಳರಿಗೂ, ಹೊಯ್ಸಳರಿಗೂ ಯುದ್ಧಗಳು ಸಂಭವಿಸುತ್ತಲೇ ಇವು ಆಕಾರವಾಗಿ ಕ್ರಿ.ಶ. ೧೨೮೫ರಲ್ಲಿ ಚೋಳರ ಕಿರುಕುಳವನ್ನು ಸಹಿಸದ ಹೊಯ್ಸಳರ ಇಮ್ಮಡಿ ನರಸಿಂಹ ನಿಡುಗಲ್ಲಿನ ಮೇಲೆ ದಂಡೆತ್ತಿ ಬಂದು ಕೋಟೆಯನ್ನು ನೆಲಸಮ ಮಾಡಿದ. ಇದರೊಂದಿಗೆ ಈ ಚೋಳ ಸಂತತಿಯ ನಿಡುಗಲ್ಲಿನ ಕೊನೆಯ ದೊರೆಯಾಗಿದ್ದರಿಂದ ಮುಂದೆ ಹೊಯ್ಸಳರ ಕೊನೆಯ ದೊರೆಗಳ ಕಾಲದಲ್ಲಿ ಸೆವುಣರ ಆಕ್ರಮಣದಿಂದ ರಾಯದುರ್ಗ, ಕಲ್ಯಾಣದುರ್ಗ, ಮಡಕಶಿರಾ, ಸಿರಾ, ಪ್ರದೇಶಗಳು ಅರಾಜಕತೆಗೆ ಒಳಗಾದಾಗ ಕ್ರಮೇಣ ನಿಡುಗಲ್ಲಿನ ಚೋಳರು ಅಸ್ತಿತ್ವ ಕಳೆದುಕೊಂಡರು.

ಕ್ರಿ.ಶ. ೧೩೪೦ರ ಹೊತ್ತಿಗೆ ಹೊಯ್ಸಳರ ಮಹಾಸಾಮಂತಾಧಿಪತಿಯಾದ ಚಿಕ್ಕಬೋಮ್ಮಯ್ಯ ನಾಯಕ ಎಂಬುವವನು ನಿಡುಗಲ್ಲು ರಾಜ್ಯವನ್ನೇ ಆಳುತ್ತಿದ್ದನೆಂದು ಕಲ್ಯಾಣದುರ್ಗದ ಶಾಸನವೊಂದು ತಿಳಿಸುತ್ತದೆ. ಇಷ್ಟು ಮಾತ್ರ ಹೊಯ್ಸಳರಿಗೂ ನಿಡುಗಲ್ಲಿನ ದೊರೆಗಳೀಗೂ ಇದ್ದ ಸಂಬಂಧ ಎಂದು ತಿಳಿಯುವುದೇ ವಿನಃ ಮೊದಲೇ ಹೇಳಿದಂತೆ ಅವರ ಶಾಸನಗಳಾವುವು ಈ ಪ್ರಾಂತ್ಯದಲ್ಲಿ ಲಭ್ಯವಾಗಿಲ್ಲದಿರುವುದು ದುರಾದೃಷ್ಟಕರ ಸಂಗತಿಯಾಗಿದೆ.

ವಿಜಯನಗರ ಅರಸರು

ವಿಜಯನಗರದ ಸಾಮ್ರಾಜ್ಯವನ್ನೇ ಬಂಗಾರದ ಯುಗವೆಂದೆ ಕರೆಯುತ್ತಾರೆ. ಕರ್ನಾಟಕದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಮೆರೆದ ಈ ಸಾಮ್ರಾಟರು ಕರ್ನಾಟಕ, ಆಂದ್ರಪ್ರದೇಶಗಳ ಬಹುಭಾಗವನ್ನು ಒಳಗೊಂಡು ಆಳ್ವಿಕೆ ನಡೆಸುತ್ತಿದ್ದರು. ಈ ರಾಜ್ಯ ಕರ್ನಾಟಕದ ಭಾಷೆ, ಸಂಸ್ಕೃತಿ, ಸಂಪತ್ತು, ಕಲೆ, ಧರ್ಮಗಳ ರಕ್ಷಣೆಗಾಗಿಯೇ ಉದಯವಾದಂತೆ ಕಾಣುತ್ತದೆ. ಅಲ್ಲದೆ ಅನೇಕ ದೇಶ ವಿದೇಶಗಳವರೆಗೂ, ಸಮುದ್ರಾಚೆಯವರೆಗೂ ಇದರ ಕೀರ್ತಿ ಹರಡಿತ್ತೆನ್ನುವುದಕ್ಕೆ ಅಲ್ಲಿಂದ ಬಂದ ವಿದೇಶಿ ಪ್ರವಾಸಿಗರ ಬರಹವೇ ಸಾಕ್ಷಿಯಾಗಿ ಇಂದು ನಮ್ಮ ಮುಂದೆ ಇದೆ.

ಹಾಗೆಯೇ ಪ್ರಸ್ತುತ ಸಹ ಅವರ ಆಳ್ವಿಕೆಯ ಅಧೀನತೆಯನ್ನು ಪಡೆದಿರುವುದು ಇಲ್ಲಿನ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರದ ದೊರೆಗಳನ್ನು ಹೆಸರಿಸುವ ಅಥವಾ ಅವರನ್ನು ಹೆಸರಿಸಿರುವ ಅನೇಕ ಶಾಸನಗಳು ಧರ್ಮ, ದಾನ, ದತ್ತಿ, ಸಂಧಾನ, ತಳವಾರಿಕೆ ಮುಂತಾದವುಳನ್ನೇ ಹೆಚ್ಚಿಗೆ ಹೇಳುತ್ತವೆ. ಜೊತೆಗೆ ತಾಮ್ರ ಶಾಸನಗಳು ಸಹ ಈ ಕಾಲದಲ್ಲಿ ಹೆಚ್ಚಿಗೆ ಕಂಡುಬರುತ್ತವೆ. ಅವು ತೆಲುಗಿನಲ್ಲೂ, ಸಂಸ್ಕೃತದಲ್ಲಿ ಹಾಗೂ ಕನ್ನಡದಲ್ಲೂ ಕಂಡುಬಂದಿವೆ.

ಡಾ. ಕೆ.ವಿ.ರಮೇಶ ಅವರು ವಿಜಯನಗರದ ಕಾಲದ ಕರ್ನಾಟಕದ ಶಾಸನಗಳನ್ನು ಕುರಿತು ಹೀಗೆ ಹೇಳುತ್ತಾರೆ. ಆ ಕಾಲದ ಶಾಸನಗಳಲ್ಲಿ ಹೆಚ್ಚಿನವು ಚಕ್ರವರ್ತಿಗಳಿಂದ ಇಲ್ಲವೆ, ತುಂಡರಸರುಗಳಿಂದ ಇಲ್ಲವೆ ಸಾಮ್ರಾಜ್ಯಶಾಹಿ ರಾಜ್ಯಪಾಲರುಗಳಿಂದ ಇಲ್ಲವೇ ಸಂಘ ಸಂಸ್ಥೆಗಳಿಂದ

ಇಲ್ಲವೇ ಖಾಸಗಿ ವ್ಯಕ್ತಿಗಳಿಂದ ಕೊಡಲಾದ ದಾನಗಳ, ಸೃಷ್ಟಿಸಲಾದ ಅಗ್ರಹಾರಗಳ ವಿವರಗಳನ್ನು ನೀಡುವಂತಹದವು. ಅಲ್ಲದೆ ಆ ಕಾಲಕ್ಕೆ ಸಂಬಂಧಿಸಿದಂತೆ ಸಾಮ್ರಾಜ್ಯದ ಪರಮಾಧಿಕಾರದ ಪ್ರಸ್ತಾವನೆ ಇರದ ಮತ್ತು ಆಯಾ ಪ್ರಾಂತ್ಯದ ತುಂಡರಸರುಗಳು ಸಹಿ ಹಾಕಿದ ಶಾಂತಿ ಸಂಧಾನಗಳ ವಿವರಗಳನ್ನು ನೀಡುವ ತಾಮ್ರ ಮತ್ತು ಶಿಲಾಶಾಸನಗಳು ದಂಗೆ ಎದ್ದ ತುಂಡರಸರುಗಲನ್ನು ಸ್ವತಃ ಚಕ್ರವರ್ತಿಗಳೇ ಅಥವಾ ಅವರ ಅಧಿಕಾರಿಗಳು ಸದೆಬಡಿದು ಪುನಃ ಸಾಮಂತರ ಸ್ಥಿತಿಗೆ ಇಳಿಸಿದ ವಿವರಗಳನ್ನು ನೀಡುವ ಶಾಸನಗಳೂ, ಸಾಮ್ರಾಜ್ಯದ ನಿಷ್ಠ ಸೇವಕರಿಗೆ ಅಮರ ಮಾಗಣಿ, ನಾಯಕತನ, ಗೌಡಿಕೆ ತಳವಾರಿಕೆ, ಮುಂತಾದ ಸ್ವಾಮ್ಯ ಸ್ಥಾನಮಾನಗಳನ್ನು ಪಾಲಿಸುವ ಶಾಸನಗಳೂ ಒಂದೇ ಊರಿನ ಬೇರೆ ಬೇರೆ ಕೇರಿಗಳ ಅಥವಾ ಬೇರೆ ಬೇರೆ ಊರುಗಳ ಪ್ರಜೆಗಳ ನಡುವಿನ, ಸಂಘ ಸಂಸ್ಥೆಗಳ ನಡುವಿನ ಧಾರ್ಮಿಕ ಹಾಗೂ ವ್ಯಾಪಾರದ ಬಿಕ್ಕಟ್ಟಿಗಳನ್ನು ಬಗೆಹರಿಸುವ ಒಪ್ಪಂದ ಶಾಸನಗಳೂ ಸಾಕಷ್ಟು ಸಂಖ್ಯೆಯಲ್ಲಿ ದೊರೆತಿವೆ ಎಂದು ಅಭಿಪ್ರಾಯಪಡುತ್ತಾರೆ.

ನಿಡುಗಲ್ಲು, ಪಾವಗಡ ಮತ್ತು ಆಂಧ್ರಪ್ರದೇಶದ ಪೆನಗೊಂಡ, ಹಿಂದೂಪುರ, ಗುತ್ತಿ, ಕಲ್ಯಾಣದುರ್ಗ, ರಾಯಲಸೀಮೆಯ ಶಾಸನಗಳು ಮತ್ತು ಅನಂತಪುರ ಜಿಲ್ಲೆಯಲ್ಲಿ ದೊರೆತ ಶಾಸನಗಳನ್ನು ನೋಡಿದಾಗ ಮೇಲಿನ ಮಾತಿಗೆ ಅಕ್ಷರಶಃ ಅರ್ಥ ಲಭಿಸುತ್ತದೆ. ಪಾವಗಡ ಮತ್ತು ನಿಡುಗಲ್ಲು ಪ್ರಾಂತ್ಯವನ್ನು ಸಾಮಾನ್ಯವಾಗಿ ಈ ದೊರೆಗಳು ಪೆನಗೊಂಡೆಯಿಂದಲೇ ಆಳುತ್ತಿದ್ದಂತೆ ಕಾಣುತ್ತದೆ. ಕ್ರಿ.ಶ. ೧೩೫೪ರ ಪೆನಗೊಂಡೆಯ ಶಾಸನದ ಪ್ರಕಾರ ವೀರಬುಕ್ಕಣ್ಣ ಒಡೆಯನ ಆಳ್ವಿಕೆಯ ಸಮಯದಲ್ಲಿ ತನ್ನ ಪಟ್ಟದರಸಿ ಬೊಮ್ಮದೇವಿಯವರ ಕುಮಾರ ವಿರುಂಪಣ ಒಡೆಯನಿಗೆ ಪೆನಗೊಂಡೆ, ರಾಜ್ಯವನ್ನು ಕೊಟ್ಟಿದ್ದನು. ಈ ವೀರ 'ವಿರುಂಪಣ' ಒಡೆಯನಿಗೆ ಮಹಾಮಂಡಳೇಶ್ವರ ಹರಿಯಣ್ಣ ಒಡೆಯ ಎಂಬ ಮಗನಿದ್ದನು. ಬುಕ್ಕಾರಾಯನ 'ಕೊತ್ತಸಿವುರ'ದ ಒಂದು ಶಾಸನವು ನಿಡುಗಲ್ಲಿನ ರಾಜ್ಯಕ್ಕೆ ಮುಖ್ಯವಾದ ಸಿವುರ ಪಟ್ಟಣದಲ್ಲಿ ಆಳುತ್ತಿದ್ದ 'ಬೆನಕೆಯ' ನಾಯಕರ ಕುಮಾರ 'ಬೂಚೆಯ' ನಾಯಕ ಎಂಬುವವನ್ನು ಹೇಳುತ್ತದೆ. ಹಿಂದೂಪುರ ತಾಲೂಕಿನ ಒಂದು ಶಾಸನವು ಈ ಬೂಚೆಯ ನಾಯಕನ ಕುಮಾರ ಇರುಗಪ್ಪ ಒಡೆಯನು 'ಚೆಲುಮುತ್ತೂರು'ನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.

ಒಟ್ಟಾರೆಯಾಗಿ ಪ್ರಸ್ತುತ ನಿಡುಗಲ್ಲು ಪ್ರದೇಶಕ್ಕೆ ಸಂಬಂಧಿಸಿದಂತೆ ಪಾವಗಡ ತಾಲೂಕಿನಾದ್ಯಂತ ಕ್ರಿ.ಶ. ೧೩೯೪ರಿಂದ ಕ್ರಿ.ಶ. ೧೬೮೧ರವರೆಗಿನ ಸುಮಾರು ೨೫ ಶಾಸನಗಳು ವಿಜಯನಗರದ ರಾಜರುಗಳಿಗೆ ಸಂಬಂಧಿಸಿದಂತೆ ದೊರೆಯುತ್ತವೆ. ಆ ಶಾಸನಗಳಲ್ಲಿ ಒಂಭತ್ತು ತಾಮ್ರಶಾಸನಗಳು ಅದರಲ್ಲಿ ನಾಲ್ಕು ತೆಲುಗಿನಲ್ಲಿವೆ. ಮೂರು ಸಂಸ್ಕೃತದಲ್ಲಿವೆ.

ಆದರೂ ನಿಡುಗಲ್ಲಿನ ಅಕ್ಕಪಕ್ಕದಲ್ಲಿ ದೊರೆತ ಈ ಶಾಸನಗಳು ದಾನ, ದತ್ತಿ, ಕೆರೆ ಕಟ್ಟಿದ ವಿಚಾರ ಮಾನ್ಯ ಕೊಟ್ಟ ವಿಚಾರ ಮತ್ತು ದೇವಾಲಯಗಳ ನಿರ್ಮಾಣವನ್ನು ಕುರಿತು ತಿಳಿಸುತ್ತದೆ.

ಇವು ವಿಜಯನಗರದ ರಾಜರ ವಿವಿಧ ಹೆಸರುಗಳಿಂದ ಕೂಡಿವೆ. ಪಾವಗಡ ರಾಜರ ವಿವಿಧ ಹೆಸರುಗಳಿಂದ ಕೂಡಿವೆ. ಪಾವಗಡ ತಾಲೂಕಿನಲ್ಲಿ ವಿಜಯನಗರದ ಅರಸರ ಶಾಸನಗಳು ಕ್ರಿ.ಶ ೧೩೯೪ರಿಂದಲೆ ದೊರೆತಿವೆ. ಆದರೂ ಪ್ರಸ್ತುತ ಅಧ್ಯಯನದ ನಿಡುಗಲ್ಲು ಪ್ರದೇಶಧಲ್ಲಿ ಸಿಕ್ಕಿರುವ ಶಾಸನಗಳನ್ನು ನೋಡಿದಾಗ ಕ್ರಿ.ಶ. ೧೫೩೦ರ ಶಾಸನವೊಂದು 'ಅಚ್ಚುತ ದೇವರಾಯ'ನಿಗೆ ಸಂಬಂಧಿಸಿದ್ದಾಗಿದ್ದು, ಮಹಾರಾಜಾಧಿರಾಜ ರಾಜಪರಮೇಶ್ವರ ಅಚ್ಯುತ ಮಹಾರಾಯನು 'ಅಯ್ಯಪ್ಪ ಡಾಣಾಯಕರ' ಮುಖಾಂತರ ಮಹಾಮಾಂಡಲೇಶ್ವರ ಮಲ್ಲೆಲ ತಿಮ್ಮನಾಯಕನ ಮಗ ಮಲ್ಲಿನಾಯಕನಿಗೆ ನಿಡುಗಲ್ಲಿನ ಪೂರ್ವದಲ್ಲಿರುವ 'ಗುಜ್ಜನಡು' ಗ್ರಾಮವನ್ನು ದಾನವಾಗಿ ಕೊಟ್ಟು, 'ಅಲ್ಲಿನ ಪರ್ವತ' ಜಂಗಮಾತ್ಮರೂ ಕುಂಟೆ, ಜಲಪಗುಂಡಿ, ಗ್ರಾಮದ ಚತುಸ್ಸೀಮೆಯ ಲಿಂಗ ಮುದ್ರೆ ಕಲ್ಲನ್ನು ಪ್ರತಿಷ್ಠಾಪಿಸಿ ಅಲ್ಲಿ ದೊರೆಯುವ ಜಲ, ಪಾಶಾಣ, ನಿಧಿ, ನಿಕ್ಷೇಪ, ಸಕಲ ಸ್ವಾಮ್ಯವೂ ಅವನಿಗೆ ಸೇರುತ್ತದೆ ಎಂದು ಈ ಶಾಸನ ತಿಳಿಸುತ್ತದೆ. ಹಾಗೆಯೆ ಕ್ರಿ.ಶ. ೧೫೩೭ರ ಶಾಸನವೊಂದು ಹರಿಹರರಾಯನು ನಿಡುಗಲ್ಲಿನ ಉತ್ತರ ದಿಕ್ಕಿಗೆ ಇರುವ ಹರಿಹರ ಪುರವೆಂಬ ಗ್ರಾಮದಲ್ಲಿ ಹರಿಹರೇಶ್ವರ ದೇವಾಲಯಗಳನ್ನು ನಿರ್ಮಿಸಿದಂತೆ ತಿಳಿಸುತ್ತದೆ. ಮುಂದುವರೆದ ಅಕ್ಷರಗಳು ಈ ಶಾಸದಲ್ಲಿ ತೃಟಿತವಾಗಿರುವುದರಿಂದ ಅದಕ್ಕೆ ಬಿಟ್ಟ ದಾನ ಇತ್ಯಾದಿ ವಿಚಾರಗಳು ತಿಳಿಯುವುದಿಲ್ಲ

ಕ್ರಿ.ಶ. ೧೫೪೦ರ ಪಾವಗಡ ತಾಲೂಕಿನ ಶಾಸನವೊಂದು ನಿಡುಗಲ್ಲಿಗೆ ಪೂರ್ವದಲ್ಲಿರುವ ಗುಜ್ಜನಡು ಗ್ರಾಮದ ಆಂಜನೇಯ ದೇವಾಲಯದ ಹಿಂಭಾಗದಲ್ಲಿದ್ದು, ಬಹುಭಾಗ ತೃಟಿತವಾಗಿದೆ. ಇದು ನೇರವಾಗಿ 'ಅಚ್ಯುತ್‌ದೇವ' ಮಹಾರಾಜನನ್ನೇ ಹೇಳುತ್ತದೆ. ಹಾಗೂ ಅವನ ರಾಜ್ಯಭಾರದ ಸಮಯದಲ್ಲಿ ಅವನ ಮಹಾಮಂಡಲೇಶ್ವರ ವಿಠ್ಠಲಯ್ಯ ದೇವ ಅರಸನು 'ಅಡಕ ಮಹಾ ಅರಸನಿಗೆ' ಉಂಬಳಿಯಾಗಿ ಕೊಡುತ್ತಾನೆ. ಜೊತೆಗೆ ಈ ಶಾಸನದಲ್ಲಿ ಪಾನಕ ಶೆಟ್ಟಿ ಮತ್ತು ಚೌಡೇಶ್ವರಿ ಎಂಬ ಹೆಸರುಗಳು ಬಂದಿದ್ದು, ಮುಂದಿನ ಭಾಗ ತೃಟಿತವಾಗಿದೆ.

ಸದಾಶಿವರಾಯನಿಗೆ ಸಂಬಂಧಿಸಿದ ಕ್ರಿ.ಶ.೧೫೫೦ರ ನಿಡುಗಲ್ಲು ಪ್ರದೇಶದ ಶಾಸನವೊಂದು ಸದಾಶಿವರಾಯನನ್ನು 'ಶ್ರೀ ಮಹಾರಾಜಾಧಿರಾಜ ರಾಜ ಪರಮೇಶ್ವರ ವೀರಪ್ರತಾಪ' ಎಂದು ಬಣ್ಣಿಸಿದೆ. ಮುಂದುವರೆದು ಅವನ ಮಹಾಮಂಡಲೇಶ್ವರನಾದ ರಾಜ ವಿಠಲೇಶ್ವರ ದೇವನು ಕೊಣನಕುರಿಕೆ ಗ್ರಾಮಕ್ಕೆ ಪ್ರತಿ ನಾಮವಾದ 'ವಿಠಲಾಪುರ' ತಿರುವೆಂಗಳನಾಥ ದೇವಸ್ಥಾನವನ್ನು ಕಟ್ಟಿಸಿ ದಾನ–ದತ್ತಿಗಳನ್ನು, ಮಾನ್ಯವನ್ನು ಕೊಟ್ಟಂತೆ ತಿಳಿಸುತ್ತದೆ. ಹಾಗೂ ಇವನ ಹೆಸರನ್ನು ಹೇಳುವ ಮತ್ತೊಂದು ಶಾಸನವನ್ನು ನಿಡುಗಲ್ಲಿನ ಕುಮಾರ ತಿಮ್ಮಣ್ಣನಾಯಕನು ಹಾಕಿಸಿದಂತೆ ಕಂಡುಬರುತ್ತದೆ. ಈ ಶಾಸನದ ಪ್ರಕಾರ ತುಮಕುಂಟೆ ಗೌಡಿಕೆಯನ್ನು 'ಧರ್ಮಗೌಡ' ಎಂಬುವವನು ಅನುಸರಿಸಿಕೊಂಡು ಬರುತ್ತಿರುತ್ತಾನೆ. ಆ ಸಮಯದಲ್ಲೇ 'ಸದಾಶಿವರಾಯ'ನು ಆಳ್ವಿಕೆಯ ಅಧಿಕಾರಸ್ಥನಾಗಿದ್ದು, ಮಹಾಮಂಡಲೇಶ್ವರ ರಾಮರಾಯ, ವಿಠಲದೇವ, ಅರಸರುಗಳು

ಮಾಗಣಿಯಾಗಿ ತುಮಕುಂಟೆ ಸ್ಥಳದಲ್ಲಿರುತ್ತಾರೆ. ಅದಕ್ಕೆ 'ತೈಲಂಗೆರೆ' ಸ್ಥಳವೆಂದು ಹೆಸರು. ನಿಡುಗಲ್ಲಿಗೆ ಸೇರಿದ ಈ ಪ್ರದೇಶದಲ್ಲಿ ತಿಮ್ಮಬೊಮ್ಮನ ಮಗ 'ಧರ್ಮಗೌಡ'ನು ಗ್ರಾಮಕ್ಕೆ ಕೊಟ್ಟು ಕಟ್ಟಿಸಿ ತೈಲಂಗೆರೆಯ ಜೀರ್ಣೋದ್ಧಾರ ಮಾಡಿಸಿ ಅಲ್ಲಿರುವ ಕಾಲುವೆಗಳನ್ನೆಲ್ಲಾ ಪುನರ್ ಸರಿಪಡಿಸುತ್ತಾನೆ. ಇವನಿಗೆ ತೈಲಂಗೆರೆಯ ರಾಮೇಗೌಡ ಶ್ಯಾನಭೋವ ಮತ್ತು ಅವನ ಅಳಿಯ ಚೆನ್ನಗೌಡ, ಸಿವುರದ ನಗೆಗೌಡ ಸಾಕ್ಷಿಯಲ್ಲಿ ಉಂಬಳಿಯನ್ನು ಕೊಟ್ಟಿದ್ದಾಗಿ ತಿಳಿಸುವ ಈ ಶಾಸನ ಬಹಳ ವಿಶಿಷ್ಟವಾದದ್ದು. ಮತ್ತು ಈ ಪ್ರಾಂತ್ಯದಲ್ಲೆ ಸಮಾಜ ಸೇವೆಗೆ ಸೀಮಿತವಾದ ಸಂಪೂರ್ಣ ಸಾರ್ವಜನಿಕರ ಉಪಯೋಗಕ್ಕಾಗಿಯೇ ಈ ಎಲ್ಲಾ ಕೆಲಸ ಮಾಡಿಸಿದ್ದಂತೆ ತಿಳಿದುಬರುತ್ತದೆ.

"ಕ್ರಿ.ಶ. ೧೫೫೬ರ ಕಾಲದ ನಿಡುಗಲ್ಲು ಪ್ರದೇಶದ ಶಾಸನವೊಂದು ಸದಾಶಿವರಾಯನು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ ಅವನ ಆದೇಶದಂತೆ 'ಅವನ ಮಹಾಮಂಡಲೇಶ್ವರರಾದ ರಾಮರಾಜ ಮತ್ತು ತಿರುಮಲ ರಾಜಯ್ಯದೇವ ಮಹಾ ಅರಸರುಗಳು, ಮಹಾನಾಯಕಾಚಾರ್ಯ ನಿಡುಗಲ್ಲು ತಿಮ್ಮಣ್ಣ ನಾಯಕರು ನಿಡುಗಲ್ಲಿನ ಸಮಸ್ತ ಅಧಿಕಾರಸ್ತರಾಗಿದ್ದರೆಂದೂ ಹಾಗೂ ಅನೇಕ ಹಳ್ಳಿಯ ಗೌಡರು, ಶಾನುಭೋಗರು ಪಟ್ಟಣ ಶೆಟ್ಟಿಗಳು ಪ್ರಮುಖ ಪ್ರಜೆಗಳು ಮತ್ತು ನಿಡುಗಲ್ಲು ರಾಜ್ಯದೊಳಗಣ ಮುದ್ರೆ ಮನುಷ್ಯರನ್ನು ಮುಂದಿಟ್ಟುಕೊಂಡು 'ತಿರವೆಂಗಳ ನಾಥ' ದೇವರ ನಿತ್ಯ ನೈವೇದ್ಯ ಪೂಜೆ, ಹಬ್ಬ, ನಂದಾದೀವಿಗೆ ಮುಂತಾದವುಗಳಿಗೆ ಆ ಗ್ರಾಮಕ್ಕೆ ಸೇರುವ ನಿಧಿ, ನಿಕ್ಷೇಪ, ಜಲ ಪಾಶಾಣಗಳನ್ನು ತಿಮ್ಮರಾಜಯ್ಯರಿಗೆ ಪುಣ್ಯವಾಗಲೆಂದುದಾನ ನೀಡುತ್ತಾನೆಂದು ತಿಳಿಸುತ್ತಾರೆ."

ಹೀಗೆಯೇ "ಕ್ರಿ.ಶ. ೧೬೬೭ರ ಶಾಸನವೊಂದು ವಿಜಯನಗರದ ಶ್ರೀರಂಗರಾಯನಿಗೆ ಸಂಬಂಧಿಸಿದಂತೆ ಕೆಲವು ವಿಚಾರಗಳನ್ನು ತಿಳಿಸುತ್ತದೆ. ಇವನ ಆದೇಶದಂತೆ ನಿಡುಗಲ್ಲು ನೆಲೆವಿಡಿನಲ್ಲಿ ಅರಸನಾಗಿದ್ದ ವೀರತಿಮ್ಮಣ್ಣ ನಾಯಕ ತಮ್ಮ ಪಿತ್ರಾದಿ ಹಿರಿಯರಿಗೆ ಅಕ್ಷರ ಪುಣ್ಯವು ಪ್ರಾಪ್ತಿಯಾಗಲೆಂದು ಕಾಳಂಜನಗಿರಿ ಪುರದ ದಕ್ಷಿಣ ಭಾಗದಲ್ಲಿ (ನಿಡುಗಲ್ಲಿನ) 'ಆಡುಮಲ್ಲೇಶ್ವರ' ಗುಡಿಯೊಂದನ್ನು ಕಟ್ಟಿಸಿ ನ್ಯಾಯದಗುಂಟೆ ಹತ್ತಿರ ಲಿಂಗಮುದ್ರೆ ಕಲ್ಲನ್ನು ಸ್ಥಾಪಿಸಿ ಜೊತೆಗೆ ಕೆರೆಯೊಂದನ್ನು ಕಟ್ಟಿಸಿ ಅದಕ್ಕೆ ಮಾನ್ಯ, ದಾನದತ್ತಿಗಳನ್ನು ಬಿಟ್ಟಿರುವುದಾಗಿ ತಿಳಿಸುತ್ತದೆ. ಜೊತೆಗೆ ಇಲ್ಲಿ ಬರುವ ವೀರತಿಮ್ಮಣ್ಣ ನಾಯಕರನ್ನು ಶಾಸನವು 'ಬಾದುರಮಲುಕ ಸಪ್ತಾಂಗಹರಣ'" ಎಂದು ಕರೆಯುತ್ತದೆ. ಇದೇ ರೀತಿ ಮಹಾನಾಯಕಾಚಾರ್ಯ ನಿಡುಗಲ್ಲಿನ ತಿಮ್ಮಣ್ಣನಾಯಕನೆಂದು ಆಂಧ್ರಪ್ರದೇಶದ ಶಾಸನವೊಂದು ಕರೆಯುತ್ತದೆ.

ಶ್ರೀರಂಗನಾಯಕನಿಗೆ ಸಂಬಂಧಿಸಿದ್ದ ಕ್ರಿ.ಶ.೧೬೭೦ ಶಾಸನವೊಂದು ಅವನ ಕಾಲದಲ್ಲಿಯೇ ತಿಮ್ಮಣ್ಣನಾಯಕನು ನಿಡುಗಲ್ಲಿನಲ್ಲಿರುವ ಶ್ರೀಕಾಳಹಸ್ತೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಅದಕ್ಕೆ ಪೂಜೆ, ಅಂಗಭೋಗ, ನಿತ್ಯನೈವೇಧ್ಯ ಮುಂತಾದ ಕಾರ್ಯಗಳಿಗೆಂದು ಕೆಲವು

ದಾನ ಸುಂಕಗಳನ್ನು ಮತ್ತು ದತ್ತಿಗಳನ್ನು ಕೊಟ್ಟಂತೆ ತಿಳಿಸುತ್ತದೆ. ಅದೇ ಅರಸನಿಗೆ ಸಂಬಂಧಪಟ್ಟಂತೆ ಇನ್ನೊಂದು ಶಾಸನವು ಸಹಾ ಇದೇ ಪ್ರಾಂತ್ಯದಲ್ಲಿ ದೊರೆತಿದ್ದು, ಈ ವೇಳೆಗಾಗಲೇ ಹರತಿಯ ಹೊಟ್ಟೇಂದ್ರನು ನಿಡುಗಲ್ಲನ್ನು ಆಳುತ್ತಿದ್ದಂತೆ ತಿಳಿಸುತ್ತದೆ. ನಿಡುಗಲ್ಲು ಗ್ರಾಮದಲ್ಲಿ ಶ್ರೀ ಸಾರ್ವಡೇಶ್ವರ ದೇವಾಲಯವೊಂದನ್ನು ಸ್ಥಾಪಿಸಿದಂತೆಯೂ ಸಹ ಈ ಶಾಸನ ತಿಳಿಸುತ್ತದೆ. ಇದು ವಿಜಯನಗರ ಅರಸರ ಈ ಪ್ರಾಂತ್ಯದ ಕೊನೆಶಾಸನವಾಗಿದೆ.

ಇದುವರೆಗೂ ಅನೇಕ ಶಾಸನಗಳನ್ನು ವಿಶ್ಲೇಷಿಸಿದ್ದೇವೆ. ಯಾವುದೇ ಶಾಸನದಲ್ಲಿಯೂ ಅರಸರುಗಳ ಹೆಸರಿದೆಯೇ ಹೊರತು ಅವರ ಮನೆತನದ ಹೆಸರಾಗಲಿ, ವಿಜಯನಗರ ರಾಜಧಾನಿಯಿಂದ ಆಳ್ವಿಕೆ ನೆಡೆಸುವಂತಗಾಲಿ ಶಾಸನದಲ್ಲಿ ಉಲ್ಲೇಖವಿಲ್ಲ.ಅರಸರ ಹೆಸರುಗಳ ಸಹಾಯದಿಂದ ಮಾತ್ರ ನಾವು ಅವರ ಮನೆತನವನ್ನು ಗುರುತಿಸಲು ಸಾಧ್ಯವಾಗುತ್ತದೆ. ಹಾಗೆಯೆ ಆಂಧ್ರದ ಬೇರೆ ಬೇರೆ ಪ್ರದೇಶಗಳಿಂದ ಆಳ್ವಿಕೆ ನಡೆಸುತ್ತಿದ್ದಂತೆ ಆಂಧ್ರಪ್ರದೇಶದ ಶಾಸನಗಳಿಂದ ತಿಳಿದುಬರುತ್ತದೆ.

ತುಳುವ ವಂಶದ ಅಚ್ಯುತರಾಯನಿಗೆ ಸೇರಿದ ಕ್ರಿ.ಶ. ೧೫೩೦-೧೫೪೧ರ ವರೆಗಿನ ಸುಮಾರು ೪೫ ಕನ್ನಡ ಶಾಸನಗಳು ಆಂಧ್ರದಲ್ಲಿ ದೊರೆತಿವೆ. ಅವುಗಳಲ್ಲಿ ೧೫ ಲೇಪಾಕ್ಷಿಯಲ್ಲಿ ದೊರೆತಿವೆ. ಕ್ರಿ.ಶ. ೧೫೪೬ರ ರಾಯದುರ್ಗ ತಾಲೂಕಿನ ಶಾಸನಗಳಲ್ಲಿ ಬಂದಿರುವ ಮಹಾಮಂಡಲೇಶ್ವರರ ರಾಮರಾಜ, ವಿಠಲಯ್ಯದೇವ ಮಹಾಅರಸರುಗಳ ವಿಚಾರಗಳನ್ನು ತಿಳಿಸುತ್ತದೆ. ಇವನೇ ನಿಡುಗಲ್ಲಿನ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಮಹಾಮಂಡಲೇಶ್ವರನೂ ಹೌದು. ಆದ್ದರಿಂದ ಆಂಧ್ರದ ಹಿಂದೂಪುರ ಪೆನಗೊಂಡೆಗಳನ್ನು ವಿಜಯನಗರದ ಅರಸುಗಳು ರಾಜಧಾನಿ ಮಾಡಿಕೊಂಡು ಅಲ್ಲಿಂದ ನಿಡುಗಲ್ಲನ್ನು ಆಳುತ್ತಿದ್ದವೆಂಬುದಕ್ಕೆ ಅನುಮಾನವಿಲ್ಲ.

ಅಚ್ಯುತರಾಯನ ನಂತರ ವಿಜಯನಗರ ದೊರೆಯಾದವನು ಅವನ ತಮ್ಮ ರಂಗಾರಾಯನ ಮಗ ಸದಾಶಿವರಾಯನ ಕಾಲದ ತುಂಡರಸರುಗಳೆಂದರೆ ಮಹಾಮಂಡಳೇಶ್ವರ ರಾಮರಾಜಯ್ಯ ವಿಠಲೇಶ್ವರದೇವ ಮಹಾಅರಸು ರಾಮರಾಜ ಅಪ್ಪಯ್ಯದೇವಾ ಮಹಾಅರಸು, ತಿರುಮಲದೇವಾ ಮಹಾ ಅರಸು, ಮಹಾನಾಯಕಾಚಾರ್ಯ ನಿಡುಗಲ್ಲಿನ ತಿಮ್ಮಣ್ಣನಾಯಕ ಮುಂತಾದವರು. ಇಂತಹ ಅಧಿಕಾರಿಗಳೆಂದಲೇ ಆಳ್ವಿಕೆ ಮಾಡಿದ್ದಾರೆಯೇ ಹೊರತು ಯಾವುದೇ ಶಾಸನವೂ ನೇರವಾಗಿ ದೊರೆಗೆ ಸಂಬಂಧಿಸಿಲ್ಲವೆಂದೇ ಹೇಳಬೇಕು. ಹಾಗಾಗಿ ವಿಜಯನಗರದ ರಾಜರು ನೇರವಾಗಿ ಆಳದೆ ಅಧೀನ ಅಧಿಕಾರಿಗಳಿಂದ ಆಳ್ವಿಕೆ ನೆಡೆಸಿದ್ದಾರೆ.

ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ದೊರೆಗಳು ಮುಸಲ್ಮಾನರ ದೊರೆಗಳಿಗೆ ಸೋತಾಗ ಆ ದೊರೆಗಳು ತಮ್ಮ ರಾಜಧಾನಿಯನ್ನು ಪೆನಗೊಂಡೆಗೆ ಬದಲಾಯಿಸಿಕೊಂಡರು. ಅನಂತರ ಅಳಿಯ ಸಂತಾನದ ಅರವೀಡು ವಂಶದ ದೊರೆಗಳಲ್ಲಿ ಶ್ರೀರಂಗಾರಾಯನು ಹಾಕಿಸಿದ ಎರಡು ಶಾಸನಗಳ ಲಭ್ಯವಾಗುತ್ತವೆ. ಇವನ ಆಳ್ವಿಕೆಯೂ ಸಹ

ಕ್ರಿ.ಶ. ೧೬೮೧ಕ್ಕೆ ಕೊನೆಗೊಂಡಂತೆ ಕಾಣುತ್ತದೆ. ನಂತರ ಇವನ ಕಿರಿಯ ತಮ್ಮ ಮೊದಲನೆಯ ವೆಂಕಟಪತಿರಾಯ ಪಟ್ಟಕ್ಕೆ ಬರುತ್ತಾನೆ.

ಈ ವೇಳೆಗೆ ವಿಜಯನಗರದ ಅರಸರ ಆಳ್ವಿಕೆ ಮುಗಿಯುತ್ತಾ ಸಾಗುತ್ತದೆ. ಮೈಸೂರಿನ ಅರಸರು, ಕೆಳದಿ ಅರಸರು, ಸಗಟೂರಿನ ಪಾಳೆಗಾರರು, ಹರತಿ, ಚಿತ್ರದುರ್ಗ, ನಿಡುಗಲ್ಲು ಪಾಳೆಗಾರರು ಮುಂತಾದವರ ಕೈ ಮೇಲಾಗಿ ವಿಜಯನಗರದ ಅರಸರು ಮನೆತನದ ಸಂಪೂರ್ಣವಾಗಿ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತದೆ.

ಪಾಳೆಯಗಾರರ ಆಳ್ವಿಕೆ

ಕರ್ನಾಟಕದಲ್ಲಿ ಮತ್ತು ದಕ್ಷಿಣಭಾರತದ ಇತರೆಡೆ ಕೆಲವು ಚಾರಿತ್ರಿಕ ಪರಿಸ್ಥಿತಿಯಿಂದ ಚಿಕ್ಕಪುಟ್ಟ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರುಗಳಿಗೆ ಪಾಳೆಗಾರರೆಂದು ಕರೆಯುತ್ತಾರೆ. ಮಧ್ಯಕಾಲೀನ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ (೧೫-೧೬ ಶತಮಾನಗಳ ನಂತರ) ಪ್ರಬಲರಾದವರು ಈ ಮಾಂಡಲೀಕರು, ವಿಜಯನಗರ ಅರಸರು ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ ಅದಕ್ಕೆ ಸೇರಿದ ನಾನಾ ಭಾಗಗಳ ಮೇಲೆ ತಾವೇ ನೇರವಾಗಿ ಆಳ್ವಿಕೆ ಮಾಡುವುದು ಕಷ್ಟವೆಂದು ತಿಳಿದುಬಂದಾಗ ಆಯಾ ಪ್ರದೇಶಗಳ ಉಸ್ತುವಾರಿ ನೋಡಿಕೊಳ್ಳಲು ಕೆಲವು ಬಲಿಷ್ಠ ಹಾಗೂ ಪ್ರಭಾವವುಳ್ಳ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಮುಂದೆ ಅವರೆ ಈ ಮಾಂಡಲಿಕರು, ಸಾಮಂತಗಾರರು, ನಾಯಕರು, ಪಾಳೆಗಾರರೆಂದು ಪ್ರಸಿದ್ಧರಾದರು.

ಕರ್ನಾಟಕದಲ್ಲಿ ಸುಮಾರು ೪೦೦ಕ್ಕೂ ಹೆಚ್ಚು ವರ್ಷಗಳ ಕಾಲ ಆಳ್ವಿಕೆ ನೆಡೆಸಿದ ಈ ಪಾಳೆಗಾರರು ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವನ್ನೇ ಉಳಿಸಿಕೊಂಡು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ರಕ್ಷಿಸಿ ಕಾಪಾಡಿಕೊಂಡು ಬಂದಿದ್ದಾರೆ. ಪಾಳೆಗಾರರು ಮೂಲತಃ ಸಾಹಸಿಗರೂ, ಶೂರರೂ, ರಣಕಲಿಗಳೂ ಆಗಿದ್ದು, ತಮ್ಮ ಕಾರ್ಯ ಸಾಹಸಗಳಿಂದ ಕ್ರಮ ಕ್ರಮವಾಗಿ ಕರ್ನಾಟಕದ ರಾಜಕೀಯದಲ್ಲಿ ಮೇಲೆರುತ್ತಾ ಬಂದರು. ಪಾಳೆಗಾರರನೆಂದರೆ 'ದಂಡಿನೊಳಗೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧನಾಗಿರುವವನು' ಎಂದು ಎಂ.ಎಸ್. ಪುಟ್ಟಣ್ಣನವರು ಅರ್ಥೈಸುತ್ತಾರೆ. ಇವರು ಕಾಲಕ್ರಮೇಣ ದುರ್ಗಮವಾದ ಅರಣ್ಯಗಳಲ್ಲಿ, ಗಿರಿದುರ್ಗಗಳಲ್ಲಿ ಕೋಟೆ-ಕೊತ್ತಲಗಳನ್ನು ಕಟ್ಟಿಕೊಂಡು ತಮಗೆ ಸಮೀಪವಿರುವ ಪ್ರದೇಶಗಳನ್ನು ವಶಪಡಿಸಿಕೊಂಡು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸುತ್ತಾ ಹೋದರು.

ಕೆಲವು ಸಮರ್ಥರಾದ ನಾಯಕರು ಯಾವುದಾದರೊಂದು ಒಂದು ಪ್ರದೇಶದಲ್ಲಿ ನೆಲೆಸಿ ಅಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ಅನಂತರ ಸಾಮ್ರಾಟರ ಅನುಮತಿಯನ್ನು, ಅನುಗ್ರಹವನ್ನು ಪಡೆದುಕೊಂಡು ಅವರಿಗೆ ಯುದ್ಧಗಳಲ್ಲಿ ಸಹಕರಿಸಿಕೊಂಡು ಹೋಗುತ್ತಿದ್ದರು. ಅದಕ್ಕೆ ಮೆಚ್ಚಿದ ಅರಸರುಗಳು ಅವರಿಗೆ ಕೆಲವು ಪ್ರದೇಶಗಳನ್ನು ನೋಡಿಕೊಳ್ಳುವಂತೆ ಅಧಿಕಾರವನ್ನು

ವಹಿಸಿಕೊಡುತ್ತಿದ್ದರು. ಪಾಳೆಯಗಾರರು (ಮಾಂಡಲೀಕರು) ಅರಸರಿಗೆ ನಿಗದಿಯಾದ ಪೋಗದಿಯನ್ನು ಕೊಡುತ್ತಾ ಈ ಪ್ರದೇಶವನ್ನು ಆಳುತ್ತಿದ್ದರು.

ಮುಸಲ್ಮಾನರ ದಾಳಿಯಿಂದ ಪಾರಂಪರ್ಯ ಸಂಸ್ಥಾನಗಳು ದೊಡ್ಡ ಸಾಮ್ರಾಜ್ಯಗಳೂ ಮರೆಯಾದಾಗ ಈ ಪಾಳೆಪಟ್ಟುಗಳ ಏಳಿಗೆಗೆ ಅವಕಾಶ ದೊರೆಯಿತು. ಎಂ.ಎಸ್. ಪುಟ್ಟಣ್ಣನವರು ಹೇಳುವಂತೆ 'ಈ ಪಾಳೆಯಗಾರರಿಗೂ ಬೇರೆ ರಾಜ್ಯಗಳಿಗೂ ಇದ್ದ ಸಂಬಂಧವೂ ತುಂಗಾಭದ್ರಾ ಪೀಠವಾಸಿಗಳಾಗಿದ್ದ ಚಕ್ರಾಧೀಶ್ವರರ ಆಳ್ವಿಕೆಯೊಳಗೆ ಎಷ್ಟರ ಮಟ್ಟಿಗೆ ಸೇರಿಕೊಂಡಿತ್ತೆಂದರೆ ಈ ಅಧೀನ ರಾಜರಿಲ್ಲದಿದ್ದರೆ ರಾಜಾಧಿರಾಜರೆಂದು ಖ್ಯಾತಿ ಪಡೆದಿದ್ದ ಆ ಚಕ್ರವರ್ತಿಗಳು ಚಿತ್ರದಲ್ಲಿ ಬರೆದ ಚಕ್ರವರ್ತಿಗಳಾಂತಾಗುತ್ತಿದ್ದರು.' ಒಂದು ದೃಷ್ಟಿಯಿಂದ ನೋಡಿದರೆ ಕರ್ನಾಟಕದ ಪ್ರಾಚೀನಯ ಅಭಿವೃದ್ಧಿಗೆ ಸಾಮಂತರು, ಮಾಂಡಲೀಕರು, ಪಾಳೆಗಾರರು ಹಿರಿದಾದ ಸೇವೆಯನ್ನು ಸಲ್ಲಿಸಿದ್ದಾರೆ. ತಾಳಿಕೋಟೆ ಯುದ್ಧದಲ್ಲಿ ಅನೇಕ ಪಾಳೆಯಗಾರರು ವಿಜಯನಗರದ ಪರವಾಗಿ ಹೋರಾಡಿದರೂ ವಿಜಯನಗರದ ಪತನಾನಂತರ ಅನೇಕ ಅಧಿಕಾರಿಗಳು ಪ್ರಮುಖ ಪಾಳೆಯಗಾರರ ಆಶ್ರಯವನ್ನು ಪಡೆದರು. ಹೀಗೆ ವಿಜಯನಗರ ಪರಂಪರೆ ಮುಂದುವರೆಯಿತು.

ಈ ಪಾಳೆಗಾರರ ಆಳ್ವಿಕೆ ಭಾರತದಲ್ಲಲ್ಲದೆ ಸಮುದ್ರಾಚೆಗೂ ಹರಡಿತ್ತು ಎನ್ನುವುದಕ್ಕೆ ಕೆಳದಿಯ ಅರಸರ ವಿಚಾರವನ್ನು ಕುರಿತ ವಿದೇಶಿಯರಾದ ಎರಡನೆಯ ದೊರೆ ಎರಡನೆ ಫಿಲಿಫ್ ಪೆಟ್ರೋಡೆಲ್ಲಾವಲ್ಲೆ ಅವರ ಹೇಳಿಕೆಗಳೇ ಸಾಕ್ಷಿ. ಸಾಮಾನ್ಯವಾಗಿ ಈ ಪಾಳೆಯಗಾರರು ವೈಭವ, ಭೋಗ–ಜೀವನಗಳಲ್ಲಿ ನಿರತರಾಗದೆ ಸಾಮಾನ್ಯರಿಗೆ ಉಪಯುಕ್ತದಾದ ಕಾರ್ಯಗಳನ್ನು ಕೈಗೊಂಡು ಪ್ರಜಾವಾತ್ಸಲ್ಯವನ್ನು ಕೈಗೊಂಡಿದ್ದರು. ಇವರ ಆಳ್ವಿಕೆಯಲ್ಲಿ ತೆರಿಗೆಗಳು ವಿಜಯನಗರಕ್ಕಿಂತಲೂ ಹಗುರವಾದಂತವುಗಳಾಗಿದ್ದವು. ಅನೇಕ ವೇಳೆ ಇವರು ತಮ್ಮ ಪ್ರಜೆಗಳಿಂದ ಶ್ರಮದಾನವನ್ನು ಮಾಡಿಸಿ ಕೋಟೆ ಕೊತ್ತಲ, ಸಾರ್ವಜನಿಕ ಕಟ್ಟಡಗಳನ್ನು, ದೇವಾಲಯಗಳನ್ನು ನಿರ್ಮಿಸುತ್ತಿದ್ದರು.ಇದರ ಜೊತೆಗೆ ದೊಡ್ಡ ದೊಡ್ಡ ಸಾರ್ವಭೌಮರಂತೆ ಭವ್ಯವಾದ ಅರಮನೆಗಳನ್ನು ನಿರ್ಮಿಸುವ ಬದಲು, ಇವರು ಪ್ರಜೆಗಳಿಗೆ ಉಪಯುಕ್ತವಾಗುವಂತಹ ಕೆರೆ, ಕಟ್ಟೆ, ಕಾಲುವೆಗಳನ್ನು ನಿರ್ಮಿಸಿ ವ್ಯವಸಾಯಕ್ಕೆ ವಿಶೇಷವಾದ ಪ್ರೋತ್ಸಾಹ ನೀಡುತ್ತಿದ್ದರು. ನಿಡುಗಲ್ಲು ಪಾಳೆಗಾರರು ಕಟ್ಟಿಸಿದ ಕೆರೆಗಳ ಸಂಖ್ಯೆಯನ್ನು ಗಮನಿಸಿದಾಗ ಅವರು ರೈತರ ಅನುಕೂಲಕ್ಕಾಗಿ ಎಷ್ಟು ಆಸಕ್ತಿ ವಹಿಸಿದ್ದರೆಂಬುದು ತಿಳಿದುಬರುತ್ತದೆ.

ನಿಡುಗಲ್ಲು ಪಾಳೆಗಾರರ ಶಾಸನಗಳನ್ನು ಗಮನಿಸಿದಾಗ ವಿಜಯನಗರದ ಅರಸರು ಹೇಗೆ ಅಧಿಕಾರ ವಿಕೇಂದ್ರೀಕರಣಕ್ಕೆ ಮಾನ್ಯ ಕೊಟ್ಟಿದ್ದರೋ ಹಾಗೆಯೇ ಇವರು ಸಹ ಗೌಡ, ಶಾನುಭೋಗ, ತಳವಾರ, ಹನ್ನೆರಡು ಕೈವಾಡದವರು, ನಾಡಗೌಡ, ಪಾರುಪತ್ಯದಾರ, ದಳವಾಯಿ, ಮುಂತಾದವರ ಸಹಾಯದಿಂದ ಆಡಳಿತ ನಡೆಸಿದಂತೆ ಕಾಣುತ್ತದೆ. ಒಟ್ಟಾರೆ ಈ ಪಾಳೆಯಗಾರರು, ತಮ್ಮ ತಮ್ಮ ರಾಜ್ಯಗಳಲ್ಲಿ ವ್ಯವಸಾಯದೊಂದಿಗೆ ವ್ಯಾಪಾರ, ಕೈಗಾರಿಕೆ, ಕಲೆ, ಸಂಸ್ಕೃತಿಗಳನ್ನು ಪ್ರೋತ್ಸಾಹಿಸುತ್ತಾ

ಬಂದಿರುವುದು ಅವರು ಹಾಕಿಸಿರುವ ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಳ್ಳುವ ಮೊದಲೇ ಕೆಲವು ಪಾಳೆಪಟ್ಟುಗಳು ಅಸ್ತಿತ್ವದಲ್ಲಿದ್ದವು. ಆದರೆ ಬುಡಕಟ್ಟು ಪಾಳೆಯಗಾರರು ಉದಯವಾದದ್ದು ವಿಜಯನಗರದ ಅರಸರ ಆಡಳಿತದ ಅವಧಿಯಲ್ಲಿ ಮಾತ್ರ, ಉದಾಹರಣೆಗೆ ಗೊಮ್ಮನಾಯಕನ ಪಾಳೆಗಾರರು, ವಿಜಯನಗರ ಸಾಮ್ರಾಜ್ಯದ ಉದಯಕ್ಕೆ ಮೊದಲೇ ಹುಟ್ಟಿಕೊಂಡರು. ಹಾಗಲವಾಡಿ, ಆವನಿ, ಸಗಟೂರು, ಎಮ್ಮತ್ತೂರು, ಕಳಲೆ, ಮಧುಗಿರಿ, ಹೊಸಕೋಟೆ, ಚನ್ನಪಟ್ಟಣ, ಚಿಕ್ಕಬಳ್ಳಾಪುರ, ನಿಡುಗಲ್ಲು, ಬಸವಪಟ್ಟಣ, ಬೀಳಗಿ, ಗೇರುಸೊಪ್ಪೆ, ದೇವನಹಳ್ಳಿ ತರೀಕೆರೆ, ಶಿರಾ, ಬೇವೂರು, ನಾಯನಕನಟ್ಟಿ, ಸಂತೆಬೆನ್ನೂರು, ಮಾಗಡಿ, ಚಿತ್ರದುರ್ಗ, ಬಿದನೂರು (ಕೆಳದಿ) ಪಾಳೆಗಾರರು ಮುಂತಾದವರು ವಿಜಯನಗರದ ಅವಧಿಯಲ್ಲಿಯೂ ಅದರ ಪತನಾನನಂತರವು ಅಸ್ತಿತ್ವಕ್ಕೆ ಬಂದರು. ಮಧ್ಯಕಾಲೀನ ಯುಗದಲ್ಲಿ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಪಾಳೆಯಗಾರರು ಆಧುನಿಕ ಯುಗದಲ್ಲೂ ಮಹತ್ವದ ಸೇವೆಯನ್ನು ಸಲ್ಲಿಸಿದ್ದಾರೆ. ಬ್ರಿಟಿಷರ ವಿರುದ್ಧ ದಂಗೆಯೆದ್ದವರಲ್ಲಿ ಪಾಳೆಯಗಾರರೇ ಮೊದಲಿಗರೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರಪುರದ ಚಿಕ್ಕವೆಂಕಟಪ್ಪ ನಾಯಕ ನರಗುಂದದ ಬಾಬಾಸಾಹೇಬ ಮೊದಲಾದ ನಾಯಕನು ಮುಂಡರಗಿ ಭೀಮನಾಯಕ, ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಹೋರಾಟವನ್ನು ಪ್ರಾರಂಭಿಸಿ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಿದವರು.

ಇಲ್ಲಿ ನಿಡುಗಲ್ಲು ಮತ್ತು ಹರತಿ ಪಾಳೆಯಗಾರರನ್ನು ವಿಂಗಡಿಸುವುದು ಕಷ್ಟಸಾಧ್ಯದ ಕೆಲಸ. ಕಾರಣವೆಂದರೆ ಅನೇಕ ಪಾಳೆಗಾರರು ತಮ್ಮ ಶಾಸನಗಳಲ್ಲಿ ಹರತಿ–ನಿಡುಗಲ್ಲು ಎಂದು ಹೇಳುವ ಶಾಸನಗಳಲ್ಲಿ ಬರುವ ಪಾಳೆಗಾರರನ್ನು ಹರತಿ ಪಾಳೆಗಾರರೆಂದೂ, ಬರೀ ನಿಡುಗಲ್ಲು ರಾಜ್ಯ ಎಂದು ಹೆಸರಿಸುವ ಶಾಸನಗಳಲ್ಲಿ ಬರುವ ಪಾಳೆಗಾರರನ್ನು ನಿಡುಗಲ್ಲು ಪಾಳೆಗಾರರೆಂದೂ ವಿಂಗಡಿಸಿ ಈ ಕೆಳಗಿನಂತೆ ಚರ್ಚಿಸಲು ಪ್ರಯತ್ನಿಸಿದ್ದೇನೆ.

ಚಿಕ್ಕ ತಿಪ್ಪರಾಜೇಂದ್ರ:

ನಿಡುಗಲ್ಲು ಅರಸರಲ್ಲಿ ಮೊದಲು ಸಿಗುವ ಎರಡು ಶಾಸನಗಳು ಇವನ ಬಗ್ಗೆ ಹೇಳುತ್ತದೆ. ಅವುಗಳಲ್ಲಿ ಮೊದಲ ಕ್ರಿ.ಶ. ೧೪೮೭ರ ಶಾಸನವೊಂದು 'ದುರ್ಘಟವೀ ಕರ್ನಾಟಕ ದುರ್ಗಂಗಳಿಗಧಿಕವನಿಪ್ಪ ನಿಡುಗಲ್ಲೆಂಬೀ ದುರ್ಗವನ್ನು' ಒಲಿದು ಆಳುತ್ತಿರುವ ಚಿಕ್ಕ ತಿಪ್ಪನೃಪಾಲನು ಆ ದುರ್ಗವನ್ನು ಕಾಯಲು ಅಷ್ಟ ದಿಕ್ಕುಗಳಲ್ಲಿಯೂ ದುರ್ಗಿ, ಭೈರವ, ಗಣಪತಿಗಳನ್ನು ಸ್ಥಾಪಿಸಿ ಮಧ್ಯೆ ನಿಡುಗಲ್ಲಿನಲ್ಲಿ ಸುಖ ಸಂತೋಷದಿಂದಲೂ ಅಶ್ವಪತಿಯಾಗಲಿ, ಗಜಪತಿಯಾಗಲಿ ಇದನ್ನು ಭೇದಿಸಲು ಸಾಧ್ಯವಿಲ್ಲವೆಂದು ಹೇಳುತ್ತದೆ. ಮುಂದುವರೆದು 'ಚಲುವರಗಂಡ, ಕಠಾರಿರಾಯ, ಸೇನೆಭೈರವ, ಬಾದರಮಲಕ ಸಪ್ತಾಂಗಹರಣಂ, ಹೊಯ್ಸಳದಳ ವಿಭಾಡಂ ಹೊಳಕಲ್ಲ ಬೊಮ್ಮನ ಶಿರಚ್ಛೇದನಂ' ಎಂದು ಅವನ ಬಿರುದುಗಳನ್ನು ತಿಳಿಸುತ್ತದೆ. ಜೊತೆಗೆ ಮೂಡಿಗೆರೆ ಶಾಸನವೊಂದು

ಚಿಕ್ಕತಿಪ್ಪನು ಹೊಯ್ಸಳರ ಸಾಮಾಂತನಾದ ಚಿಕ್ಕಬೊಮ್ಮನಾಯಕನ ತಲೆಕಡಿದಂತೆಯು ಆನಂತರ ನಾನೇ ನಿಡುಗಲ್ಲಿನ ಅಧಿಪತಿಯೆಂದು ಘೋಷಿಸಿಕೊಂಡಂತೆಯೂ ತಿಳಿಸುತ್ತದೆ. ನಿಡುಗಲ್ಲಿನ ಶಾಸನವೂ ಮುಂದುವರೆದು ಚಿಕ್ಕತಿಪ್ಪನಪಾಲನ ಪ್ರಿಯ ಅರಸಿ ಲಕ್ಷ್ಮೀದೇವಿಯು ವೈಕುಂಠ ವಾಸಿಯಾಗಿರಲು ಅವಳ ಮೇಲಿನ ಪ್ರೀತಿಯಿಂದ ಅವಳ ಹೆಸರಿನಲ್ಲಿಯೇ ಲಕ್ಷ್ಮಣೇಶ್ವರ ಎನ್ನುವ ದೇವಾಲಯವೊಂದನ್ನು ಕಟ್ಟಿಸುತ್ತಾನೆ. ಮತ್ತು ನಿಡುಗಲ್ಲಿನ ತೆಂಕಣದ ಸಿಗಲಗುಡ್ಡದಲ್ಲಿ ಲಕ್ಷ್ಮೀದೇವಿ ಕೆರೆಯನ್ನು ಕಟ್ಟಿಸಿ ಅದನ್ನು ಬ್ರಾಹ್ಮಣರಿಗೆ ಧಾರೆಯೆರೆದು ಅಗ್ರಹಾರವನ್ನಾಗಿ ಮಾಡುತ್ತಾನೆಂದು ತಿಳಿಸುತ್ತದೆ. ಹಾಗೂ ಇವನ ತಂದೆ ಯರಬಾಪನಾಯಕನೆಂದೂ ತಾಯಿ ಅಮ್ಮಾನಾಗತಿಯೆಂದು ಅದೇ ಪ್ರದೇಶದ ಎರಡನೆಯ ಶಾಸನವೂ ಈ ವಿಷಯವನ್ನು ತಿಳಿಸುತ್ತದೆ.

"ರತ್ನಗಿರಿ ರಾಜರ ಚರಿತ್ರೆಯ ಉಲ್ಲೇಖದ ಪ್ರಕಾರ ಚಿಕ್ಕತಿಪ್ಪ ನೃಪನಿಗೆ ಹರ್ತೆಪ್ಪನಾಯಕ ಎಂಬ ಮಗನಿದ್ದಂತೆಯೂ ಇವನಿಗೆ 'ಮದಕರಿ ನಾಯಕ'ನ ಮಗಳು ರಂಗೂಬಾಯಿಯನ್ನು ವಿವಾಹ ಮಾಡಿಕೊಟ್ಟಂತೆಯೂ ವಿವರಣೆ ಇದೆ." ಇವಳು ಗಂಡನ ಮನೆಗೆ ಬರುವಾಗ ತಂದೆಯಿಂದ ಕಸ್ತೂರಿ ರಂಗಪ್ಪ ನಾಯಕನ ಕೋಟೆಯನ್ನು ಬಳುವಳಿಯಾಗಿ ಪಡೆಯುತ್ತಾಳೆ. ಇವಳ ಪ್ರಯಾಣದ ವಿಶ್ರಾಂತಿಯಾಗಿ ತಂದೆ ಈ ಬಳುವಳಿಯನ್ನು ನೀಡುತ್ತಾನೆ. ಇವಳ ಗಂಡ ಹರ್ತೆಪ್ಪನಾಯಕನು ಆ ಕೋಟೆಯನ್ನು ನವೀಕರಿಸಿ 'ಹರತಿಕೋಟೆ' ಎಂದು ತನ್ನ ಹೆಸರನ್ನೇ ಇಡುತ್ತಾನಂತೆ. ಇದರಿಂದ ಕಸ್ತೂರಿ ರಂಗಪ್ಪನಾಯಕನ ಕೋಟೆ ಹರತಿ ಕೋಟೆಯಾಯಿತು. ಇವನ ಕಾಲವನ್ನು ಕ್ರಿ.ಶ. ೧೪೯೦ ಎಂದು ಹೇಳಬಹುದು. ಇವನ ನಂತರ ಕ್ರಿ.ಶ. ೧೫೧೫ರವರೆಗೆ ಯಾರು ಆಳ್ವಿಕೆ ನಡೆಸುತ್ತಿದ್ದರೆಂದು ತಿಳಿದುಬರುವುದಿಲ್ಲ.

ಜಕ್ಕನಾಯಕ:

ಜಕ್ಕನಾಯಕನಿಗೆ ಸಂಬಂಧಿಸಿದ ಶಾಸನವೊಂದು ಕ್ರಿ.ಶ.೧೫೧೫ರ ಅವಧಿಯಲ್ಲಿ ನಿಡುಗಲ್ಲನ್ನು ಇವನು ಆಳುತ್ತಿದ್ದನೆಂದು ತಿಳಿಸುತ್ತದೆ. ಇವನು ಹರ್ತೆಪ್ಪ ನಾಯಕನ ಮಗನಿರಬಹುದೆಂದು ಹೇಳಲಾಗಿದೆ. ಆದರೆ ಯಾವುದೇ ಖಚಿತ ದಾಖಲೆಗಳಿಲ್ಲ. ಆದರೂ ವಂಶಾವಳಿಯಲ್ಲಿ ಈ ಹರ್ತೆಪ್ಪನಾಯಕನ ಹೆಸರಿನ ನಂತರ ಜಕ್ಕನಾಯಕನ ಹೆಸರು ಉಲ್ಲೇಖವಿರುವುದರಿಂದ ಇದನ್ನು ಖಚಿತಗೊಳಿಸಬಹುದು. ಮುಂದುವರೆದು ಶಾಸನವು ಜಿನ ಮತ್ತು ವಿಷ್ಣು ಇಬ್ಬರನ್ನು ಸ್ತುತಿಸುತ್ತಾ ಒಂದು ಧರ್ಮ ಬರಹದಂತೆ ಕಾಣುತ್ತದೆ. ಪರುಶರಾಮನ ಅವತಾರ ವೀರ ಮಂಡಲೇಶ್ವರ ಜಕ್ಕನಾಯಕನು ನಿಡುಗಲ್ಲು ಸೀಮೆಯೊಳಗಣ, 'ಗೊಲ್ಲನ ಕುಂಟೆಗೆ' ಪ್ರತಿನಾಮವಾದ 'ವೀರ ಭದ್ರಾಪುರಕ್ಕೆ' ಸಲ್ಲುವ ನಿಧಿ ನಿಕ್ಷೇಪಗಳನ್ನು ದಾನ ಕೊಟ್ಟಂತೆ ತಿಳಿಸುತ್ತದೆಯಾದರೂ ಯಾರಿಗೆ ಕೊಟ್ಟಿರುತ್ತದೆ ಎಂಬುದು ಇದರಿಂದ ತಿಳಿಯುವುದಿಲ್ಲ.

ತಿಮ್ಮಣ್ಣ ನಾಯಕ:

ಜಕ್ಕಣ್ಣ ನಾಯಕನ ನಂತರ ತಿಮ್ಮಣ್ಣ ನಾಯಕನು ಕ್ರಿ.ಶ. ೧೫೫೪ರಿಂದ ೧೫೬೪ರವರೆಗೆ

ನಿಡುಗಲ್ಲನ್ನು ಆಳಿದಂತೆ ಆರು ಶಾಸನಗಳು ತಿಳಿಸುತ್ತವೆ. ಇವನು ಜಕ್ಕನಾಯಕನ ಮಗನಿರಬಹುದು. ಇವನು ಗುತ್ತಿ ತಿಮ್ಮರಾಜ ಅರಸುಗಳಿಗೆ ಪುಣ್ಯವಾಗಲೆಂದು ರಂಗನಾಥ ದೇವರಿಗೆ ಹಲವು ದತ್ತಿಗಳನ್ನು ಕ್ರಿ.ಶ. ೧೫೫೬ರಲ್ಲಿ ನೀಡಿರುವುದು ಕಂಡುಬರುತ್ತದೆ., ಕ್ರಿ.ಶ. ೧೫೯ರ ಒಂದು ಶಾಸನದಲ್ಲಿ ತನ್ನ ಸೀಮೆಯ ಅರಸೀಕೆರೆಯನ್ನು ಸೆಟ್ಟಿಗೊಂಡ ಗೌಡನಿಗೆ ಗೌಡಿಕೆಯಾಗಿ ನೀಡಿದ್ದಾನೆ. ಇವನನ್ನು ಎಲ್ಲಾ ಶಾಸನಗಳು 'ಶ್ರೀಮನುಮಹಾನಾಮಾಚಾರ್ಯ, ಭಾಷೆ ತಪ್ಪುವ ನಾಯಕರ ಗಂಡ ಮೊರೆಹೊಕ್ಕರೆ ಕಾವ ನಿಡುಗಲ್ಲು ತಿಮ್ಮನಾಯಕ' ಎಂದಿವೆ. ಇದರಿಂದ ಇವನು ವೀರನು ಹಾಗೂ ಪ್ರಸಿದ್ಧನೂ ಆಗಿದ್ದನೆಂದೂ ತಿಳಿದುಬರುತ್ತದೆ. ಇವನು ಸುಮಾರು ಹತ್ತು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾನೆ. ಇದುವರೆಗೆ ಪರಿಶೀಲಿಸಿದ ಅವರ ವಂಶಾವಳಿಯನ್ನು ಗಮನಿಸಿ ಈ ಕೆಳಗಿನಂತೆ ಗುರುತಿಸಬಹುದು.

ತಿಪ್ಪರಾಜ
|
ಕಾಮನಾಯಕ
|
ಅಬ್ಬಿನಾಯಕ

ಬೊಮ್ಮನಾಯಕ (ನಿಡುಗಲ್ಲು) | **ಈಶ್ವರನಾಯಕ (ಹರತಿ)**

ಅಬ್ಬಿನಾಯಕ
|
ಪಾಲಭೂಪಾಲ
|
ಬೊಮ್ಮನಾಯಕ
|
ಬಾಪೆನಾಯಕ + ಮಾಮಾಂಬಿಕೆ
|
ಚಿಕ್ಕತಿಪ್ಪಭೂಪಾಲ (ಕ್ರಿ.ಶ. ೧೪೮೭–೮೯)
|
ಹರ್ತೆಪ್ಪನಾಯಕ (ಕ್ರಿ.ಶ. ೧೪೯೦–೧೫೧೪)
|
ಜಕ್ಕನಾಯಕ (ಕ್ರಿ.ಶ. ೧೫೧೫–೧೫೫೩)
|
ತಿಮ್ಮಣ್ಣನಾಯಕ

ಇಲ್ಲಿ ಶಾಸನಗಳಲ್ಲಿ ಕಂಡುಬರುವ ಅಥವಾ ಅವರೇ ಶಾಸನಗಳಲ್ಲಿ ತಮ್ಮ ವಂಶಾವಳಿಯನ್ನು ಬರೆಸಿಕೊಂಡಿದ್ದರೂ ಸಹ 'ಪಾಲಭೂಪಾಲ'ನ ಉಲ್ಲೇಖ ನಮಗೆ ಕಂಡುಬರುವುದಿಲ್ಲ. ಹೀಗಾಗಿ ಇವರು ಬೇರೆ ಯಾವುದೇ ಪ್ರದೇಶಗಳ ಮಹಾಮಂಡಳೇಶ್ವರಾಗಿದ್ದಿರಬಹುದು.

ಒಟ್ಟಾರೆ ತಿಮ್ಮಣ್ಣನಾಯಕನ ನಂತರ ಕ್ರಿ.ಶ. ೧೫೬೪ರಿಂದ ೧೬೬೨ರವರೆಗೆ ಈ ನಿಡುಗಲ್ಲು ಪ್ರದೇಶವನ್ನು ಯಾರು ಆಳಿದರು ಎಂದು ತಿಳಿದುಬರುವುದಿಲ್ಲ. ಕ್ರಿ.ಶ. ೧೬೬೨ರ ನಂತರ

'ವೆಂಕಟಪತಿರಾಯ'ನಿಂದ ನಿಡುಗಲ್ಲು ಪಾಳೆಯಗಾರರ ವಂಶವು ಹರತಿ ವಂಶದ ಪಾಳೆಗಾರರಲ್ಲಿ ವಿಲೀನವಾಗುತ್ತದೆ ಎಂಬುದನ್ನು ಇಲ್ಲಿ ಕಾಣಬಹುದು. ಮುಂದೆ ಇವರೆ ಹರತಿ ನಿಡುಗಲ್ಲು ಪಾಳೆಗಾರರೆಂದು ಪ್ರಸಿದ್ಧಿಯಾಗಿರುವುದು ಅವರ ಶಾಸನಗಳಿಂದ ತಿಳಿದುಬರುತ್ತದೆ.

ಹರತಿ–ನಿಡುಗಲ್ಲು ಪಾಳೆಗಾರರು

ಇವರ ನಂತರ ನಿಡುಗಲ್ಲು ಸೀಮೆಯೂ ಹರತಿ ಪಾಳೆಯಗರರ ಕೈಗೆ ಸಿಕ್ಕಿತು. ಹಲವಾರು ಶಾಸನಗಳಲ್ಲಿ ಇವರು ನಿಡುಗಲ್ಲನ್ನು ಆಳಿದ ವಿಷಯವಿದೆ. ಮೊದಲೆ ಹೇಳಿದ ಹಾಗೆ ಇವರು ತಮ್ಮ ಹೆಸರುಗಳ ಮುಂದೆ ಹರತಿ–ನಿಡುಗಲ್ಲು ಎಂದು ಎರಡೂ ಸ್ಥಳಗಳನ್ನು ಪಾಳೆಗಾರರು ಅಥವಾ ಹರತಿ ನಿಡುಗಲ್ಲು ಪಾಳೆಗಾರರು ಎಂದು ಕರೆಯಲ್ಪಡುತ್ತಾರೆ. ಜೊತೆಗೆ ಹೀಗೆಂದು ಕರೆದುಕೊಳ್ಳುವ ಸಾಮಾನ್ಯವಾಗಿ ಶಿರ್‍ಯಾ (ಶಿರಾ) ಐಮಂಗಲ, ಚಳ್ಳಕೆರೆ, ಗೋಸಿಕೆರೆ, ಹರತಿ ಮಡಕಸಿರಾ, ಮುಂತಾದ ಪ್ರದೇಶಗಳಿಂದ ಬಂದು ಆಳಿದವರು ಆಗಿದ್ದಾರೆ. ಮತ್ತೆ ಕೆಲವರು ಶಾಸನ ಬರೆಸಿರುವಾಗ ತಮ್ಮ ಮೂಲ ವಂಶದ ಕುರುಹಾಗಿಯೇ ಹಾಗೆ ಕರೆದುಕೊಂಡಿದ್ದಾರೆಂದು ಹೇಳಬೇಕಾಗುತ್ತದೆ.

ಹರತಿಯ ಪಾಳೆಗಾರರ ಮೂಲದ ಬಗ್ಗೆಯು ನಿಡುಗಲ್ಲು ಪಾಳೆಗಾರರ ಮೂಲದ ಬಗ್ಗೆಯೂ ಬರುವ ಅನೇಕ ದಂತಕಥೆಗಳ ಸಾರಾಂಶ ಹೆಚ್ಚು ಕಡಿಮೆ ಒಂದೇ ಆಗಿದೆ. ಕಾರಣ ಈ ಎರಡೂ ಪಾಳೆಗಾರರು ಒಂದೇ ಮನೆತನಕ್ಕೆ ಸೇರಿದ್ದು. ಈ ನಾಯಕರುಗಳು ಒಬ್ಬೊಬ್ಬಒಂದು ಪ್ರದೇಶವನ್ನು ಆಳ್ವಿಕೆ ಮಾಡಿಕೊಂಡು ಬರುತ್ತಿದ್ದರು. ಎಲ್ಲರೂ ಶಾಸನ ಬರೆಸುವಾಗ ತಮ್ಮ ಮನೆತನದ ಪೂರ್ವಜರನ್ನು ಹೆಸರಿಸುವುದರಿಂದ ಇವರ ಕ್ರಮಬದ್ಧ ಅಧ್ಯಯಕ್ಕೆ ಬಾರಿ ತೊಡಕುಂಟಾಗಿದೆ. ಸದ್ಯಕ್ಕೆ ನಿಡುಗಲ್ಲಿನಲ್ಲಿ ಹರತಿಯವರ ಮೂಲವನ್ನು ತಿಳಿಸುವ ಮತ್ತು ಅವರು ನಿಡುಗಲ್ಲನ್ನು ಆಳಿದಂತೆ ತಿಳಿಸುವ ಐದು ಶಾಸನಗಳು ದೊರೆತಿವೆ.

ಹೊಟ್ಟೆಣ್ಣ ನಾಯಕ:

ಕ್ರಿ.ಶ. ೧೬೫೩ರ ಇವನ ಎರಡು ಶಾಸನಗಳು ನಿಡುಗಲ್ಲು ದುರ್ಗದಲ್ಲಿ ಲಭ್ಯವಾಗಿದ್ದು, ಅವುಗಳಲ್ಲಿ ಹೊಟ್ಟೆಣ್ಣನಾಯಕನ ವಂಶಾವಳಿಯನ್ನು ಈ ರೀತಿ ವಿವರಿಸುತ್ತದೆ. "ಹರತಿಯ ತ್ರಿಪುರಾಜಸುತ ಕಾಮಯ ಭೂಪತಿಯಬ್ಬ ಭೂಪಗಂ ವರಸುತಬೊಂಮಭೂಮಿ ಪತಿ ತತ್ಸುತನಾದಿ ಸುರೋಂದ್ರನಾಥಯರ್ಗೆ, ಚಿಕ್ಕನೃಪನಾತಗೆ ಹೊಟ್ಟೆನ್ರುಪಾಲ ತತ್ಸತನರನುತ, ನಂದಿಭೂಪಸುತ ಹೊಟ್ಟೆನ್ರುಪಾತ್ಮಜ ತಿಮ್ಮ ಭೂವರಂ" ಧೀರನಾತಿಮ ಭೂಪಕುಮಾರ ಹೊಟ್ಟೇಂದ್ರ, ಆತನ ಅಂಗನೆ ಸಾಕ್ಷಾತ್ ಶ್ರೀರಮಣಿ ಚಿಂನಮಾಂಬೆಗೆ ಕಾರಣೀಕರಂವೀರ ಹೊಟ್ಟೆನ್ರುಪನುದಯಿಸಿದಂ.... ಎಂದು ಹೇಳುತ್ತಾ ಮುಂದುವರೆದ ಅದೇ ಶಾಸನ ಅವನನ್ನು ಬಾದರಮಲಕ, ಕಠಾರಿ ಚಲ್ವರ ಗಂಡ ಎಂದು ತಿಳಿಸುತ್ತದೆ. ಹಾಗೂ ಕಾಳಾಂಜನಗಿರಿಯಲ್ಲಿ ವಿರಚಿಸಿದ ಶ್ರೀಬಸವೇಶ್ವರ ದೇವರಿಗೆ

ನಿತ್ಯ ನೈವೇಧ್ಯ ಅಮೃತಪಡಿಗೆಗೆ ರಂಗಸಮುದ್ರದ ಕೆರೆಯ ಕೆಳಗೆ ಮಾನ್ಯ ಕೊಟ್ಟಿರುವುದನ್ನು ತಿಳಿಸುತ್ತದೆ. ಹಾಗೂ ಇದರಲ್ಲಿ ಬರುವ ಯನಮಲಮಂದ ಎನ್ನುವ ಪದವನ್ನು ಐಮಂಗಲ, ಚಳ್ಳಕೆರೆ, ಶಿರ್‍ಯಾ, ಹರತಿ ಮುಂತಾದ ಕಡೆ ಸಿಗುವ ಶಾಸನಗಳಲ್ಲಿಯೂ ಕಾಣುತ್ತೇವೆ. ಇದರ ಅರ್ಥಮಾತ್ರ ಖಚಿತವಾಗಿಲ್ಲ. ಸಾಮಾನ್ಯ ಅರ್ಥದಂತೆ ಇವರ ಮೂಲಪುರುಷ ಎಮ್ಮೆಯ ಹಾಲಿನಿಂದ ಬೆಳೆದ ಎನ್ನುವ ಕಾರಣಕ್ಕೆ ಇರಬಹುದು ಎನ್ನಿಸುತ್ತದೆ.

ಕ್ರಿ.ಶ. ೧೬೮೧ಕ್ಕೆ ಸರಿಹೊಂದುವ ನಿಡುಗಲ್ಲಿನ ಶಾಸನವೊಂದು ಹೊಟ್ಟೆಣ್ಣ ನಾಯಕನ ವಂಶಾವಳಿಯನ್ನು ನೀಡುವುದಲ್ಲದೇ ತಮ್ಮ ತಂದೆ ತಾಯಿಗಳಿಗೆ, ಹಿರಿಯರಿಗೆ ಪುಣ್ಯ ಪ್ರಾಪ್ತಿಯಾಗಲಿ ಎಂದು ನಿಡುಗಲ್ಲಿನ ಶ್ರೀ ಹೊಟ್ಟೇಶ್ವರ ದೇವಾಲಯಕ್ಕೆ ರಂಗಸಮುದ್ರದ ಕೆರೆ ಹಿಂದೆ ಮತ್ತು ಆರ್ಲಹಳ್ಳಿ ಹೊಲಬಿನ ಕೆಲವು ಜಮೀನನ್ನು ದತ್ತಿಕೊಟ್ಟಂತೆ ತಿಳಿಸುತ್ತದೆ. ಜೊತೆಗೆ ಅವನಿಗೆ ಚಿಕ್ಕಮ್ಮನಾಗತಿ, ಬಸವ್ವನಾಗತಿ, ನೆಲ್ಲವ್ವನಾಗತಿ, ತೋಪಮ್ಮನಾಗತಿ, ಮಲ್ಲಮ್ಮನಾಗತಿ ಎನ್ನುವ ಐದು ಜನ ಹೆಂಡತಿಯರಿದ್ದರೆಂದು ತಿಳಿಸುತ್ತದೆ.

ತಿಮ್ಮನೃಪಾಲ:

ಇವನಿಗೆ ಸಂಬಂಧಿಸಿದಂತೆ ಕ್ರಿ.ಶ. ೧೬೬೩ರಲ್ಲಿ ಹಾಕಿಸಿದ ಒಂದು ಶಾಸನವು ಈ ಪ್ರದೇಶದಲ್ಲಿ ಕಂಡುಬರುತ್ತದೆ. ಇವನು ಹೊಟ್ಟೆಣ್ಣ ನಾಯಕನಂತೆ ತನ್ನ ಶಾಸನದಲ್ಲಿ ತಿಪ್ಪರಾಜನಿಂದ ಹೊಟ್ಟೆಣ್ಣನಾಯಕನವರೆಗೂ ವಂಶಾವಳಿಯನ್ನು ಹೇಳಿ ಮುಂದಕ್ಕೆ ಧರೆಯೊಳಗಾ ವೀರ ಹೊಟ್ಟೆಯ ವರನೃಪಗಂ, ಚಿಕ್ಕಮಾಂಬೆಯಿರ್ವರಿಗಂ ಉದಯಿಸಿದ ವೀರ ತಿಮ್ಮನ್ರುಪ ಎಂದು ಹೇಳುತ್ತದೆ. ವಿಜಯನಗರದ ಶ್ರೀರಂಗರಾಯರು ಆ ವೇಳೆಗೆ ಸಾಮ್ರಾಜ್ಯವನ್ನು ಆಳುತ್ತಿದ್ದರೆಂದೂ ಅಂತಹ ಸಮಯದಲ್ಲಿ ನಿಡುಗಲ್ಲಿನ ಪೂರ್ವಕ್ಕೆ ಆರೋಡೇಶ್ವರನ ದೇವಸ್ಥಾನದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ಅದರ ನಿತ್ಯ ನೈವೇಧ್ಯ ಇತ್ಯಾದಿಗೆಂದು ನ್ಯಾಯದಗುಂಟೆಯ ಬುಗಡಿಮರದ ಕಾಲುವೆ ಹತ್ತಿರ ಲಿಂಗಮುದ್ರೆ ಕಲ್ಲು ಸ್ಥಾಪಿಸಿ ಇಂತಿಷ್ಟು ದಾನಗಳು ದೇವಸ್ಥಾನಕ್ಕೆ ಸಲ್ಲಬೇಕೆಂದು ಬರೆಸಿದ ಧರ್ಮ ಶಾಸನ ಎಂದಿದೆ. ಮುಂದುವರೆದು ಶ್ರೀ ಮದ್ರಾಜಾಧಿರಾಜ ರಾಮಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀವೀರ ವೆಂಕಟಪತಿರಾಯರು ವೀರಹೊಟ್ಟಣ್ಣ ನಾಯಕರಿಗೆ ದೊಡ್ಡೇರಿ, ಸೀರ್‍ಯಾ, ತಾವರೆಗೆರೆ, ಹಿರಿಯೂರು, ಅಯಿಮಂಗಳ ನಿಡುಗಲ್ಲು ಮತ್ತು ಅವಕ್ಕೆ ಸಲ್ಲುವಂಥ ಎಲ್ಲೆಯೆನ್ನು ಬಹಳ ಸೂಕ್ಷ್ಮವಾಗಿ ತಿಳಿಸಿದೆ. ಹೀಗೆ ತಿಮ್ಮನೃಪಾಲನ ಬಗ್ಗೆ ಮತ್ತು ಅವನ ಆಡಳಿತ ಅಥವಾ ಪೂರ್ವಜರಿಂದ ಬಂದ ಊರುಗಳನ್ನು ನಿಖರವಾಗಿ ತಿಳಿಸುವುದು ಇದೊಂದೆ ಶಾಸನವಾದರೂ ಬಹಳ ಪ್ರಮುಖವಾದುದು.

ತಿಮ್ಮಣ್ಣನಾಯಕ:

ಹೊಟ್ಟಣ್ಣನಾಯಕನ ನಂತರ ಅವನ ಮಗ ತಿಮ್ಮಣ್ಣನಾಯಕ ನಿಡುಗಲ್ಲನ್ನು ಆಳುತ್ತಾನೆ. ಕ್ರಿ.ಶ. ೧೬೮೦ರ ನಿಡುಗಲ್ಲಿನ ಶಾಸನವೊಂದು ತಿಮ್ಮಣ್ಣನಾಯಕನು ಹೊಟ್ಟಣ್ಣನಾಯಕ ಮತ್ತು

ಚಿಕ್ಕಮ್ಮನಾಗತಿವರ ಮಗನೆಂದು ತಿಳಿಸುತ್ತದೆ. ಇವನು ತನ್ನ ತಂದೆ ಕಟ್ಟಿಸಿದ ಕಾಳಹಸ್ತೇಶ್ವರ ದೇವಾಲಯುವನ್ನು ಜೀರ್ಣೋದ್ಧಾರ ಮಾಡಿಸಿದಂತೆ ಬಹಳವಾಗಿ ವರ್ಣಿಸುತ್ತದೆ. 'ಹಳೆಯದಾಯಿತೆಂದು ಮನದಲ್ಲಿ ತಿಳಿದಾಕ್ಷಣ ಆಪ್ತರೊಡನೆ ಯೋಚಿಸಿ ಬೇಗದಿ ಕರೆಸಿ ಶಿಲ್ಪಗಳೈವರ ಬರೆಸಿದ ಚಿತ್ರಗಳ ಬರವ ವಾಸ್ತುಜ್ಞರಿಗುಂ ತರಿಸಿ ಉಡುಗೊರೆಯ ವೀಳ್ಯವಂ ಹರತಿ ತಿಮ್ಮೇಂದ್ರನಿತ್ತು ಶೀಘ್ರ ರಚಿಸೆನೆ ವಿರಚಿಸಿದರಂತರಾಳವ ಕರಮೊಪ್ಪವ, ರಂಗಮಂಪಟ, ಅತಿರಮ್ಯಾದಿಂ ಸಿರಿವೆತ್ತ... ಚಂದ್ರಶಾಲೆ... ಎಂದಿದೆ. ಈ ರೀತಿಯ ಮಹತ್ವದ ವಿವರಗಳನ್ನು ತಿಳಿಸುವ ಶಾಸನ ಇದೊಂದೆ ಆಗಿದೆ ಮತ್ತು ನಿಡುಗಲ್ಲು ಸೀಮೆಯ ವ್ಯಾಪ್ತಿಯನ್ನು ತಿಳಿಸುವುದರ ಜೊತೆಗೆ ತಿಮ್ಮಣ್ಣ ನಾಯಕನಿಗೆ ೯ ಜನ ರಾಣಿಯರಿದ್ದರೆಂದು ತಿಳಿಸುತ್ತದೆ. ಅವರೆಂದರೆ ಚೆನ್ನಮ್ಮನಾಗತಿ, ನಿಡಮ್ಮನಾಗತಿ, ಓಬಮ್ಮನಾಗತಿ, ಚೆನ್ನಮ್ಮನಾಗತಿ, ಮಲ್ಲಮ್ಮನಾಗತಿ, ದೊಡ್ಡಮಲ್ಲನಾಗತಿ, ಯಲ್ಲವ್ವನಾಗತಿ, ಚಿಗಚನ್ನಮ್ಮನಾಗತಿ, ಮುದುವೀರಮ್ಮ ನಾಗತಿಯರು, ಇವನ ನಂತರ ಮುಮ್ಮಡಿ ಹೊಟ್ಟೆಣ್ಣನಾಯಕರು ಪಟ್ಟಕ್ಕೆ ಬರುತ್ತಾನೆ.

ಮುಮ್ಮಡಿ ಹೊಟ್ಟೆಣ್ಣ ನಾಯಕ

ಕ್ರಿ.ಶ. ೧೭೦೫ರ ನಿಡುಗಲ್ಲಿನ ಶಾಸನವೊಂದು ಮುಮ್ಮಡಿ ಹೊಟ್ಟೆಣ್ಣ ನಾಯಕರು ಕೋಡಿಗೆಹಳ್ಳಿ ಕೋಡಿಗೆಗೌಡನಿಗೆ ಆ ಊರಿಗೆ ಕೋಟೆಗೆ ಕಟ್ಟಲು ಸ್ವಲ್ಪ ಭೂಮಿಯನ್ನು ದಾನ ಕೊಟ್ಟುದಾಗಿಯೂ, ಅದನ್ನು ಅವರು ಕೋಟೆ ಕಟ್ಟಿಸಿ ಮಾನ್ಯವನ್ನು ಅನುಭವಿಸಿಕೊಂಡು ಹೋಗಬೇಕೆಂದು ನಿರೂಪಿಸಲಾಗಿದೆ. ಇದು ಹಳತಾಗಿ ಹೋಗುತ್ತಿರಲು ಮತ್ತೆ ವೀರದೀಮಣ್ಣನವರ ಅಪ್ಪಣೆಯಂತೆ ನಾಯಕ ಕಸ್ತೂರಿ ತಿಮ್ಮಪ್ಪ, ವೆಂಕಟರಮಣ, ನ್ಯಾಯದಗುಂಟೆ ಗೌಡ, ಶಾನುಭೋಗ, ಬೆಟ್ಟದ ಮಂಗಳವಾಡದ ಗುರಿಕಾರರು ಎಲ್ಲಾ ಸೇರಿ ಮತ್ತೆ ತಾಮ್ರ ಶಾಸನ ಬರೆದುಕೊಟ್ಟಂತೆ ತಿಳಿಸುತ್ತದೆ. ಇದಕ್ಕೆ ಅಣ್ಣತಮ್ಮಂದಿರು ಪಾಲು ಕೇಳಿದರೆ, ಕಟ್ಟಿದ ಹಣವನ್ನು ಅವರು ಕೊಡಬೇಕಾಗುತ್ತದೆ ಎಂದು ಹೇಳಲಾಗಿದೆ.

ನಿಡುಗಲ್ಲು ಅರಸರ ವಂಶಾವಳಿ ಅಬ್ಬನಾಯಕನಿಂದ ಪ್ರಾರಂಭವಾದರೆ ಹರತಿ-ನಿಡುಗಲ್ಲು ಅರಸರ ವಂಶಾವಳಿ ಇವನಿಗಿಂತಲೂ ಮುಂಚಿನ ಇಬ್ಬರಿಂದ ಪ್ರಾರಂಭವಾಗುತ್ತದೆ. ಇವರಿಬ್ಬರೂ ಒಂದೆ ಮನೆತನಕ್ಕೆ ಸೇರಿದವರಾಗಿದ್ದು, ದಕ್ಷಿಣ ರಾಜ್ಯಕ್ಕೆ ಬಂದ ಮೇಲೆ ಒಬ್ಬನು ಹರತಿಯಲ್ಲಿ ಮತ್ತೊಬ್ಬನು ನಿಡುಗಲ್ಲಿನಲ್ಲಿ ರಾಜ್ಯ ಸ್ಥಾಪಿಸಿ ಕಾಲಾನಂತರ ಎರಡೂ ಮತ್ತೆ ಒಂದಾದ ಫಲವಾಗಿ ವಂಶಾವಳಿಯಲ್ಲಿ ಹೆಸರುಗಳು ಪುನಾರಾವರ್ತನೆಯಾಗಿ ನಮಗೆ ಗೋಜಲದಾಗಿ ಕಾಣುತ್ತವೆ. ನಿಡುಗಲ್ಲು ಅರಸರು ವೈಷ್ಣವ ಮತಾವಲಂಬಿಗಳಾದರೆ, ಹರತಿಯವರು ವೀರಶೈವ ಮತ ಅವಲಂಬಿಸಿದವರು. ನಿಡುಗಲ್ಲು ಕೈಫಿಯತ್ತು ಕೇವಲ ಅಲ್ಲಲ್ಲಿ ದೊರೆತ ಸಾಕ್ಷಿಗಳ ಆಧಾರದ ಮೇಲೆ ಇವರ ವಂಶಾವಳಿಯನ್ನು ಸಮೀಕ್ಷಾ ರೂಪವಾಗಿ ಕೊಟ್ಟಿದೆಯಾದರೂ ಅನೇಕ ತಪ್ಪುಗಳಿಂದ ಕೂಡಿದೆ. ಇದ್ದುದರಲ್ಲಿ ಶಾಸನಗಳೇ ನಮಗೆ ಮುಖ್ಯ ಆಧಾರಗಳಾಗಿವೆ.

ಇದುವರೆಗೂ ಅಭ್ಯಸಿಸಿದ ಆಧಾರಗಳು ಮತ್ತು ಹರತಿ ನಿಡುಗಲ್ಲು ಅರಸರ ಶಾಸನಗಳ ಆಧಾರದಿಂದ ಅವರ ವಂಶಾವಳಿಯನ್ನು ಈ ರೀತಿ ಕೊಡಬಹುದು.

ಹರತಿ ಪಾಳೆಗಾರರ ವಂಶಾವಳಿ

|

ಹರತಿ ತಿಪ್ಪರಾಜ

|

ಕಾಮನಾಯಕ

|

ಬೊಮ್ಮನಾಯಕ

|

ಆದಿಸುರೇಂದ್ರ

|

ಹಿರೆಯೊಡೆಯ

|

ಚಿಕ್ಕನೃಪ

|

೧ನೇ ಹೊಟ್ಟೆನೃಪ

|

ನಂದಿನೃಪ

|

೨ನೇ ಹೊಟ್ಟೆನೃಪ

|

ತಿಮ್ಮನೃಪ

|

೩ನೇ ಹೊಟ್ಟೇಂದ್ರ + ಚಿನ್ನಮಾಂಬೆ

|

ವೀರ ಹೊಟ್ಟೆಣ್ಣ ನಾಯಕ + ೫ ಜನ ರಾಣಿಯರು

|

ತಿಮ್ಮಣ್ಣ ನಾಯಕ + ೯ ಜನ ರಾಣಿಯರು

|

ಮುಮ್ಮಡಿ ಹೊಟ್ಟೆಣ್ಣ ನಾಯಕ

ಇಲ್ಲಿ ಶಾಸನಗಳಲ್ಲಿ ಕಂಡುಬರುವ ಅಥವಾ ಅವರೇ ಶಾಸನಗಳಲ್ಲಿ ತಮ್ಮ ವಂಶಾವಳಿಯನ್ನು ಬರೆಸಿಕೊಂಡಿದ್ದರೂ ಸಹ 'ಪಾಲಭೂಪಾಲ'ನ ಉಲ್ಲೇಖವೂ ಇದೆ. "ಕ್ರಿ.ಶ. ೧೬೬೨ ಮತ್ತು ೧೬೭೦ ಈ ಎರಡು ಶಾಸನಗಳಲ್ಲಿ ವೀರವೆಂಕಟಪತಿದೇವ ಮಹಾರಾಜನು ವೀರಹೊಟ್ಟೆಣ್ಣ ನಾಯಕರಿಗೆ ದೊಡ್ಡೇರಿ, ಸಿರ್ಯಾ, ಹಿರೆಯೂರು ಐಮಂಗಲ, ನಿಡುಗಲ್ಲು ದುರ್ಗದ ಸೀಮೆಗಳನ್ನು ವಂಶಪಾರಂಪರ್ಯವಾಗಿ ಅನುಭವಿಸಲು ಅಪ್ಪಣೆ ಕೊಟ್ಟ ವಿಷಯವನ್ನು ತಿಳಿಸಲಾಗಿದೆ." ವೀರಹೊಟ್ಟೆಣ್ಣ ನಾಯಕರ ಮರಣಾನಂತರ ಅವರ ಪುತ್ರ ವೀರ ತಿಮ್ಮಣ್ಣ ನಾಯಕರು ತಮ್ಮ ಹಕ್ಕನ್ನು ಎತ್ತಿ ಹಿಡಿಯುತ್ತಾನೆ. ತದನಂತರದ ತಿಮ್ಮಣ್ಣ ನಾಯಕ ಮತ್ತು ಅವನ ಮಗ ಮುಮ್ಮಡಿ ಹೊಟ್ಟೆಣ್ಣ ನಾಯಕನು ಬಹಳ ಕಷ್ಟ ಕೋಟಲೆಗಳಿಗೆ ಒಳಗಾಗುತ್ತಾರೆ. ಇವನೇ ಹರತಿ

ವಂಶದ ಕೊನೆಯ ಅರಸ. ತದನಂತರ ನಿಡುಗಲ್ಲು ಟಿಪ್ಪು ಸುಲ್ತಾನನ ವಂಶವಾಗುತ್ತದೆ. ಹೀಗೆ ಕ್ರಿ.ಶ. ೧೬೬೨ರಿಂದ ೧೭೧೬ರವರೆಗೂ ಹರತಿಯವರು ನಿಡುಗಲ್ಲಿನಲ್ಲಿ ದೊರೆಗಳಾಗಿ ಮೆರೆಯುತ್ತಾರೆ.

ಹೀಗೆ ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗ ಮಜ್ಜಿಸಮುದ್ರ, ಗೋಸಿಕೇರಿ, ಚಳ್ಳಕೆರೆ ಹರತಿ, ದೊಡ್ಡೇರಿ ಅಲ್ಲದೆ ನಿಡುಗಲ್ಲು, ಪಾವಗಡ, ಮೊಳಕಾಲ್ಮೂರು, ಅಲ್ಲದೆ ನಿಡುಗಲ್ಲು ಪಾವಗಡ, ಮೊಳಕಾಲ್ಮೂರು, ಶಿರ್‍ಯಾದವರೆಗಿನ ಸಮಸ್ತ ಭೂಮಿಯನ್ನು ಆಳಿಕೊಂಡಿರುತ್ತಾರೆ. ಮುಂದೆ ಈ ಸಂತತಿಯವರು ಬಲಹೀನರಾಗಿ ಶಿರನಾಡಿ ನೊಡೆಯರಾದ ವಿಜಾಪುರದ ಮುಸ್ಲಿಂರಿಗೆ ವರ್ಷ ಒಂದಕ್ಕೆ ೩೦೦೦ ಪಗೋಡಗಳ ಪೂಗದಿಯನ್ನು ಕೊಡುತ್ತಾ ಬಂದರು.

ತದನಂತರ ೧೭೬೧ರಲ್ಲಿ ಹೈದರಾಲಿಖಾನ್ ನವಾಬನು ಶಿರಾನಾಡನ್ನು ಜಯಸಿದಾಗ ನಿಡುಗಲ್ಲು ಸಂಸ್ಥಾದ ಪೊಗದಿಯನ್ನು ೭೦೦೦ ಪಗೋಡಗಳಿಗೆ ಏರಿಸುತ್ತಾನೆ. ಅಲ್ಲದೆ ವರ್ಷಕ್ಕೆ ಮೈಸೂರು ಸೈನಕ್ಕೆ ೩೦೦ ಮಂದಿ ಸೈನಿಕರನ್ನೊದಗಿಸಿಕೊಡಬೇಕೆಂದು ನಿಗದಿಮಾಡಿದರು. ಈ ಹೊತ್ತಿಗೆ ನಿಡುಗಲ್ಲು ನಗರದ ವೈಭವವು ಕುಂದುತ್ತಾ ಬಂದು ಐಶ್ವರ್ಯವು ಸೋರಿ ಹೋಗಿ ವ್ಯಾಪಾರ ಮರೆಯಾಗಿ ಮನೆಗಳ ಸಂಖ್ಯೆ ೨೫,೦೦೦ದಿಂದ ೧,೧೦೦ಕ್ಕೆ ಇಳಿಯಿತು. ದೊಡ್ಡ ದೊಡ್ಡ ವರ್ತಕರು ಸೀರ್‍ಯಾದವರ ಜೊತೆ ಶ್ರೀರಂಗಪಟ್ಟಣದ ಕಡೆ ವಲಸೆ ಹೋದರು. ಜೊತೆಗೆ ವಿದ್ವಾಂಸರು, ಸಂಪತ್ತು ಎಲ್ಲವೂ ಆ ಕಡೆಯೋ ಹೋಯಿತು.

ದಿನೇ ದಿನೇ ಪ್ರಭಲವಾಗುತ್ತಾ ಬರುತ್ತಿದ್ದ ನವಾಬನಿಂದ ಹೆಚ್ಚುತ್ತಿದ್ದ ಅವನ ಪೊಗದಿಯಿಂದ ರಾಜ್ಯ ಭಂಡಾರ ಬರಿದಾಯಿತು. ಶೂರಾಗ್ರಣಿಯಾದ ಚಿತ್ರದುರ್ಗದ ಮದಕರಿ ನಾಯಕನೂ ಅವನಿಗೆ ಅಡಿಯಾಗಲಾದ ಮೇಲೆ ನಮ್ಮ ಗತಿ ಏನು? ಎಂದು ತಾವೂ ಸಹಾ ಮಣಿಯಬೇಕಾಯಿತು.

ತದನಂತರ ತಿಮ್ಮನಾಯಕನನ್ನು ಮೋಸಗೊಳಿಸಿ ನಿಡುಗಲ್ಲನ್ನು ವಶಪಡಿಸಿಕೊಂಡ ಟಿಪ್ಪು ಸುಲ್ತಾನನು ಮಂಗಳೂರು ಕಡೆಗೆ ದಂಡೆತ್ತಿ ಹೋಗಬೇಕಾದ ಸಂದರ್ಭದಲ್ಲಿ ಮಾಮೂಲು ಸೈನಿಕರ ಜೊತೆಗೆ ಮತ್ತೆ ಹೆಚ್ಚಾಗಿ ಸೈನಿಕರನ್ನು ಕಳಿಸಬೇಕೆಂದು ನಿರೂಪವನ್ನೂ ಕಳಿಸುತ್ತಾನೆ. ಸಾಧ್ಯವಾಗುವುದಿಲ್ಲವೆಂದು ತಿಮ್ಮಣ್ಣನಾಯಕರು ಅನಾರೋಗ್ಯದಿಂದರುವುದನ್ನು ವಿವರಿಸಿದರೂ ಸಹ ಲೆಕ್ಕಿಸದೆ ಟಿಪ್ಪು ಆಜ್ಞೆ ಮಾಡುತ್ತಾನೆ. ಇದಕ್ಕೆ ಬೇರೆ ದಾರಿ ಕಾಣದ ತಿಮ್ಮಣ್ಣ ನಾಯಕನು ದೇಹಲಾಸ್ಯ ಮನೋರೋಗದಿಂದ ಇದ್ದ ಕಾರಣ ಬಂದ ನಿರೂಪಕ್ಕೆ ರುಜುಮಾಡಬೇಕಾಯಿತು. ಆದರೆ ಟಿಪ್ಪುವು ಮಂಗಳೂರಿನ ಕಡೆಗೆ ದಂಡೆಯಾತ್ರೆಗೆ ಹೊರಟಾಗ ಅವರೊಡನೆ ತಿಮ್ಮಣ್ಣನಾಯಕನು ಸೇನಾ ಸಮೇತನಾಗಿ ಹೋಗುತ್ತಾನೆ. ದಾರಿಯಲ್ಲಿ ಅಸ್ವಸ್ಥನಾಗಿ ಮರಣೋನ್ಮುಖನಾದಾಗ ಟಿಪ್ಪುಸುಲ್ತಾನನು, ನಾಯಕರು ನಿಡುಗಲ್ಲನ್ನು ಬಿಟ್ಟುಕೊಡುವುದಾಗಿಯೂ ಅದನ್ನು ಚಿತ್ರದುರ್ಗದ ಮಾಂಡಲೀಕನಿಗೆ ಸಮರ್ಪಿಸುವಂತೆ ತನ್ನ ಮಗ ಹೊಟ್ಟೆಣ್ಣ ನಾಯಕನಿಗೆ ವಿಧಿಸುವುದಾಗಿಯೋ ಬಲಾತ್ಕಾರವಾಗಿ ಪತ್ರ ಬರೆಸಿಕೊಂಡು ನಿಡುಗಲ್ಲನ್ನು ಸ್ವಾಧೀನಪಡಿಸಿಕೊಂಡನೆಂದು ತಿಳಿದುಬರುತ್ತದೆ. ಒಟ್ಟಾರೆಯಾಗಿ ನಿಡುಗಲ್ಲು ಟಿಪ್ಪುವಿನ ವಶವಾಗಿರುವುದು ಖಚಿತವಾಗುತ್ತದೆ. ಮುಂದೆ ಹೊಟ್ಟೆಣ್ಣ

ನಾಯಕ ಮತ್ತು ಅವನ ತಮ್ಮನ ಸಂಸಾರವನ್ನು ಟಿಪ್ಪುಸುಲ್ತಾನನು ಬಂಧಿಸಿ ಅವರನ್ನು ಚಿತ್ರದುರ್ಗಕ್ಕೂ ಅಲ್ಲಿಂದ ಶ್ರೀರಂಗಪಟ್ಟಣಕ್ಕೂ ಸಾಗಿಸಿದನು."[21]

"ಮುಂದೆ ಕ್ರಿ.ಶ. ೧೭೯೯ರಲ್ಲಿ ಬ್ರಿಟಿಷ್ ಸೈನ್ಯವೂ ಪಟ್ಟವೇರಿ ಬಂದಾಗ, ಇತರ ಪಾಳೆಗಾರರಂತೆ ಇವರಿಗೂ ಶಿಕ್ಷೆಯಾಯಿತು. ಇಲ್ಲಿಗೆ ನಿಡುಗಲ್ಲಿನ ವೈಭವವೂ ಕೊನೆಗೊಂಡಿತು. ನಗರವು ರಕ್ಷಕರಿಲ್ಲದೆ ಕಳ್ಳಕಾರರ, ದರೋಡೆಕೋರರ ಹಾವಳಿಯಿಂದ ಕೆಲವೇ ದಿವಸಗಳಲ್ಲಿ ಖಾಲಿಯಾಯಿತು. ಅಲ್ಲಿದ್ದ ಸಂಸಾರಗಳು ನಾನಾ ಕಡೆ ಹರಿದು ಹಂಚಿಹೋದವು."[22]

ಕೊನೆಟಿಪ್ಪಣಿಗಳು

೧. ಚಿತ್ತಯ್ಯ ಪೂಜಾರ ಡಾ. ಡಿ.ಕೆ. , ನಿಡುಗಲ್ಲು ದುರ್ಗದ ಕಥನ, ಪುಟ–೧೭

೨. ಇದೇ, ಪುಟ – ೧೯

೩. ಇದೇ, ಪುಟ – ೨೦

೪. ಇದೇ, ಪುಟ – ೨೧

೫. ಇದೇ, ಪುಟ – ೨೩

೬. ಇದೇ, ಪುಟ – ೨೫

೬. ಉಮಾಪತಿ, ನಿಡುಗಲ್ಲು ಕೈಫಿಯತ್ತು

೭. ಚಿತ್ರಲಿಂಗಯ್ಯ ಎಂ ವಿ., ಹರತಿ ಪಾಳೇಗಾರರ ಮೂಲ ವಂಶಾವಳಿ

೮. ಪರಮಶಿವಮೂರ್ತಿ ಡಾ. ಡಿ.ವಿ., ಸಂಶೋಧನೆಯ ಸಿರಿ, ಪುಟ–೧.

೯. ಇದೇ, ಪುಟ–೮

೧೦. ಇದೇ, ಪುಟ–೧೨

೧೧. ರಮೇಶ ಕ

೯. ಡಾ. ಡಿ. ವಿ. ಪಿ. ಸಂಶೋಧನೆಯ ಸಿರಿ, ಪುಟ – ೧

೧೦. ಅದೇ, ಪುಟ – ೮

೧೧. ಅದೇ, ಪುಟ – ೧೨

೧೨. ರಮೇಶ ಕೆ.ವಿ., ಕರ್ನಾಟಕ ಶಾಸನ ಸಮೀಕ್ಷೆ, ಪುಟ – ೪೮

೧೩. ಗಣೇಶ ಕೆ.ಆರ್., ಆಂಧ್ರ ಪ್ರದೇಶದ ಕನ್ನಡ ಶಾಸನಗಳು, ಪುಟ – ೬೫

೧೪. ಎ.ಕ.ಸಂ XII ಪಾವಗಡ ೧೧, ೧೨, ೧೩, ಕ್ರಿಶ ೭೫೪

೧೫. ಇದೇ, ೪೫, ೮೩೦.

೧೬. ಇದೇ, ೧೩, ೭೪೫

೧೭. ಇದೇ, ೫೦, ೧೨೮೪

೧೮. ಇದೇ, ೫೨, ೧೨೩೨.

೧೯. ಇದೇ, ೪೭, ೧೨೨೫.

೨೦. ಇದೇ, ೩೮, ೧೬೫೩.

೨೧. ಇದೇ, ೫೯, ೧೬೮೧.

೨೨. ಇದೇ, ೬೧, ೧೬೬೩.

೨೩. ಇದೇ, ೪೦, ೧೫೫೯

೨೪. ಇದೇ, ೬೭, ೧೫೩೦.

೨೫. ಇದೇ, ೨೪, ೧೫೪೦.

೨೬. ಇದೇ, ೩೩, ೧೫೩೭.

೨೭. ಇದೇ, ಸಿರಾ, ೬೦, ೧೨೯೨.

೨೮. ಇದೇ, ಚಿತ್ರದುರ್ಗ, ೧೬, ೧೧೦೬.

೨೯. ಇದೇ, ೨೧, ೧೪೭.

೩೦. ಶಿವತಾರಕ್ ಕೆ.ಬಿ., ನಾಗಾಭಿನಂದನ, ಪುಟ–೨೨.

೩೧. ಇದೇ, ಪುಟ – ೨೪

೩೨. ಇದೇ, ಪುಟ – ೨೫

೩೩. ಇದೇ, ಪುಟ – ೨೬

ಅಧ್ಯಾಯ ಮೂರು

ನಿಡುಗಲ್ಲು ಶಾಸನಗಳ ಧಾರ್ಮಿಕ ಇತಿಹಾಸ

ಅಧ್ಯಾಯ ಮೂರು

ನಿಡುಗಲ್ಲು ಶಾಸನಗಳ ಧಾರ್ಮಿಕ ಇತಿಹಾಸ

ಒಂದು ನಾಡಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯನ್ನು ತಿಳಿಯಲು ಮುಖ್ಯವಾಗಿ ಶಾಸನಗಳನ್ನು ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಅಧಿಕ ಶಾಸನಗಳು ದೊರೆತು ವೈವಿಧ್ಯಮಯ ಮಾಹಿತಿಯನ್ನು ಒದಗಿವೆ. ಇದುವರೆಗೆ ಸುಮಾರು ೩೦,೦೦೦ ಕ್ಕೂ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ದೊರೆತಿದ್ದು. ಅವು ಕ್ರಿಪೂ. ಮೂರನೆಯ ಶತಮಾನದಿಂದ ಕ್ರಿಶ. ಹತ್ತೊಂಭತ್ತನೇ ಶತಮಾನದರೆಗಿನ ಕಾಲಮಾನದವುಗಳಾಗಿವೆ. ಶಾಸನಗಳು ನಮ್ಮ ಹಿಂದಿನ ಇತಿಹಾಸ ಮತ್ತು ಸಂಸ್ಕೃತಿಗಳ ಮೂಕ ಸಾಕ್ಷಿಗಳು. ನುಡಿಸಬಲ್ಲ ಚದುರರು ನುಡಿಸಿದರೆ ನುಡಿಯುತ್ತವೆ. ಆತ್ಮೀಯತೆಯಿಂದ ಅಕ್ಕರೆಯಿಂದ ನೋಡಿದರೆ ತಮ್ಮ ಒಳಗನ್ನು ತೆರೆದು ತೋರಿಸುತ್ತವೆ. ಅವು ನಮ್ಮ ಹಿಂದಿನ ಇತಿಹಾಸ, ಸಂಸ್ಕೃತಿಗಳ ಸೌರಭವನ್ನು ತೆರೆದು ತೋರಿಸುವ ಭಾವಚಿತ್ತ ಕೋಶಗಳಾಗಿವೆ.

ರಾಜನ ಅಪ್ಪಣೆಯಂತೆ ಅವನು ಕೊಟ್ಟ ದಾನ, ಧರ್ಮಗಳನ್ನು ಪೋಷಿಸುವುದಕ್ಕಾಗಿ ಇವು ರಚಿತವಾದವು ಎಂಬ ಅರ್ಥವು ಸಹ ಇದರಿಂದ ಧ್ವನಿಕವಾಗುತ್ತದೆ. ಅಶೋಕನ ಕಾಲದ ಶಾಸನಗಳು ದಾನ ಪತ್ರಗಳು ರೂಪವನ್ನಲ್ಲದೆ ಧರ್ಮ ಬೋಧನೆಯ ಪಾಠಗಳಾಗಿಯೂ ಪರಿಣಮಿಸಿದವು. ಅಂದರೆ ಶಾಸನಗಳು ಹುಟ್ಟಿಗೆ ಧರ್ಮವೇ ಮೂಲಭೂತವಾದ ಪ್ರೇರಕಶಕ್ತಿಯಾಗಿ ಪರಿಣಮಿಸಿತೆನ್ನಬಹುದು. ಶಾಸನಗಳ ಉಗಮ ದಾನ ಧರ್ಮಗಳಲ್ಲಿ ಎನ್ನುವ ಮಾತನ್ನು ಇದು ಸಮರ್ಥಿಸುತ್ತದೆ.

ಹಾಗೆಯೇ ನಿಡುಗಲ್ಲು ಸಹ ಅನೇಕ ಶಾಸನಗಳನ್ನು ಒಳಗೊಂಡಿದ್ದು, ಅವು ಆ ಪ್ರದೇಶವನ್ನು ಆಳಿದ ರಾಜರ ಚರಿತ್ರೆ ಅವರು ನೀಡಿದ ದಾನ, ಧರ್ಮ, ದತ್ತಿ ವಿಚಾರಗಳು, ದೇವಾಲಯಗಳ ನಿರ್ಮಾಣಗಳು, ಜನ ಜೀವನ, ಧಾರ್ಮಿಕ ಪದ್ಧತಿಗಳು, ವ್ಯಾಪಾರ ಕಂದಾಯ

ಮುಂತಾದ ಅನೇಕ ವಿಚಾರಗಳನ್ನು ಕುರಿತು ಬಹಳ ಉಪಯುಕ್ತವಾದ ಮಾಹಿತಿಗಳನ್ನು ಕುರಿತು ಬಹಳ ಉಪಯುಕ್ತವಾದ ಮಾಹಿತಿಗಳನ್ನು ಶಾಸನಗಳು ಸೂಚಿಸುತ್ತವೆ. ಈ ದೃಷ್ಟಿಯಿಂದ ಇವು ಅಗೆದಷ್ಟು ಅರ್ಥವನ್ನು ಕೊಡುವ ಅಮೂಲ್ಯ ಸಂಪತ್ತಿನ ಗಣಿಗಳಾಗಿ ಪರಿಣಮಿಸಿವೆ. ನಿಡುಗಲ್ಲಿನಲ್ಲಿ ದೊರೆಯುವ ಶಾಸನಗಳನ್ನು ಪರಿಗಣಿಸಿ ಪ್ರಮುಖವಾಗಿ ದಾನ ಶಾಸನಗಳಾಗಿ, ವೀರ ಶಾಸನಗಳಾಗಿ, ಆತ್ಮಬಲಿ ಶಾಸನಗಳಾಗಿ ವರ್ಗೀಕರಿಸಿ ಅಭ್ಯಸಿಸಬಹುದು. ನನ್ನ ಅಧ್ಯಯನದಲ್ಲಿ ಎಲ್ಲಾ ರೂಪಗಳ ಮುಖಗಳ ಅನಾವರಣ ಮಾಡಿದ್ದೇನೆ.

ಇಲ್ಲಿನ ಎಲ್ಲಾ ಶಾಸನಗಳು ಶಿಲಾಸ್ತಂಭದ ಮೇಲೆ ಕೆತ್ತಿದ್ದು, ಕೆಲವು ತಾಮ್ರ ಶಾಸನಗಳು ಸಹ ಲಭ್ಯವಾಗಿವೆ. ಹಾಗೂ ಕೆಲವು ದಾನ ಶಾಸನಗಳನ್ನು ಗಂಟೆ, ಜಾಗಟೆಗಳ ಮೇಲೂ ಬರೆದಿರುವುದುಂಟು. ಒಂದು ಪ್ರತಿಮಾ ಶಾಸನವು ಸಹ ಇಲ್ಲಿನ ಜೈನ ಬಸದಿಯಲ್ಲಿ ದೊರೆತಿದೆ.[2] ಇಲ್ಲಿ ದೊರೆಯುವ ಶಾಸನಗಳೆಲ್ಲಾ ಪಾಳೆಗಾರರ ಕಾಲದವುಗಳಾಗಿದ್ದು ಅವುಗಳಲ್ಲಿ ಹೆಚ್ಚಿನವು ದಾನ ಶಾಸನಗಳು. "ಅವುಗಳು ಚಕ್ರವರ್ತಿಗಳಿಂದ ಇಲ್ಲವೆ, ತುಂಡರಸರುಗಳಿಂದ ಇಲ್ಲವೆ, ಸಂಘ ಸಂಸ್ಥೆಗಳಿಂದ ಇಲ್ಲವೆ, ಖಾಸಗಿ ವ್ಯಕ್ತಿಗಳಿಂದ ಕೊಡಲಾದ ದಾನಗಳು ಸೃಷ್ಟಿಸಲಾದ ಅಗ್ರಹಾರಗಳ ವಿವರಗಳನ್ನು ಸಾರುತ್ತವೆ. ಹಾಗೂ ಆ ರಾಜ್ಯದ ನಿಷ್ಠ ಸೇವಕರಿಗೆ, ಅಮರ ಮಾಗಣಿ, ನಾಯಕತ್ವ, ಗೌಡಿಕೆ, ತಳವಾರಿಕೆ, ದೇವಾಲಯಗಳ ನಿರ್ಮಾಣ ಮುಂತಾದ ಸ್ವಾಮ್ಯ ಅಥವಾ ಬೇರೆ ಬೇರೆ ಬಿಕ್ಕಟ್ಟನ್ನು ಬಗೆಹರಿಸಿದ ಒಪ್ಪಂದದ ಶಾಸನಗಳಾಗಿವೆ."[4] ಅಲ್ಲದೆ ಕೋಟೆಯ ವರ್ಣನೆ, ಕಾವ್ಯಂಶಗಳು, ಸತ್ತವರ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲು ಶಾಸನಗಳು ಮುಂತಾದ ವಿಚಾರಗಳನ್ನು ಇವು ಪ್ರತಿಪಾದಿಸುತ್ತವೆ.

೧. ನಿಡುಗಲ್ಲು ಬೆಟ್ಟದ ಮೇಲೆ ಹೊಕ್ಕರಣೆ ಬಳಿ ಈಶ್ವರ ದೇವಸ್ಥಾನದ ಸಮೀಪದಲ್ಲಿರುವ ಶಾಸನ:
(ಎ.ಕ.ಸಂ. XII, ಪಾವಗಡ, ೪೩)

ಇದು ದಾನ ಶಾಸನವಾಗಿದ್ದು, ಕ್ರಿ.ಶ. ೧೧೫೦ರಲ್ಲಿನ ಶಾಸನದಲ್ಲಿ ಉಲ್ಲೇಖವಿರುವುವಂತೆ ಚಾಲುಕ್ಯರ ಜಗದೇಕಮಲ್ಲನು ಹೆಂಜೇರಿನ ನೆಲೆವಿಡಿನಲ್ಲಿ ಆಳುತ್ತಿರುತ್ತಾನೆ. ಆ ಸಮಯದಲ್ಲಿ ನಿಡುಗಲ್ಲನ್ನು ಚೋಳರ ತ್ರಿಭುವನಮಲ್ಲ ಮಲ್ಲಿದೇವ ಚೋಳನು ಇವರ ಸಾಮಂತನಾಗಿ ಆಳ್ವಿಕೆ ಮಾಡುತ್ತಿರುತ್ತಾನೆ. ಇವನ ಸೇನಾಧಿಪತಿ ಬೊಮ್ಮಣ್ಣನು ಮತ್ತು ತಂತ್ರಪಾಲನಾದ ನಾಮಣ್ಣ ಎಂಬುವನು ಸೇರಿ ನಿಡುಗಲ್ಲಿನ ಶೈವ ದೇವಾಲಯವಾದ ದುರ್ಗದ ಶ್ರೀನಾಗರೇಶ್ವರ ದೇವರಿಗಾಗಿ ಕನ್ನೆಗೆರೆ ಎಂಬ ಕೆರೆಯನ್ನು ನಾಗಸಮುದ್ರದ ಪೂರ್ವಕ್ಕೆ ಕಟ್ಟಿಸಿ ದೇವಾಲಯದಲ್ಲಿದ್ದ ಚಂದ್ರಾಭರಣ ಪಂಡಿತರ ಕಾಲು ತೊಳೆದು ಸರ್ವರ ಎದುರಿಗೆ ದೇವಾಸ್ಥಾನದ ನೈವೇದ್ಯಕ್ಕೆ ನಂದಾದೀವಿಗೆಗೆ, ಅಂಗಾಭೋಗಕೆ ಬ್ರಾಹ್ಮಣರಿಗೆ, ತಪೋದನನಿರತರಿಗೆ ದತ್ತಿ ಬಿಡುತ್ತಾನೆ.

೪೯ ಪಂಕ್ತಿಗಳಿಂದ ಕೂಡಿದ ಈ ಶಾಸನವು ಚೋಳರ ಮಲ್ಲದೇವನನ್ನು 'ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣಂ'[28] ಎಂದು ಹೊಗಳುತ್ತದೆ. ಚೋಳರಲ್ಲಿ ಪ್ರಬಲನೂ ಮತ್ತು

ಚಾಲುಕ್ಯರ ನಿಷ್ಠವಂತ ಸಾಮಂತನಾಗಿದ್ದಂತೆ ಕಂಡುಬರುತ್ತದೆ. ಈಗಿನ ಆಂಧ್ರಪ್ರದೇಶದ ಮಡಕಶಿರಾ ತಾಲೂಕಿನ ಹೆಂಜೇರು (ಹೇಮಾವತಿ)ವನ್ನು ರಾಜಾಧಾನಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿರುತ್ತಾನೆಂಬುದು ಶಾಸನದಿಂದ ತಿಳಿದುಬರುತ್ತದೆ. ದತ್ತಿಯೊಂದಿಗೆ ಕೆಲವು ಸುಂಕಗಳನ್ನು ನಗರೇಶ್ವರ ದೇವಾಲಯಕ್ಕೆ ಬಿಟ್ಟುರುವುದಾಗಿ ಹೇಳಿದ್ದಾನೆ.

"ಅವು ನಿಡುಗಲ್ಲಿನ ಕೋಟೆಯೊಳಗಿನ ತಿಪ್ಪೆ ಸುಂಕ, ಗಾಣ ಹೇರಿಂಗೆ ೧೦೦, ಅಡಕೆ, ಮೆಣಸು ಹೇರಿಂಗೆ ಮಾನ ೩, ಹರಿಸಿನ ಫಲ ೨, ಸೀರೆ ೧, ಬಂಡಿ ಭತ್ತಕ್ಕೆ ಒಂದು ಕೋಳಗದಂತೆ ಹೇರಿಂಗೆ ಭತ್ತ ೨ ಒಳದಾನ ಬಿಟ್ಟ ವಿಚಾರವನ್ನು ಸಹ ತಿಳಿಸುತ್ತದೆ." ಹೀಗೆ ಒಬ್ಬ ತಂತ್ರಪಾಲನು ಸಹ ಸ್ವತಂತ್ರವಾಗಿ ದಾನ ಕೊಡುವ ಅಧಿಕಾರವನ್ನು ನಿಡುಗಲ್ಲಿನ ಚೋಳರ ಆಳ್ವಿಕೆಯಲ್ಲಿತ್ತೇಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

೨. ನಿಡುಗಲ್ಲು ಬೆಟ್ಟದಲ್ಲಿ ಪಾಶ್ವನಾಥಸ್ವಾಮಿ ಬಸದಿಯಲ್ಲಿ ಇರುವ ಶಾಸನ:

ಇದು ಜೈನ ಧರ್ಮದ ದಾನ ಶಾಸನವಾಗಿದೆ. ಕ್ರಿ.ಶ. ೧೨೩೨ರಲ್ಲಿ ರಚಿಸಲಾಗಿದೆ. ಪಾಶ್ವನಾಥ ಬಸದಿಯನ್ನು ನಿಡುಗಲ್ಲಿನಲ್ಲಿ ನೇಮಿಪಂಡಿತರ ಆಜ್ಞಾನುಸಾರವಾಗಿ ಎರಡನೇ ಇರುಂಗೋಳನ ಕಾಲದಲ್ಲಿ ನಿರ್ಮಿಸಲಾಯಿತ್ತೆಂಬ ಸಂಗತಿಯನ್ನು ಮತ್ತು ಗಂಗೆಯ ಮಾರಯ್ಯನು ಬಸದಿಯ ವೃತ್ತಿಗಳಿಗಾಗಿ ತೈಲಂಗೆರೆ ಕೆರೆಯ ಮಾದಲನೆ ಗದ್ದೆಯನ್ನು ದಾನ ಮಾಡಿದ ಸಂಗತಿಯನ್ನು ತಿಳಿಸುತ್ತದೆ.

ಬೊಮ್ಮನೃಪ ಮತ್ತು ಬಾಚಲದೇವಿಯವರ ಪುತ್ರ ಎರಡನೇ ಇರುಂಗೋಳ ಚೋಳನು ಈ ಶಾಸನವನ್ನು ದಾಕಿಸಿದ್ದು, ಒಂದೇ ಕಲ್ಲಿನಲ್ಲಿ ಎರಡು ಅಂತಸ್ತುಗಳಾಗಿ ಕೆತ್ತಲ್ಪಟ್ಟಂತಹ ಶಾಸನವಾಗಿದೆ. ಇದರ ಮೊದಲ ಭಾಗದಲ್ಲಿ ದಾನದ ವಿಚಾರವನ್ನು ಮತ್ತು ಎರಡನೇ ಭಾಗದಲ್ಲಿ ಇವನ ವಂಶಾವಳಿಯನ್ನು ವಿವರಿಸುತ್ತಾರೆ. "ನಾನು ಭರತ ಚರಿತಂ ನೆಗೆಳ್ದಿ ಹರಿಗೋವರ್ದನ" ಎಂದು ಹೇಳಿಕೊಂಡಿದ್ದಾನೆ.

"ಇರುಂಗೋಳನು ರಾಜ್ಯಭಾರದ ಸಂದರ್ಭದಲ್ಲಿ ಗಂಗೆಯ ನಾಯಕ ಮತ್ತು ಇವನ ಪತ್ನಿ ಚಾಮಾಂಗನೆ ಎಂಬ ದಂಪತಿಯರಿಗೆ ಜನಿಸಿದ ಗಂಗೆಯ ಮಾರಯ್ಯನೆಂಬುವನು ಇರುಂಗೋಳನಿಗೆ ಆಪ್ತ ಪಾದಪದ್ಮೋಪ ಜೀವಿಯಾದ ಇವನು ಶ್ರೀಮೂಲ ಸಂಘದ ದೇಶಿಯ ಗಣದ ಕೊಂಡ ಕುಂದಾದನ್ವಯದ ಪುಸ್ತಕಗಚ್ಛದ ಶ್ರೀವೀರನಂದಿ ಸಿದ್ಧಾಂತ ಚಕ್ರವರ್ತಿಗಳ ಶಿಷ್ಯರಾದ ಮೇದಿನಿ ಸಿದ್ದರ ಪದ್ಮಪ್ರಭ ಮಲದಾರಿ ದೇವರ ಚರಣ ಪರಿಚರ್ಮೆಯಿಂದ ಪರ್ಯಾಪ್ತರಾದ ನೇಮಿಪಂಡಿತರ ಒಪ್ಪಿಗೆ ಪಡೆದು ವ್ರತವನ್ನು ಸ್ವೀಕರಿಸುತ್ತಾನೆ. ತದನಂತರ ಅಲ್ಲಿಯೇ ಒಂದು ಪಾಶ್ವಜಿನಾಲಯವನ್ನು ಕಟ್ಟಿಸುತ್ತಾನೆ. ಅದಕ್ಕೆ 'ಜೋಗವಟ್ಟಿಗೆ ಬಸದಿ' ಎಂದು ಹೆಸರು ತಿಳಿಸುತ್ತಾನೆ." ಮತ್ತು ದೈನಂದಿನ ಸಪರ್ಯಕಾರ್ಯಕ್ಕೆ ಮಹಾಭೀಷೆಕಕ್ಕೆ ಚತುರ್ವರ್ಣಾನ್ನದಾನಕ್ಕೆ ಎಂದು ಆತನ ಹೆಂಡತಿ ಚಾಚಲೆಯು ಗಂಗೆಯ ಮಾರಯ್ಯನಿಗೆ ನೀಡಿದ್ದ ದಾನ ತೈಲಂಗೆರೆಯ

ಮೊದಲೇರಿ ಗದ್ದೆಯನ್ನು ಸುಂಕಗಳಾದ ಕಂಡುಗದ ಹೊಲ, ಸುಟ್ಟುಗವತ್ತಹ ಸರದಲ್ಲಿ ಒಂದಡಕೆ, ಎರೆಡೆಲೆ, ಭತ್ತದ ಹೇರಿಗೆ ಹತ್ತಡಕೆ, ಐವತ್ತೆಲೆ ಗಾಣದ ಧಾರೆ ಎಣ್ಣೆ ಮುಂತಾದ ಸುಂಕಗಳನ್ನು ಬಸದಿಗೆ ದಾನ ಬಿಡುತ್ತಾರೆ.

ಈ ಶ್ಶಾಸನ ಶಿಲ್ಪವು ಸಹ ಮೋಹಕವಾಗಿದ್ದು ಕುಳಿತ ಭಂಗಿಯಲ್ಲಿರುವ ತೀರ್ಥಂಕರನ ಚಿತ್ರಣವಿದ್ದು ಶಾಸನದ ಎಡ ಹಾಗೂ ಬಲ ಭಾಗಗಳಲ್ಲಿ ಸೂರ್ಯ ಚಂದ್ರದ ಚಿತ್ರಗಳನ್ನು ಕೆತ್ತಲಾಗಿದ್ದು ಕುಳಿತ ಜಿನಮೂರ್ತಿಯ ಎಡಭಾಗದಲ್ಲಿ ಆಕಳ ಶಿಲ್ಪವನ್ನು ಬಿಡಿಸಲಾಗಿದೆ. ಶಿಲ್ಪ ಕಲಾತ್ಮಕತೆಯಿಂದ ಕೂಡಿದ್ದು ಬಹಳ ಸುಂದರವಾಗಿದೆ. ಇಂದಿಗೂ ಸಹ ನಿಡುಗಲ್ಲಿನಲ್ಲಿ ಪೂಜೆಗೊಳ್ಳುತ್ತಿರುವ ಜಿನಾಲಯವಾಗಿದೆ.

೩. ನಿಡುಗಲ್ಲು ಕಾಳಹಸ್ತೇಶ್ವರ ದೇವಸ್ಥಾನದಲ್ಲಿರುವ ಶಾಸನ:

(ಎ.ಕ.ಸಂ.XII ಪಾವಗಡ, ೫೦, ೧೨೪೮)

ಇದು ದಾನ ಶಾಸನವಾಗಿದೆ. ಚೋಳರ ಇರುಂಗೋಳ ಚೋಳನು ಹಾಕಿಸಿದಂತಹದಾಗಿದೆ. ಕ್ರಿ.ಶ. ೧೨೪೮ರಲ್ಲಿ ರಚಿಸಲಾಗಿದೆ. ಈ ಶಾಸನವು ನಿಡುಗಲ್ಲು ಕೋಟೆಯ ನಾಗೇಶ್ವರ ದೇವರಿಗೆ ಮುಚ್ಚುಗುರಿಕೆಯ ಮೊದಲೇರಿಯಲ್ಲಿನ ಗದ್ದೆಯನ್ನು ಮಾನ್ಯವಾಗಿ ಕೊಟ್ಟಂತಹ ಸಂಗತಿಯಾಗಿದೆ. ನಿಡುಗಲ್ಲು ವಂಶಾವಳಿಯನ್ನು ತಿಳಿಸುತ್ತದೆ. ಎರಡನೇ ಇರುಂಗೋಳನ ಕಾಲದ್ದಾಗಿದೆ.

"ಜನತಾ ಸ್ತುತ್ಯಾ ಜಟಖ್ಯಾ ಚಾವತನುಂಜಂ ಬ್ರಹ್ಮಬೋಗಿಂದ್ರ ನತನ ಪುತ್ರಂ ಕಲಿಮಂಗಿಯಾತನ ಸುತಂ ಬೀಚಿ ತನ್ನಂದನ ಗೋವಿಂದ ಮಹೀಪನಾತನ ಸುಪುತ್ರಂ ತಾನಿರುಂಗೋಳಾನಾತನ ಸೂನು ಪ್ರಿಯ ಭೋಗನಾತನ ಮಗಂ ಬ್ರಹ್ಮ ಭೂಪಾಳಕಂ" ಎಂದು ವಂಶಾವಳಿ ತಿಳಿಸಿದ್ದಾನೆ. ಇರುಂಗೋಳನು ಈ ಶಾಸನದಲ್ಲಿ ಉಲ್ಲೇಖವಿರುವಂತೆ ಪ್ರಪ್ರಥಮ ಮಹಾಮಂಡಮಳೇಶ್ವರನೆಂದು ಈ ಶಾಸನದಲ್ಲಿ ಕರೆದುಕೊಂಡಿದ್ದಾನೆ. ಇವನ ತಂದೆ ಬೋಮ್ಮದೇವ ನಿಂದ ಬಿಲ್ವಿದ್ಯೆ ಮತ್ತು ಆಯುಧಗಳ ಬಳಕೆಯನ್ನು ಕಲಿತಿದ್ದುಕೊಂಡಂತೆ ಈ ಶಾಸನದಲ್ಲಿ ಕಾಣಬಹುದು. ಇವನಿಗೆ ಚೋಳ ಮಹಾಮಂಡಳೇಶ್ವರ, ದಾನದ ಮುರಾರಿ, ಒರೆಯೂರ ಪುರವೇಶ್ವರ ಅರವತ್ತಾರು ಮಂಡಳಿಕ ಗಂಡ, ಚೋಳಮಹಾರಾಜ ಇತ್ಯಾದಿ ಬಿರುದುಗಳು ಈ ಶಾಸನದಲ್ಲಿವೆ. ಇವನ ಕಾರ್ಯ ಸಾಧನೆಯನ್ನು ಸಹ ಬಣ್ಣಿಸಿದೆ. ಇವನ ಕಾಲದಲ್ಲಿ ಈ ಚೋಳರು ನಿಡುಗಲ್ಲಿನ ದೊರೆಗಳಿಂದ ಪ್ರಸಿದ್ದರಾಗಿದ್ದರು. ನಿಡುಗಲ್ಲು ಮತ್ತು ಅಲ್ಲಿನ ಕೋಟೆಯನ್ನು ಈ ಶಾಸನದಲ್ಲಿ ಕೆಳಗಿನಂತೆ ತಿಳಿಸಿದೆ.

ಜಗದೀಶ ನಿರುಂಗೋಳಂ
ಸೊಗಯಿಸಿ ತಾನಿರ್ಪ ದುರ್ಗದಂಕಿತವದುವಂ
ನಗೆದು ಗಿರಿಶಿಖರದುಚ್ಚಂ

ಮುಗಿಲಂ ಮುಟ್ಟಿದೊಡೆ ಪೊಡವಿ ನಿಡುಗಲ್ಲೆಂಗುಂ.....

ಹೀಗೆ ಪುಂಕಾನುಪುಂಕಾವಾಗಿ ನಿಡುಗಲ್ಲಿನ ಶಾಸನಗಳು ಇರುಂಗೋಳನನ್ನು ಹೊಗಳಿರುವುದು ನೋಡಿದರೆ ಚೋಳರಲ್ಲಿ ಇವನೇ ಶ್ರೇಷ್ಠನು, ಬಲಿಷ್ಠನೂ ಆಗಿರುವುದರಲ್ಲಿ ಅನುಮಾನವಿಲ್ಲ.

ಮುತ್ತ್ರಿದುವರೆದು ನಿಡುಗಲ್ಲಿನ ವ್ಯಾಪಾರಿಗಳು ನಗರೇಶ್ವರ ದೇವಾಲಯವೊಂದಕ್ಕೆ ದಾನ ನೀಡಿದ್ದನ್ನು ವಿವರಿಸುವ ಈ ಶಾಸನವು ಅಲ್ಲಿನ ವೈಶ್ಯರನ್ನು ಅವರ ಜೀವನ ವಿಧಾನವನ್ನು ಧಾರ್ಮಿಕ ಕಾರ್ಯಚರಣೆಯನ್ನು ವಿಧವಿಧವಾಗಿ ಬಣ್ಣಿಸಲಾಗಿದೆ.

ನಿಡುಗಲ್ಲಿನ ವೈಶ್ಯರು ವಿನಯವನ್ನೇ ಆಭರಣವಾಗಿ ಉಳ್ಳವರು, ಒಡೆಯನ ಹಿತವನ್ನು ಬಯಸುವವರು, ಬಹು ಕಾರ್ಯಗಳನ್ನು ಮಾಡುವರು, ಕನಕಗಿರಿಯಷ್ಟು ಧೈರ್ಯಶಾಲಿಗಳು, ನಿರ್ಮಲವಾದ ಗುಣವನ್ನುಳ್ಳವರು, ಉದಾರ ವ್ಯಕ್ತಿತ್ವದವರು, ನೋಡಲು ಮನಸಿಜನಂತೆ ಸುಂದರ ಆಕಾರ ಉಳ್ಳವರು, ಕೀರ್ತಿಶಾಲಿಗಳು, ಪ್ರಸಿದ್ದರು ಎಂದು ಈ ಶಾಸನದಲ್ಲಿ ನಿಡುಗಲ್ಲಿನ ವೈಶ್ಯ ವ್ಯಾಪಾರಿಗಳನ್ನು ಹೊಗಳಿದೆ.

ನಿಡುಗಲ್ಲಿನ ವೈಶ್ಯರು ಶ್ರೀನಗರೇಶ್ವರ ದೇವರ ನೈವೇದ್ಯಕ್ಕೆ ನಂದಾದೀವಿಗೆ, ಅನ್ನಸಂತರ್ಪಣೆಗೆ, ಬ್ರಾಹ್ಮಣರ ತಪಸ್ಸಿಗಳ ಆಹಾರ ದಾನಕ್ಕೆ ಶ್ರೀಮುಚ್ಚುಗುರಿಕೆ ಕೆರೆಯ ಹಿಂದಿನ ಮೊದಲ ಗದ್ದೆಯನ್ನು ದೇವಾಲಯಕ್ಕೆ ನಿಡುಗಲ್ಲಿನ ವೈಶ್ಯರಾದ ಕೇಶವಶೆಟ್ಟಿಯ ಮಗ ಸಿರಿಯಾಮಿಶೆಟ್ಟಿ ಮತ್ತು ಚಿಕ್ಕ ಮಹಾದೇವಿಶೆಟ್ಟಿಯರು ಇರುಂಗೋಳ ಚೋಳನೊಂದಿಗೆ ದಾನ ನೀಡಿದ ಸಂಗತಿ ಈ ಶಾಸನ ವಿಚಾರವಾಗಿದೆ.

೪. ಮಂಗಳವಾಡದ ಕೆರೆಯ ಏರಿಯಲ್ಲಿರುವ ಸೋಮೇಶ್ವರ ದೇವಾಲಯದ ಶಾಸನ:

ಈ ಶಾಸನ ಅರವತ್ತೇರೆಡು ಸಾಲುಗಳಿಂದ ಕೂಡಿದ್ದು ಇದು ಸಹ ನಿಡುಗಲ್ಲು ಚೋಳರ ಕಾಲಕ್ಕೆ ಸಂಬಂಧಿಸಿದೆ. ಇದು ದಾನ ಶಾಸನವಾಗಿದೆ. ಕ್ರಿ.ಶ. ೧೨೬೦ರಲ್ಲಿ ನೀಡಿದಂತಹದು. ಎರಡನೇ ಇರುಂಗೋಳ ಚೋಳನು ಮಂಗಳವಾಡದ ಸೋಮನಾಥ ದೇವರಿಗೆ ಭೂಮಿಯನ್ನು ದಾನ ನೀಡಿದ ಸಂಗತಿಯನ್ನೊಳಗೊಂಡಿದೆ.

ಶೈವ ಧರ್ಮವು ನಿಡುಗಲ್ಲು ಚೋಳರ ಕಾಲದಲ್ಲಿ ಒಂದು ಉನ್ನತ ಸ್ಥಾನದಲ್ಲಿತ್ತು ಎಂಬುದಕ್ಕೆ ಈ ದಾನದತ್ತಿಗಳನ್ನು ಸಾಕ್ಷಿಗಳಾಗಿ ಕಾಣಬಹುದು. ಈ ಶಾಸನದಲ್ಲಿ ಎರಡನೇ ಇರುಂಗೋಳ ಚೋಳನ ಬಿರುದುಗಳನ್ನು ಮಹಾಮಂಡಳೇಶ್ವರ, ಒರೆವುರ ಪುರಾವಾಧೀಶ್ವರ ರೊದ್ದದ ಗೋವ, ಅರವತ್ತಾರು ಮಾಂಡಳಿಕರಗಂಡ, ಗಂಡ ಬೇರುಂಡ, ಶ್ರೀಮಾನ್ ಮಹಾಮಂಡಳೇಶ್ವರ, ಬೊಮ್ಮದೇವರಸನ ಮಗ, ದಾನವ ಮುರಾರಿ ಇರುಂಗೋಳ ಚೋಳ ಮಹಾರಾಜ ನಿಡುಗಲ್ಲು ನೆಲೆಯಲ್ಲಿ ಸುಖ ಸಂತೋಷದಿಂದ ಆಳುತ್ತಿರುತ್ತಾನೆಂಬುದಾಗಿ ಉಲ್ಲೇಖಿಸುತ್ತದೆ.

ಈ ಸಂದರ್ಭದಲ್ಲಿ ಉತ್ತಾರಾಯಣ ಸಂಕ್ರಾಂತಿ ಶಿವಯೋಗದಂದು ಸೋಮವಾರ ಮಂಗಳವಾಡದ ಶ್ರೀಸೋಮೇಶ್ವರ ದೇವಾಲಯಕ್ಕೆ ಸೋಮಜಿಯ ಮತ್ತು ಮಾದಜೀಯನ ಹೆಣ್ಣು ಮಕ್ಕಳು ಇವರ ಪತಿಗಳು ಸೇರಿ ಮಂಗಳವಾಡ ಸೋಮಜಿಯ ದೇವಾಲಯಕ್ಕೆ ಇರುಂಗೋಳ್ಳನ ಸ್ವಹಸ್ತದಿಂದ ಧಾರಾಳ ಪೂರ್ವಕವಾಗಿ ಶಿವಯೋಗಿಕಾರ ಕುಮಾರ ಪೆರುಮಾಳದೇವನ ಮುಂದಿಟ್ಟುಕೊಂಡು ಮಂಗಳವಾಡದ ಕೆರೆಯ ಹಿಂದಿನ ಭೂಮಿಯನ್ನು ದಾನವಾಗಿ ನೀಡಿದಂತಹ ವಿಚಾರ ತಿಳಿಸುತ್ತದೆ.

೫. ಜಂಗಮರಹಳ್ಳಿ ಕೆರೆಯೆರಿಯಲ್ಲಿರುವ ಈಶ್ವರ ದೇವಾಸ್ಥಾನದಲ್ಲಿರುವ ಶಾಸನ:

ಈ ಶಾಸನವು ಕ್ರಿ.ಶ. ೧೨೬೦ರಲ್ಲಿ ಹಾಕಿಸಿದಂತಹದು. ಇಂದಿಗೂ ಎಂಟು ಶತಮಾನಗಳನ್ನು ಮುಟ್ಟುವಂತಹದು. ಎರಡನೆ ಇರುಂಗೋಳನ ಕಾಲದ ಶಾಸನ ಒರೆಯೂರ ನೊಳೆಂಬೇಶ್ವರ ದೇವಾಲಯಕ್ಕೆ ದತ್ತಿಬಿಟ್ಟ ವಿಚಾರ ತಿಳಿಸುತ್ತದೆ.

ಮಂಗಳವಾಡದ ಸೋಮೇಶ್ವರ ದೇವಾಲಯದ ಶಾಸನ ಮತ್ತು ಶಾಸನವು ಒಂದೆ ಸಂದರ್ಭದಲ್ಲಿ ಹಾಕಿಸಿ ದಾನ ನೀಡಿದಂತಹವುಗಳು. ಇಲ್ಲಿ ಎರಡನ ಇರುಂಗೋಳ ಚೋಳನ ಬಿರುದುಗಳನ್ನು ಉಲ್ಲೇಖಿಸುತ್ತಾ ಮಂಗಳವಾಡದ ಸೋಮನಾಥ ದೇವಸ್ಥಾನ ಮತ್ತು ಓರೆಯೂರ ನೊಣಂಬೇಶ್ವರ ದೇವರ ಅಥವಾ ದೇವಸ್ಥಾನ ಅರ್ಚಕ ಸೋಮಜೀಯನ ಮಗ ಮಾದವಾಜೀಯ ಹೆಣ್ಣು ಮಕ್ಕಳು ಮತ್ತು ಇವರ ಗಂಡಂದಿರುಗಳು ಸೇರಿ ಕುಟುಂಬದೊಂದಿಗೆ ಶಿವಯೋಗಿಕಾರ ಕುಮಾರ ಪೆರುಮಾಳದೇವನನ್ನು ಮುಂದಿಟ್ಟುಕೊಂಡು ಮಂಗಳವಾಡ ಮತ್ತು ಜಂಗಮರಹಳ್ಳಿ ಗ್ರಾಮದ ಕೆರೆಯೆಹಿಂದಿನ ಮತ್ತು ಮುಂದಿನ ಭೂಮಿಯನ್ನು ದಾನದ ಮುರಾರಿ ಇರುಂಗೋಳ ಚೋಳನು ಭೂಮಿಯನ್ನು ದಾನ ಬಿಟ್ಟ ಸಂಗತಿಯನ್ನು ಹೊಳಗೊಂಡಿದೆ. ಮಂಗಳವಾಡ ಶಾಸನ ಮತ್ತು ಜಂಗಮರಹಳ್ಳಿಯ ಎರಡು ಶಾಸನಗಳು ಎಕಕಾಲದಲ್ಲಿ ಹಾಕಿಸಿ ದಾನ ಬಿಟ್ಟಂತಹವುಗಳಾಗಿವೆ.

೬. ನಿಡುಗಲ್ಲು ಬೆಟ್ಟದ ಮೇಲೆ ಸೋಮೇಶ್ವರ ದೇವಸ್ಥಾನದ ಹೊರಗಣ ಬಾಗಿಲುವಾಡದ ಶಾಸನ: (ಎ.ಕ.ಸಂ.XII, ಪಾವಗಡ, ೧೦೭, ೧೨೮೦)

ಕ್ರಿ.ಶ. ೧೨೮೦ರಲ್ಲಿರಚನೆಯಾದ ಅಪೂರ್ಣ ಶಾಸನವಾಗಿದೆ. ಎರಡು ಸಾಲುಗಳಿಂದ ಕೂಡಿದ ಶಾಸನವಾಗಿದೆ ಈ ಶಾಸನವು ಚೋಳವಂಶದ ಕೊನೆಯ ದೊರೆ ಗಣೇಶ್ವರ ದೇವನ ಆಡಳಿತವನ್ನು ತಿಳಿಸುತ್ತದೆ. ಇವನ ನಂತರ ಈ ಚೋಳ ಸಂತತಿಯವರು ಕಣ್ಮರೆಯಾಗುತ್ತಾರೆ. ನಿಡುಗಲ್ಲನ್ನು ಚೋಳನ ಕಿರುಕುಳವನ್ನು ಸಹಿಸದ ಹೊಯ್ಸಳ ಇಮ್ಮಡಿ ನರಸಿಂಹ ಕ್ರಿ.ಶ. ೧೨೮೫ರಲ್ಲಿ ನಿಡುಗಲ್ಲಿನ್ನು ನೆಲಸಮ ಮಾಡಿದ ವಿಚಾರ ಈ ಶಾಸನದಿಂದ ತಿಳಿದುಬರುತ್ತದೆ. ಇದರೊಂದಿಗೆ ಈ ಚೋಳ ವಂಶದ ಆಳ್ವಿಕೆಯೇ ಕೊನೆಗೊಂಡಿರಬೇಕೆಂದು ತಿಳಿಯಲಾಗಿದೆ. ಇದೇವೇಳೆ ಸೆವುಣರ ಆಕ್ರಮಣದಿಂದ ರಾಯದುರ್ಗ, ಕಲ್ಯಾಣದುರ್ಗಾ, ಮಡಕಶಿರಾ, ಸಿರಾ,

ಮೊಳಕಾಲ್ಮೂರುಗಳಲ್ಲಿ ಅರಾಜಕತೆ ಒಳಗಾದ ಸಮಯದಲ್ಲಿ ನಿಡುಗಲ್ಲಿನ ದೊರೆಗಳು ಸಹ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ.

೭. ನಿಡುಗಲ್ಲು ಬೆಟ್ಟದ ಮೇಲೆ ಸೋಮೇಶ್ವರ ದೇವಸ್ಥಾನದಲ್ಲಿರುವ ಶಾಸನ:

(ಎ.ಕ.ಸಂ.XII, ಪಾವಗಡ, ೫೯)

ಈ ಶಾಸನವು ೪೫ ಸಾಲುಗಳಿಂದ ಕೂಡಿದೆ. ಕ್ರಿ.ಶ. ೧೨೯೨ರಲ್ಲಿ ರಚನೆಯಾಗಿದ್ದು, ಚೋಳ ಮನೆತನದ ಕೊನೆಯ ದೊರೆ ಗಣೇಶ್ವರ ದೇವ ನಿಡುಗಲ್ಲಿನ ಸೋಮೇಶ್ವರ ದೇವಸ್ಥಾನಕ್ಕೆ ಅಮರಿಯೂರು ಎಂಬ ಗ್ರಾಮವನ್ನು ದಾನಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಮತ್ತು ದೇವಸ್ಥಾನಕ್ಕೆ ಕೆಲವು ಸುಂಕಗಳನ್ನು ದತ್ತಿಯಾಗಿ ನೀಡಿದಂತಹ ವಿಚಾರವನ್ನೊಳಗೊಂಡಿದೆ.

"ಶಕವರ್ಷ ೧೨೧೪ರಂದು ಖರಸಂವತ್ಸರ ಮೇಘಶುದ್ಧ ಷಷ್ಠಿ ಶನಿವಾರದಂದು ಗಣೇಶ್ವರದೇವ ರಾಜನು ನಿಡುಗಲ್ಲಿನ ಸೋಮೇಶ್ವರ ಅಥವಾ ಸೋಮನಾಥ ದೇವಾಲಯಕ್ಕೆ ಅಮರಿಯೂರನ್ನು ದೇವಸ್ಥಾನಕ್ಕೆ ಅಷ್ಟಭೋಗ, ನೈವೇದ್ಯಕ್ಕೆ, ನಂದಾದೀವಿಗೆಗೆ, ಅಂಗಾಭೋಗಕ್ಕೆ, ಪಾತ್ರಪಾವುತಾಳಕ್ಕೆ, ಬ್ರಾಹ್ಮಣರ ತಪಸ್ವಿಗಳ ಭೋಜನಕ್ಕೆ ನಿಡುಗಲ್ಲಿನ ಪೂರ್ವದ ಅಮರಿಯೂರನ್ನು ಸರ್ವಮಾನ್ಯವಾಗಿ ಧಾರಳ ಪೂರ್ವಕವಾಗಿ ತಿಪ್ಪೆಸುಂಕ, ಗಾಣಸುಂಕ, ಅಡಕೆ ಸುಂಕ ಮುಂತಾದ ಸುಂಕಗಳೊಂದಿಗೆ ದೇವಾಲಯಕ್ಕೆ ನೀಡುತ್ತಾನೆ."[೬]

೮. ನಿಡುಗಲ್ಲು ಬೆಟ್ಟದ ಮೇಲೆ ಮಾಟನೂರು ಬಾಗಿನಲ್ಲಿರುವ ಶಾಸನ:

(ಎ.ಕ.ಸಂ.XII ಪಾವಗಡ, ೫೪)

ಕ್ರಿ.ಶ. ೧೪೮೭ರಲ್ಲಿ ರಚನೆಯಾಗಿದೆ. ೩೬ ಸಾಲುಗಳಿಂದ ಕೂಡಿದೆ. ಈ ಶಾಸನವು ನಿಡುಗಲ್ಲಿನ್ನು ಆಳುತ್ತಿದ್ದ ಸ್ಥಳೀಯ ಪಾಳೆಗಾರನಾದ ಚಿಕ್ಕತಿಪ್ಪರಾಜನ ಹೆಂಡತಿ ಲಕ್ಷ್ಮೀದೇವಿಯ ನಿಧನ ಹೊಂದಿದಾಗ ಆಕೆಯ ಹೆಸರಿನಲ್ಲಿ ಕೆರೆಯೊಂದನ್ನು ಕಟ್ಟಿಸಿ ಅಗ್ರಹಾರವೊಂದನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡಿದ ಸಂಗತಿಯನ್ನು ಒಳಗೊಂಡಿದೆ.

ನಿಡುಗಲ್ಲು ನಾಯಕರ ಆಳ್ವಿಕೆಯಲ್ಲಿ ಮೊದಲಿಗನಾಗಿದ್ದು ಇವನ ಈ ಶಾಸನದಲ್ಲಿ ಇವನ ಬಗ್ಗೆ ಮತ್ತು ನಿಡುಗಲ್ಲಿನ ಕೋಟೆಯ ಬಗ್ಗೆ ಹೇಳಿಕೊಂಡಿದ್ದಾನೆ. "ದುರ್ಘಟವೀ ಕರ್ನಾಟಕ ದುರ್ಗಂಗಳಿಗಧಿಕವೆನಿಪ್ಪ ನಿಡುಗಲ್ಲೆಂಬಿ ದುರ್ಗವನ್ನು" ಒಲಿದು ಆಳುತ್ತಿರಲು ಚಿಕ್ಕ ತಿಪ್ಪನೃಪಾಲನು ಆ ದುರ್ಗವನ್ನು ಕಾಯಲು ಅಷ್ಟ ದಿಕ್ಕುಗಳಲ್ಲಿಯೂ ದುರ್ಗಿ, ಭೈರವ, ಗಣಪತಿಗಳನ್ನು ಸ್ಥಾಪಿಸಿ ಮಧ್ಯೆ ನಿಡುಗಲ್ಲಿನಲ್ಲಿ ಸುಖ ಸಂತೋಷದಿಂದಿರಲು ಅಶ್ವಪತಿಯಾಗಲಿ, ಗಜಪತಿಯಾಗಲಿ ಇದನ್ನು ಭೇದಿಸಲು ಸಾಧ್ಯವಿಲ್ಲವೆಂದು ಹೇಳಿದ್ದಾನೆ.

ಚಿಕ್ಕ ತಿಪ್ಪನೃಪಾಲನನ್ನು ಚಲುವರಗಂಡ, ಕಠಾರಿರಾಯ, ಸೇನೆ ಭೈರವ, ಬಾದರಮಲಕ, ಸಪ್ತಾಂಗಹರಣ, ಹೊಯ್ಸಳದಳ ವಿಭಾಗಂ, ಹೊಳಕಲ್ಲ ಬೊಮ್ಮನ ಶಿರಚ್ಛೇದನಂ ಎಂದು ಇವನ ಬಿರುದುಗಳನ್ನು ಸಾರಿದೆ. ಮುಂದೆ ಶಾಸನದಲ್ಲಿ ಇವನ ಪ್ರಿಯ ಅರಸಿ ಲಕ್ಷ್ಮಾದೇವಿಯು

ಮರಣ ಹೊಂದಿದಲ್ಲಿ ಅವಳ ಮೇಲಿನ ಪ್ರೀತಿಯಿಂದ ಅವಳ ಹೆಸರಿನಲ್ಲಿಯೇ ನಿಡುಗಲ್ಲಿನಲ್ಲಿ ಲಕ್ಷ್ಮಣೇಶ್ವರ ದೇವಾಲಯವನ್ನು ಕಟ್ಟಿಸಿ ನಿಡುಗಲ್ಲಿನ ತೆಂಕಣ ದಿಕ್ಕಿನಲ್ಲಿರುವ ಸಿಗಲಗುಡ್ಡದಲ್ಲಿ ಲಕ್ಷ್ಮೀದೇವಿ ಎಂಬ ಕೆರೆಯನ್ನು ಕಟ್ಟಿಸಿ ಅದನ್ನು ಬ್ರಾಹ್ಮಣರಿಗೆ ನೀಡುತ್ತಾನೆ. ಒಂದು ಅಗ್ರಹಾರವನ್ನು ನಿರ್ಮಿಸಿ ದಾನ ಮಾಡುತ್ತಾನೆ ಎಂದು ಈ ಶಾಸನ ತಿಳಿಸುತ್ತದೆ.

೯. ನಿಡುಗಲ್ಲು ಬೆಟ್ಟದ ಮೇಲೆ ಮಳೆಮಲ್ಲಿಕಾರ್ಜುನ ದೇವಸ್ಥಾನದ ಸಮೀಪದಲ್ಲಿರುವ ಶಾಸನ: (ಎ.ಕ.ಸಂ.XII ಪಾವಗಡ, ೫೫, ೧೪೮೭)

ಹದಿನೆಂಟು ಸಾಲುಗಳಿಂದ ಕೂಡಿದ ಶಾಸನವಾಗಿದೆ. ಕ್ರಿ.ಶ, ೧೪೮೭ರಲ್ಲಿ ರಚನೆಯಾದ ಶಾಸನ. ಚಿಕ್ಕತಿಪ್ಪರಾಜೇಂದ್ರನು ಹೆಂಡತಿ ಅಥವಾ ರಾಣಿಯಾದ ಲಕ್ಷ್ಮಾದೇವಿ ಸ್ಮರಾಣಾರ್ಥವಾಗಿ ಬ್ರಾಹ್ಮಣರಿಗೆ ಅಗ್ರಹಾರವನ್ನು ನಿರ್ಮಿಸಿ ದಾನ ಮಾಡಿದ ವಿಚಾರವನ್ನು ತಿಳಿಸುತ್ತದೆ. ರಾಣಿ ಲಕ್ಷ್ಮಾದೇವಿ ಮರಣಿಸಿದ ಸಂದರ್ಭದಲ್ಲಿ ಅವಳ ನೆನಪಿಗಾಗಿ ನಿಡುಗಲ್ಲಿನ ಸಿಗಲಗುಡ್ಡದಲ್ಲಿ ಲಕ್ಷ್ಮಾದೇವಿಯ ಹೆಸರಿನಲ್ಲಿ ಕೆರೆಯೊಂದನ್ನು ನಿರ್ಮಿಸಿ ಮತ್ತು ಅಗ್ರಹಾರವನ್ನು ಬ್ರಾಹ್ಮಣರಿಗೆ ನೀಡುತ್ತಾನೆ. ಮತ್ತು ಇವನ ತಂದೆ ಯಬಾಪ ನಾಯಕ ಮತ್ತು ಅಮ್ಮ ನಾಗತಿ ಎಂದು ಈ ಶಾಸನದಿಂದ ತಿಳಿದುಬರುತ್ತದೆ.

೧೦. ಗೊಲ್ಲನಕುಂಟೆ ಕೆರೆ ಅಂಗಳದಲ್ಲಿರುವ ಶಾಸನ:

(ಎ.ಕ.ಸಂ.XII ಪಾವಗಡ, ೬೯, ೧೫೧೫)

ಈ ಶಾಸನ ಹತ್ತೊಂಭತ್ತು ಸಾಲುಗಳಿಂದ ರಚನೆಯಾಗಿದೆ. ಕ್ರಿ.ಶ. ೧೫೧೫ರಲ್ಲಿ ರಚಿಸಿದ ಗೊಲ್ಲನಕುಂಟೆ ಗ್ರಾಮವನ್ನು ವೀರಭದ್ರಾಪುರವೆಂಬುದಾಗಿ ಕರೆಯಲಾಗುತ್ತಿದ್ದೆಂದು ಮತ್ತು ಈ ಗ್ರಾಮದ ವೀರೇಶ್ವರ ದೇವಾಲಯಕ್ಕೆ ಗೊಲ್ಲನಕುಂಟೆ ಗ್ರಾಮವನ್ನೇ ದಾನವಾಗಿ ಕೊಟ್ಟ ಸಂಗತಿ ತಿಳಿಸುತ್ತದೆ. ನಾಯಕರ ಕಾಲಕ್ಕೆ ಸಂಬಂಧಿಸಿದ್ದು ಜಕ್ಕ ನಾಯಕನು ನೀಡಿದ ದಾನ ಶಾಸನವಾಗಿದೆ. ಪರುಶರಾಮನ ಅವತಾರದಂತೆ ವೀರ ಮಂಡಲೇಶ್ವರ ಜಕ್ಕ ನಾಯಕನು ನಿಡುಗಲ್ಲು ಸೀಮೆ ಹೊಳಗೆ ಗೊಲ್ಲನಕುಂಟೆ ಗ್ರಾಮದಲ್ಲಿರುವ ಸಮಸ್ತ ನಿಧಿ ನಿಕ್ಷೇಪ, ಜಲ ಪಾಷಣ, ತೆರಿಗೆಗಳನ್ನು ಈ ದೇವಸ್ಥಾನಕ್ಕೆ ಅರ್ಪಿಸಿದ್ದಾನೆ.

೧೧. ತೂಬಿನಕುಂಟೆ ಗ್ರಾಮದ ಆಂಜನೇಯ ದೇವಾಲಯದಲ್ಲಿರುವ ಶಾಸನ:

(ಎ.ಕ.ಸಂ.XII ಪಾವಗಡ, ೩೯, ೧೫೫೪)

ಐವತ್ತೆರಡು ಚಿಕ್ಕ ಚಿಕ್ಕ ಸಾಲುಗಳಿಂದ ಕೂಡಿದ್ದು, ಕ್ರಿ.ಶ. ೧೫೫೪ರಲ್ಲಿ ರಚನೆ ಮಾಡಲಾಗಿದೆ. ಈ ಶಾಸನದಲ್ಲಿ ಅಲ್ಲಲ್ಲಿ ಅಕ್ಷರಗಳು ಹಾಳಾಗಿದ್ದು ಇಂದಿನ ತುಮಕುಂಟೆ ಗ್ರಾಮವನ್ನು ಜೀರ್ಣೋದ್ಧಾರ ಮಾಡಿದ ಸಂಗತಿ ತಿಳಿಸುತ್ತದೆ. ಈ ಶಾಸನವನ್ನು ನಿಡುಗಲ್ಲಿನ ಕುಮಾರ ತಿಮ್ಮಣ್ಣ ನಾಯಕನು ಹಾಕಿಸಿದ ಶಾಸನವಾಗಿದೆ. ಈ ಶಾಸನದ ಪ್ರಕಾರ ತುಮಕುಂಟೆ

ಗೌಡಿಕೆಯನ್ನು 'ಧರ್ಮಗೌಡ' ಎಂಬುವನು ಅನುಸರಿಸಿಕೊಂಡು ಬರುತ್ತಿರುತ್ತಾನೆ. ಈ ಸಮಯದಲ್ಲಿ ಸದಾಶಿವರಾಯನು ವಿಜಯನಗರವನ್ನು ಆಳುತ್ತಿರುತ್ತಾನೆ. ಇವನ ಸಾಮಂತನಾಯಕನಾಗಿ ತಿಮ್ಮಣ್ಣ ನಾಯಕನು ಆಳ್ವಿಕೆ ಮಾಡುತ್ತಿರುತ್ತಾನೆ. ನಿಡುಗಲ್ಲಿನಲ್ಲಿ ಎಂದು ತಿಳಿದುಬರುತ್ತದೆ. ಮಹಾಮಂಡಳೇಶ್ವರರಾದ ರಾಮರಾಯ ಮತ್ತು ವಿಠಲದೇವ ಅರಸರು ತೈಲಂಗೆಯ ತಿಮ್ಮಬೊವ್ವನ ಮಗ 'ಧರ್ಮಗೌಡ'ನು ಗ್ರಾಮಕ್ಕೆ ಕೋಟೆಕಟ್ಟಿಸಿ ತೈಲಂಗೆರೆಯ ಜೀರ್ಣೋದ್ಧಾರ ಮಾಡಿಸಿ ಅಲ್ಲಿರುವ ಕಾಲುವೆಗಳನ್ನೆಲ್ಲ ಪುನರ್ ಸರಿಪಡಿಸುತ್ತಾನೆ. ಆದ್ದರಿಂದ ಇವನಿಗೆ ತೈಲಂಗೆರೆ ರಾಮೇಗೌಡ, ಶ್ಯಾನುಭೋಗ ಮತ್ತು ಅವನ ಅಳಿಯ ಚೆನ್ನಗೌಡ, ಶಿವುರದ ನಾಗೇಗೌಡ ಇವರ ಸಾಕ್ಷಿಯಲ್ಲಿ ಧರ್ಮಗೌಡನಿಗೆ ಉಂಬಳಿಯನ್ನು ಕೊಟ್ಟುದಾಗಿ ತಿಳಿಸುವ ಈ ಶಾಸನ ಬಹಳ ವಿಶಿಷ್ಟ ಮತ್ತು ಸಂಪೂರ್ಣ ಸಾರ್ವಜನಿಕರಿಗಾಗಿ ಸ್ಪಂದಿಸಿದ ಕೆಲಸ ಕಾರ್ಯಗಳಿಗೆ ನೀಡಿದ ಮಹತ್ವವನ್ನು ಈ ಶಾಸನ ತಿಳಿಸುತ್ತದೆ.

೧೨. ತೈಲಂಗೆರೆಯ ದೇವಸ್ಥಾನದಲ್ಲಿರುವ ಶಾಸನ: (ಎ.ಕ.ಸಂ.XII ಪಾವಗಡ,೪೦, ೧೫೫೬)

ನಲವತ್ತಮೂರು ಸಾಲುಗಳಿಂದ ಕೂಡಿದ ಶಾಸನವಾಗಿದೆ. ಕ್ರಿ.ಶ. ೧೫೫೬ರಲ್ಲಿ ಅನೇಕ ರಚನೆಯಾಗಿದೆ. ಈ ಶಾಸನವು ಸಹ ನಿಡುಗಲ್ಲಿನ ತಿಮ್ಮಣ್ಣ ನಾಯಕರು ಅನೇಕ ಗಣ್ಯರ ಸಮ್ಮುಖದಲ್ಲಿ ತುಮಕುಂಟೆ ಗ್ರಾಮವನ್ನು ದಾನ ಹಾಕಿಸಿಕೊಟ್ಟ ಸಂಗತಿಯನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಅಕ್ಷರಗಳು ಹಾಳಾಗಿದ್ದು ಕಾಗುಣಿತದ ದೋಷಗಳು ಹೇರಳವಾಗಿವೆ. ವಿಜಯನಗರದ ಸದಾಶಿವರಾಯನು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ ಅವನ ಆದೇಶದಂತೆ "ಅವನ ಮಹಾಮಂಡಳೇಶ್ವರರಾದ ರಾಮರಾಯ ಮತ್ತು ತಿರುಮಲ ರಾಜಯ್ಯದೇವ ಮಹಾ ಅರಸರುಗಳು ಮಹಾನಾಯಕಾಚಾರ್ಯ ನಿಡುಗಲ್ಲಿನ ಪಾಳೆಗಾರ ತಿಮ್ಮಣ್ಣ ನಾಯಕರು ನಿಡುಗಲ್ಲಿನ ಸಮಸ್ತ ಅಧಿಕಾರಸ್ಥರಾಗಿರುತ್ತಾರೆಂದು ಹಾಗೂ ಅನೇಕ ಹಳ್ಳಿಗಳ ಗೌಡರು, ಶಾನುಭೋಗರು, ಪಟ್ಟಣ ಶೆಟ್ಟಿಗಳು ಪ್ರಮುಖ ಪ್ರಜೆಗಳು ಮತ್ತು ನಿಡುಗಲ್ಲು ರಾಜ್ಯದೊಳಗಣ ತುಮಕುಂಟೆ ಗ್ರಾಮವನ್ನು ಗುತ್ತಿ ತಿರುಮಲ ರಾಜಯ್ಯನ ಮುದ್ರೆ ಸಹಿ ಮನುಷ್ಯರೊಂದಿಗೆ ತಿರುವೆಂಗಳನಾಥ ದೇವರ ನಿತ್ಯ ನೈವೇದ್ಯ, ಪೂಜೆಯ ಹಬ್ಬಗಳಿಗಾಗಿ, ನಂದಾದೀವಿಗೆಗೆ ಮುಂತಾದ ದೇವಾಲಯಗಳ ಕಾರ್ಯಗಳಿಗೆ ಆ ಗ್ರಾಮಕ್ಕೆ ಸೇರುವ ನಿಧಿ ನಿಕ್ಷೇಪ, ಜಲ ಪಾಷಣಗಳಿಗೆ ತಿಮ್ಮ ರಾಜಯ್ಯನವರಿಗೆ ಪುಣ್ಯವಾಗಲೆಂದು ದಾನ ನೀಡುತ್ತಾನೆ.

೧೩. ಅರಸೀಕೆರೆ ಗ್ರಾಮದ ಕೆರೆ ಹಿಂದೆ ಬಾಳಣ್ಣನ ತೋಟದ ಬದುವಿನಲ್ಲಿರುವ ಶಾಸನ:

(ಎ.ಕ.ಸಂ.XII ಪಾವಗಡ, ೩೮, ೧೫೫೯)

ಕ್ರಿ.ಶ. ೧೫೫೯ರಲ್ಲಿ ನಿರ್ಮಿಸಿದ ಶಾಸನ. ಹದಿನಾರು ಸಾಲುಗಳಿಂದ ಕೂಡಿದೆ. ಈ ಶಾಸನವು ತಿಮ್ಮಣ್ಣ ನಾಯಕರು ಅರಸೀಕೆರೆಯ ಶೆಟ್ಟಿಗೊಂಡ ಗೌಡನಿಗೆ ಗೌಡಿಕೆ ಮತ್ತು ಕೆರೆಯ ಕೆಳಗಿನ ಭೂಮಿಯನ್ನು ಮಾನ್ಯ ಹಾಕಿಸಿ ಕೊಟ್ಟ ವಿಚಾರ ಹೊಂದಿದೆ.

ಶ್ರೀಮಹಾನಾಯಕಾಚಾರ್ಯ ಭಾಷೆಗೆ ತಪ್ಪುವ ನಾಯಕರಗಂಡ ಮರೆಹೊಕ್ಕರೆ ಕಾಯುವ ನಿಡುಗಲ್ಲ ತಿಮ್ಮಣ್ಣ ನಾಯಕರೆಂದು ಅರಸೀಕೆರೆ ಸೆಟ್ಟಿಗೊಂಡ ಗೌಡನಿಗೆ ಅರಸೀಕೆರೆ ಗ್ರಾಮದ ಗೌಡಿಕೆಯನ್ನು ಮತ್ತು ಅರಸೀಕೆರೆ ಗ್ರಾಮದ ಕೆರೆಯ ಹಿಂದಿನ ಭಾಗದ ಭೂಮಿಯನ್ನು ಮಾನ್ಯವಾಗಿ ನೀಡಿದ ಸಂಗತಿಯನ್ನು ಈ ಶಾಸನ ತಿಳಿಸುತ್ತದೆ. ಇದು ವಿಜಯನಗರ ಸಾಮ್ರಾಜ್ಯ ಅವಧಿಯಲ್ಲಿ ನಿಡುಗಲ್ಲು ಪಾಳೆಗಾರ ತಿಮ್ಮಣ್ಣ ನಾಯಕನು ಹಾಕಿಸಿದ ಶಾಸನವೆಂದು ತಿಳಿದು ಬರುತ್ತದೆ.

೧೪. ಅರಸೀಕೆರೆ ಗ್ರಾಮದ ಹಂಪೈನ ದುರ್ಗದ ಕೆರೆ ಹಿಂದೆ ರುದ್ರಪ್ಪನ ಜಮೀನಿನಲ್ಲಿರುವ ಶಾಸನ: (ಎ.ಕ.ಸಂ.XII ಪಾವಗಡ, ೩೭, ೧೫೫೬)

ಹನ್ನೊಂದು ಸಾಲುಗಳಿಂದ ಕೂಡಿದೆ. ಕ್ರಿ.ಶ. ೧೫೫೬ರಲ್ಲಿ ರಚಿಸಲಾಗಿದೆ. ಈ ಶಾಸನವು ವಿಜಯನಗರದ ನಿಡುಗಲ್ಲು ಮಾಂಡಳಿಕ ನಾಯಕರಾದ ತಿಮ್ಮಣ್ಣ ನಾಯಕರು ಒಬ್ಬ ಸ್ವಾಮೀಜಿಯವರೆಗೆ ಭೂದಾನ ನೀಡಿದ ಸಂಗತಿ ಹೊಳಗೊಂಡಿದೆ. ಅಲ್ಲಲ್ಲಿ ಅಕ್ಷರಗಳು ಆಳಾಗಿ ಲೋಪಗೊಂಡಿದ್ದು, ಕಾಗುಣಿತದ ದೋಷದಿಂದ ಕೂಡಿದೆ. ಆದ್ದರಿಂದ ಯಾವ ಸ್ವಾಮೀಜಿಗೆ ನೀಡಿದ ಶಾಸನವೆಂದು ತಿಳಿದುಬಂದಿಲ್ಲ.

೧೫. ಕೊಡಿಗೆಹಳ್ಳೀ ಪಟೇಲ ಮುದ್ದರಂಗೇಗೌಡರಲ್ಲಿರುವ ತಾಮ್ರ ಶಾಸನ: (ಎ.ಕ.ಸಂ.XII ಪಾವಗಡ, ೬೦, ೧೭೦೫)

ಕ್ರಿ.ಶ. ೧೭೦೫ರಲ್ಲಿ ರಚನೆಯಾಗಿದೆ. ನಲವತ್ತೈಂದು ಸಾಲುಗಳಿಂದ ಕೂಡಿದೆ. ಈ ಶಾಸನವು ಹಾಡುಭಾಷೆಯಲ್ಲಿದ್ದು ಈ ಶಾಸನದಲ್ಲಿಯೂ ಸಹ ಅಕ್ಷರಗಳು ಹಾಳಾಗಿದ್ದು, ಕಾಗುಣಿತದ ದೋಷ ಹೇರಳವಾಗಿದೆ. ಮುಮ್ಮಡಿ ಹೊಟ್ಟೆಣ್ಣ ನಾಯಕರು ಕೊಡಿಗೆಹಳ್ಳಿ ಕೊಡಿಗೆ ಗೌಡನಿಗೆ ಕೋಡಿಗೆಹಳ್ಳಿಯಲ್ಲಿ ಕೋಟೆ ಕಟ್ಟಿಸಲು ಭೂಮಿಯನ್ನು ಮಾನ್ಯವಾಗಿ ಕೊಟ್ಟಂತಹದಾಗಿದೆ. ಕೋಟೆ ಕಟ್ಟಿಸಿ ಆ ಭೂಮಿಯನ್ನು ಅನುಭವಿಸಿಕೊಂಡು ಹೋಗಬೇಕೆಂದು ಈ ಶಾಸನದಲ್ಲಿ ತಿಳಿದುಬರುತ್ತದೆ.

೧೬. ನಿಡುಗಲ್ಲು ಬೆಟ್ಟದಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿನ ಗಂಟೆಯ ಮೇಲೆ ಇರುವ ಶಾಸನ: (ಎ.ಕ.ಸಂ.XII ಪಾವಗಡ, ೧೧೫)

ಶ್ರೀ ಸಾಮಾನ್ಯರು ಕೂಡ ದೇವರಿಗೆ ಕಾಣಿಕೆ ಸಲ್ಲಿಸುವುದರ ಮೂಲಕ ತಮ್ಮ ಭಕ್ತಿಯನ್ನು ಮೆರೆದಿರುವುದಕ್ಕೆ ಈ ಗಂಟೆಯ ಮೇಲಿನ ಶಾಸನದಿಂದ ಕಂಡುಬರುತ್ತದೆ. ನಿಡುಗಲ್ಲು ದುರ್ಗದ ಪಾರ್ಶ್ವನಾಥಸ್ವಾಮಿ ಬಸದಿಗೆ ಆಂಧ್ರಪ್ರದೇಶ ಗುಡಿಬಂಡೆಯಲ್ಲಿ ವಾಸವಾಗಿರುವ ಪೆನಗೊಂಡೆಯ ಹಂಪಣ್ಣನವರು ಕೊಟ್ಟ ಜಯಗಂಟೆ ಎಂಬುದಾಗಿದೆ. ಇದನ್ನು ಪಾರ್ಶ್ವನಾಥ ಜಿನಾಲಯದಲ್ಲಿ ಇಂದಿಗೂ ಸಹ ಕಾಣಬಹುದಾಗಿದೆ. ಆದರೆ ಯಾವ ಕಾಲಘಟ್ಟದಲ್ಲಿ ನೀಡಲಾಗಿದೆಂದು

ತಿಳಿದುಬಂದಿಲ್ಲ. ಆದರೆ ಪುರಾತನ ಕಾಲದ ಘಂಟೆಯೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಜಿನಾಲಯಕ್ಕೆ ಬಂದ ಭಕ್ತರೆಲ್ಲ ಬಾರಿಸುವ ಸಂಪ್ರದಾಯ ಕಾಣಬಹುದು.

೧೭. ನಿಡುಗಲ್ಲು ಪಾರ್ಶ್ವನಾಥ ಬಸದಿಗೆ ನೀಡಿರುವ ಜಾಗಟೆ ಮೇಲಿನ ಶಾಸನ:

ಜಿನಾಲಯಕ್ಕೆ ನೀಡಿದ ಜಾಗಟೆಯಲ್ಲಿ ಆಂಧ್ರಪ್ರದೇಶದ ರಾಯದುರ್ಗದ ಯುಗಾಪನು ಒಪ್ಪಿಸಿದ ಜಾಗಟೆ ಎಂಬುದಾಗಿ ಈ ಶಾಸನದ ಮೇಲಿದೆ. ಈ ಪಾರ್ಶ್ವನಾಥ ಜಿನಾಲಯಕ್ಕೆ ಜೈನ ಭಕ್ತರು ಆಂಧ್ರಪ್ರದೇಶಗಳಾದ ಅಮರಾಪುರ, ಸಿವುರ, ರಾಯದುರ್ಗ, ಕಲ್ಯಾಣದುರ್ಗ, ಪೆನಗೊಂಡ ಮುಂತಾದ ಸ್ಥಳಗಳಿಂದ ಇಲ್ಲಿಗೆ ಬರುತ್ತಿದ್ದರೆಂದು ಕಂಡು ಬರುತ್ತದೆ. ಇಲ್ಲಿನ ಜಿನ ಬಸದಿಗಳೇ ಇದಕ್ಕೆ ಸಾಕ್ಷಿ. ಆದುದರಿಂದ ನಿಡುಗಲ್ಲಿನಲ್ಲಿ ಹತ್ತು ಹನ್ನೊಂದನೆ ಶತಮಾನದಿಂದಲೇ ಜೈನ ಧರ್ಮ ಪ್ರಚಲಿತದಲ್ಲಿತ್ತು ಎಂಬುದನ್ನು ಕಾಣಬಹುದು.

೧೮. ಹೊಟ್ಟೆಬೊಮ್ಮನಹಳ್ಳಿ ಗ್ರಾಮದ ಊರಿನ ಹೊರಗಡೆ ಇರುವ ಶಿಲಾಶಾಸನ: (ಎ.ಕ.ಸಂ.XII ಪಾವಗಡ, ೬೩)

ಏಳು ಸಾಲುಗಳಿಂದ ಕೂಡಿದ ಶಾಸನದಲ್ಲಿ ಒಂದೆರೆಡು ಅಕ್ಷರಗಳು ಇಲ್ಲದಿರುವುದರಿಂದ ಶಾಸನದ ವಿಷಯ ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಇದು ತಿಮ್ಮಣ್ಣನಾಯಕರ ಆಳ್ವಿಕೆಯ ಕಾಲದಲ್ಲಿ ರಚನೆಯಾದದೆಂದು ಮಾತ್ರ ತಿಳಿದು ಬರುತ್ತದೆ. ಆದರೆ ಕಾಲ, ವಿಷಯಗಳು ಕಂಡುಬರುವುದಿಲ್ಲ. ಆದರೆ ಕೆಲವು ಶಾಸನಕಾರ ವಿದ್ವಾಂಸರ ಪ್ರಕಾರ ಇದೊಂದು ಮಾನ್ಯ ಕೊಟ್ಟ ವಿಚಾರವನ್ನೊಳಗೊಂಡಿದೆ ಎಂಬುದು ತಿಳಿದು ಬರುತ್ತದೆ.

ಶಾಸನದಲ್ಲಿ ಶ್ರೀಮಾನ್ ಮಹಾನಾಯಕಾಚಾರ್ಯ ಭಾಷೆಗೆ ತಪ್ಪದ ನಾಯಕಗಂಡ, ಮರೆಹೊಕ್ಕರೆ ಕಾಯುವ ನಿಡುಗಲ್ಲ ತಿಮ್ಮಣ್ಣ ನಾಯಕರು ಯರಪೆದ್ದಪ್ಪ ಎಂಬುವರಿಗೆ ಕಾಲುವೆಯನ್ನು ಸರ್ವ ಮಾನ್ಯವಾಗಿ ದಾನ ನೀಡಿದರೆಂದು ತಿಳಿಸುತ್ತದೆ. ಮತ್ತು ಇದನ್ನು ಯಾರಾದರೂ ಆಳು ಮಾಡಿದ್ದಲ್ಲಿ ಅವರ ತಂದೆ ತಾಯಿಯರನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಒಳಗಾಗುತ್ತಾರೆಂದು ಈ ಶಾಸನದಲ್ಲಿದೆ.

೧೯. ನಿಡುಗಲ್ಲು ಗ್ರಾಮದ ರಾಮದೇವರ ದೇವಸ್ಥಾನದ ಕೈಸಾಲೆ ಮೇಲುಭಾವಣೆಯಲ್ಲಿರುವ ಶಾಸನ: (ಎ.ಕ.ಸಂ.XII ಪಾವಗಡ, ೫೮)

ಆರು ಚಿಕ್ಕ ಚಿಕ್ಕ ಸಾಲುಗಳಿಂದ ಕೂಡಿರುವ ಈ ಶಾಸನವು ಇದು ಕನ್ನಡದಲ್ಲಿ ಬರೆದಿರುವ ತೆಲುಗು ಶಾಸನ, ನಿಡುಗಲ್ಲಿನಲ್ಲಿರುವ ಈ ಶಾಸನದಲ್ಲಿ ತೆಲುಗಿನಲ್ಲಿ ನಿಡುಗಲ್ಲನ್ನು 'ನಿಡುಗಂಟಿ' ಎಂದು ಕರೆಯಲಾಗಿದೆ. ನಿಡುಗಲ್ಲಿನ ಶಾನುಭೋಗ, ಪುಟ್ಟರಸ ಎಂಬುವರ ಮಗ ಯಲ್ಲಪ್ಪನೆಂಬಾತನು ಮಾಡಿದ ಸೇವೆಯ ಬಗ್ಗೆ ಈ ಶಾಸನ ತಿಳಿಸುತ್ತದೆ.

೨೦. ನಿಡುಗಲ್ಲು ಬೆಟ್ಟದ ದುರ್ಗ ಗುಡಿಯ ಮುಂದೆ ಇರುವ ಗಂಟೆಯ ಮೇಲಿನ ಶಾಸನ:

ಸಾಮಾನ್ಯ ಜನರು ಕೂಡ ತಮ್ಮ ಕೈಲಾದ ಸೇವೆ ಮಾಡುವ ಮೂಲಕ ತಮ್ಮ ಬಾಳನ್ನು ಪುನೀತವಾಗಿಸಿ ಕೊಳ್ಳುತ್ತಿದ್ದರೆಂಬ ಅಂಶವನ್ನು ಈ ಶಾಸನದ ಮೂಲಕ ತಿಳಿಯಬಹುದಾಗಿದೆ.

ಈ ಶಾಸನದಲ್ಲಿ ಯಾವುದೇ ಕಾಲಮಾನ ತಿಳಿದುಬಂದಿಲ್ಲ. ಶ್ರೀ ದುರ್ಗಮ್ಮ ದೇವಾಲಯಕ್ಕೆ ನಿಡುಗಲ್ಲು ದುರ್ಗದ ಓರಗಲ್ಲು ರಾಮಕೃಷ್ಣಯ್ಯ ಎಂಬುವನು ಸೇವೆ ಸಲ್ಲಿಸಿದ್ದು ಎಂಬುದಾಗಿ ಗಂಟೆಯ ಮೇಲಿನ ಬರಹದಿಂದ ತಿಳಿದು ಬರುತ್ತದೆ.

೨೧. ನಿಡುಗಲ್ಲು ಬೆಟ್ಟದ ಕಾಳಹಸ್ತೀಶ್ವರ ದೇವಸ್ಥಾನದ ಎರಡನೆ ಶಾಸನ:

(ಎ.ಕ.ಸಂ.XII ಪಾವಗಡ, ೪೬)

ಅರವತ್ತಾರು ಪಂಕ್ತಿಗಳಿಂದ ಕೂಡಿರುವ ಈ ಶಾಸನ ಕ್ರಿ.ಶ. ೧೬೭೦ರಲ್ಲಿ ರಚಿಸಲಾಗಿದೆ. ಈ ಶಾಸನವು ಹರತಿ ಪಾಳೆಗಾರರ ವಂಶಾವಳಿ ಕಾಳಹಸ್ತೀಶ್ವರ ದೇವಾಲಯವನ್ನು ದುರಸ್ತಿ ಮಾಡಿಸಿದ ಬಗ್ಗೆ ಹಾಗೂ ನಿಡುಗಲ್ಲು ಪ್ರಾಂತ್ಯದ ಚಕಬಂದಿಯನ್ನು ತಿಳಿಸುತ್ತದೆ. ಮತ್ತು ಹೊಟ್ಟೆಣ್ಣ ನಾಯಕರು ಕಳಹಸ್ತೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದನ್ನು ವಿಜಯನಗರದ ಪ್ರಾಂತ್ಯ ವೆಂಕಟಪತಿರಾಯರು ಕಳಿಸಿದ ಪತ್ರದ ಬಗ್ಗೆ ತಿಳಿಸುತ್ತದೆ.

ತಿಮ್ಮಣ್ಣ ನಾಯಕರಿಗೆ ರವಾನಿಸಿ ಪ್ರತಿ ಪೂರ್ವಕ್ಕೆ ನಿಮಗೆ ಸಲ್ಲುವಂಥ ದೊಡ್ಡೇರಿ ಸೀಮೆ. ಸಿರ್ಯಾ(ಶಿರಾ) ತಾವರಕೆರೆ, ಹಿರಿಯೂರು, ಐಮಂಗಲ, ನಿಡುಗಲ್ಲು ಇದಕ್ಕೆ ಸಲ್ಲುವಂಥ ಸೀಮೆ ಸಹ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬಹುದು ಎಂದು ಪತ್ರದಲ್ಲಿ ಆಜ್ಞಾಪಿಸಲಾಗಿದೆ.

ದೊಡ್ಡೇರಿ ಸೀಮೆಗೆ ಪೂರ್ವದಿಕ್ಕಿಗೆ ಜಜೂರು, ಕಾಮಸಮುದ್ರ, ಹಗಲಂಬಲ್ ಮೇಳೆಯೋ ಮೇರೆ, ಪಶ್ಚಿಮ ದಿಕ್ಕಿಗೆ ಗೋಣುರು ಮೇರೆ. ಉತ್ತರ ದಿಕ್ಕಿಗೆ ಬಸವನಹಳ್ಳಿ, ಭೈರವನಹಳ್ಳಿ, ತಿಪ್ಪೆ ಹೊಲಮೇರೆ, ದಕ್ಷಿಣ ದಿಕ್ಕಿಗೆ ಕಣಜದಹಳ್ಳಿ ದಂಬಳದ ಹೊಲ ಮೇರೆ ಎಂದಿದೆ.

ನಿಡುಗಲ್ಲು ಪೂರ್ವ ದಿಕ್ಕಿಗೆ ಪಲ್ಲಹಳ್ಳಿ, ಪಾಗೂಂಡೆ, ಪಶ್ಚಿಮ ದಿಕ್ಕಿಗೆ ಕೇತಗೊಂಡನಹಳ್ಳಿ, ಗೊಲ್ಲನಕುಂಟೆ, ಉತ್ತರ ದಿಕ್ಕಿಗೆ ಪೆನ್ನೋಬನಹಳ್ಳಿ, ಬಳಿಯಣ, ಮುಂಡಬಂಡೆ, ದಕ್ಷಿಣ ದಿಕ್ಕಿಗೆ ಹುಲಿಗೆರೆ ಮೇರೆ ಎಂಬುದಾಗಿ ಮತ್ತು ತಿಮ್ಮಣ್ಣ ನಾಯಕರ ಒಂಭತ್ತು ಜನ ರಾಣಿಯರ ಹೆಸರನ್ನು ತಿಳಿಸುತ್ತದೆ. ಚೆನ್ನಮ್ಮನಾಗತಿ, ನಿಡಮ್ಮನಾಗತಿ, ಓಬಮ್ಮನಾಗತಿ, ಚಿಗಚೆನ್ನಮ್ಮನಾಗತಿ, ಮುದುವೀರಮ್ಮನಾಗತಿ, ಮಲ್ಲಮ್ಮನಾಗತಿ, ಯಲ್ಲವ್ವನಾಗತಿ, ದೊಡ್ಡಮಲ್ಲಮ್ಮನಾಗತಿ, ಚೆನ್ನಮ್ಮನಾಗತಿ ರೆಂದು ಇವರಿಗೆ ಕ್ಷೇಮವಾಗಲೆಂದು ತಿಳಿಸುತ್ತದೆ.

ಹಾಗೆಯೇ ನಿಡುಗಲ್ಲು ಬೆಟ್ಟದ ಶಿಖರದೊಳಗಿರುವ ಶ್ರೀಕಾಳಹಸ್ತೀಶ್ವರ ದೇವಾಲಯವನ್ನು ತಿಮ್ಮಣ್ಣ ನಾಯಕರು ಜೀರ್ಣೋದ್ಧಾರ ಮಾಡಿಸಿದದನ್ನು ಅದೇ ದೇವಸ್ಥಾನದಲ್ಲಿರುವ ಶಾಸನವೊಂದು

ಇದಕ್ಕೂ ಮುಂದೆ ಜೀರ್ಣೋದ್ಧಾರ ಮಾಡಿಸಿದ ವಿಚಾರವನ್ನೊಳಗೊಂಡಿದೆ. ಇದು ಇಡೀ ನಿಡುಗಲ್ಲಿನಲ್ಲಿ ಸಿಕ್ಕಿರುವ ಶಾಸನಗಳೆಲ್ಲಾಲ್ಲ ದೊಡ್ಡ ಶಾಸನವಾಗಿದ್ದು ಪಿತ್ರಾದಿ ಸಮಸ್ತ ಪಿತೃಗಳಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಲೆಂದು ಮಾಡಿಸಿದ ಧರ್ಮ ಶಿಲಾಶಾಸನವೆಂದು ಹೇಳುತ್ತದೆ. ಈ ದೇವಾಲಯದ ನಿತ್ಯ ನೈವೇದ್ಯ, ಪೂಜೆ ಪುರಸ್ಕಾರಗಳಿಗೆ ನ್ಯಾಯದ ಗುಂಟೆ ಹೊಲವನ್ನು ಲಿಂಗಮುದ್ರೆ ಕಲ್ಲನ್ನು ಸ್ಥಾಪಿಸಿ ದತ್ತಿ ಬಿಟ್ಟ ಸಂಗತಿ ತಿಳಿಸುತ್ತದೆ. ನ್ಯಾಯದ ಗುಂಟೆಯ ಆರೋಡಮಲ್ಲೇಶ್ವರ ಕೆರೆ ಹಿಂದೆಗಡೆ ಭೂಮಿಯನ್ನು ಶಾಶ್ವತವಾಗಿ ಈ ಕಾಳಹಸ್ತೇಶ್ವರ ದೇವಾಲಯಕ್ಕೆ ಕೊಟ್ಟಂತೆ ಈ ಶಾಸನದಿಂದ ಕಂಡುಬರುತ್ತದೆ.

ನಿಡುಗಲ್ಲು ಧಾರ್ಮಿಕವಾಗಿ ಒಂದು ಮಹತ್ವದ ಕ್ಷೇತ್ರವಾಗಿದ್ದು, ಇಲ್ಲಿ ಇಂದಿಗೂ ಪೂಜೆಗೊಳ್ಳುತ್ತಿರುವ ದೇವಾಲಯಗಳನ್ನು ಹಾಗೂ ಅಲ್ಲಿ ವಾಸಿಸುತ್ತಿರುವ ವಿವಿಧ ಧರ್ಮದ ಜನರನ್ನು ಪರಿಶೀಲಿಸಿದಾಗ ಹಲವಾರು ಧರ್ಮಗಳ ಆಶ್ರಯ ತಾಣವಾಗಿತ್ತೆಂದು ಕಂಡು ಬರುತ್ತದೆ. ಜೈನ, ಶೈವ, ವೈಷ್ಣವ ದೇವಾಲಯಗಳೊಂದಿಗೆ ಸಪ್ತ ಮಾತೃಕಾ ಆರಾಧನೆಯೂ ಇಲ್ಲಿತ್ತೆಂಬುದು ತಿಳಿಯುತ್ತದೆ. ಈ ಅಂಶ ಅಲ್ಲಿನ ಶಾಸನಗಳನ್ನು ನೋಡಿದಾಗ ನಮಗೆ ಮತ್ತಷ್ಟು ಖಚಿತವಾಗುತ್ತದೆ. ಇಲ್ಲಿ ಆಳಿದ ಅರಸರು ಪಾಲಿಸಿದ ಪಾಳೆಯಗಾರರು, ಸಾಮಂತರು, ಧಾರ್ಮಿಕ ಭಾವನೆಯಿಂದ ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮತ್ತು ಆ ದೇವಾಲಯಗಳ ಪುನರ್‌ದ್ಧಾರ ಮಾಡಿದ್ದಾರೆ. ಅವುಗಳ ನಿರ್ವಹಣೆಗಾಗಿ ಹಲವಾರು ದಾನ, ದತ್ತಿ, ಧರ್ಮಗಳನ್ನು ಬಿಟ್ಟ ವಿಚಾರ ತಿಳಿದುಬರುತ್ತದೆ. ಆದ್ದರಿಂದ ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಲ್ಲಿನ ಶಾಸನಗಳನ್ನು ಅಧ್ಯಯನದ ಉಪಯೋಗದ ದೃಷ್ಟಿಯಿಂದ ಜೈನದಾನ, ಶೈವದಾನ ಮತ್ತು ವೈಷ್ಣವ ದಾನಗಳನ್ನು ನೋಡಬಹುದಾಗಿದೆ.

ಕರ್ನಾಟಕದಲ್ಲಿ ದೊರೆತ ಶಾಸನಗಳಲ್ಲಿ ಅತಿ ಹೆಚ್ಚಿನವು ದಾನ ಶಾಸನಗಳ ಸಂಖ್ಯೆಯೇ ಅಧಿಕವಾಗಿದ್ದು ನನ್ನ ಅಧ್ಯಯನದ ನಿಡುಗಲ್ಲು ಪ್ರದೇಶದಲ್ಲಿಯೂ ಸಹ ದಾನ ಶಾಸನಗಳು ಅಧಿಕವೆಂಬುದು ಹೆಮ್ಮೆಯ ವಿಷಯವಾಗಿದೆ. ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿಯೆನ್ನಬಹುದು. ದೇವಾಲಯಗಳನ್ನು ಕಟ್ಟಿಸುವುದು ಅವುಗಳ ವ್ಯವಸ್ಥೆಗಾಗಿ ಮಠಗಳಿಗಾಗಿ ಮತ್ತು ಮಹಾ ವ್ಯಕ್ತಿಗಳಿಗಾಗಿ ಇಲ್ಲವೆ ಅನ್ನ ಸತ್ರಾದಿ ಧರ್ಮ ಕಾರ್ಯಗಳಿಗಾಗಿ, ಅಗ್ರಹಾರಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ದಾನ ದತ್ತಿಗಳನ್ನು ಕೊಡುವುದು, ಲೌಕಿಕ ಸಂಪತ್ತಿನ ಗಳಿಕೆಯ ಸಾರ್ಥಕತೆ ಎಂದು ಜನ ಭಾವಿಸಿದ್ದರು. ರಾಜಾಧಿರಾಜರಿಂದ ಹಿಡಿದು ಜನ ಸಾಮಾನ್ಯವರೆಗೂ ಈ ಧಾರ್ಮಿಕ ಭಾವನೆ ಜೀವನದ ಸಹಜ ಗುಣವಾಗಿ ಪರಿಣಯಿಸಿತ್ತು. ಅದರ ಫಲವಾಗಿ ಊರುರೂನಲ್ಲಿ ದೇವಾಲಯಗಳ ತಲೆಯೆತ್ತಿದವು. ದಾನ ಧರ್ಮಗಳ ಜೀವನದ ತಳಹದಿಯಾದವು. ಇದನ್ನು ದಾನ ಶಾಸನಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುತ್ತೇವೆ.

ಈ ದಾನ ಶಾಸನವನ್ನು ಸಾಮಾನ್ಯವಾಗಿ ರಾಜನೋ, ಸಾಮಾಂತನೋ ದಂಡಾಧಿಕಾರಿಯೋ, ಇತರ ರಾಜ್ಯಾಧಿಕಾರಿಗಳೋ ಕೊಡುವುದು ವಾಡಿಕೆ. ಆದುದರಿಂದ ದಾನ ಕೊಡುವ ವಸ್ತು, ಸರ್ಕಾರದ ವ್ಯಯದಲ್ಲಿ ಒಂದು ಭಾಗವಾಗಿ ಪರಿಣಮಿಸುತ್ತಿತ್ತು. ಅದಕ್ಕಾಗಿ ಸರ್ಕಾರದಲ್ಲಿ ದಾಖಲೆ ಇಡುವ ಅಗತ್ಯವಿತ್ತು. ಶಾಸನಕ್ಕಿಂತ ಮೊದಲು ಸರ್ಕಾರಿ ಪತ್ರ ಸಿದ್ಧವಾಗುತ್ತಿದ್ದಂತೆ ತೋರುತ್ತದೆ. ಇದಕ್ಕೆ ಶಾಸನಾಧಿಕಾರಿಯೂ ಸಹಿ ಇರುತ್ತದೆ. ತಾವು ಕೊಟ್ಟ ದಾನವು ಶಾಶ್ವತವಾಗಿ ಅಂದರೆ ಶಾಸನಗಳ ಮಾತಿನಲ್ಲಿ ಹೇಳುವುದಾದರೆ 'ಆ ಚಂದ್ರಾರ್ಕಸ್ಥಾಯಿಯಾಗಿರಬೇಕೆಂಬುದು' ದಾನಿಗಳ ಆಶಯವಾಗಿತ್ತು. ಅದಕ್ಕಾಗಿಯೇ ಪತ್ರ ಶಾಸನಗಳಷ್ಟರಿಂದಲೇ ತೃಪ್ತಿಗೊಳ್ಳದೆ ಅವುಗಳನ್ನು ಶಿಲೆಯ ಮೇಲೆ ಕೊರೆಯಿಸಿ ಶಾಶ್ವತವನ್ನಾಗಿ ಮಾಡಿರಬೇಕು.

೩.೧. ಶೈವ ಕಾರ್ತಿಕೇಯ/ಕೊಟ್ಟುತ್ತೊಣೆ ಮತ್ತು ನಿಡುಗಲ್ಲು ಸಂಬಂಧ:

"ಶೈವ ಧರ್ಮವು ಭರತಖಂಡದಲ್ಲಿ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದು. ಶಿವನನ್ನು ಪಶುಪತಿ ಎಂದು ಆರಾಧನೆ ಮಾಡುವುದು ಮಹಾಭಾರತದ ಕಾಲದಿಂದಲೇ ಬಂದಿದೆ. ಪಾಶುಪತ ಸಿದ್ಧಾಂತದಂತೆ ಶಿವನನ್ನು ಪೂಜಿಸುವ ಜನರು ಭಾರತದಲ್ಲಿದ್ದರು ಎಂಬುದಾಗಿ ಚೀನಾ ದೇಶದ ಬೌದ್ಧಯಾತ್ರಿಕ ಹ್ಯೂಯೆನ್‌ತ್ಸಾಂಗ್ ಹೇಳಿದ್ದಾನೆ. ಹಾಗೆಯೇ ಕರ್ನಾಟಕದಲ್ಲಿಯೂ ಸಹ ಈ ಧರ್ಮ ಬಹಳ ಪ್ರಾಚೀನವಾದದ್ದು ಮತ್ತು ಮಹತ್ತರವಾದದ್ದು ಇಲ್ಲಿನ ಜನಜೀವನಕ್ಕೆ ಕೊಡುಗೆಯನ್ನು ನೀಡಿದೆ. ಜೈನಧರ್ಮ ಮತ್ತು ವೈಷ್ಣವ ಧರ್ಮಗಳ ಜೊತೆಗೆ ಆಗಾಗ ಸ್ಪರ್ಧೆಗಳಿಯುತ್ತಲೆ ಬೆಳೆದು ಬಂದ ಈ ಧರ್ಮ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು ರಾಜಧರ್ಮವಾಗಿ ಮೆರೆದಂತಹದು." ೧೦

ನಿಡುಗಲ್ಲಿನಲ್ಲಿ ದೊರೆತಿರುವ ಶಾಸನಗಳನ್ನು ಗಮನಿಸಿದರೆ ಶೈವ ಧರ್ಮಕ್ಕೆ ಸಂಬಂಧಿಸಿದ ಶಾಸನಗಳೇ ಹೆಚ್ಚು. ಅದಕ್ಕೆ ಸಾಕ್ಷಿಯೆಂಬಂತೆ ಈಗಲೂ ಪೂಜೆಗೊಳ್ಳುತ್ತಿರುವ ಸುಮಾರು ೨೦ ದೇವಾಲಯಗಳು ಈ ಬೆಟ್ಟದಲ್ಲಿ ಸುಸ್ಥಿತಿಯಲ್ಲಿವೆ. ಇದನ್ನು ಗಮನಿಸಿದರೆ ಈ ಭಾಗದಲ್ಲಿ ಜೈನ ಮತ್ತು ವೈಷ್ಣವ ಧರ್ಮಕ್ಕಿಂತ ಶೈವ ಧರ್ಮವನ್ನು ಇಲ್ಲಿನ ಪಾಳೆಗಾರರು ಹೆಚ್ಚಿನದಾಗಿ ಅವಲಂಬಿಸಿದ್ದರೆಂದು ಇಲ್ಲಿನ ಶಾಸನಗಳಿಂದ ತಿಳಿಯಬಹುದಾಗಿದೆ. ಜೈನ ಧರ್ಮದ ನಂತರ ಇದರ ಪ್ರಾಬಲ್ಯ ಇನ್ನು ಹೆಚ್ಚಾಯಿತು. ಹೀಗೆ ಅನೇಕ ರಾಜರ ಪಾಳೆಗಾರರು ಇದರ ತತ್ವ ಆದರ್ಶಗಳಿಗೆ ಮನಸೋತು ಮಾರು ಹೋದರು. ಕ್ರಿ.ಶ. ೧೨ನೇ ಶತಮಾನದ ನಂತರವಂತೂ ಉತ್ತುಂಗ ಶಿಖರವನ್ನೇರಿತು. ನಿಡುಗಲ್ಲು ಚನ್ನಪ್ಪ ಮತ್ತು ಬಸವ ಕವಿಯಂತಹ ಶ್ರೇಷ್ಠ ಕವಿಗಳು ಇದೇ ಧರ್ಮಕ್ಕೆ ಸೇರಿದವರಾಗಿದ್ದಾರೆ. ಮತ್ತು ಇವರ ಕೃತಿಗಳಲ್ಲಿಯೂ ಈ ಧರ್ಮವನ್ನು ಅವರು ಬಿತ್ತರಿಸಿದ್ದಾರೆ. ಈ ಎಲ್ಲಾ ಕೊಡುಗೆ ಶೈವ ಧರ್ಮದ್ದೆ ಆಗಿದೆ. ಹಾಗಾಗಿ ದೇವಾಲಯಗಳು ಆ ಕಾಲದ ಧಾರ್ಮಿಕ ಸಂಸ್ಥೆಗಳಾಗಿದ್ದವು ಎಂಬುದರಲ್ಲಿ ಎರಡು ಮಾತಿಲ್ಲ. ಜೊತೆಗೆ ೧೪ನೇ ಶತಮಾನದಲ್ಲಿಯೇ ನಿಡುಗಲ್ಲಿನಲ್ಲಿ ಮಠಗಳಿದ್ದದು ಕಂಡು ಬರುತ್ತದೆ.

ಈ ಮುಂದೆ ಶಾಸನಗಳ ಮುಖಾಂತರ ಶೈವ ಧರ್ಮಕ್ಕೆ ನೀಡಿದ ದಾನ ದತ್ತಿ ಶಾಸನಗಳಲ್ಲಿ ಶೈವ ಧರ್ಮದ ಪ್ರೋತ್ಸಾಹಕರನ್ನು ಕಾಣಬಹುದಾಗಿದೆ. ನಿಡುಗಲ್ಲಿ ದೊರೆತಿರುವ ಶಾಸನಗಳಲ್ಲಿ ಮುಕ್ಕಾಲು ಭಾಗ ಶೈವ ಧರ್ಮಕ್ಕೆ ಸಂಬಂಧಿಸಿದಂತಹವುಗಳಾಗಿವೆ. ಶಾಸನಗಳನ್ನು ಕ್ರಮವಾಗಿ ಗಮನಿಸುತ್ತಾ ಹೋಗಬಹುದಾದರೆ ಹೆಚ್ಚಿನ ದಾನದ ಅಂಶವೆಂದರೆ ದೇವಸ್ಥಾನ ಕಟ್ಟಿಸಿರುವುದು ಅವುಗಳಿಗೆ ಅಂಗಭೋಗ, ರಂಗಭೋಗ, ಜೀರ್ಣೋದ್ಧಾರ, ನಿತ್ಯ ನೈವೇದ್ಯ, ಪೂಜೆ ಪುರಾಸ್ಕಾರಗಳಿಗೂ ಅನೇಕ ದಾನ ಧರ್ಮ ದತ್ತಿಗಳನ್ನು ಮಾನ್ಯಗಳನ್ನು ಕೊಟ್ಟು ಆ ಧರ್ಮದ ಬೆಳವಣಿಗೆ ಮತ್ತು ಪ್ರಚಾರಕ್ಕೆ ದುಡಿದ ವಿಚಾರಗಳನ್ನು ಶಾಸನಗಳ ಮೂಲಕ ಶಾಶ್ವತಗೊಳಿಸಿರುವುದನ್ನು ಕಾಣಬಹುದು. ಈ ಅಧ್ಯಯನದ ವ್ಯಾಪ್ತಿಯಲ್ಲಿ ಸುಮಾರು ೭೦ ಶೈವ ದಾನ ಶಾಸನಗಳನ್ನು ಈ ಮುಂದೆ ಕಾಣಬಹುದು. ಅದರಲ್ಲಿ ಮುಖ್ಯವಾದವುಗಳನ್ನು ಗಮನಿಸಬಹುದು.

ನಿಡುಗಲ್ಲುನ ಕ್ರಿ.ಶ. ೧೧೫೦ರ ಶಾಸನದಲ್ಲಿ ಉಲ್ಲೇಖ ಇರುವಂತೆ ಚಾಲುಕ್ಯ ಜಗದೇಕ ಮಲ್ಲನು ಹೆಂಜೇರಿನ ನೆಲೆವೀಡಿನಲ್ಲಿ ಆಳುತ್ತಿರುತ್ತಾನೆ. ಆ ಸಮಯದಲ್ಲಿ ಅವನ ಮಂತ್ರ ಬೊಮ್ಮಣ್ಣನು 'ನಾಮಣ್ಣ' ಎಂಬುವವನನ್ನೇ ನಿಡುಗಲ್ಲು ಕಾಯಲು ನೀನೇ ಯೋಗ್ಯನಾದವನೆಂದು ತಂತ್ರ ಪಾಲಕನನ್ನಾಗಿ ನೇಮಿಸಿ ನಿಡುಗಲ್ಲನ್ನು ಅವನಿಗೆ ಒಪ್ಪಿಸುತ್ತಾನೆ. ತದನಂತರ ಈ ತಂತ್ರಪಾಲನು ಶಿವ ದೇವಾಲಯವಾದ ದುರ್ಗದ ಶ್ರೀನಾಗೇಶ್ವರ ದೇವರ ನೈವೇದ್ಯಕ್ಕೆ, ನಂದಾದೀವಿಗೆಗೆ, ಅಂಗಭೋಗಕ್ಕೆ, ಪಾತ್ರ ದಾವುತಾಳಕ್ಕೆ, ಬ್ರಾಹ್ಮಣರಿಗೆ, ತಪೋನಿರತರಿಗೆ, ಚೈತ್ರ ಪವಿತ್ರಕ್ಕೆ ಉತ್ತಾರಾಯಣ ಸಂಕ್ರಮಣಕ್ಕಾಗಿ ಮತ್ತೊತ್ತೂರಿನ ಮೂಡಣಕ್ಕೆ ನಾಗಸಮುದ್ರ ಎನ್ನುವ ಕನ್ನಗೆರೆ ಅಥವಾ ಕೆಂಕೆರೆ ಎಂಬ ಕೆರೆಯನ್ನು ಕಟ್ಟಿಸಿ ನಾಗೇಶ್ವರ ದೇವಸ್ಥಾನದಲ್ಲಿದ್ದ ಚಂದ್ರಾಭರಣ ಪಂಡಿತರ ಕಾಲು ತೊಳೆದು ಸರ್ವರ ಎದುರಿಗೆ ದತ್ತಿ ಬಿಡುತ್ತಾನೆ. ಅದರ ಜೊತೆಗೆ ನಿಡುಗಲ್ಲು ಕೋಟೆಯೊಳಗಿನ ತಿಪ್ಪೆಂಸುಂಕ, ಗಾನ ೧೦೦, ಅಡಕೆ, ಮೆಣಸು, ಹೇರಿಂಗೆ ಭತ್ತ ೧ ಬಳದಾನ ಬಿಟ್ಟು ವಿಚಾರವನ್ನು ಸಹ ತಿಳಿಸುತ್ತದೆ. ಒಬ್ಬ ತಂತ್ರಪಾಲನು ಸಹ ಸ್ವತಂತ್ರವಾಗಿ ದಾನ ಕೊಡುವ ಅಧಿಕಾರವನ್ನು ಹೊಂದಿದ್ದನೆಂಬುದಕ್ಕೆ ಇದು ಉತ್ತದಾನ ಉದಾಹರಣೆಯಾಗಿದೆ.

ನಿಡುಗಲ್ಲಿಗೆ ಸುಮಾರು ಐದು ಕಿ.ಮೀ. ದೂರದಲ್ಲಿರುವ ಅರಸೀಕೆರೆಯ ಶಾಸನವೊಂದರಲ್ಲಿ ಮಲ್ಲಿದೇವ ಚೋಳ ಮಹಾರಾಜರ ಕಾಲದಲ್ಲಿ ಎರಡನೆ ಲಕ್ಷ್ಮಿ ಎನಿಸಿಕೊಂಡ ಶ್ರೀ ಪ್ರಿಯಅರಸಿ ಪಟ್ಟ ಮಹಾದೇವಿ ಲಕ್ಷ್ಮಾದೇವಿಯವರು ಅರಸಿ ಕೆರೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವರಿಗೆ ಮತ್ತು ಮಂಗೇಶ್ವರ ದೇವರಿಗೆ ನಿತ್ಯ ನೈವೇದ್ಯಕ್ಕೆ 'ಗದೆ ಖಲ್ ೫, ಎರಡೆಕೆರೆ ತೋಟ, ಒಂದು ಗಾಣವನ್ನು ಆ ಊರಿನ ಪಂಡಿತ ಪ್ರಧಾನರು ಮತ್ತು ಹೆಗ್ಗಡೆಯವರ ಮುಂದೆ ಧಾರಕ ಪೂರ್ವಕವಾಗಿ ಮಾಡಿಕೊಟ್ಟ ದತ್ತಿ' ಎಂದು ಹೇಳುವುದರ ಮುಖಾಂತರ ಹೆಣ್ಣಿನ ಸ್ವಾತಂತ್ರ್ಯ ಹಾಗೂ ಸ್ಥಾನಮಾನವನ್ನು ತಿಳಿಸುತ್ತದೆ.

ನಿಡುಗಲ್ಲಿನ ವ್ಯಾಪಾರಿಗಾದ ವೈಶ್ಯರು ಸಹ ತಮ್ಮ ದುಡಿಮೆಯ ಲಾಭಾಂಶದಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿದ್ದರೆಂಬುದಕ್ಕೆ ಇಲ್ಲಿ ಉದಾಹರಣೆಗಳಿವೆ ಅದಕ್ಕೆ ಸಾಕ್ಷಿಯೆನ್ನುವಂತೆ ನಾನಾ ದೇಶದಲ್ಲಿ ಚದುರಿದ್ದ ವೈಶ್ಯರೆಲ್ಲ ಒಂದೆಡೆ ಸೇರಿ ಶ್ರೀನಗರೇಶ್ವರ ದೇವಾಲಯವನ್ನು ನಿರ್ಮಿಸಿದ ಅದರ ಪೂಜೆ ಪುನಸ್ಕಾರಗಳಿಗೆ ಮುಂತಾದ ಕಾರಣಗಳಿಗಾಗಿ ವಿವಿಧ ದಾನಗಳನ್ನು ಕೊಟ್ಟು ಯಾವ ಯಾವ ಕೆಲಸಕ್ಕೆ ಎಷ್ಟು ದಾನ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ. ಅಷ್ಟೆ ಅಲ್ಲದೆ ದುರ್ಗದ ಬೇರೆ ಬೇರೆ ದೇವಾಯಲಗಳಿಗೂ ಸಹ ದತ್ತಿ ಕೊಟ್ಟಂತೆ ಈ ಶಾಸನದಿಂದ ತಿಳಿಯುತ್ತದೆ. ಹಾಗೆಯೇ ಆ ಕಾಲದ ನಿತ್ಯ ಜನ ಜೀವನದಲ್ಲಿ ಬಳಸುತ್ತಿದ್ದ ಜೀರಿಗೆ, ಮೆಂತ್ಯ, ಗೋಧಿ, ಮೆಣಸು, ಸಕ್ಕರೆ ಮುಂತಾದ ಹೊಸ ವಿಚಾರಗಳ ಮೇಲೆಯೂ ಈ ಶಾಸನ ಬೆಳಕು ಚೆಲ್ಲುತ್ತದೆ.

ಪೌರಾಣಿಕ ವೀರರ ಹೆಸರಿನಲ್ಲಿ ದೇವಾಲಯಗಳನ್ನು ಕಟ್ಟುವುದು ಹೆಚ್ಚು ಆದರೆ ನಿಡುಗಲ್ಲಿನ ಚಿಕ್ಕ ತಿಪ್ಪರಾಜನು ತನ್ನ ಪಟ್ಟದ ಅರಸಿ ಶ್ರೀಲಕ್ಷ್ಮಾದೇವಿಯು ಮರಣಿಸಿದಾಗ ಅವಳ ಹೆಸರಿನಲ್ಲಿ ಲಕ್ಷ್ಮಣೇಶ್ವರ ದೇವಾಲಯವನ್ನು ನಿರ್ಮಿಸುತ್ತಾನೆ. ಅಲ್ಲದೆ ದುರ್ಗದ ತೆಂಕಣಕ್ಕೆ ಲಕ್ಷ್ಮಾದೇವಿ ಕೆರೆಯನು ಕಟ್ಟಿಸಿ ಅವೆರಡನ್ನು ಬ್ರಾಹ್ಮಣರ ಅಗ್ರಹಾರವಾಗಿ ಮಾಡಿ ಕೊಡುತ್ತಾನೆ. ಹಾಗೆಯೇ ಜಕ್ಕನಾಯಕನೆಂಬುವವನು ತನ್ನ ಶಾಸನವನ್ನು ಅಶೋಕನಂತೆ ಧರ್ಮ ಶಾಸನವೆಂದು ಹೇಳಿಕೊಳ್ಳುತ್ತಾನೆ. ನಿಡುಗಲ್ಲಿನ ವೀರಭದ್ರ ದೇವರಿಗೆ ತನ್ನ ನಾಯಕತ್ವಕ್ಕೆ ಸಲ್ಲುವ ಗೊಲ್ಲನಕುಂಟೆ ವ್ಯಾಪ್ತಿಗೆ ಬರುವ ಕಾಡು, ನೀರು ಮತ್ತು ಚತುಸ್ಸೀಮೇ ಒಳಗಿನ ನಿಧಿ, ನಿಕ್ಷೇಪ, ಜಲ, ಪಾಷಣ, ಅಕ್ಷೀಣಿ, ಆಗಾಮಿ, ಸಿದ್ದ, ಸಾಧ್ಯ ಎನ್ನುವ ಅಷ್ಟಭೋಗಗಳನ್ನು ಆ ದೇವರ ನೈವೇದ್ಯ, ದೀಪಾರಧನೆ, ಅಂಗರಂಗ, ವೈಭೋಗಕ್ಕೆಂದು ಧಾರಪೂರ್ವಕವಾಗಿ ಕೊಟ್ಟಂತೆ ತಿಳಿಸುತ್ತದೆ. ಅರ್ಥಾತ್ ಇಡೀ ಸೀಮೆಯೇ ದೇವಸ್ಥಾನಕ್ಕೆ ಸೇರಿದುದ್ದಾಗಿಯೂ ಆ ಸೀಮೆ ದೇವಸ್ಥಾನದ ಅಧೀನದಲ್ಲಿಯೇ ಅದರ ನಿಯಮಾನುಸಾರ ಇರಬೇಕೆಂದು ಸೂಚಿಸುತ್ತದೆ.

ಹೀಗೆ ಹಲವಾರು ಶಾಸನಗಳ ಮೂಲಕ ಶೈವ ಧರ್ಮಕ್ಕೆ ರಾಜರು, ಸಾಮಂತರುಗಳು, ಶ್ರೀ ಸಾಮಾನ್ಯರು ಹಲವಾರು ದಾನ ದತ್ತಿಗಳನ್ನು ನೀಡಿ ನಿಡುಗಲ್ಲಿನ ಶೈವ ಧರ್ಮದ ಹೇಳಿಗೆಗೆ ಧರ್ಮ ಘೋಷಣೆಗೆ ಕಾರಣವಾಗಿದ್ದಾರೆಂಬುದು ಶಾಸನಗಳ ಹಿನ್ನೆಲೆಯಲ್ಲಿ ಮನಗಾಣಬಹುದು. ಹನ್ನೆರಡನೇ ಶತಮಾನದ ಮತ್ತು ತದನಂತರದ ಶೈವ ಧರ್ಮವು ತನ್ನ ಔನತ್ಯವನ್ನು ಮೆರೆಯಿತು. ಇದಕ್ಕೆ ಕಾರಣ ಆ ಕಾಲಮಾನದಲ್ಲಿ ನಡೆದ ಬಸವಣ್ಣನವರ ನೇತೃತ್ವದ ಕಲ್ಯಾಣ ಕ್ರಾಂತಿಯೆಂದೇ ಹೇಳಬೇಕು. ಅದು ವರ್ಣಾತೀತವಾಗಿದ್ದರಿಂದ ಮತ್ತು ಜಾತ್ಯಾತೀತವಾದದ್ದರಿಂದ ಅಷ್ಟು ವೈಶಾಲ್ಯತೆ ಪಡೆದುಕೊಳ್ಳಲು ಸಾಧ್ಯವಾಯಿತು. ಹಾಗಾಗಿ ಅದು ನಿಡುಗಲ್ಲಿಗೂ ಪ್ರವೇಶ ಮಾಡಿ ರಾಜ ಧರ್ಮವಾಯಿತು. ಎನ್ನಬಹುದು. ಆ ನಿಟ್ಟಿನಲ್ಲಿ ಶೈವ ಧರ್ಮ ನಿಡುಗಲ್ಲ ರಾಜ್ಯ ಅಥವಾ ಪಾಳೆಯ ಪಟ್ಟಿಗೆ ತನ್ನದೆ ಆದ ಕೊಡುಗೆಯನ್ನು ನೀಡಿದೆ ಎಂದು ಮೇಲೆ ನೀಡಿದ ಶಾಸನದ ಉಲ್ಲೇಖಗಳಿಂದ ತಿಳಿಯಬಹುದು.

ಕೊಟ್ಟುತ್ತೊಣೆ ಮತ್ತು ನಿಡುಗಲ್ಲು ಸಂಬಂಧ ಧಾರ್ಮಿಕ ಕ್ಷೇತ್ರದಲ್ಲಿ ಇದ್ದಂತಹ ಕೆಲವು ವಿವರಗಳನ್ನು ನೋಡಬಹುದು. ಇಲ್ಲಿ ಪುರಾಣದ ಕೆಲವು ಐತಿಹ್ಯ ಮತ್ತು ದಾನ ನೀಡಿದ ಸಂದರ್ಭದಲ್ಲಿ ಬಿಟ್ಟಂತಹ ಸುಂಕ, ತೆರಿಗೆಗಳು, ಶೈವ ದೇವಾಲಯಗಳ ರೂಪ ಆಕರಗಳನ್ನು ಶಾಸನದ ಆಧಾರಗಳಿಂದ ಇನ್ನೂ ಕೆಲವು ಜನಪದ ಸಾಹಿತ್ಯದಿಂದ ಮನಗಾಣಬಹುದು. ನಿಡುಗಲ್ಲನ್ನು ಆಳಿದ ಮಾಂಡಲಿಕರು, ಪಾಳೆಗಾರರು, ವಿಜಯನಗರ ಸಾಮ್ರಾಜ್ಯದ ಮಹಾರಾಜರ ಅಧೀನಕ್ಕೊಳಪಟ್ಟಿದ್ದಾಗಿದ್ದು ಕೆಲವು ರೂಪ ಶೈಲಿಗಳು ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನಗಳು ಒಂದೇ ರೀತಿಯಾಗಿರುವುದು ಕಂಡುಬರುತ್ತದೆ.

ನಿಡುಗಲ್ಲು ಜೈನ ಧರ್ಮದ ಪೋಷಣೆ, ಪ್ರೋತ್ಸಾಹ ಚೋಳರ ಕಾಲದಲ್ಲಿ ಉತ್ತಮ ಸ್ಥಿತಿಯಲ್ಲಿದ್ದು ಒಂದುವರೆ ಶತಮಾನದಕ್ಕೂ ಕಾಲವಧಿಯಲ್ಲಿ ಇದ್ದದನ್ನು ಕಾಣಬಹುದು. ನಿಡುಗಲ್ಲಿನ ಪಕ್ಕದ ಆಂಧ್ರಪ್ರದೇಶದ ಸ್ಥಳಗಳನ್ನು ಗಮನಿಸಿದಾಗ ಅಲ್ಲಿನ ಜೀನಾಲಯ ಬಸದಿಗಳು, ನಿಷಿಧಿ ಕಲ್ಲುಗಳು, ಶಾಸನಗಳ ಅವಲೋಕನದಿಂದ ಕಂಡು ಬರುತ್ತದೆ. ತದನಂತರ ಈ ಎರಡು ಪ್ರದೇಶಗಳಲ್ಲಿ ಜೈನ ಧರ್ಮ ಕುಂಟಿತಗೊಂಡಿರುವುದು ಕಂಡು ಬಂದಿದೆ. ಈ ಅವಧಿಯಲ್ಲಿ ಜೈನ ಧರ್ಮ ಕಾರ್ತಿಕ ಆಚರಣೆಗೆ ಇಂಬುಕೊಟ್ಟಿದ್ದು ಇನ್ನೊಂದು ಕಡೆ ರಾಜ ವೈಭವದಿಂದ ವಂಚಿತವಾಗಿ ಸಾಕಷ್ಟು ಏಳು ಬಿಳುಗಳಿಗೆ ತುತ್ತಾಯಿತು. ಇದರ ಪ್ರಭಾವ ಜೈನ ಮುನಿಗಳ ಮೇಲೂ ಹಾಗಿರಲುಬಹುದು.

ಇಲ್ಲಿನ ಶೈವ ಧರ್ಮದ ಆಚರಣೆ ಪರಂಪರೆ, ಧಾರ್ಮಿಕ ವೃತ್ತಿಗಳನ್ನು ಗಮನಿಸಿದಾಗ ಶೈವ ಧರ್ಮದ ಪರಿಪಾಲಕರು ಎಂಬುದಾಗಿ ಕರೆಯಲಾಗುತ್ತಿದ್ದಂತಹ ಸ್ಥಾನಾಚಾರ್ಯರು ಇವರನ್ನು ನಿಡುಗಲ್ಲಿನ ಕೆಲವು ಶೈವ ದೇವಾಲಯಗಳ ನಿರ್ವಹಣೆ ಮತ್ತು ಮಠಮಾನ್ಯಗಳ ನಿರ್ವಹಣೆಗಾಗಿ ನೇಮಿಸುತ್ತಿದ್ದರು. ಇಲ್ಲಿಯು ಸಹ ಕಾರ್ತಿಕೆಯ ತಪೋವನದಲ್ಲಿ ಇವರು ಮುಖ್ಯವಾಗಿ ಕಂಡು ಬರುತ್ತಾರೆ. ಇವರು ಪಾಶುಪತಿ-ಕಾಳಮುಖ ಪಂಥಕ್ಕೆ ಸೇರಿದ ದೇವಸ್ಥಾನ ಇಲ್ಲವೆ ಮಠದ ಆಚಾರ್ಯರೆ ಈ ಸ್ಥಾನಪತಿಗಳು ಇವರು ರಾಜಪ್ರಭುತ್ವ ಮತ್ತು ಸಮಾಜದ ಗೌರವದಿಂದ ತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸಿದರು. ಇವರಲ್ಲಿ ಕೆಲವರು ಲಾಕುಳಾಗಮ ಸಮಯ ಸಮುದ್ಧರಣಿರೆಂದು ಇನ್ನೂ ಕೆಲವರು ಕಾಳಾಮುಖ ಸಮಯ ಸಮುದ್ದರಣರೆಂದು ಕರೆದುಕೊಂಡಿದ್ದಾರೆ. ಸ್ಥಾನಾಚಾರ್ಯರು ದೇವಾಲಯ ಪೂಜೆ, ಪುರಸ್ಕಾರ ಪರ್ವ ಪವಿತ್ರಗಳೊಂದಿಗೆ ಅಲ್ಲಿರುವ ತಪೋದನರ, ಛತ್ರದ ವಸತಿ, ಊಟೋಪಾಚಾರದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಸ್ಥಾನಚಾರ್ಯರ ಒಪ್ಪಿಗೆ ಇಲ್ಲದೆ ದೇವಾಲಯದ ಯಾವುದೇ ಚಟುವಟಿಕೆಗಳು ನಡೆಯುತ್ತಿರಲಿಲ್ಲ. ದಾನ, ದತ್ತಿ, ಧಾರ್ಮಿಕ ಕಾರ್ಯ, ಸ್ತಾನಚಾರ್ಯರ ಪಾದಪೂಜೆಯಿಂದಲೇ ನಡೆಯುತ್ತಿದ್ದವು. ಈ ಪ್ರದೇಶದಲ್ಲಿ ಪರ್ವತದ ಕಾರ್ತಿಕೇಯ ತಪೋವನ ಮತ್ತು ನಿಡುಗಲ್ಲು ಪ್ರದೇಶಗಳಲ್ಲಿ ನಡೆಯುತ್ತಿದ್ದವು ಎಂಬುದನ್ನು ಗಮನಹರಿಸುಬಹುದಾಗಿದೆ. ಇವರು ವ್ಯಾಕರಣ, ತರ್ಕಸಿದ್ಧಾಂತ, ಕಾವ್ಯ, ನಾಟಕ, ಪುರಾಣ, ಇತಿಹಾಸ, ಮೀಮಾಂಸೆ, ನೀತಿಶಾಸ್ತ್ರಗಳನ್ನು

ಬಲ್ಲವರಾಗಿದ್ದರು. ಕೆಲವರು ಆಡಳಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದುಂಟು. ಹೀಗೆ ಕೊಟ್ಟುತೊಣೆ ಮತ್ತು ನಿಡುಗಲ್ಲುಗಳಲ್ಲಿ ಸ್ತಾನಾಚಾರ್ಯರು ದೇವಾಲಯಗಳಲ್ಲಿ, ಮಠಗಳಲ್ಲಿ ಕಾರ್ಯನಿರ್ವಹಿಸುತ್ತ ಶೈವ ಧರ್ಮದ ಹೇಳಿಗೆಗೆ ಕಾರಣಕರ್ತರಾಗಿದ್ದು, ಇಲ್ಲಿನ ಸಾಮಂತ ಅರಸರು, ಪಾಳೆಗಾರರ ಆಡಳಿತದ ಸಂದರ್ಭದಲ್ಲಿ ಮುಖ್ಯ ವ್ಯಕ್ತಿಗಳಾಗಿ ಬಂದಿರುವುದು ತೋರುತ್ತದೆ.

ಕುಡುತನಿ ಮತ್ತು ಸಂಡೂರು ಪ್ರದೇಶವು ಕಾರ್ತಿಕೇಯ ಕ್ಷೇತ್ರವೆಂದು ಕರೆಯಲಾಗುತ್ತದೆ. ಸ್ಥಳ ಪುರಾಣದ ಉಲ್ಲೇಖದಂತೆ ಈ ಪರ್ವತಕ್ಕೆ ಕೃತಯುಗದಲ್ಲಿ ದೇವಗಿರಿ ಎಂದೂ ತ್ರೇತ್ರಾಯುಗದಲ್ಲಿ ಸ್ವರ್ಣಗಿರಿ ಎಂದು ದ್ವಾಪರಯುಗದಲ್ಲಿ ದಿವ್ಯಾಚಲವೆಂದು ಕಲಿಯುಗದಲ್ಲಿ ಲೋಹಚಲವೆಂದು ಕರೆಯಲಾಗುತ್ತಿತ್ತು. ಇಲ್ಲಿ ಮುಖ್ಯವಾಗಿ ತಾರಾಕಾದಿ ಅಸುರರ ಸಂಹಾರಕ್ಕಾಗಿ ಸ್ವಾಮಿ ಕಾರ್ತಿಕೇಯನು ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥನೆ ಮಾಡಿಸಿಕೊಂಡು ದೇವಸೇನಾಧಿಪತ್ಯವನ್ನು ವಹಿಸಿ ಬಂದು ನೆಲೆನಿಂತನೆಂಬ ಪ್ರತೀತಿ ಇದೆ. ರಾಮಾಯಣ ಕಾಲದಲ್ಲಿ ಶ್ರೀರಾಮ, ಮಹಾಭಾರತದಲ್ಲಿ ಕಾಲದಲ್ಲಿ ಪಾಂಡವರು ಮತ್ತು ಅಗಸ್ತ್ಯಋಷಿ ಮೊದಲಾದವರು ಈ ಸ್ಥಳಕ್ಕೆ ಭೇಟಿ ನೀಡದ್ದರೆಂಬ ನಂಬಿಕೆ ಇದೆ. ಕಾರ್ತಿಕೇಯ ದೇವಾಲಯದ ಮುಂಭಾಗದಲ್ಲಿರುವ ಪಂಚಲಿಂಗಳನ್ನು ಪಂಚಪಾಂಡವರಿಂದ ಸ್ಥಾಪಿಸಲ್ಪಟ್ಟವೆಂಬುದಾಗಿ ಮತ್ತು ಭೀಮತೀರ್ಥ ಭೀಮನ ಗದೆಯಿಂದ ಉಂಟಾದುದು ಎಂಬ ಹೇಳಿಕೆ ಇದೆ. ಕಾರ್ತಿಕೇಯ ಸನ್ನಿಧಾನಕ್ಕೆ ಇರುವಂತೆ ನಿಡುಗಲ್ಲಿಗೂ ಸಹ ಅನೇಕ ಪುರಾಣ ಐತಿಹ್ಯಗಳನ್ನು ಕಾಣಬಹುದಾಗಿದೆ. ನಿಡುಗಲ್ಲು ದುರ್ಗದಲ್ಲಿ ಈಗಲೂ ಸುಸ್ಥಿತಿಯಲ್ಲಿರುವ ಕಾಳಹಸ್ತಿಶ್ವರ ದೇವಾಲಯವಿದೆ. ಅದರಲ್ಲಿನ ಶಿವಲಿಂಗವನ್ನು ಸ್ವತಃ ಶ್ರೀರಾಮನೇ ತ್ರೇತಾಯುಗದಲ್ಲಿ ಪ್ರತಿಷ್ಠಾಪಿಸಿದನೆಂಬುದಕ್ಕೆ ಇಲ್ಲಿನ ಜನರು ಒಂದು ಕಥೆಯನ್ನು ಹೇಳುತ್ತಾರೆ. ಆದರೆ ಆ ದೇವಸ್ಥಾನವನ್ನು ಇತ್ತೀಚೆಗೆ ಅಂದರೆ ಕ್ರಿ.ಶ. ೧೫ನೆ ಶತಮಾನದಲ್ಲಿ ಕಟ್ಟಿರುವುದಾಗಿ ಅದರಲ್ಲಿರುವ ಶಾಸನವೊಂದು ತಿಳಿಸುತ್ತದೆ.

ವನವಾಸದಲ್ಲಿ ಸೀತೆಯು ರಾವಣನ ಕಪಟ ಮೋಸದಿಂದ ಶ್ರೀರಾಮನಿಂದ ದೂರವಾಗುತ್ತಾಳೆ. ಆ ಸಂದರ್ಭದಲ್ಲಿ ಸೀತೆಯನ್ನು ಕಳೆದುಕೊಂಡ ಶ್ರೀರಾಮನು ತಮ್ಮನಾದ ಲಕ್ಷ್ಮಣನ ಸಮೇತ ಅಯೋನಿಜೆಯನ್ನರಸುತ್ತಾ ನೀಲಾವತಿ ಪರ್ವತ ಶ್ರೇಣಿಗೆ ಬರುತ್ತಾನೆ. ಅಂದರೆ ಈಗಿನ ನಿಡುಗಲ್ಲು ದುರ್ಗಕ್ಕೆ ಬಂದು ಸೀತೆಯನ್ನು ಕಾಣದೆ ಕಂಗಾಲಾಗಿ ಆ ಪ್ರದೇಶದ ಶಾಂತಿ ಮತ್ತು ತಪೋಭೂಮಿಗೆ ಮಾರುಹೋಗಿ ಅಲ್ಲಿಯೇ ಸ್ವಲ್ಪ ಕಾಲ ವಿಶ್ರಮಿಸಿ ಸೀತಾನ್ವೇಷಣೆಯ ಸಫಲತೆಗಾಗಿ ಶಿವಲಿಂಗವೊಂದನ್ನು ಬೆಟ್ಟದ ಶಿಖರದಲ್ಲಿ ಸ್ಥಾಪಿಸಿ ಭಕ್ತಿ ಭಾವಗಳಿಂದ ಪೂಜಿಸಿದಾಗ ಶ್ರೀರಾಮಚಂದ್ರನಿಗೆ ದಕ್ಷಿಣದ ಕಡೆಗೆ ಪ್ರಯಾಣ ಮಾಡುವ ಸೂಚನೆಗಳು ಲಭಿಸಿದವಂತೆ ಮಾರನೇ ದಿನ ಸ್ನಾನ ವಂದನೆಗಳನ್ನು ಮುಗಿಸಿಕೊಂಡು ಪಾವಗಡ ತಾಲೂಕಿನ ಕಾಮನ ಬೆಟ್ಟದ ಮಾರ್ಗವಾಗಿ ತಿರುಮಣಿ ಕ್ಷೇತ್ರದ ಕಡೆ ಪ್ರಯಾಣ ಮಾಡಿದಂತೆ ತಿಳಿಯುತ್ತದೆ.

ಹಾಗಾಗಿ ಆ ದಿನ ಶ್ರೀರಾಮಚಂದ್ರನು ಸ್ನಾನ ಮಾಡಿದ ಸ್ಥಳ ಮತ್ತು ಕೊಳಕ್ಕೆ 'ಶ್ರೀರಾಮ ತೀರ್ಥ'ವೆಂದು, ಲಕ್ಷ್ಮಣನೂ ಸ್ನಾನಮಾಡಿದ ಸ್ಥಳಕ್ಕೆ ಲಕ್ಷ್ಮಣ ತೀರ್ಥವೆಂದೂ ಇಂದಿಗೂ ಹೆಸರುಂಟು. ಮತ್ತು ಅವುಗಳಿಗೆ ವಿಶೇಷವಾದ ಪೂಜ್ಯಭಾವನೆಯನ್ನು ಜನ ಕೊಡುತ್ತಿದ್ದಾರೆ. ಪವಿತ್ರ ಸ್ಥಳವೆಂದು ಆ ನೀರಿನಲ್ಲಿ ಸ್ನಾನ ಮಾಡುವುದರಿಂದ ಆ ನೀರನ್ನು ಕುಡಿಯುವುದರಿಂದ ತಮ್ಮ ಅನಿಸಿಕೆಗಳು ಹಿಡೇರುತ್ತವೆ. ಹಾಗೂ ಮಾಡಿದ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. ಸ್ತ್ರೀಯರು ಈ ಕಲ್ಯಾಣಿಗಳಲ್ಲಿ ಇಳಿಯುವಂತಿಲ್ಲ, ರಾಮತೀರ್ಥದ ದಡದಲ್ಲಿ ಒಂದು ರಾಮಲಿಂಗೇಶ್ವರ ದೇವಾಲಯವಿದೆ. ಬಹುಶಃ ಇಲ್ಲಿಯೇ ಶ್ರೀರಾಮ ಶಿವಲಿಂಗವನ್ನು ಸ್ಥಾಪಿಸಿರಬಹುದು. ಮುಂದೆ ಆಂಧ್ರ ಪ್ರದೇಶದ ಲೇಪಾಕ್ಷಿ ಮಾರ್ಗವಾಗಿ ಹೋಗುವಾಗ ಅಲ್ಲಿ 'ಜಟಾಯು' ಪಕ್ಷಿ ರೆಕ್ಕೆ ಕತ್ತರಿಸಿ ಬಿದ್ದಿದನ್ನು ಕಂಡು ಅದರ ಹೇಳಿಕೆ ಮೇರೆಗೆ ರಾಮ ಲಕ್ಷ್ಮಣರು ಸೀತಾನ್ವೇಷಣೆಯಲ್ಲಿ ತೊಡಗುತ್ತಾರೆ ಎನ್ನುವುದು ಕಥಾ ಸಾರಂಶವಾಗಿದೆ. ಈ ಕಥಾ ಸ್ವರಾಸ್ಯವೋ ಹಾಗೆಯೇ ಈ ನಿಡುಗಲ್ಲು ದುರ್ಗಾ ಸಹಾ ಎಷ್ಟು ಪವಿತ್ರವಾದುದು, ಪುರಾತನವಾದುದು ಎಂಬುದು ಇದರಿಂದ ತಿಳಿದು ಬರುತ್ತದೆ.

ನಿಡುಗಲ್ಲಿಗೆ ಶ್ರೀರಾಮ ಮತ್ತು ಲಕ್ಷ್ಮಣ ಸೀತೆ ಇವರು ವನವಾಸದ ಸಂದರ್ಭದಲ್ಲಿ ನಿಡುಗಲ್ಲಿನವದಗಿನಲ್ಲಿನ ಒಂದು ಸಣ್ಣ ಕಥೆ ಗಮನಿಸಬಹುದಾಗಿದೆ. ವದಗಿನ ಕಲ್ಲು ಅಥವಾ ವದನಕಲ್ಲು ಎಂಬುದಾಗಿ ಕರೆಯುವ ಈ ಸ್ಥಳದ ಪಕ್ಕದಲ್ಲಿನ ಪೆನ್ನೊಬನಹಳ್ಳಿ ಎಂಬ ಗ್ರಾಮದ ಹತ್ತಿರದಲ್ಲಿದ್ದ ಬಂಡೆಯೊಂದರ ಬಳಿ ಅಡಿಗೆ ಮಾಡಿಕೊಂಡು ಎಲ್ಲಾರು ಊಟ ಮಾಡಿದರು. ಅಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಅಲ್ಲಿಂದ ಮುಂದೆ ಸಾಗಿದಾಗ ವಸ್ತುವೊಂದನ್ನು ಮರೆತು ಬಂದಿದ್ದನ್ನು ಜ್ಞಾಪಿಸಿಕೊಂಡರು. ಅದನ್ನು ತರಲು ಆಂಜನೇಯನನ್ನು ಕಳುಹಿಸಿದರು. ರಾಮ, ಲಕ್ಷ್ಮಣ, ಸೀತೆ ಈ ಮೂವರು ಮುಂದೆ ಸಾಗಿ ಆಂಜನೇಯನ ಬರುವಿಕೆಗಾಗಿ ಕಾಯುತ್ತಾ ಅಲ್ಲೇ ಇದ್ದ ಗುಡ್ಡದ ಕಲ್ಲಮೇಲೆ ಕುಳಿತರು. ಮರೆತು ಬಂದಿದ್ದ ವಸ್ತುವನ್ನು ಎತ್ತಿಕೊಂಡು ಓಡುತ್ತಾ ಬಂದು ಆಂಜನೇಯ ಅವರನ್ನು ವದಗಿಕೊಂಡ ಅಂದರೆ ಅವರ ಜೊತೆ ಸೇರಿಕೊಂಡ ಕಾರಣ ಅದು 'ವದಗಿದಕಲ್ಲು' ಆಯಿತು. ಅಲ್ಲಿ ಊರು ನಿರ್ಮಾಣವಾಗಿ ಅದೇ ಹೆಸರಿನಿಂದ ಕರೆಯಲ್ಪಟ್ಟಿತು ಎಂಬ ಸ್ಥಳನಾಮದ ಹಿನ್ನೆಲೆಯಲ್ಲಿ ನಂಬಲರ್ಹವಾದಂತಹದಾಗಿದೆ.

ಇಂತಹ ಅನೇಕ ಪುರಾಣದ ಕಥೆಯ ಅಂಶ ಮತ್ತು ಕುರುಹುಗಳನ್ನುಳಗೊಂಡಿರುವ ಕಾರ್ತಿಕೇಯ ಮತ್ತು ನಿಡುಗಲ್ಲು ಸಂಬಂಧ ಮುಖ್ಯವಾಗಿ ಒಂದು ಪುಣ್ಯ ಪುರಾಣ ಸ್ಥಳಗಳೆಂದು ಹೇಳಬಹುದಾಗಿದೆ. ಇಲ್ಲಿನ ಕೆಲವು ದೇವಸ್ಥಾನಗಳು ಅವುಗಳನ್ನು ಕಟ್ಟಿರುವ ಶೈಲಿ, ದೇವಸ್ಥಾನಗಳ ನಾಮಕರಣದ ಶೈಲಿಗಳನ್ನು ಗಮನಿಸಿದರೆ ಒಂದಕ್ಕೊಂದು ಪ್ರದೇಶಕ್ಕೆ ಸಂಬಂಧ ಕಲ್ಪಿಸಬಹುದಾಗಿದೆ. ಆದರೆ ದಾಖಲೆಗಳು ಮುಖ್ಯವಾಗಿರುತ್ತವೆ.

ಶೈವ ದೇವಾಲಯಗಳು:

ನಿಡುಗಲ್ಲಿನಲ್ಲಿ ಜೈನ ಧರ್ಮ ಮತ್ತು ವೈಷ್ಣವ ಧರ್ಮಕ್ಕಿಂತ ಬಹಳ ಪ್ರಭಾವಯುತವಾಗಿ ಬೆಳಗಿದ ಧರ್ಮ ಶೈವ ಧರ್ಮ, ಶೈವ ಧರ್ಮವನ್ನು ಇಲ್ಲಿನ ಪಾಳೆಗಾರರು ಹೆಚ್ಚಿನದಾಗಿ ಅವಲಂಬಿಸಿದ್ದರೆಂಬುದು ಶಾಸನಗಳಿಂದ ದೇವಾಲಯಗಳಿಂದ ತಿಳಿದುಬರುತ್ತದೆ. ಜೈನ ಧರ್ಮದ ಪ್ರಾಬಲ್ಯದ ನಂತರ ಶೈವ ಧರ್ಮ ಉತ್ತುಂಗ ಶಿಖರಕ್ಕೆ ಎರಿತು. ಕ್ರಿ.ಶ. ೧೨ನೇ ಶತಮಾನದ ನಂತರವಂತೂ ಅನೇಕ ದೇವಾಲಯಗಳು ಇಲ್ಲಿ ನಿರ್ಮಾಣಗೊಂಡವು. ಅವು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಶಿಖರದ ಬಸವೇಶ್ವರ ದೇವಾಲಯ:

ಪಾವಗಡ ಶಾಸನ ೪೯ ಹೇಳುವಂತೆ ಹರತಿ ವಂಶದಲ್ಲಿ ಪ್ರಮುಖನಾದ ಹೊಟ್ಟೆಣ್ಣ ನಾಯಕನು ಕ್ರಿ.ಶ. ೧೬೫೩ರಲ್ಲಿ ನಿಡುಗಲ್ಲು ಬೆಟ್ಟದ ತುದಿಯಲ್ಲಿ ಈ ದೇವಾಲಯವನ್ನು ಕಟ್ಟಿಸಿದನು. ಈ ದೇವಾಲಯದಲ್ಲಿ ನಂದಿಯ ವಿಗ್ರಹವಿದ್ದು ದೇವಾಲಯವು ಅಷ್ಟೇನು ದೊಡ್ಡದಲ್ಲ. ಬೆಟ್ಟದ ತುದಿಯಲ್ಲಿರುವ ಈ ದೇವಾಲಯವು ಸಮುದ್ರ ಮಟ್ಟದಿಂದ ೩೭೭೨ ಅಡಿಗಳಷ್ಟು ಎತ್ತರದಲ್ಲಿದೆ. ಇಲ್ಲಿಗೆ ತಲುಪಲು ಬಹಳ ಪ್ರಯಾಸ ಪಡಬೇಕಾಗುತ್ತದೆ. ಗುಡಿಯ ಪಕ್ಕದಲ್ಲಿ ಹೊಟ್ಟೆಣ್ಣ ನಾಯಕರು ಹಾಕಿಸಿದ ಶಾಸನವೊಂದಿದ್ದು ಅದರಲ್ಲಿ ತಮ್ಮ ತಂದೆ ತಾಯಿಗಳಿಗೆ ಸ್ವರ್ಗದಲ್ಲಿ ಪುಣ್ಯ ಪ್ರಾಪ್ತಿಯಾಗಲೆಂದು ಜೀರ್ಣೋದ್ಧಾರ ಮಾಡಿಸಿದ ಮತ್ತು ಕೆಲವು ದಾನ ದತ್ತಿಗಳನ್ನು ಬಿಟ್ಟ ವಿಚಾರ ಉಲ್ಲೇಖಗೊಂಡಿದೆ. ಶಿಖರದ ಮುಂದಿರುವ ದೀಪಸ್ತಂಭದ ಬುಡದಲ್ಲಿ ಇತ್ತೀಚಿಗೆ ಶಾಸನವೊಂದು ಶೋಧಿಸಲ್ಪಟ್ಟಿದೆ. ಬಂಡೆಗೆ ಅಂಟಿಸಿದ ಕಬ್ಬಿಣದ ದೀಪಸ್ತಂಭದಲ್ಲಿ ವರ್ಷಕ್ಕೊಮ್ಮೆ ಶ್ರಾವಣ ಮಾಸದಲ್ಲಿ ದೀಪ ಹೊತ್ತಿಸಲಾಗುತ್ತದೆ. ಇಲ್ಲಿಯ ಸುತ್ತಮುತ್ತಲಿನ ಜನರು ತಮ್ಮ ಅನಿಸಿಕೆಗಳು ಈಡೇರಿಕೆಯಾಗತ್ತವೆಂಬ ನಂಬಿಕೆಯಿಂದ ಈ ದೀಪವನ್ನು ಆಗಿಂದಾಗ್ಗೆ ಹೊತ್ತಿಸುತ್ತಾರೆ. ಈ ದೀಪಸ್ತಂಭವು ೬ ಅಡಿಗಳ ಉದ್ದವಿದೆ. ಈ ಬಸವೇಶ್ವರನ ಹೆಸರಿನಲ್ಲಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಕೊನೆ ಸೋಮವಾರ ಅತ್ಯಂತ ದೊಡ್ಡ ಜನರ ಜಾತ್ರೆ ನಡೆಯುತ್ತದೆ. ಈ ದೇವಸ್ಥಾನ ಸೂಕ್ಷ್ಮ ಸ್ಥಳದಲ್ಲಿದ್ದು, ಜಾರಿದರೆ ಬಿದ್ದವರು ಮತ್ತೆ ಕಾಣಲಾರದಷ್ಟು ಪ್ರಪಾತ ಅದರ ಹಿಂದೆಯೇ ಇದೆ.

೨. ಶ್ರೀ ಕಾಳಹಸ್ತೀಶ್ವರ ದೇವಾಲಯ:

ಶಿಖರದ ಬಸವೇಶ್ವರ ದೇವಸ್ಥಾನದ ಸ್ವಲ್ಪ ಕೆಳಗೆ ತಿಳಿನೀರಿನ ಕೊಳದ ದಡದಲ್ಲಿ ಈ ದೇವಾಲಯವಿದೆ. ಇದರಲ್ಲಿರುವ ಲಿಂಗವನ್ನು ಶ್ರೀರಾಮ ಪ್ರತಿಷ್ಠಾಪಿಸಿದನೆಂದು ಪ್ರತೀತಿ ಇದೆ. ಈ ದೇವಾಲಯವನ್ನು ಕ್ರಿ.ಶ. ೧೬೭೦ರಲ್ಲಿ ಹರತಿ ವಂಶದ ಮತ್ತೊಬ್ಬ ಪ್ರಮುಖನಾದ 'ತಿಮ್ಮಣ್ಣ ನಾಯಕನು' ಜೀರ್ಣೋದ್ದಾರ ಮಾಡಿಸಿದಂತೆ ತಿಳಿಸುವ ಶಾಸನವೊಂದನ್ನು ಈಗಲೂ ದೇವಾಲಯದ ಹೊರಾಂಗಣದ ಎಡಭಾಗದಲ್ಲಿ ಕಾಣಬಹುದು. ಬೆಟ್ಟದಲ್ಲಿರುವ ಪುರಾತನ ದೇವಾಲಯಗಳಲ್ಲಿ

ಇದು ಕೂಡ ಒಂದಾಗಿದೆ. ಎರಡು ಕಂಬಗಳುಳ್ಳ ಮುಖ ಮಂಟಪ, ನವರಂಗದಲ್ಲಿ ನಾಲ್ಕು ಕಂಬಗಳನ್ನು ಮತ್ತು ಸುಖನಾಸಿಯನ್ನು ಹೊಂದಿದೆ. ಸುಖನಾಸಿಯಲ್ಲಿ ನಂದಿ ಮತ್ತು ಗಣಪತಿ ವಿಗ್ರಹಗಳಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಸುಂದರವಾದ ಸಾಧಾರಣ ಬಾಗಿಲುವಾಡವನ್ನು ಹೊಂದಿದೆ. ನವರಂಗದ ಕಂಬಗಳಲ್ಲಿ ನಂದಿ, ಕುದುರೆ, ಕಿನ್ನರ ನೃತ್ಯಗಾರ್ತಿಯರು ಕಾಳಿಂಗ ಮರ್ದನ, ಕೃಷ್ಣ, ನಾಗಬಂಧ, ಹನುಮಂತ ಮುಂತಾದ ಸಾಧಾರಣ ಶೈಲಿಯ ಶಿಲ್ಪವನ್ನು ಹೊಂದಿದೆ. ಇಲ್ಲಿರುವ ಶಾಸನವು ಈ ದೇವಸ್ಥಾನವನ್ನು ತಿಮ್ಮಣ್ಣ ನಾಯಕನು ಜೀರ್ಣೋದ್ಧಾರ ಮಾಡಿಸಿದ ಕ್ರಮವನ್ನು ಶಾಸನ ದಾಖಲಿಸುತ್ತದೆ.

೩. ಹೊಕ್ಕರಣೆ ಬಳಿಯ ಈಶ್ವರ ದೇವಾಲಯ:

"ಶಾಸನದಲ್ಲಿ ಇದನ್ನು ನಾಗೇಶ್ವರ ದೇವಾಲಯವೆಂದು ಕರೆಯುತ್ತಾರೆ. ಅರಮನೆಯ ಬಯಲಿನಲ್ಲಿರುವ ಆನೆಹೊಂಡದ ಹೊಳಭಾಗದಲ್ಲಿ ಈ ದೇವಾಲಯ ಇದೆ. ಇದರ ಪಕ್ಕದಲ್ಲಿ ಅಂಗಾತ ಬಿದ್ದಿರುವ ಶಾಸನವೊಂದು ಹೊಯ್ಸಳರದೆಂದು ಹೇಳಲಾಗಿದ್ದು ಚೋಳರ ಮಲ್ಲಿದೇವನ ತಂತ್ರಪಾಲ ಅಧಿಕಾರಿ ಹಿರಿಯ 'ನಾಮಣ' ದೇವನು ಈ ದೇವಾಲಯವನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಶಾಸನದ ಆಧಾರದಿಂದ ಈ ದೇವಾಲಯದ ನಿರ್ಮಾಣದ ಕಾಲ ಕ್ರಿ.ಶ. ೧೧೫೦ ಎಂದು ಹೇಳಬಹುದು. ಆನೆಹೊಂಡದ ಉತ್ತರಭಾಗದಲ್ಲಿರುವ ಈ ದೇವಾಲಯ ಕಲ್ಯಾಣ ಚಾಲುಕ್ಯರ ಸರಳಶೈಲಿಯಲ್ಲಿ ನಿರ್ಮಾಣಗೊಂಡಿದೆ." ದೇವಾಲಯವು ಎರಡು ಭಾಗದಲ್ಲಿದ್ದು ಮೊದಲ ಭಾಗ ಮಂಟಪದ ರೀತಿ ಇದ್ದು, ನಾಲ್ಕು ಕಂಬಗಳನ್ನೊಂಡಿದೆ. ಹಾಗೂ ಇದರಲ್ಲಿ ಸರಳವಾದ ಹೂವಿನ ಭುವನೇಶ್ವರಿಯನ್ನು ಕಾಣಬಹುದು. ಮಂಟಪದಲ್ಲಿನ ವಿಗ್ರಹ ಸರಸ್ವತಿಯ ವಿಗ್ರಹವಾಗಿದ್ದು ಸುಂದರವಾಗಿದೆ. ಇದು ನಾಲ್ಕು ಕೈಗಳ ವಿಗ್ರಹದ ಭಾಗವಾಗಿದ್ದು ಈಗ ವಿಗ್ರಹದ ತಲೆಯ ಭಾಗ ಮತ್ತು ಎರಡೂ ಕೈಗಳ ಭಾಗ ಭಗ್ನಗೊಂಡಿದೆ. ಬಹುಶಃ ಮಂಟಪದಲ್ಲಿ ಈ ಸರಸ್ವತಿ ವಿಗ್ರಹ ಇದ್ದಿರಬೇಕು. ಎಡಗೈಯಲ್ಲಿ ಹಸ್ತಪ್ರತಿ ಪಟ್ಟಿಕೆ ಮತ್ತು ಬಲಗೈಯಲ್ಲಿ ಮಣಿಸರ , ಕೊರಳ ಆಭರಣಗಳು ಮುಂತಾದವುಗಳು ಬಹಳ ನಯವಾಗಿ, ನಾಜೂಕಾಗಿ ನೈಪುಣ್ಯವನ್ನು ಹೊಂದಿದ ಕೆತ್ತನೆಯಿಂದ ಕೂಡಿದ್ದು ಬಹಳ ಅಪರೂಪದ ಆಕರ್ಷಕ ಶಿಲ್ಪ ಇದಾಗಿದೆ.

ಮುಖ್ಯ ಗುಡಿಯು ಪೂರ್ವಕ್ಕೆ ಮುಖ ಮಾಡಿದ್ದು ನವರಂಗ, ಸುಖನಾಸಿ ಮತ್ತು ಗರ್ಭಗುಡಿಯನ್ನು ಹೊಂದಿದೆ. ನವರಂಗದ ವಿಶೇಷತೆ ಏನೆಂದರೆ ಒಳಭಾಗದ ಗೋಡೆಯು ಸುತ್ತಲೂ ಹತ್ತು ಮಂಟಪಗಳನ್ನು ರಚಿಸಲಾಗಿದೆ. ಇಲ್ಲಿದ್ದ ವಿಗ್ರಹಗಳಾವುವು ಎಂಬುದಾಗಿ ತಿಳಿದು ಬರುವುದಿಲ್ಲ. ಈ ಗುಡಿಯ ಹೊರಗಡೆಯಲ್ಲಿ ಬಹಳ ಸುಂದರ ಲಿಪಿಯನ್ನುಳ್ಳ ೪೯ ಸಾಲಿನ ಶಿಲಾಶಾಸನವಿದ್ದು ಗುಡಿ ನಿರ್ಮಾಣದ ಹಾಗೂ ದಾನ ದತ್ತಿ ನೀಡಿದ ವಿಷಯವನ್ನು ಒಳಗೊಂಡಿದೆ. ಚೋಳರ ಮಲ್ಲಿದೇವ ಚೋಳನ ತಂತ್ರಪಾಲ ನಾಮಣನು ಹಾಕಿಸಿದ ಶಾಸನವಾಗಿದೆ.

೪. ನಗರೇಶ್ವರ ದೇವಾಲಯ:

ನಿಡುಗಲ್ಲು ದುರ್ಗದಲ್ಲಿ ಬಹಳ ಪ್ರಖ್ಯಾತಿ ಪಡೆದ ಶ್ರೀಮಂತಿಕೆಯಿಂದ ಮೆರೆದ ದೇವಾಲಯ ಇದಾಗಿದೆ. ನಿಡುಗಲ್ಲಿನ ವೈಶ್ಯರು ನಿರ್ಮಿಸಿದ ಈ ದೇವಸ್ಥಾನ ೧೨೪೯ರಲ್ಲಿ ರಚನೆಯಾಯಿತೆಂದು ಗುಡಿಯ ಒಳಗಿನ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ನಿಡುಗಲ್ಲು ವರ್ಣನೆ, ವೈಶ್ಯರ ವರ್ಣನೆ, ಅದ್ಭುತವಾಗಿ ಬಳಕೆಯಾಗಿದೆ. ಈ ದೇವಾಲಯಕ್ಕೆ ಇರುಂಗೋಳ ಚೋಳ ಮಹಾರಾಜನು ನಿಡುಗಲ್ಲುನ್ನು ಆಳುತ್ತಿದ್ದಾಗ ನಿಡುಗಲ್ಲಿನ ವೈಶ್ಯರೆಲ್ಲ ಸೇರಿ ಈ ದೇವಾಲಯವನ್ನು ನಿರ್ಮಿಸಿದರಂತೆ. ಮುಖ್ಯದ್ವಾರ ದಕ್ಷಿಣಕ್ಕಿದ್ದು ಮತ್ತೊಂದು ದ್ವಾರ ಪೂರ್ವಕ್ಕಿದೆ. ಇದು ಉತ್ತರಕ್ಕೊಂದು ಗರ್ಭಗುಡಿ ಪಶ್ಚಿಮಕ್ಕೊಂದು ಗರ್ಭಗುಡಿ ಹೊಂದಿದೆ. ಈ ದೇವಾಲಯವು ೨೦X೨೦ ಅಗಲವಾದ ನವರಂಗವನ್ನು ಹೊಂದಿದ್ದು ನಾಲ್ಕು ಕಂಬಗಳಿಂದ ಕೂಡಿದೆ. ಮುಖ್ಯ ಗರ್ಭಗುಡಿಯು ಸುಖನಾಸಿ ಹೊಂದಿದೆ. ಎರಡು ಗರ್ಭಗುಡಿಯ ಬಾಗಿಲು ವಾಡಗಳು ಕಾಲ ನಂತರದಲ್ಲಿ ಜೀರ್ಣೋದ್ಧಾರಗೊಂಡು ಗಾರೆಯಿಂದ ಆವೃತವಾಗಿದೆ. ಎರಡೂ ಬದಿಗೆ ಸಣ್ಣಗೂಡುಗಳನ್ನು ನಿರ್ಮಿಸಿದ್ದಾರೆ. ಪೂರ್ವ ದಿಕ್ಕಿನ ಬಾಗಿಲಿನ ಬಲಭಾಗದಲ್ಲಿ ನಿಡುಗಲ್ಲಿನ ವೈಶ್ಯರ ಹಾಗೂ ಈ ದೇವಾಲಯದ ನಿರ್ಮಾಣದ ಬಗ್ಗೆ ವಿವರ ನೀಡುವ ದೊಡ್ಡದಾದ ಶಿಲಾ ಶಾಸನವಿದೆ. ಶಾಸನದ ಮೇಲ್ಭಾಗದ ಮಧ್ಯದಲ್ಲಿ ಶಿವಲಿಂಗವನ್ನು ಎಡಭಾಗದಲ್ಲಿ ಆಕಳು, ಕರು ಮತ್ತೊಂದು ಕಡೆ ನಂದಿಯನ್ನು ಚಿತ್ರಿಸಲಾಗಿದೆ. ಇದರಲ್ಲಿನ ಹೆಚ್ಚಿನ ಸಂಗತಿಯನ್ನು ಶಾಸನ ಭಾಗದಲ್ಲಿ ಚರ್ಚಿಸಲಾಗಿದೆ.

೫. ವೀರಭದ್ರ ಮಂಟಪ:

ಬೆಟ್ಟಗಳಲ್ಲಿರುವ ಮನೆಗಳಿಗೆ ಹೋಗುವ ದಾರಿಯಲ್ಲಿ ಸಿಗುವ ವಜ್ರದೂರು ಬಾಗಿಲು ಬಲಕ್ಕೆ ಸ್ವಲ್ಪ ದೂರದಲ್ಲಿರುವ ವೀರಭದ್ರ ದೇವಾಲಯ, ಬಸವನ ಮಂಟಪ, ಈಶ್ವರ ದೇವಾಲಯ ಮತ್ತು ಪಾರ್ಶ್ವನಾಥ ಬಸದಿ ಒಂದೇ ಸಾಲಿನಲ್ಲಿವೆ. ಮೊದಲಿಗೆ ವೀರಭದ್ರ ಮಂಟಪವಿದ್ದು, ಇದು ಉತ್ತಾರಭಿಮುಖವಾಗಿದೆ. ಈ ದೇವಾಲಯ ಸುಮಾರು ೧೧ನೇ ಶತಮಾನಕ್ಕೆ ಸೇರಿದ್ದೆಂದು ಆರ್. ನರಸಿಂಹಚಾರ್ಯರು ತಿಳಿಸಿದ್ದಾರೆ. ಒಟ್ಟಾರೆ ಪಾಳೆಗಾರರ ಕಾಲಮಾನದ್ದಾಗಿದ್ದು ಮತ್ತೆ ಇದನ್ನು ಹೊಟ್ಟೆಣ್ಣ ನಾಯಕರು ಕ್ರಿ.ಶ. ೧೬೫೩ರಲ್ಲಿಯೂ ತಿಮ್ಮಣ್ಣ ನಾಯಕರು ಕ್ರಿ.ಶ. ೧೬೭೦ರಲ್ಲಿಯೂ ಜೀರ್ಣೋದ್ಧಾರ ಮಾಡಿಸಿದಂತೆ ನಿಡುಗಲ್ಲಿನ ಶಾಸನವೊಂದು ತಿಳಿಸುತ್ತದೆ. ಹಾಗೆಯೇ ಅದರ ಪೂಜೆ ಮುಂತಾದ ದೇವತಾ ಕಾರ್ಯಗಳಿಗೆ ದಾನ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಗರ್ಭಗೃಹದಲ್ಲಿ ಕಪ್ಪು ಕಲ್ಲಿನ ಐದು ಅಡಿ ಎತ್ತರದ ವೀರಭದ್ರನ ವಿಗ್ರಹವಿದೆ. ಇದು ಸಹ ಪಾಳೆಗಾರರ ಕಾಲದ್ದಾಗಿದ್ದು ಎರಡು ಗರುಡ ವಿಗ್ರಹಗಳು ಮತ್ತು ಎರಡು ನಂದಿ ವಿಗ್ರಹಗಳಿವೆ. ಈ ದೇವಾಲಯ ನಾಲ್ಕು ಕಂಬಗಳಿಂದ ಕೂಡಿದ ನವರಂಗವನ್ನು ಹೊಂದಿದ್ದು ಒಂದೆ ಎರಡೂ ಕಡೆ ದ್ವಾರಪಾಲಕರು ನಿಂತಿದ್ದಾರೆ. ಅವರ ಮಧ್ಯೆ ಕಲ್ಲಿನ ಲಿಂಗವಿದೆ. ಇವಕ್ಕೆ

ಮುಖಮಂಟಪವಿಲ್ಲ, ಮುಂಭಾಗದಲ್ಲಿನ ಕಲ್ಲಿನ ದೀಪಸ್ತಂಭವೊಂದು ಮುರಿದು ಬಿದ್ದಿದೆ. ಹಾಗೆಯೇ ಅನೇಕ ಕಂಬಗಳು ಇಲ್ಲಿ ಬಿದ್ದಿವೆ. ಮತ್ತೊಂದು ಕಬ್ಬಿಣದ ದೀಪಸ್ತಂಭ ಆಕರ್ಷಕವಾಗಿದ್ದು ಪಾಳೆಗಾರರ ಕಾಲದ್ದಾಗಿದೆ. ಅದರ ಪಕ್ಕದಲ್ಲಿ ನಾಗರ ಶಿಲ್ಪಗಳು ಬಿದ್ದಿವೆ. ನವರಂಗದ ಬಾಗಿಲ ಬಳಿ ಬಹಳ ಅಪರೂಪದ ಶೂಲಬ್ರಹ್ಮಯ್ಯಗಳ ವಿಗ್ರಹಗಳಿದ್ದು ಶಿಲ್ಪಗಳಿಂದ ನೋಡುಗರನ್ನು ಸೆಳೆಯುತ್ತದೆ.

೬. ಮಳೆಮಲ್ಲಿಕಾರ್ಜುನ ದೇವಾಲಯ:

ನಿಡುಗಲ್ಲಿನ ಪಾವಗಡದ ಕೋಟೆ ಬಾಗಿಲಿನಿಂದ ಹೊರ ಹೊಲಯಲ್ಲಿರುವ ಲಕ್ಷ್ಮಾದೇವಿ ಕೆರೆಯ ಏರಿಯನ್ನು ದಾಟಿದರೆ ಎತ್ತರದ ಗುಡ್ಡದ ಬುಡದಲ್ಲಿ ಈ ದೇವಾಲಯವಿದೆ. ಇದು ಸಾಧಾರಣ ಶೈಲಿಯ ಕಟ್ಟಡವನ್ನು ಹೊಂದಿದ್ದು ಗರ್ಭಗುಡಿಯ ಬಾಗಿಲುವಾಡವನ್ನು ನೋಡಿದರೆ ಈ ಗುಡಿಯ ಮೂಲ ಸ್ವರೂಪವೇ ಬೇರೆ ಇದ್ದಂತೆ ತೋರುತ್ತದೆ. ದೇವಾಲಯವು ನವರಂಗ, ಸುಕನಾಸಿ ಮತ್ತು ಗರ್ಭಗೃಹವನ್ನು ಹೊಂದಿದೆ. ನವರಂಗವು ೧೨ ಕಂಬಗಳನ್ನು ಹೊಂದಿದ್ದು ಈಗ ಎಡ ಬಲದಿ ಮೂರು ಮೂರು ಕಂಬಗಳು ಗೋಡೆಯಾಳಗೆ ಸೇರಿವೆ. ನಿಧಿಗಳ್ಳರು ಗರ್ಭಗುಡಿಯ ಒಳಭಾಗದಲ್ಲಿ ಅಗೆದು ಹಾಳು ಮಾಡಿದ್ದಾರೆ. ದೇವಾಲಯದ ಸುತ್ತಲೂ ಗೋಡೆ ಇದೆ.

ದೇವಾಲಯದ ಎದುರು ಭಾಗದಲ್ಲಿ ಸುಂದರವಾದ ವೀರಗಲ್ಲೊಂದಿದೆ. ಇದರಲ್ಲಿ ಇಬ್ಬರು ವೀರರು ಕುದುರೆಗಳ ಮೇಲೆ ಕುಳಿತು ಹೋರಾಟ ನಡೆಸುತ್ತಿರುವರು. ಮೂರು ಹಂತದಲ್ಲಿರುವ ಈ ವೀರಗಲ್ಲುಗಳು ಶಾಸನ ಹೊಂದಿದ್ದು ಲಿಪಿ ಬಹಳ ಸವೆದಿದೆ. ಲಿಪಿ ದೃಷ್ಟಿಯಿಂದ ೧೬ ಅಥವಾ ೧೭ನೇ ಶತಮಾನಕ್ಕೆ ಸೇರುತ್ತದೆ. ಗುಡಿಯ ಒಳಭಾಗದ ನವರಂಗದಲ್ಲಿ ಕ್ರಿ.ಶ. ೧೪೮೭ರ ಚಿಕ್ಕ ತಿಪ್ಪರಾಜೇಂದ್ರನ ಶಾಸನವಿದೆ. ಈ ಶಾಸನದಲ್ಲಿ ಇವನ ಅರಸಿ ಲಕ್ಷ್ಮಾದೇವಿ ನಿಧನ ಹೊಂದಿದಾಗ ಆಕೆಯ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸಿ ಅಗ್ರಹಾರ ನಿರ್ಮಿಸಿ ಬ್ರಾಹ್ಮಣರಿಗೆ ದಾನ ಬಿಟ್ಟ ಉಲ್ಲೇಖವಿದೆ. ಆದರೆ ದೇವಾಲಯವನ್ನು ನಿರ್ಮಿಸಿದ ಉಲ್ಲೇಖ ಕಂಡುಬರುವುದಿಲ್ಲ. ಬಹುಶಃ ಅಗ್ರಹಾರ ನಿರ್ಮಿಸಿದಾಗ ಈ ದೇವಸ್ಥಾನ ನಿರ್ಮಿಸಿರಬೇಕೆಂದು ತೋರುತ್ತದೆ. ಈಗ ದೇವಾಲಯಕ್ಕೆ ಹೋಗಲು ದಾರಿ ಇರುವುದಿಲ್ಲ. ಅರಣ್ಯ ಇಲಾಖೆಯವರು ಸಸಿ ಗಿಡಗಳನ್ನು ನೆಟ್ಟಿದ್ದಾರೆ.

೭. ಸಾರ್ವಾಡೇಶ್ವರ ದೇವಾಲಯ:

ನಿಡುಗಲ್ಲು ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಬಲಕ್ಕೆ ಅಂದರೆ ನಿಡುಗಲ್ಲು ಕೆಳ ಊರಿನ ಸ್ವಲ್ಪ ದೂರದಲ್ಲಿ ಹೊಲದ ನಡುವೆ ಇರುವ ಈ ದೇವಾಲಯವನ್ನು ಹೊಟ್ಟೇಶ್ವರ ದೇವಾಲಯವೆಂದು ಸಹ ಕರೆಯುತ್ತಾರೆ. "ಹರತಿ ವಂಶದ ಹೊಟ್ಟೆಣ್ಣ ನಾಯಕನ ನಂತರ ಅಂದರೆ ಕ್ರಿ.ಶ. ೧೬೮೧ರಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ದೇವಾಲಯದ ಒಳಗಿರುವ ಶಾಸನವೊಂದು ತಿಳಿಸುತ್ತದೆ." ೧೨೨

ಹರತಿ ವಂಶದ ಮೂಲ ಪುರುಷನ ಹುಟ್ಟುರಾದ ಬಿಜ್ಜಳ ದೇಶದ ಅಥವಾ ಬಿಜಾಪುರದ ಒಂದು ಹಳ್ಳಿಯ ಹೆಸರಾದ 'ಸಾರವಾಡ' ಎಂಬುದರಿಂದ ನಿಡುಗಲ್ಲಿನ ಈ ದೇವಾಲಯಕ್ಕೆ ಸಾರ್ವಾಡೇಶ್ವರ ಎಂಬ ಹೆಸರು ಬಂದಿದೆ. ಪೂರ್ವಕ್ಕೆ ಮುಖ ಮಾಡಿರುವ ಈ ಗುಡಿ ನಿಡುಗಲ್ಲು ಅರಸನಾದ ಮುಮ್ಮಡಿ ಹೊಟ್ಟೆಣ್ಣ ನಾಯಕನ ಅವಧಿಯದಾಗಿದೆ. ಸರಳ ಶೈಲಿಯಿಂದ ಕೂಡಿದ ತೆರೆದ ಮಂಟಪ ಗರ್ಭಗುಡಿ ಹೊಂದಿದೆ. ಮುಂದಿನ ಮಂಟಪದಲ್ಲಿ ನಾಲ್ಕು ಕಂಬಗಳು ಇದ್ದು ಶಿವಲಿಂಗ ಮತ್ತು ಅದರ ಪಕ್ಕದಲ್ಲಿ ಭಕ್ತಿಯಿಂದ ನಿಂತಿರುವ ವ್ಯಕ್ತಿಗಳ ಚಿತ್ರಣವಿದೆ. ಮಂಟಪದ ಗೋಡೆಯ ಎರಡು ಬದಿ ಇಬ್ಬರೂ ಸ್ತ್ರೀ ಇಬ್ಬರು ಪುರುಷರ ಶಿಲ್ಪಗಳಿವೆ. ಈ ದೇವಾಲಯದ ಪೂಜೆ ಪುನಸ್ಕಾರಕ್ಕೆ ರಂಗ ಸಮುದ್ರದ ಕೆರೆಯ ಕೆಳಗಿನ ಪ್ರದೇಶವನ್ನು ದಾನ ಬಿಟ್ಟ ವಿಚಾರ ತಿಳಿಸುವ ಒಂದು ಶಿಲಾ ಶಾಸನವು ದೇವಾಲಯದಲ್ಲಿ ಕಂಡುಬರುತ್ತದೆ.

ಹೀಗೆ ಈ ಶೈವ ದೇವಾಲಯ ಈಗಿನ ಸ್ಥಿತಿಯಲ್ಲಿ ನಮಗೆ ಕಂಡುಬಂದರೂ ಸಹ ಪೂರ್ವದಲ್ಲಿ ಉತ್ತಮವಾಗಿ ಜನಸೇವೆ ಮಾಡಿದಂತಹವುಗಳು. ಇವುಗಳ ಜೊತೆಗೆ ನಾಮಾವಶೇಷವಾಗಿರುವ ಇನ್ನೂ ಕೆಲವು ದೇವಾಲಯಗಳು ಹೇಳಲು ಹೆಸರಿಲ್ಲದೆ ಹೋಗಿರುವುದು ಉಂಟು. ಸಿಕ್ಕಿರುವಷ್ಟು ಸಾಕ್ಷಿಗಳು, ಶಾಸನಗಳು ಜೊತೆಗೆ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಇಷ್ಟನ್ನು ಗುರುತಿಸಲಾಗಿದೆ.

೩.೨. ಜೈನ ಯತಿಗಳ ಪರಿಚಯ:

ಈ ಪ್ರಾಂತ್ಯದಲ್ಲಿ ಹತ್ತು ಹನ್ನೊಂದನೇ ಶತಮಾನದಿಂದಲೇ ಜೈನ ಧರ್ಮ ಪ್ರಚಲಿತದಲ್ಲಿದ್ದು. ಪ್ರವರ್ಧಮಾನಕ್ಕೆ ಬಂದ ಅಂಶ ಇಲ್ಲಿನ ಶಾಸನಗಳ ಹಿನ್ನೆಲೆಯಲ್ಲಿ ನೋಡಬಹುದಾಗಿದೆ. ನಿಡುಗಲ್ಲು ದುರ್ಗ ಹಾಗೂ ಅದಕ್ಕೆ ಸಮೀಪವಿರುವ ಅಮರಾಪುರ, ಅಗಳಿ, ಕಂಡೇನಹಳ್ಳಿ, ಪೆನಗೊಂಡ, ಶಿವುರ ಪಟ್ಟಣಗಳಲ್ಲಿ ಇಂದಿಗೂ ಜೀವಂತವಾಗಿರುವ ಜೈನ ಬಸದಿಗಳೇ ಇದಕ್ಕೆ ಸಾಕ್ಷಿ, ನಿಡುಗಲ್ಲು ದುರ್ಗದ ಎರಡನೇ ಹಂತದಲ್ಲಿರುವ ಜೋಗವಟ್ಟಿಗೆ ಬಸದಿ ಎಂಬ 'ಪಾರ್ಶ್ವನಾಥ' ಜಿನಾಲಯವಿದೆ. ಈ ಪಾರ್ಶ್ವನಾಥ ಜಿನಾಲಯದ ಒಳಗಡೆ ಮುಖ ಮಂಟಪದ ಎಡಭಾಗದಲ್ಲಿ ಒಂದು ಶಾಸನವಿದೆ. ಅದು ಜೈನ ಯತಿ ನೇಮಿಪಂಡಿತರ ಮಕ್ಕಳು ಈ ವೃತ್ತಿಯನ್ನು ಪೂರ್ವದಲ್ಲಿ ಮಾಡಿಕೊಂಡು ಬಂದು ಮಧ್ಯದಲ್ಲಿ ಕೆಲವು ಕಾಲ ಬಿಟ್ಟಿದ್ದು ಮತ್ತೆ ಧಾರಪೂರ್ವಕವಾಗಿ ನಂದನ ಸಂವತ್ಸರದ ಆಷಾಡ ಮಾಸದ ಆದಿವಾರದಂದು ಮರಳಿ ಪಡೆದರೆಂದು ತಿಳಿಸುತ್ತದೆ.

ಜೈನ ಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿದವರಲ್ಲಿ ಚೋಳ ವಂಶದ ಎರಡನೇ ಇರುಂಗೋಳ ಚೋಳನು ಮುಖ್ಯವಾಗಿ ಕಂಡುಬರುತ್ತಾನೆ. ನಿಡುಗಲ್ಲಿನಲ್ಲಿ ದೊರೆತ ಜೈನ ಧರ್ಮದ ಒಂದೆರೆಡು ಶಾಸನಗಳಲ್ಲಿ ಕಾಣಬಹುದಾಗಿದೆ. ಇವನ ತಂದೆ ಮತ್ತು ತಾಯಿಗಳು ಜೈನಧರ್ಮದ

ಅನುಯಾಯಿಗಳೆಂದು ಮನಗಾಣಬಹುದು. ಬೊಮ್ಮನೃಪ ಮತ್ತು ಬಾಚಲ ದೇವಿ ಎಂದು ಶಾಸನದಲ್ಲಿ ಉಲ್ಲೇಖಿಸಿದ್ದಾನೆ. ಮತ್ತು ಇವನ ವಂಶಾವಳಿಯನ್ನು ಆರು ತಲೆಮಾಡುಗಳವರೆಗೆ ನೀಡಿದ್ದಾನೆ.

ಹೀಗೆ, ರಾಜ್ಯಭಾರ ಮಾಡುತ್ತಿರಲು ಇರುಂಗೋಳನ ಪಾದಪದ್ಮೋಪ ಜೀವಿಯಾಗಿದ್ದ ಗಂಗೆಯನಾಯಕ ಇವನ ಪತ್ನಿ ಚಾಮಾಂಗನೆ ಎಂಬ ದಂಪತಿಗಳ ಮಗ ಗಂಗೆಯ ಮಾರಯನು ಶ್ರೀವೀರ ನಂದಿ ಸಿದ್ಧಾಂತ ಚಕ್ರವರ್ತಿಗಳ ಶಿಷ್ಯರಾದ ಮೇದಿನೀ ಸಿದ್ದರ ಪ್ರದ್ಮಪ್ರಭ ಮಲದಾರಿ ದೇವರ ಚರಣ ಪರಿಚರ್ಯೆಯಿಂದ ಪರ್ಯಾಪ್ತರಾದ ನೇಮಿ ಪಂಡಿತರ ಒಪ್ಪಿಗೆ ಪಡೆದು ವ್ರತವನ್ನು ಸ್ವೀಕರಿಸುತ್ತಾನೆ. ತದನಂತರ ಅಲ್ಲಿಯೇ ಒಂದು ಜೈನ ಬಸದಿಯನ್ನು ಕಟ್ಟಿಸುತ್ತಾನೆ. ಅದಕ್ಕೆ ಜೋಗವಟ್ಟಿಗೆ ಬಸದಿ ಎಂದು ಕರೆದಿದ್ದಾನೆ.

ಇದು ಚಂದ್ರ ಸೂರ್ಯರು ಇರುವವರೆಗೂ ಕಾಪಾಡಿಕೊಂಡು ಹೋಗಬೇಕೆಂದು ತಿಳಿಸುತ್ತದೆ. ಮತ್ತು ಗಂಗೆಯಮಾರಯ್ಯನ ಪತ್ನಿ ಬಾಚಲೆಯೂ ಗಂಗೆಯ ಮಾರಯ್ಯನ ಹಳ್ಳಿಯಲ್ಲಿ ಇರುಂಗೋಳನು ನೀಡಿದ್ದ ದತ್ತಿಯಾದ ತೈಲಂಗೆರೆಯ ಕೆರೆಯ ಮಾದಲೇರಿಯ ಗದ್ದೆಯನ್ನು ಜಿನಾಲಯದ ದೈನಂದಿನ ಸಪರ್ಯಕಾರ್ಯಕ್ಕೆ ಮಹಾಭಿಷೇಕಕ್ಕೆ, ಚಾತುರ್ವರ್ಣನ್ನದಾನಕ್ಕೆ ಎಂದು ಇರುಂಗೋಳ ಮಹಾರಾಜನ ಸ್ವಹಸ್ತದಿಂದ ಕೊಟ್ಟಿದ್ದಾಗಿ ಶಾಸನದಲ್ಲಿ ತಿಳಿಸಲಾಗಿದೆ.

ಈ ಬಸದಿಯ ಗರ್ಭಗುಡಿಯಲ್ಲಿ ಏಳು ಎಡೆಗಳ ಸರ್ಪದ ನೆರಳಲ್ಲಿ ನಿಂತ ಐದು ಅಡಿಯ ಜಿನಮೂರ್ತಿ ಇದ್ದು ಅದರ ಕೆಳಭಾಗದಲ್ಲಿ ಶಾಸನವನ್ನು ಕಾಣಬಹುದು. ನಿಂತ ಜಿನಮೂರ್ತಿಯ ಎಡಗಡೆ ಯಕ್ಷಿ ಮತ್ತು ಬಲಗಡೆ ಯಕ್ಷನ ಚಿಕ್ಕ ಪ್ರತಿಮೆಗಳನ್ನು ಅಂದವಾಗಿ ಬಿಡಿಸಲಾಗಿದೆ. ಹಾಗೂ ಪೀಠದಲ್ಲಿರುವ ಶಾಸನದ ಕೆಳಗೆ ಇನ್ನೊಂದು ಪೀಠವಿದ್ದು ಅದನ್ನು ಮೂರ ಭಾಗ ಮಾಡಿ ಜಿನಮೂರ್ತಿಯ ಎಡಭಾಗದಲ್ಲಿ ಹಸು ಮತ್ತು ಹಾಲು ಕುಡಿಯುತ್ತಿರುವ ಕರುವಿನ ಚಿತ್ರಣವಿದೆ. ಮಧ್ಯದಲ್ಲಿ ಶಾಂತಿಯಿಂದ ಕುಳಿತ ಜಿನಮೂರ್ತಿ ಅಥವಾ ಕೈ ಮುಗಿದು ಕುಳಿತಿರುವ ಭಕ್ತನನ್ನು ಹಾಗೂ ಅಕ್ಕಪಕ್ಕದಲ್ಲಿ ಚಿಕ್ಕದಾದ ಚಾಮರಗಳನ್ನು ಬಿಡಿಸಿದ್ದಾರೆ. ಬಲಭಾಗದಲ್ಲಿ ದೊಡ್ಡದಾದ ಸಿಂಹವನ್ನು ಚಿತ್ರಸಲಾಗಿದ್ದು ಇಂತಹ ವಿವರಗಳಿರುವ ಶಿಲ್ಪ ಈ ಪ್ರದೇಶದಲ್ಲಿ ಮತ್ತೊಂದು ದೊರೆತಿಲ್ಲ. ನಿಡುಗಲ್ಲು ಪ್ರದೇಶದಲ್ಲಿ ಇದೇ ಪಾರ್ಶ್ವನಾಥ ಬಸ್ತಿ ಗುಡಿಯಲ್ಲಿ ಮೂಲ ಬಿಂಬದ ಪೀಠದ ಬುಡದಲ್ಲಿ ಒಂದು ಪ್ರತಿಮಾ ಶಾಸನವಿರುವುದನ್ನು ಕಾಣಬಹುದು.

೩.೩. ವೈಷ್ಣವ ಧರ್ಮದ ಪರಿಚಯ:

ವೈಷ್ಣವ ಧರ್ಮದ ಕುರುಹುಗಳು ಕರ್ನಾಟಕದಲ್ಲಿ ಕ್ರಿ.ಶ. ೪೫೦ರ ಸುಮಾರಿನಿಂದಲೇ ದೊರೆಯಲು ಆರಂಭವಾದಗುತ್ತದೆ. ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಶ್ಯಾರ್ಙ್ಯಧರನಾದ ಸುದರ್ಶನ ಧಾರಿಯಾದ ದಾನವರ ಕಣ್ಣುಗಳಿಗೆ

ಪ್ರಳಯಾಗ್ನಿಯಂತಿರುವ, ಶಿಷ್ಟರಿಗೆ ಸುದರ್ಶನನಾಗಿರುವ ಅಚ್ಯುತನ ಪ್ರಾರ್ಥನೆಯಿದೆ. ತದನಂತರ ಇಂತಹ ಅನೇಕ ಸಾಕ್ಷ್ಯಾಧಾರಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ವೈಷ್ಣವ ಧರ್ಮವು ಭಾಗವತ ಪಂಥವಾಗಿ ಪ್ರಾಚೀನ ಕಾಲದಿಂದಲೇ ಪ್ರಸಿದ್ಧಿಯಾಗಿತ್ತು ಎಂಬುದನ್ನು ಸೂಚಿಸುತ್ತದೆ.

ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವು ಒಂದು, ನಮ್ಮ ಅನೇಕ ರಾಜಮನೆತನಗಳಲ್ಲಿ ಈ ಧರ್ಮವನ್ನು ಪೋಷಿಸಿವೆ. ಈ ಧರ್ಮದ ದಾನ ಶಾಸನಗಳ ಮೇಲೆ ಸಾಮಾನ್ಯವಾಗಿ ಶಂಖ, ಚಕ್ರದ ಚಿತ್ರಣವಿದ್ದು ಕೆಲವು ಶಾಸನಗಳಲ್ಲಿ ವೈಷ್ಣವ ದೇವತೆಗಳು, ಗರುಡ ಮೊದಲಾದ ಶಿಲ್ಪಗಳೂ ಇರುತ್ತವೆ. ಇವುಗಳಿಂದ ಶಾಸನವನ್ನು ಕಂಡ ತಕ್ಷಣ ಇಂಥವುದೇ ಧರ್ಮಕ್ಕೆ ಸೇರಿದೆ ಎಂದು ಹೇಳಬಹುದು.

ಸಾಮಾನ್ಯವಾಗಿ ನಿಡುಗಲ್ಲು ಪ್ರಾಂತ್ಯದಲ್ಲಿ ೧೦ನೇ ಶತಮಾನದ ನಂತರವೇ ಈ ಶಾಸನಗಳು ಕಾಣಿಸಿಕೊಳ್ಳುವುದು. ವಿಜಯನಗರದ ಸದಾಶಿವರಾಯನ ಆಳ್ವಿಕೆಯ ಕಾಲದ ಕನ್ನಡ, ತೆಲುಗು ಶಾಸನಗಳಲ್ಲಿ ಮಾತ್ರ ಕಂಡುಬರುವ 'ವಿಪ್ರವಿನೋದಿಗಳೆಂಬ' ವರ್ಗಕ್ಕೆ ಸಂಬಂಧಿಸಿದ ಬಹುಪಾಲು ಶಾಸನಗಳು ಆಂಜನೇಯಸ್ವಾಮಿ ದೇವಾಲಯಗಳ ಬಳಿಯೇ ದೊರೆತಿವೆ. ಮಡಕಶಿರಾ ತಾಲ್ಲೂಕಿನ ದೊಡ್ಡೇರಿಯ ಶಾಸನವೊಂದರಲ್ಲಿ ಕಾಶ್ಯಪಗೋತ್ರದ ವೈಖನಸ ಸೂತ್ರದ ಯಜುಶಾಖಾದ್ಯಾಯಿಗಳಾದ ತಿರುಮಲ ಕಿರುಸ್ಥಳ ಸ್ಥಾನದ ಸನ್ನಿಧಿಯ ಮಲೆಯ ಸಿಂಗಾರ ಭಟ್ಟರ ಗುಂಡಮಾಲೆ ವಿಠಲಯ್ಯನವರ ಮಗ ತಿರುಮಲ ಕೃಷ್ಣಯ್ಯ ಎಂಬುವವನು ದೊಡ್ಡೇರಿ ಗ್ರಾಮವನ್ನು ವೆಂಕಟೇಶ್ವರ ಸಮುದ್ರ ಎಂಬ ಹೆಸರಿನಲ್ಲಿ ಸರ್ವಮಾನ್ಯ ಅಗ್ರಹಾರವನ್ನಾಗಿ ಪಡೆದನೆಂದು ಹೇಳಿದೆ.

ಕ್ರಿ.ಶ. ಸುಮಾರು ೧೫೮೪ರ ಇನ್ನೊಂದು ಶಾಸನದಲ್ಲಿ 'ಸಮನಿ ಪಾಪಯ' ಎಂಬುವನು ಪೆಲಬಂಡೆ ರಂಗನಾಥನ ಹೆಸರಿನಲ್ಲಿ ಪ್ರತಿ ವರ್ಷವು ತಿರುಮಲೆ ತೀರ್ಥಯಾತ್ರೆಗೆ ಹೋಗುತ್ತಿದ್ದನೆಂದು ಹೇಳುತ್ತದೆ. ಇದೇ ದೇವಾಲಯಕ್ಕೆ ಸೇರಿದ ಈಗ ಇರುವ ಚಿಕ್ಕ ಮಠದ ಕೊಠಡಿಯ ಪ್ರವೇಶಕ್ಕೆ ಇರುವ ಮೇಲುಕಟ್ಟಿನ ಕಲ್ಲಿನ ಮೇಲೆ ನಿಡುಗಲ್ಲು ಇಮ್ಮಡಿ ತಿಮ್ಮಣ್ಣ ನಾಯಕನ ಅಧಿಕಾರಿಯಾದ 'ರಾಯ ಸಮ್ ರಾಮಣ' ಎನ್ನುವವನು ರಂಗನಾಥ ದೇವಾಲಯದ ಯೋಗಶಾಲೆಯ ಮೇಲ್ಭಾವಣಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಇಂಥಹ ಇನ್ನು ಹಲವಾರು ಶಾಸನಗಳು ಲಭ್ಯವಿದ್ದರೂ ಸಹ ಅವು ಶಂಭುವನ್ನು ಸ್ತುತಿಸುವಂತಹವುಗಳು ಹಾಗೂ ವಿಷ್ಣುವಿನ ಆಯುಧಗಳ ಸಂಕೇತವನ್ನು ವೈಷ್ಣವ ದೇವರುಗಳ ಚಿತ್ರಣವನ್ನು, ಅವರ ನಾಮಗಳನ್ನು ಹೊಳುತ್ತವೆ. ಆದಾಗ್ಯೂ ಇವು ಸಿಕ್ಕುವುದು ವೈಷ್ಣವ ದೇವಾಲಯಗಳ ಮುಂದೆಯೇ ಎಂಬುದು ಆಶ್ಚರ್ಯಕರ ಸಂಗತಿಯಾಗಿದೆ.

ನಿಡುಗಲ್ಲು ತಿಮ್ಮಣ್ಣ ನಾಯಕರು ತಿರುವೆಂಗಳನಾಥ ದೇವರು ನಾರಾಯಣ ಸ್ವರೂಪಿಯೆಂದೂ ಅವನ ಭಕ್ತನಾದ ತಿರುವೆಂಕಟೇಶ್ವರ ಶ್ರೀ ಅವರ ಕಾಲನ್ನು ತೊಳೆದು ಅವರ ಆಶೀರ್ವಾದದಿಂದ ಲಕ್ಷ್ಮಣೇಶ್ವರ ದೇವಸ್ಥಾನ ಮತ್ತು ಲಕ್ಷ್ಮಾದೇವಿ ಕೆರೆಯನ್ನು ಕಟ್ಟಿಸಿ ಅವುಗಳನ್ನು ಬ್ರಾಹ್ಮಣರಿಗೆ ಕೊಡುತ್ತಾನೆಂದು ಶಾಸನವೊಂದು ತಿಳಿಸುತ್ತದೆ. ಮತ್ತೊಂದು ದಾನ ಶಾಸನವು ಶಿವ. ಜಿನ. ವಿಷ್ಣುವನ್ನು ಸೊಗಸಾಗಿ ಈ ಕೆಳಗಿನಂತೆ ಚಿತ್ರಿಸುತ್ತದೆ.

ಶ್ರೀ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ

ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ.... ಶ್ರೀ ಮನ್ಮಾಹಾ ಪರಮ

ಭಟ್ಟಾರಕಂ ಪರಮವಯಿಷ್ಣುವ ಪರಮೇಶ್ವರ

ರೂಪನಾರಾಯಣ ನಿರಂತಂ ಬಿದ್ಯಾಅಭಿನವ

ಪರಶುರಾಮಾವತಾರ ಸಮರ ನಿಷಂಖರಣ ರಂಗ......

ನಿಡುಗಲ್ಲಿನ ವೈಷ್ಣದ ಪಂಥದ ದೇವಾಲಯಗಳು:

ಜೈನ ಮತ್ತು ಶೈವ ಧರ್ಮದಂತೆಯೇ ವೈಷ್ಣವ ಧರ್ಮವು ಸಹ ನಿಡುಗಲ್ಲಿನ ಪಾಳೇಗಾರರ ಕಾಲದಲ್ಲಿ ತನ್ನ ಉತ್ತುಂಗ ಸ್ಥಿತಿಯಲ್ಲಿತ್ತು. ಹೀಗಾಗಿ ವೈಷ್ಣವ ಧರ್ಮ ಸಂಸ್ಕೃತಿಗೆ ಈ ಪರಿಸರಕ್ಕೆ ತನ್ನದೆ ಆದ ಕಾಣಿಕೆಯನ್ನು ಕೊಟ್ಟಿದೆ. ಪ್ರಮುಖವಾಗಿ ಧಾರ್ಮಿಕ ಕ್ಷೇತ್ರದಲ್ಲಿ ನೀಡಿರುವ ಕಾಣಿಕೆಯನ್ನು ಅಲ್ಲಿನ ದೇವಾಲಯಗಳ ಅಧ್ಯಯನದಿಂದ ತಿಳಿಯಬಹುದು. ಅಂತಹ ದೇವಾಲಯಗಳನ್ನು ಈ ಮುಂದೆ ಕುಲಂಕೂಷವಾಗಿ ಪರಿಶೀಲಿಸಲು ಪ್ರಯತ್ನಿಸಲಾಗಿದೆ.

೧. ಹನುಮನ ದೇವಾಲಯ:

ಗ್ರಾಮದ ಮುಖ್ಯ ರಸ್ತೆ ದಿಕ್ಕಿಗೆ ಮುಖ ಮಾಡಿರುವ ಈ ದೇವಾಲಯದಲ್ಲಿ ದೊಡ್ಡದಾದ ಹನುಮನ ಶಿಲ್ಪವಿದೆ. ಇದರ ಎಡಬದಿ ಸೂರ್ಯನ ವಿಗ್ರಹ ಬಲಬದಿ ಶೈವ ಯತಿಯ ವಿಗ್ರಹಗಳು ಕಂಡು ಬರುತ್ತವೆ. ಇದಕ್ಕೂ ಮೊದಲು ಇಲ್ಲಿ ವ್ಯಾಸನ ವಿಗ್ರಹವಿತ್ತೆಂದು ಆರ್. ನರಸಿಂಹಚಾರ್ ಅಭಿಪ್ರಾಯ ಪಡುತ್ತಾರೆ. ಗುಡಿಯ ಎದುರು ಗರುಡಗಂಭವಿದ್ದು ಅದರ ಕಟ್ಟೆಯ ಮೇಲೆ ಆನೆಗಳ ಉಬ್ಬು ಶಿಲ್ಪವಿದೆ. ಗುಡಿಯ ನಾಲ್ಕು ಕಂಬಗಳ ಮೇಲೆ ಗಣಪತಿ ಮತ್ತು ನೃತ್ಯಗಾರ್ತಿಯರ ಶಿಲ್ಪವಿದೆ. ಈ ದೇವಾಲಯವು ೧೬ನೇ ಶತಮಾನದ ರಚನೆಯಾಗಿದೆ. ಗುಡಿಯ ಸುತ್ತಲೂ ಎರಡೂ ಬದಿಯಲ್ಲಿ ಯಾತ್ರಿಕರ ವಸತಿಗೆ ತೆರೆದ ಮಂಟಪಗಳಿವೆ. ಗುಡಿಯ ಮೇಲ್ಭಾಗದ ಗಾರೆ ಕೆಲಸ ಚನ್ನಾಗಿದ್ದು ಮಧ್ಯದ ಪ್ರಭಾವಳಿಯ ಗೂಢಿನಲ್ಲಿ ನಾರಾಯಣನ ಮೂರ್ತಿಯನ್ನು ಚಿತ್ರಿಸಲಾಗಿದೆ. ಸುತ್ತಲೂ ಮಣ್ಣಿನ ಕಮಲದ ವಿನ್ಯಾಸ ಹಾಗೂ ನಾಲ್ಕು ಬದಿ ಸಿಂಹಗಳ ಚಿತ್ರಣವಿದೆ. ಅದರ ಕೆಳಭಾಗದ ಪಟ್ಟಿಕೆಯಲ್ಲಿ ಹೂವಿನ ಶಿಲ್ಪಗಳಿವೆ. ಮತ್ತು ಮೂಲೆಯಲ್ಲಿ ಹನುಮಂತನ ಭಗ್ನಗೊಂಡ ಶಿಲ್ಪವಿರುವುದು ಕಂಡುಬರುತ್ತದೆ.

೨. ಶ್ರೀರಾಮನ ದೇವಾಲಯ :

ಊರ ಮಧ್ಯದಲ್ಲಿ ಅರಣ್ಯ ಇಲಾಖೆಯ ಅತಿಥಿ ಗೃಹಕ್ಕೆ ಹೋಗುವ ದಾರಿಯ ಎಡಭಾಗದ ಅಂದರೆ ಸಂತೆ ಬಜಾರ್ ಎಂದು ಹಿಂದೆ ಕರೆಯಲಾಗುತ್ತಿದ್ದೆಂದು ತಿಳಿದು ಬರುತ್ತದೆ. ಈ ಸ್ಥಳದಲ್ಲಿ ದೇವಾಲಯವಿದ್ದು ಹುಟ್ಟು ಗುಂಡಿಗೆ ಹೊಂದಿಕೊಂಡಂತೆ ಗರ್ಭಗುಡಿಯನ್ನು ನಿರ್ಮಿಸಿ ಆ ಗುಂಡಿಯಲ್ಲಿ ಮೂರು ಭಾಗಗಳನ್ನು ಮಾಡಿಕೊಂಡು ಎಡಭಾಗದಲ್ಲಿ ಹನುಮನ ದೊಡ್ಡ ಉಬ್ಬು ಶಿಲ್ಪವನ್ನು ಕೆತ್ತಿದ್ದಾರೆ. ಬಲಭಾಗದಲ್ಲಿ ನಾಲ್ಕು ಕೈಗಳನ್ನು ಹೊಂದಿದ ನಾರದನ

ಶಿಲ್ಪವನ್ನು ಕೆತ್ತಿದ್ದಾರೆ. ತನ್ನ ಕೈಗಳಲ್ಲಿ ಉದ್ದವಾದ ತಂಬೂರಿಯನ್ನು ಹಿಡಿದು ನಿಂತಿದ್ದಾನೆ. ಮಧ್ಯಭಾಗದಲ್ಲಿ ರಾಮನ ಪಟ್ಟಾಭಿಷೇಕದ ಚಿತ್ರಣವಿದ್ದು ರಾಮ, ಲಕ್ಷ್ಮಣ, ಸೀತೆಯ ಶಿಲ್ಪಗಲು ಅಲ್ಲಿ ನೋಡಬಹುದು. ರಾಮನ ಕೈಯಲ್ಲಿ ಕೋದಂಡವನ್ನು ಕಾಣಬಹುದು. ರಾಮ ಲಕ್ಷ್ಮಣ ಸೀತೆಯರ ಎಡ ಬಲದ ವಾನರ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳನ್ನು ಹುಟ್ಟು ಗುಂಡಿಯಲ್ಲಿ ಬಿಡಸಲಾಗಿದೆ. ಕೆಳಭಾಗದಲ್ಲಿಯೂ ನಾಗರ ಶಿಲ್ಪಗಳು ಮತ್ತು ಹನುಮನ ಚಿತ್ರಗಳನ್ನು ಬಿಡಿಸಲಾಗಿದೆ.

ಬಾಗಿಲುವಾಡದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಎರಡೂ ಕಡೆ ಅಪ್ಸರೆಯರನ್ನು ಬಿಡಿಸಲಾಗಿದೆ. ಸುಂದರವಾದ ಬಳ್ಳಿ, ಸ್ತ್ರೀ ಶಿಲ್ಪ, ಕುದುರೆ ಮತ್ತು ಬಾಗಿಲ ಎರಡೂ ಕಡೆ ಜಯ–ವಿಜಯರನ್ನು ಕೆತ್ತಲಾಗಿದೆ. ತೆರೆದ ಮುಖ ಮಂಟಪ ಹೊಂದಿದ್ದು ೬ ಸಾಧಾರಣ ಶೈಲಿಯ ಕಂಬಗಳಿವೆ. ಅದರಲ್ಲಿ ವೀರ, ಕಮಲ, ಕಾಳಿಂಗವಧನ, ಕೃಷ್ಣನ ಚಿತ್ರ, ಹಸು, ಕರು, ಲಜ್ಜೆ ಗೌರಿ, ವಾದ್ಯಗಾರರು ಮುಂತಾದ ಶಿಲ್ಪಗಳನ್ನು ಆಕರ್ಷಕವಾಗಿ ಸುಂದರವಾಗಿ ಕೆತ್ತಲಾಗಿದೆ. ಪಾಳೆಗಾರರ ಕಾಲದ ಈ ದೇವಾಲಯಕ್ಕೆ ಶಿಖರ ಶಿಥಿಲವಾಗಿ ಹೋಗಿದೆ. ದೇವಸ್ಥಾನದ ಮೇಲ್ಭಾವಣಿಯಲ್ಲಿ ತೆಲುಗಿನಲ್ಲಿ ಬರೆದ ಆರು ಸಾಲಿನ ಶಾಸನ ಹೊಂದಿದೆ. ಈ ಶಾಸನವು ನಿಡುಗಲ್ಲಿಗೆ ಪುಟ್ಟರಸುವಿನ ಮಗ ಯಲ್ಲಪ್ಪ ಉಯ್ಯಾಲೆ ಮಾಡಿಸಿಕೊಟ್ಟಂತೆ ತಿಳಿಸುತ್ತದೆ.

೩. ಆದಿನಾರಾಯಣ ಮಂಟಪ :

"ನಿಡುಗಲ್ಲು ಬೆಟ್ಟದಲ್ಲಿ ಪಾವಗಡ ಕೋಟೆ ಬಾಗಿಲ ಕಡೆ ಮೂಲೆಯಲ್ಲಿರುವ ಈ ದೇವಾಲಯ ಉತ್ತಾರಾಭಿಮುಖವಾಗಿ ನಿರ್ಮಾಣಗೊಂಡಿದೆ. ಗರ್ಭಗೃಹದಲ್ಲಿ ದೇವಾಲಯದ ಪೀಠ ಮತ್ತು ಭಗ್ನಗೊಂಡ ಕೈಗಳಿಲ್ಲದ ಆದಿನಾರಾಯಣ ವಿಗ್ರಹವಿದೆ. ಮಂಟಪದ ಮೇಲೆ ಗಾರೆ ಗೋಪುರವಿದ್ದು ೮x೮ ಅಳತೆಯ ಈ ಮಂಟಪ ಸರಳ ರಚನೆಯಿಂದ ಕೂಡಿದು ಹೊಯ್ಸಳರ ಕೈಲಿಯಲ್ಲಿದೆ. ದೇವಾಲಯದ ಪದಸ್ತಲ ಅದಕ್ಕೆ ಉತ್ತಮ ಉದಾಹರಣೆಯಾಗಿದೆ. ಗರ್ಭಗುಡಿಯಲ್ಲಿರುವ ಕಪ್ಪು ಶಿಲ್ಪವು ನಾಲ್ಕು ಕೈಗಳನ್ನು ಕಳೆದು ಕೊಂಡಿದ್ದರೂ ೧೯೩೮ರಲ್ಲಿ ಭೇಟಿ ನೀಡಿದ್ದ ಆರ್. ನರಸಿಂಹಚಾರ್ ನಾಲ್ಕು ಕೈಗಳಲ್ಲಿ ಶಂಕ, ಗದೆ, ಪದ್ಮ, ಚಕ್ರವಿದ್ದವೆಂದು ತಿಳಿಸುತ್ತಾರೆ. ದೇವಾಲಯದ ಪದಸ್ತರ ನಾಲ್ಕು ಅಂತಸ್ತಿನಿಂದ ಕೂಡಿರುವುದು ಹೊಯ್ಸಳ ಶೈಲಿಗೆ ಉದಾಹರಣೆ. ದೇವಾಲಯದ ಮುಂದೆ ಹುಣಸೆ ಮರದ ಕೆಳಗೆ ಒಂದು ವೀರಗಲ್ಲು ಇದೆ. ಈ ದೇವಾಲಯ ಸಂಪೂರ್ಣ ನಶಿಸಿ ಹೋಗಿದೆ ಎಂದು ಹೇಳಬಹುದು.

೪. ಲಕ್ಷ್ಮೀನರಸಿಂಹ ದೇವಾಲಯ:

"ಇದೆ ಸಾಲಿನಲ್ಲಿ ನಗರೇಶ್ವರ ದೇವಾಲಯವು ಇದೆ. ಅದಕ್ಕೆ ಹೊಂದಿಕೊಂಡಂತೆ ಇರುವ ಈ ದೇವಾಲಯ ಇಡೀ ನಿಡುಗಲ್ಲು ಬೆಟ್ಟದಲ್ಲಿ ಭದ್ರವಾಗಿರುವ ಸುಣ್ಣಬಣ್ಣಗಳಿಂದ ಅಲಂಕೃತಗೊಂಡಿರುವ ಮತ್ತು ಪೂಜೆ, ಪುನಸ್ಕಾರಗಳು ಸುಗಮವಾಗಿ ನಡೆದುಕೊಂಡು

ಹೋಗುತ್ತಿರುವ ದೇವಾಲಯ ಇದಾಗಿದ್ದು, ದೊಡ್ಡದಾಗಿಯೇ ಇದೆ. ದಕ್ಷಿಣಕ್ಕೆ ಮುಖಮಾಡಿರುವ ಈ ಗುಡಿ ವಿಶಾಲವಾಗಿದ್ದು ೪ ಕಂಬಗಳ ತೆರೆದ ಮಂಟಪ, ೪ ಕಂಬಗಳ ನವರಂಗ, ಸುಖನಾಸಿ ಮತ್ತು ಗರ್ಭಗುಡಿಯನ್ನು ಹೊಂದಿದೆ. ಸರಳ ಶೈಲಿಯಿಂದ ಕೂಡಿದ ಈ ದೇವಾಲಯವನ್ನು ರಚನೆಯ ದೃಷ್ಟಿಯಿಂದ ೧೬ನೇ ಶತಮಾನಕ್ಕೆ ಸೇರಿಸಬಹುದು. ನವರಂಗದ ಕಂಬಗಳು ಅಲಂಕಾರವಿಲ್ಲದೆ ಸರಳವಾಗಿದ್ದು ಗರ್ಭಗೃಹದಲ್ಲಿ ಲಕ್ಷ್ಮೀನರಸಿಂಹ ಮತ್ತು ಇತರ ದೇವತೆಗಳ ಸಮೂಹ ಶಿಲ್ಪವಿದೆ. ನವರಂಗದಲ್ಲಿ ಕೇಶವ, ನಾಗ ಶಿಲ್ಪಗಳನ್ನು ಕಾಣಬಹುದು. ಮತ್ತು ಗೋಡೆಯ ಬಲಭಾಗದಲ್ಲಿ ಪ್ರಹ್ಲಾದ, ಸೂರ್ಯ, ನಾರದ, ವಶಿಷ್ಠ, ಹನುಮಂತ, ಶ್ರೀರಾಮ, ಸೀತೆ, ಲಕ್ಷ್ಮಣರ ಉಬ್ಬು ಶಿಲ್ಪಗಳನ್ನು ಕೆತ್ತಿದ್ದು ಅವುಗಳಿಗೆ ಇತ್ತೀಚಿಗೆ ಬಣ್ಣ ಹಚ್ಚಿದ್ದಾರೆ. ಗುಡಿಯ ಎದುರು ಭಾಗದಲ್ಲಿ ಚಿಕ್ಕ ಕಟ್ಟೆಯ ಮೇಲೆ ಒಂದು ಜೊತೆ ಪಾದಗಳಿವೆ. ಗುಡಿಯ ಎಡ ಭಾಗದಲ್ಲಿ ಒಂದು ಬೃಂದಾವನವಿದೆ. ಇದು ಮೂಲದಲ್ಲಿ ವೈಷ್ಣವ ಗುಡಿಯಾಗಿತ್ತೆಂದು ಕಂಡು ಬರುತ್ತದೆ. ಗುಡಿಯ ಎದುರು ಭಾಗದಲ್ಲಿ ಚಿಕ್ಕ ಚಿಕ್ಕ ಎರಡು ಮಂಟಪಗಳಿದ್ದು ಹನುಮಂತ ಮತ್ತು ಗರುಡರ ವಿಗ್ರಹಗಳನ್ನು ಇಡಲಾಗಿದೆ. ಇತ್ತೀಚಿಗೆ ಕೆಲವರು ಇಲ್ಲಿಯೇ ವಾಸುತ್ತಿದ್ದಾರೆ. ಅವರೇ ಈ ದೇವಾಲಯದ ಜವಬ್ದಾರಿಯನ್ನು ನೋಡಿಕೊಳ್ಳುತ್ತಿದ್ದು ಗುಡಿಯ ಜೀರ್ಣೋದ್ಧಾರವನ್ನು ಮಾಡಿ ಅಲಂಕರಿಸಿದ್ದಾರೆ.

೫. ಲಕ್ಷ್ಮಣೇಶ್ವರ ದೇವಾಲಯ:

"ಬೆಟ್ಟದ ಶಿಖರಕ್ಕೆ ಹೋಗುವ ದಾರಿಯಲ್ಲಿ ಬೆಸ್ತರ ಕೋಟೆ ಹೊರ ವಲಯದಲ್ಲಿ ಸ್ವಲ್ಪ ಮುಂದಕ್ಕೆ ಹೋದರೆ ಮಾಟನೂರು ಕೋಟೆ ಬಾಗಿಲು ಸಿಗುತ್ತದೆ. ಈಗ ರಂಗಸಮುದ್ರಕ್ಕೆ ಈ ಮಾರ್ಗವಾಗಿಯೇ ಕಾಲು ದಾರಿಯೊಂದಿದೆ. ಮಾಟನೂರು ಕೋಟೆ ಬಾಗಿಲು ಒಳಭಾಗದಲ್ಲಿ ಎಡಗಡೆ ಗುರುತೇ ಸಿಗದ ರೀತಿ ಗಿಡಗಳ ಮಧ್ಯೆ ಬಿದ್ದು ಹೋಗಿರುವ ದೇವಾಲಯವೇ ಈ ಲಕ್ಷ್ಮಣೇಶ್ವರ ದೇವಾಲಯ, ಇಲ್ಲೇ ಒಂದು ಶಾಸನವಿದ್ದು, ಚಿಕ್ಕ ತಿಪ್ಪನೃಪನು ತನ್ನ ಹೆಸರಿನಲ್ಲಿ ಈ ಗುಡಿಯನ್ನು ಕಟ್ಟಿಸಿ ದಾನ ನೀಡಿದ ವಿವರವನ್ನು ಶಾಸನ ತಿಳಿಸುತ್ತದೆ." ಇಂದು ಶಾಸನ ಮಾತ್ರ ಸುಸ್ಥಿತಿಯಲ್ಲಿದ್ದು, "ದೇವಾಲಯದ ಬಿದ್ದು ಹೋದ ಕೇವಲ ಗರುಡಗಂಭ ಕೆಲವು ಬೋದಿಗಳು, ಒಂದು ಭುವನೇಶ್ವರಿಯ ಕಮಲ ಚಿತ್ರ ಮಾತ್ರ ಬಿದ್ದಿದೆ." ಈ ಗುಡಿ ಹಿಂದೆ ಬಹಳ ಚೆನ್ನಾಗಿದ್ದು ಇತ್ತೀಚಿಗೆ ಹಾಳಾಯಿತೆಂಬ ಸ್ಥಳೀಯರು ಹೇಳುತ್ತಾರೆ. "ಇದಕ್ಕೆ ನಿಧಿಗಳ್ಳರ ದುರಾಸೆಯೆ ಕಾರಣವಾಗಿದೆ."

ಹೀಗೆ "ಕರ್ನಾಟಕದ ಪುರಾತನ ಧರ್ಮಗಳಲ್ಲೊಂದಾದ ವೈಷ್ಣವ ಧರ್ಮ ತನ್ನ ಕೊಡುಗೆಗಳನ್ನು ಜನ ಸಾಮಾನ್ಯರಿಗೆ ದೇವಾಲಯಗಳಿಗೆ ಅವುಗಳ ಧಾರ್ಮಿಕ ಆಚರಣೆ ವಿಧಿವಿಧಾನಗಳ ಮೂಲಕ ತಲುಪುವಂತೆ ಮಾಡಿದೆ. ಒಂದು ಸಮೂಹದ ಸಂಘಟನೆ ಧಾರ್ಮಿಕ ಸಂಘದ ಕಾರ್ಯ ಚಟುವಟಿಕೆಗಳ ಕೇಂದ್ರವಾಗಿ ದೇವಾಲಯಗಳು ಇಡೀ ಜೀವನದ ಮೇಲೆ

ನಿಯಂತ್ರಣ ಹೊಂದಿತ್ತೆಂದು ಹೇಳಬಹುದು ಹಾಗಾಗಿ ವೈಷ್ಣವ ದೇವಾಲಯಗಳ ಹಿನ್ನಲೆಯನ್ನು ಕಂಡಾಗ ನಿಡುಗಲ್ಲಿನ ಪಾಳೆಗಾರರು ಇದನ್ನು ರಾಜ ಧರ್ಮವಾನ್ನಾಗಿ ಮಾಡಿಕೊಂಡು ಆಚರಿಸಿದನು, ಅನುಸರಿಸಿದರು ಎಂಬುದನ್ನು ಚಿಕ್ಕತಿಪ್ಪರಾಜ ಹೆಂಡತಿ ಲಕ್ಷ್ಮಾದೇವಿ ಮರಣ ಹೊಂದಿದಾಗ ಅವಳ ಹೆಸರಿನಲ್ಲಿ ಲಕ್ಷ್ಮಣೇಶ್ವರ ದೇವಾಲಯವನ್ನು ಕಟ್ಟಿದ್ದನು ಈ ಸಂದರ್ಭದಲ್ಲಿ ಗಮನಿಸಿದಾಗ ತಿಳಿದುಬರುತ್ತದೆ.

ಕೊನೆಟಿಪ್ಪಣಿಗಳು

೧. ತಿಪ್ಪೆರುದ್ರಸ್ವಾಮಿ ಡಾ., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ – ೨೩೭

೨. ಪರಮಶಿವಮೂರ್ತಿ ಡಾ. ಡಿ.ವಿ., ಕನ್ನಡ ಶಾಸನಶಿಲ್ಪ, ಪುಟ – ೫೫

೩. ಯೋಗೀಶ್ವರ ಡಾ. ಸಿ.ಪಿ, ನಿಡುಗಲ್ಲು ಅರಸರ ಬಿರುದುಗಳು, ಪುಟ – ೩೫.

೪. ನಿಡುಗಲ್ಲು ಅರಸರ ವಂಶಾವಳಿ, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ, ೧೯೬೨, ೧೭.೦೨.ಜುಲೈ

೫. ಬಸವರಾಜ್ ಡಿ.ಆರ್., ನಿಡುಗಲ್ಲು ದುರ್ಗ, ೨೦೦೬, ಪುಟ ೧೨.

೬. ಇದೇ, ಪುಟ – ೨೪.

೭. ಚಿತ್ತಯ್ಯ ಪೂಜಾರ್ ಡಾ.ಡಿ.ಕೆ., ನಿಡುಗಲ್ಲು ದುರ್ಗದ ಕಥನ, ಪುಟ– ೧೦೭

೮. ಇದೇ, ಪುಟ – ೧೦೮.

೯. ಪಂಚಮುಖಿ ಆರ್.ಆರ್., ಕರ್ನಾಟಕದ ಶಾಸನಗಳು, ಪೀಠಿಕೆ

೧೦. ದೇಸಾಯಿ ಪಿ.ಬಿ., ಕನ್ನಡ ನಾಡಿನ ಶಾಸನಗಳು, ಪುಟ – ೨೧

೧೧. ವಾಸುದೇವ ಬಡಿಗೇರ ಡಾ., ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪುಟ – ೮೦.

೧೨. ಎ.ಕ.ಸಂ XII ಪಾವಗಡ ೪೩ ಕ್ರಿ.ಶ ೧೧೫೦.

೧೩. ಇದೇ, ೩೫, ೧೧೬೭

೧೪, ಇದೇ, ೫೪, ೧೫೧೫

೧೫. ಇದೇ, ೬೨, ೧೫೪೦

೧೬. ಇದೇ, ೩೪, ೧೫೫೦

೧೭. ಇದೇ, ೩೯, ೧೫೫೪

೧೮. ಇದೇ, ೩೮, ೧೫೫೪

೧೯. ಇದೇ, ೬೧, ೧೬೬೩

೨೦. ಇದೇ, ೪೬, ೧೬೭೦

೨೧. ಇದೇ, ೪೯, ೧೬೮೧

೨೨. ಇದೇ, ೬೦, ೧೭೦೫

೨೩. ಇದೇ, ೪೦, ೧೫೨೫

೨೪. ಇದೇ, ೫೮, ೧೬೭೫.

೨೫. ಇದೇ, ೫೦, ೧೨೪೮

೨೬. ಇದೇ, ೩೭, ೧೫೬೬.

೨೭. ಇದೇ, ೧೦೬, ೧೨೮೦.

೨೮. ಇದೇ, ೫೩, ೧೨೯೨.

ಅಧ್ಯಾಯ ನಾಲ್ಕು

ನಿಡುಗಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ ನಾಲ್ಕು

ನಿಡುಗಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಒಂದು ಸ್ಥಳದ ಸಾಂಸ್ಕೃತಿಕ ಅಧ್ಯಯನ ಎಷ್ಟು ಮುಖ್ಯವೋ ಸಾಮಾಜಿಕ ಅಧ್ಯಯನವೂ ಅಷ್ಟೆ ಮುಖ್ಯ. ಸಹಸ್ರಾರು ವರ್ಷಗಳಿಂದ ಶ್ರೀ ಸಾಮಾನ್ಯನ ಬದುಕು ತುಳಿತಕ್ಕೆ ಸಿಕ್ಕಿರುವುದು ಶೋಚನೀಯ. ಆದರೆ ಈ ಶತಮಾನದ ಬದುಕಿನ ದಾರಿಯೇ ಭಿನ್ನ ಶ್ರೀ ಸಾಮಾನ್ಯನು ಇಂದು ಅಜರಾಮರನಾಗುತ್ತಿರುವುದು ವ್ಯಕ್ತಿ ಸ್ವಾತಂತ್ರ್ಯದ ಕೊಡುಗೆ ಪ್ರಪಂಚದ ಚರಿತ್ರೆಯೆಂದರೆ ಸ್ವಾತಂತ್ರ್ಯದ ಚರಿತ್ರೆ ಅಷ್ಟೆ ಏಕೆ ಸ್ವಾತಂತ್ರ್ಯವಿಲ್ಲದ ಸಂಸ್ಕೃತಿಯೂ, ನಾಗರೀಕತೆಯೂ ಬೆಳೆಯಲಾರವು ಇಂತಹ ಜನಾಂಗವೂ ತನ್ನದೇ ಆದ ವೈಶಿಷ್ಟ ಪೂರ್ಣವಾದ ಸಂಸ್ಕೃತಿಯನ್ನು ನಾಗರೀಕತೆಯನ್ನು ಪಡೆದಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಬೆಳದು ಬಂದ 'ನಿಡುಗಲ್ಲು' ದುರ್ಗವು ಸಹ ತನ್ನದೇ ಆದ ಸಾಮೂಹಿಕ, ಸಾಂಸ್ಕೃತಿಕ ಚರಿತ್ರೆಯನ್ನು ಒಳಗೊಂಡಿದೆ. ಅದನ್ನು ಈ ಕೆಳಗಿನಂತೆ ತಿಳಿಯಲು ಪ್ರಯತ್ನಿಸಲಾಗಿದೆ.

ಜನಾಂಗದ ಸ್ವರೂಪ : ನಿಡುಗಲ್ಲು ಗ್ರಾಮ ಮೂರು ಹಂತದಲ್ಲಿ ಚದುರಿಕೊಂಡಿದ್ದು ಇವರೆಲ್ಲಾ ಮೊದಲು ಕೋಟೆಯ ಒಳಗಡೆ ಮತ್ತು ಬೆಟ್ಟದ ಬುಡದಲ್ಲಿ ಇದ್ದವರು. ಕಾಲಾನಂತರ ಬಹಳ ಇತ್ತೀಚೆಗೆ ಅವರವರ ಅನುಕೂಲಕ್ಕೆ ತಕ್ಕಂತೆ 'ದೇವಾರಾಯನ ರೊಪ್ಪ' ಹಟ್ಟಿ ಪಕ್ಕದಲ್ಲೆ ನಿರ್ಮಾಣವಾಗಿದೆ. ಬೆಟ್ಟದಲ್ಲಿ ಕೋಟೆ ಒಳಗಿರುವ ಮನೆಗಳ ಸ್ಥಳವನ್ನು 'ಮ್ಯಾಗಳಪೇಟೆ'ಯೆಂದೇ ಈಗಲೂ ಕರೆಯುತ್ತಿದ್ದು, ಮೊದಲೇ ಹೇಳಿದಂತೆ ಇಲ್ಲಿ ಸುಮಾರು ಹದಿನೈದು ಕುಟುಂಬಗಳು ವಾಸಿಯಾಗಿವೆ. ಈ ಕುಟುಂಬದ ವರ್ಗದವರೆಲ್ಲಾ ನಾಯಕ ಜಾತಿಗೆ ಸೇರಿದವರಾಗಿದ್ದಾರೆ. ಇನ್ನು ಕೆಳಗಿಳಿದು ಬೆಟ್ಟದ ಬುಡಕ್ಕೆ ಹೊಂದಿಕೊಂಡಂತೆ ಇರುವ ಊರನ್ನು 'ನಿಡುಗಲ್ಲು' ಎಂದು ಕರೆಯುತ್ತಾರೆ. ಇಲ್ಲಿ ನಾಯಕ, ಲಿಂಗಾಯತ, ಕುರುಬ, ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಮುಸ್ಲಿಂ ಧರ್ಮಕ್ಕೆ ಸೇರಿದ ಕುಟುಂಬಗಳಿದ್ದು, ಊರು ಸುಮಾರು ಐವತ್ತು

ಮನೆಗಳನ್ನು ಹೊಂದಿದೆ. ನಿಡುಗಲ್ಲು ಊರಿನಿಂದ ಸ್ವಲ್ಪ ಮುಂದೆ ಬಂದರೆ ಅಂದರೆ ನಿಡುಗಲ್ಲಿಗೆ ಹೋಗುವಾಗ ಮೊದಲು ಸಿಗುವ ಮನೆಗಳ ಸಮೂಹವೇ 'ದೇವರಾಯನ ರೊಪ್ಪ' ಇಲ್ಲಿಯೂ ಸಹ ಕುರುಬ, ವಕ್ಕಲಿಗ, ಪರಿಶಿಷ್ಟ ಜಾತಿ, ನಾಯಕ ಜಾತಿಗೆ ಸೇರಿದ ಸುಮಾರು ನಲವತ್ತರಿಂದ ನಲವತ್ತೈದು ಕುಟುಂಬಗಳಿವೆ. ಒಟ್ಟಾರೆ ನಿಡುಗಲ್ಲಿನಲ್ಲಿರುವ ಜಾತಿಗಳ ಅಥವಾ ಜನಾಂಗದ ಸ್ವರೂಪವನ್ನು ಆಯಾ ಜಾತಿಗಳ ಬಿಡಿ ಅಧ್ಯಯನದ ಮೂಲಕ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ನಾಯಕ ಜನಾಂಗ: ಹಿಂದೂ ಮೂಲದ ಹಲವಾರು ಜಾತಿಗಳಲ್ಲಿ ತಮ್ಮ ಹೆಸರಿನ ಕೊನೆಯಲ್ಲಿ 'ನಾಯಕ' ಎಂದಿಟ್ಟುಕೊಂಡಿರುವುದು ಕರ್ನಾಟಕದಾದ್ಯಂತ ಪ್ರಚಲಿತದಲ್ಲಿದೆ. ನಿಡುಗಲ್ಲು ಗ್ರಾಮದ ನಾಯಕರು ಬೇಡರ ಜಾತಿಗೆ ಸೇರಿದವರಾಗಿದ್ದಾರೆ. ಇವರು ಕೂಲಿ ಕಸುಬನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳಾದ ವ್ಯವಸಾಯ, ಕೂಲಿ, ದನ, ಮೇಕೆ ಮೇಯಿಸುವುದರಲ್ಲಿ ತೊಡಗಿದ್ದಾರೆ. ಅದರ ಜೊತೆಗೆ ನಾಟಿ ಔಷಧಿ ಕೊಡುತ್ತಾರೆ. ಕಾಮಾಲೆ, ಕೆಮ್ಮು, ನಾಯಿಕೆಮ್ಮು, ಬರಕಲು ರೋಗ (ಜಾಂಡಿಸ್), ಚೇಳು ಕಚ್ಚಿರುವುದಕ್ಕೆ, ಹಾವು ಕಚ್ಚಿರುವುದಕ್ಕೆ ಮುಂತಾದ ರೋಗಗಳಿಗೆ ವೈದ್ಯ ಮಾಡುತ್ತಾರೆ. ನಾಯಕ ಜಾತಿಯಲ್ಲಿ ಅನೇಕ ಒಳ ಪಂಗಡಗಳನ್ನು ಕಾಣಬಹುದು. ನೂರಾರು ವರ್ಷಗಳಿಂದ ಇವರು ನಿಡುಗಲ್ಲಿನಲ್ಲೇ ವಾಸವಾಗಿದ್ದಾರೆ. ಅವರ ಮೂಲ ಪಾಳೇಗಾರರು ಎಂದು ಹೇಳಿಕೊಳ್ಳುತ್ತಾರೆ. ಈಗಲೂ ಬೆಳ್ಳಿ ಬಟ್ಟಲು, ಕದಿರೇಹಳ್ಳಿಯಲ್ಲಿ ಪಾಳೇಗಾರರ ಮೂಲ ವಂಶದವರು ಇದ್ದಾರೆ ಎಂದು ತಿಳಿದುಬರುತ್ತದೆಯಾದರೂ ಅವರು ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ಅದರ ಬಗ್ಗೆ ನಮಗೇನೂ ತಿಳಿಯದು ಎಂದಷ್ಟೇ ಉತ್ತರ ನೀಡುತ್ತಾರೆ.

ಇಲ್ಲಿಯ ನಾಯಕ ಜಾತಿಗೆ ಸೇರಿದವರು ಈಗಲೂ ಸಹಾ ಸಾರ್‍ವಾಡಪ್ಪ, ಬೊಮ್ಮಣ್ಣ, ಹೊಟ್ಟೆಣ್ಣ ಎಂದು ಹೆಸರಿಟ್ಟುಕೊಳ್ಳುತ್ತಾರೆ. ಈ ಹೆಸರುಗಳಿಗೂ ನಿಡುಗಲ್ಲಿನ ಪಾಳೆಗಾರರ ಹೆಸರುಗಳಿಗೂ ನೇರ ಸಂಬಂಧವನ್ನು ನಾವು ಇಲ್ಲಿ ಕಾಣಬಹುದು. ಅದರ ಜೊತೆಗೆ ಅವು ಅಲ್ಲಿರುವ ದೇವರುಗಳ ಹೆಸರುಗಳೂ ಆಗಿವೆ. ಅವುಗಳನ್ನೇ ಅವರು ಮನೆ ದೇವರುಗಳೆಂದು ಹೇಳಿಕೊಳ್ಳುತ್ತಾರೆ. ಅವುಗಳ ಜೊತೆಗೆ ಬೇರೆ ಬೇರೆ ದೇವರುಗಳ ಜಾತ್ರೆ ಉತ್ಸವ ಊರಹಬ್ಬ ಆಚರಣೆಗಳಲ್ಲಿ ಭಾಗಿಯಾರುತ್ತಾರೆ. ಎಲ್ಲಾ ಹಿಂದೂ ದೇವತೆಗಳನ್ನು ಪೂಜಿಸುತ್ತಾರೆ. ಹಳ್ಳಿ ಜನತೆಯ ಜೊತೆ ಬೆರೆತು ಸೌಹಾರ್ದಯುತವಾದ ಬದುಕು ಸಾಗಿಸುತ್ತಾ ಎಲ್ಲರನ್ನು ಪ್ರೀತಿಸಿ ಬೆರೆಯುವ ಮಾನವೀಯತೆ ಹೊಂದಿದ್ದಾರೆ. ನಿಡುಗಲ್ಲಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಈ ಜನಾಂಗವೇ ಇದೆ.

ಕುರುಬರು : ಮೇಗಳಪೇಟೆ ಮತ್ತು ನಿಡುಗಲ್ಲಿ ಗ್ರಾಮದಲ್ಲಿ ನಾಯಕ ಜನಾಂಗದ ಸಂಖ್ಯೆ ಹೆಚ್ಚಿಗೆ ಇದ್ದರೆ ದೇವರಾಯನ ರೊಪ್ಪದಲ್ಲಿ ಇವರ ಸಂಖ್ಯೆಯೇ ಹೆಚ್ಚು ತಮ್ಮ ಕುಲ ಕಸುಬನ್ನ ಇವರು ಇಂದು ಆಧುನಿಕವಾಗಿ ಮಾಡುವಲ್ಲಿ ನಿಷ್ಠಾವಂತರಾಗಿದ್ದಾರೆ. ಅದರ ಜೊತೆಗೆ ವ್ಯವಸಾಯ, ಕೂಲಿ, ರೇಷ್ಮೆ ಮುಂತಾದ ಕಸುಬಿನಲ್ಲಿ ತೊಡಗಿದ್ದಾರೆ. ಇವರು ಶಿಕ್ಷಣಕ್ಕಿಂತ ಹೆಚ್ಚಿಗೆ ಇದೇ ವೃತ್ತಿಯನ್ನು ಮಕ್ಕಳಿಗೆ ಕಲಿಸುತ್ತಾರೆ ಮತ್ತು ಒಂದು ಸಹಕಾರ ಸಂಘವನ್ನು ನಿರ್ಮಾಣ

ಮಾಡಿಕೊಂಡು ಅದರಿಂದ ಅನೇಕ ಸವಲತ್ತನ್ನು ಪಡೆಯುತ್ತಿದ್ದಾರೆ. ಮುದುಕರು ಮತ್ತು ಮಕ್ಕಳು ಕಂಬಳಿ ದಾರ ಸುತ್ತುವುದರಲ್ಲಿ ನಿರತರಾದರೆ, ಯುವಕರು ಅವುಗಳನ್ನು ಮಗ್ಗಕ್ಕೆ ಹೊಂದಿಸಿ ನೇಯ್ಗೆ ಮಾಡುವುದರಲ್ಲಿ ನಿರತರಾಗಿದ್ದಾರೆ. ಇವರಲ್ಲಿಯೂ ಅನೇಕ ಒಳಪಂಗಡದವರಿದ್ದು ಇವರು ನಾವು ಕುರುಬ ಗೌಡರೆಂದು ಕರೆದುಕೊಳ್ಳುತ್ತಾರೆ ಮತ್ತು ತಮ್ಮ ಜಾತಿಗೆ ಸೇರಿದ ಒಬ್ಬ ಸ್ವಾಮಿಯನ್ನು ಸಹಾ ಸೃಷ್ಟಿಸಿಕೊಂಡಿದ್ದಾರೆ. ಇವರು ತಮ್ಮ ಮಕ್ಕಳಿಗೆ ಬೀರಪ್ಪ, ಬೀರಣ್ಣ, ಬೀರಲಿಂಗಪ್ಪ, ಪಾತಲಿಂಗಪ್ಪ ಮುಂತಾದ ಹೆಸರುಗಳನ್ನು ಇಟ್ಟುಕೊಂಡಿರುವುದು ಕಾಣಬಹುದು. ಅವರು ತಮ್ಮ ಮೂಲದ ಬಗ್ಗೆ ಮೊದಲಿಂದಲೂ ಇಲ್ಲಿಯೇ ಇದ್ದೇವೆ ಎಂದು ಹೇಳುತ್ತಾರೆ. ಇವರೂ ಸಹಾ ಊರ ಹಬ್ಬ, ಜಾತ್ರೆ, ಉತ್ಸವ ಮುಂತಾದ ಆಚರಣೆಗಳಲ್ಲಿ ಊರಿನ ಕೆಲಸ ಕಾರ್ಯಗಳಲ್ಲಿ ಎಲ್ಲರಂತೆ ಭಾಗವಹಿಸಿ ಎಲ್ಲಾ ರೀತಿಯವರೊಂದಿಗೆ ಸೌಹಾರ್ದಯುತ ಬದುಕನ್ನು ಪ್ರೀತಿಸುತ್ತಾರೆ.

ಪರಿಶಿಷ್ಟ ಜಾತಿ : ಹೊಲದಿಂದ ಹೊಲೆಯ ಎಂಬ ಶಬ್ದ ಬಂದಿದೆ ಎನ್ನುತ್ತಾರೆ. ಇವರನ್ನು ಹರಿಜನರು, ಪರಿಶಿಷ್ಟ ಜಾತಿಯವರು, ಎಂದೂ ಕರೆಯುವುದುಂಟು, ಮೂಲದಲ್ಲಿ ಹೊಲೆಯ ಮತ್ತು ಮಾದಿಗ ಜಾತಿಗಳು ಬೇರೆ ಬೇರೆ ಇವೆರಡರಲ್ಲೂ ಕೊಟ್ಟು ತೆಗೆದುಕೊಳ್ಳುವ ಸಂಪ್ರಾದಾಯವಿಲ್ಲ, ಹಾಗೆಯೇ ಅವರನ್ನು ಬಲಗೈಯವರು ಎಡಗೈಯವರು ಎಂದು ಗುರುತಿಸಿಕೊಳ್ಳುತ್ತಾರೆ. ಸರ್ಕಾರದ ಜಾತಿ ಪ್ರಮಾಣಪತ್ರದಲ್ಲಿ ಮಾದಿಗ ಜಾತಿಯವರನ್ನು ಆದಿ ಕರ್ನಾಟಕ ಎಂದೂ ಹೊಲೆಯರನ್ನು ಆದಿ ದ್ರಾವಿಡರೆಂದೂ ಗುರುತಿಸುವುದುಂಟು ಒಟ್ಟಾರೆ ಪರಿಶಿಷ್ಟ ಜಾತಿಯಲ್ಲಿ ಇವೆರಡೂ ಪ್ರಮುಖ ಬಣಗಳು ಎನ್ನಬಹುದು. ಇವರು ವಾಸಿಸುವ ಓಣಿ ಅಥವಾ ಕೇರಿಗೆ ಕಾಲೋನಿ ಎಂದು ಕರೆಯುವುದುಂಟು ಎಡಗೈನವರಿಗಿಂತ ನಾವೇ ಶ್ರೇಷ್ಠ ಎನ್ನುತ್ತಾರೆ. ಬಲಗೈನವರು ಇದಕ್ಕೆ ಕಾರಣವಾಗಿ ಅವರು ಕೊಡುವ ಉತ್ತರ ಎಡಗೈನವರು ಸತ್ತ ದನಗಳನ್ನು ತಿನ್ನುತ್ತಾರೆ. ನಾವು ತಿನ್ನುವುದಿಲ್ಲ ಎನ್ನುವುದು.

ಇವರು ತಮಟೆ ಬಾರಿಸುವ ಅರೆ ಬಡಿಯುವ ಕಸುಬನ್ನು ಹೊಂದಿದ್ದರೂ ಸಹ ಅದು ಪೂರ್ಣ ಪೂರ್ತಿಯಾಗಿರದೆ ದನ, ಕುರಿ, ಮೇಕೆಗಳನ್ನು ಮೇಯಿಸುವುದು, ಹಗ್ಗ ಹಾಕುವುದು, ತಟ್ಟಿ, ಬುಟ್ಟಿಗಳನ್ನು ಹೆಣೆಯುವುದು, ಬಡಗಿ ಕೆಲಸ ಮಾಡುವುದು, ವ್ಯವಸಾಯ, ಕೂಲಿಮಗ್ಗ ನೇಯಿಯುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜೊತೆಗೆ ಕಥೆ, ಲಾವಣಿ, ಒಗಟು, ಗಾದೆಗಳನ್ನು ಆದಾರವಾಗಿ ಹೇಳುವ ಹವ್ಯಾಸ ಹೊಂದಿದ್ದಾರೆ. ಇವರು ಸಹಾ ಹಿಂದೂ ದೇವರುಗಳನ್ನೆಲ್ಲಾ ಪೂಜಿಸುತ್ತಾರೆ. ತಮ್ಮ ಮನೆ ದೇವರುಗಳ ಆಚರಣೆಗಳ ಜೊತೆಗೆ ಊರಿನ ಆಚರಣೆಗಳಲ್ಲಿ ಚಟುವಟಿಕೆಗಳಲ್ಲಿ ಭೇಧ, ಭಾವವಿಲ್ಲದೆ ಭಾಗಿಯಾಗುತ್ತಿದ್ದಾರೆ. ಇದು ಸ್ವಾಗತಾರ್ಹ ಸಂಗತಿಯೇ ಸರಿ.

ವಕ್ಕಲಿಗರು : ಹೆಸರೇ ಹೇಳುವಂತೆ ವಕ್ಕಲುತನ ಎಂದರೆ ವ್ಯವಸಾಯ ಮಾಡುವವ ಇಲ್ಲ ವಕ್ಕಲಿಗರು ಸಹ ವ್ಯವಸಾಯವನ್ನೇ ಮಾಡಿಕೊಂಡಿದ್ದಾರೆ. ಅದರಲ್ಲೂ ಅನೇಕ ಒಳಪಂಗಡದವರಿದ್ದರೂ ಸಹ ನಿಡುಗಲ್ಲಿನಲ್ಲಿ ಈ ಜಾತಿಗೆ ಸೇರಿದ ಕುಟುಂಬಗಳು ಎರಡೇ ಮನೆ ಅವರ ಸಂಖ್ಯೆ ಕಡಿಮೆ ಇರುವುದಕ್ಕೆ ಒಂದು ಕಥೆಯನ್ನೇ ಹೇಳುತ್ತಾರೆ. ಅದರ ಒಟ್ಟು ಸಾರಂಶ ಈ ರೀತಿ ಇದೆ.

ಪಾಳೇಗಾರರ ಕಾಲದಲ್ಲಿ ದೊರೆಯ ಮಗ ಈ ವಕ್ಕಲಿಗರ ಜಾತಿಗೆ ಸೇರಿದ ಒಂದು ಹೆಣ್ಣುಮಗಳ ರೂಪಕ್ಕೆ ಮರುಳಾಗಿ ಅವಳನ್ನು ಮದುವೆಯಾಗಬೇಕೆಂದು ಬಯಸಿದನಂತೆ. ಆ ವಿಚಾರ ದೊರೆಗೆಗೊತ್ತಾಗಿ ವಕ್ಕಲಿಗರ ಮನೆಗೆ ತಾನೇ ನಾಳೆ ಖುದ್ದಾಗಿ ವಧು ಕೇಳಲು ಬರುವುದಾಗಿ ಸೇವಕರ ಕೈಯಲ್ಲಿ ಹೇಳಿ ಕಳುಹಿಸಿದನಂತೆ ಆ ರಾತ್ರಿ ಮನೆಯವರೆಲ್ಲರೂ ಮತ್ತು ಆ ಜಾತಿಯವರೆಲ್ಲಾ ಒಟ್ಟಾಗಿ ಸೇರಿ ಆ ವಿಚಾರವಾಗಿ ಮಾತನಾಡುತ್ತಿರುವಾಗ ಹುಡುಗಿಯ ಅಣ್ಣ ತಮ್ಮಂದಿರು ಏಳು ಜನರೂ ಇದ್ದರಂತೆ ಎಲ್ಲರೂ ಹೆಣ್ಣು ಕೊಡಲು ಅವರ ಜಾತಿ ಬೇರೆ ಬೇರೆ ನಮ್ಮ ಜಾತಿ ಬೇರೆ ಕೊಡದಿದ್ದರೆ ದೊರೆಯನ್ನು ಎದುರು ಹಾಕಿಕೊಂಡು ಈ ಊರಿನಲ್ಲಿ ಬಾಳಲು ಸಾಧ್ಯವಿಲ್ಲ ಎಂದು ಅನುಮಾನಿಸುತ್ತಿರುವಾಗ ಕಿರಿಯವನು ಅವನು ಬೇಡ ನಾವು ವಕ್ಕಲಿಗರು ಅವರ ಜಾತಿ ಅವರಿಗೆ ಹೆಚ್ಚಾದರೆ ನಮ್ಮ ಜಾತಿ ನಮಗೆ ಹೆಚ್ಚು ಹೆಣ್ಣು ಕೊಡಲು ಸಾಧ್ಯವಿಲ್ಲ ಎಂದು ತಿಳಿಸುತ್ತಾನೆ.

ಅಂದಿನ ರಾತ್ರಿಯೇ ತಮ್ಮ ಸಾಮಾನು ಸರಕುಗಳನ್ನು ಬಂಡಿಯಲ್ಲಿ ತುಂಬಿಸಿಕೊಂಡು ದನ, ಕರು, ಕುರಿ, ಕೋಳಿಯೆಲ್ಲ ಹೊಡಕೊಂಡು ರಾತ್ರೋರಾತ್ರಿ ದೇವಾರಾಯನ ರೊಪ್ಪವನ್ನು ಬಿಟ್ಟು ಹೊರಟು ಹೋದರಂತೆ ಆದ ಕಾರಣ ಅಂದಿನಿಂದ ಈ ಊರಿನಲ್ಲಿ ನಮ್ಮ ಸಂಖ್ಯೆ ಬಹಳ ಕಡಿಮೆ ಎಂದು ಹೇಳುತ್ತಾರೆ. ಇವರೂ ಸಹಾ ಊರವರೊಟ್ಟಿಗೆ ಸ್ನೇಹ ಸೌಹಾರ್ದದಿಂದ ತಮ್ಮ ಮನೆ ದೇವರುಗಳ ಆಚರಣೆಗಳೊಂದಿಗೆ ಬದುಕುತ್ತಿದ್ದಾರೆ.

ಲಿಂಗಾಯತರು : ಒಂದೇ ಒಂದು ಕುಟುಂಬ ಲಿಂಗಾಯುತ ಜಾತಿಗೆ ಸೇರಿದ ಮನೆ ಈ ಊರಿನಲ್ಲಿದೆ. ಅವರು ಸಹ ಊರಿನವರ ಜೊತೆಯಲ್ಲಿ ಸಾಮರಸ್ಯದಿಂದ ಇದ್ದಾರೆ. ಅವರ ಮನೆ ದೇವರುಗಳ ಜೊತೆಗೆ ಗ್ರಾಮದ ಆಚರಣೆಗಳನ್ನು ಪಾಲಿಸುತ್ತ ಸ್ನೇಹ ಸಹಯೋಗದಿಂದ ಇದ್ದಾರೆ. ಇವರ ವೃತ್ತಿಯೂ ವ್ಯವಸಾಯ ಕೂಲಿಯೇ ಆಗಿದೆ.

ಮುಸಲ್ಮಾನರು : ಮುಸ್ಲಿಂ ಬಾಂಧವರ ಐದು ಕುಟುಂಬಗಳು ಈ ಊರಿನಲ್ಲಿದ್ದು ಇವರು ಸಹ ತಮ್ಮ ಧರ್ಮಕ್ಕೆ ಅನುಸಾರವಾಗಿ ಅಲ್ಲಿರುವ ದರ್ಗದಲ್ಲಿ ನಮಾಜು ಮಾಡುವುದು, ರಂಜಾನ್, ಬಾಬಯ್ಯನ ಹಬ್ಬ, ಬಕ್ರೀದ್, ಈದ್‌ಮಿಲಾದ್, ಉರುಸ್ ಮುಂತಾದ ಸಾಂಸ್ಕೃತಿಕ ಆಚರಣೆಗಳನ್ನು ರೂಢಿಸಿಕೊಂಡಿದ್ದಾರೆ. ಇವರ ಮಿರ್ಜಾ ಹುಸೇನ್ ವಾಲಿ ಉರುಸ್ ವರ್ಷಕ್ಕೊಮ್ಮೆ ನಡೆಯುತ್ತದೆ. ಇದರಲ್ಲಿ ಹಿಂದೂ ಮುಸ್ಲಿಂ ಎಂದು ಭೇದವಿಲ್ಲದೆ ಸರ್ವರೂ ಭಾಗವಹಿಸಿ ಸಡಗರದಿಂದ ಆಚರಿಸುವುದು ಒಂದು ವಿಶೇಷ.

ಇದುವರೆವಿಗೂ ಹಿಂದೂ-ಮುಸ್ಲಿಂ ಗಲಾಟೆ ಎನ್ನುವುದು ಈ ಊರಿನಲ್ಲಿ ನಡದೇ ಇಲ್ಲವೆಂದು ಇಲ್ಲಿಯ ಮುಸ್ಲಿಂರು ಹೇಳುತ್ತಾರೆ. ಎಲ್ಲೆಲ್ಲೊ ಕಿತ್ತಾಡುತ್ತಾರೆ. ಆದರೆ ನಾವೆಲ್ಲಾ ಒಂದೇ ಕಡೆ ದಿನನಿತ್ಯ ಬಾಳು ಮಾಡಬೇಕಾದಂತವರು. ಆ ವಿಷಯದಿಂದ ನಮಗೆ ಆಗಬೇಕಾದುದಾದರು ಏನು? ಎಂದು ಇಲ್ಲಿನ ತರುಣರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ನಾವು ಎಲ್ಲಾ ಜಾತಿಯವರ ಜೊತೆಗೆ ಭೇದಭಾವವಿಲ್ಲದೆ ಅಣ್ಣ-ತಮ್ಮಂದಿರಂತೆ ಇದ್ದೇವೆ ಎನ್ನುತ್ತಾರೆ. ಇಲ್ಲಿನ ಮುಸ್ಲಿಂ ಜನ ಇವರು ಸಹ ಕೂಲಿ, ಬೀಡಿ ಸುತ್ತುವುದು, ಕುರಿ, ಮೇಕೆ ಕಾಯುವ ಕಾಯಕ ಮಾಡಿಕೊಂಡಿದ್ದಾರೆ ಹಾಗೂ ಒಂದು ಮನೆಯವರು ಮಾತ್ರ ಸೈಕಲ್, ಸ್ಕೂಟರ್ ರಿಪೇರಿ ಕೆಲಸವನ್ನು ಮಾಡಿಕೊಂಡಿದ್ದಾರೆ.

ವಿವಿಧತೆಯಲ್ಲಿ ಏಕತೆ : ಕೆಲವಾರು ಸಣ್ಣ ಪುಟ್ಟ ಜಾತಿ ಭೇದದ ಆಚಾರ ವಿಚಾರಗಳು ಬಹಳಷ್ಟು ಹಿಂದೆ ಪ್ರಚಲಿತದಲ್ಲಿದ್ದರೂ ಇತ್ತೀಚಿನ ದಿನಗಳಲ್ಲಿ ಇಂತಹ ಯಾವುದೇ ಸಂಪ್ರದಾಯಗಳು ನಿಡುಗಲ್ಲು ಗ್ರಾಮದಲ್ಲಿ ಬೇರು ಬಿಟ್ಟಿಲ್ಲ. ಹಳೆಯ ಸಂಪ್ರದಾಯವನ್ನೂ ಬಲವಾಗಿ ನಂಬಿದ ಹಳೆ ತಲೆಮಾರಿನವರು ಬೆರಳೆಣಿಕೆಯಷ್ಟು ಜನ ಇದ್ದರು ಕಟ್ಟಾ ಸಂಪ್ರದಾಯಸ್ಥರು ಯಾರು ಇಲ್ಲ. ಈ ಗ್ರಾಮದವರೆಲ್ಲ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುತ್ತಾರೆ. ಆದರೆ ಅವರಲ್ಲಿರುವ ಬಡತನ ಇನ್ನೂ ಅವರನ್ನು ಮುಂದೆ ಸಾಗಲು ಬಿಡುತ್ತಿಲ್ಲ. ಯುವಕರಂತೂ ಆ ನಿಟ್ಟಿನ ಸಮಾಜದ ಒಳಿತು ಎಂದು ನಂಬಿದ್ದಾರೆ. ಸಹಬಾಳ್ವೆ, ಸಹಮತ, ಮಾನವೀಯತೆಯ ಅಂತಃಕರಣವನ್ನು ನಿಡುಗಲ್ಲಿನ ಜನ ಹೊಂದಿದವರಾಗಿದ್ದಾರೆ.

ಗ್ರಾಮದ ಆಧುನೀಕರಣ : ನಿಡುಗಲ್ಲು ಬೆಟ್ಟದ ಕೋಟೆ ಒಳಗಿರುವ ಮನೆಗಳು ಯಾವುದೇ ರೀತಿಯ ಹೊಸತನವನ್ನು ಕಾಣದೆ ಹಾಗೆಯೇ ತೆಂಗಿನ ಗರಿ, ಸೊಪ್ಪು, ತಡಿಕೆಗಳಿಂದ ಅಲಂಕೃತವಾಗಿವೆ. ಇವರಿಗೆ ಸರ್ಕಾರದ ವತಿಯಿಂದ ಕೆಳಗಡೆ ನಿವೇಶಗಳನ್ನು ಕೊಡಲಾಗಿದೆ. ಆದರೂ ಕಟ್ಟಿಕೊಳ್ಳುವ ಸಾಮಾರ್ಥ್ಯವಿಲ್ಲದೆ ಅದೆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಎಲ್ಲರೂ ಕಡು ಬಡವರೆ ಆಗಿದ್ದಾರೆ. ಎಂದು ನಮ್ಮ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ನಿಡುಗಲ್ಲು ಗ್ರಾಮದ ಬೆಟ್ಟದ ಬುಡದಲ್ಲಿರುವವರು ಸ್ವಲ್ಪ ಉತ್ತಮ ಸ್ಥಿತಿಯನ್ನು ತಲುಪುತ್ತಿದ್ದಾರೆ. ಇವರಿಗೆ ಯಾವುದೇ ಆರ್ಥಿಕ ಸೌಲಭ್ಯವಿಲ್ಲ. ಸೀಮೆ ಹೆಂಚುಗಳು, ಬಂಡೆಗಳು ಹಾಗೂ ಕಲ್ಲುಗಳಿಂದ ತಮ್ಮ ಮನೆಗಳನ್ನು ಆಧುನಿಕತೆಗೆ ತಕ್ಕಂತೆ ರಸ್ತೆಯ ಅಕ್ಕಪಕ್ಕ ಕಟ್ಟಿಕೊಂಡಿದ್ದಾರೆ. ಮನೆಗಳ ಮುಂದೆ ತೆಂಗು ಮತ್ತು ಇತರೆ ಗಿಡಮರಗಳನ್ನು ಬೆಳಸಿ ಅಂದವಾಗಿ ಚೊಕ್ಕವಾಗಿ ಇಟ್ಟಿದ್ದಾರೆ. ಮನೆಗಳು ಸಾಮಾನ್ಯವಾಗಿ ಮಲಗುವ ಕೋಣೆ, ಅಡಿಗೆ ಕೋಣೆ ಮತ್ತು ಉಗ್ರಾಣಗಳಗೆಂಬಂತೆ ಮೂರ ಭಾಗ ಮಾಡಿ ಕಟ್ಟಿಕೊಂಡಿದ್ದಾರೆ. ಮನೆಯ ಮುಂದೆ ಅಕ್ಕಪಕ್ಕದಲ್ಲಿ ದನ, ಕುರಿ, ಮೇಕೆಗಳಿಗೆ ರೊಪ್ಪಗಳನ್ನು ನಿರ್ಮಿಸಿಕೊಂಡಿದ್ದಾರೆ.

'ದೇವರಾಯನ ರೊಪ್ಪ'ದಲ್ಲಿ ಮೇಲಿನ ಎರಡೂ ಕಡೆಯ ಜನರಿಗಿಂತ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ಅದಕ್ಕೆ ಕಾರಣ ಆಧುನೀಕರಣಗೊಂಡ ಅವರ ಕಸುಬು, ನೆಯ್ಗೆ, ಹೆಂಚುಗಳ ಬಂಡೆ, ಕಲ್ಲುಗಳನ್ನು ಸೇರಿಸಿ ಕಟ್ಟಿದ ಮನೆಗಳ ಜೊತೆಗೆ ಮಾಳಿಗೆ ಮನೆಗಳನ್ನು ಅವು ವಿವಿಧ ಸುಣ್ಣ ಬಣ್ಣಗಳಿಂದ ಅಲಂಕೃತಗೊಂಡಿರುವುದನ್ನು ಕಾಣಬಹುದು. ಇಲ್ಲಿಯೂ ಮನೆಗಳ ಮುಂದೆ ದನ, ಕುರಿ, ಮೇಕೆಗಳ ರೊಪ್ಪಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ. ಈಗಲೂ ಬೀಸುವ ಕಲ್ಲು, ಹಸೆಕಲ್ಲು, ರುಬ್ಬುಗುಂಡು, ಒನಕೆ, ಮಡಕೆ ವಸ್ತುಗಳು ಇಲ್ಲಿ ಕಂಡುಬರುತ್ತವೆ. ದೂರದರ್ಶನಗಳು ಹಲವಾರು ಮನೆಗಳಲ್ಲಿ ಇಂದು ಕಾಣಬಹುದಾಗಿದ್ದು ಇವು ಆಧುನೀಕತೆಯ ಸಂಪರ್ಕ ಸಾಧನೆಗಳಾಗಿವೆ. ಉಳಿದ ಎಲ್ಲಾ ರೀತಿಯಲ್ಲಿಯೂ ಗ್ರಾಮ ಸುತ್ತಲಿನ ಸಮಾಜದಂತೆ ಬದಲಾಗುತ್ತಿರುವುದನ್ನು ಕಾಣಬಹುದು. ಉಡುಗೆ- ತೊಡುಗೆ, ಊಟ- ಉಪಚಾರ, ತಿಂಡಿ- ತಿನಿಸು ಆಧುನೀಕರಣಗೊಂಡಿದೆಯೆಂದೇ ಹೇಳಬಹುದು. ಹಾಗೆ ಇವರ ನಡಾವಳಿ ನಾಮದೇಯಗಳು ಸಹ ಇದಕ್ಕೆ ಸಾಕ್ಷಿಯಾಗಿವೆ. ಎಂದರೆ ತಪ್ಪಾಗಲಾರದು.

ವ್ಯವಸಾಯ : ಭಾರತ ದೇಶ ಹಳ್ಳಿಗಳ ದೇಶ. ಅದು ಕರ್ನಾಟಕಕ್ಕೇನೂ ಹೊರತಲ್ಲ. ಅದರಲ್ಲೂ ಇಲ್ಲಿನ ಜನ ವ್ಯವಸಾಯವನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಅದನ್ನೇ ನಂಬಿ ಬದುಕುವ ಜನ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಕೆಲವು ತಾಲ್ಲೂಕುಗಳು ಯಾವಾಗಲೂ ಭೀಕರ ಬರಗಾಲಕ್ಕೆ ತನ್ನ ಮೈಯಿಡ್ಡಿ ಕೊಂಡಿರುತ್ತವೆ. ಇಲ್ಲಿಯ ರೈತ ಸದಾ ಪ್ರಕೃತಿಯೊಡನೆ ಸೆಣಸಬೇಕಾಗುತ್ತದೆ. ಇಲ್ಲಿನ ಹವಮಾನ ಬಿಸಿಲಿನಿಂದ ಕೂಡಿರುತ್ತದೆ. ನಿಡುಗಲ್ಲಿನಲ್ಲಿ ವ್ಯವಸಾಯಕ್ಕೆ ಯಾವುದೇ ನದಿ, ಕೆರೆ, ತೊರೆಯ ನೀರಿನ ಸೌಲಭ್ಯವಿಲ್ಲ. ಆದ್ದರಿಂದ ಇಲ್ಲಿನ ರೈತರು ತುಂಡು ಭೂಮಿಯಲ್ಲೆ ಮಳೆಯನ್ನು ನಂಬಿ ಒಣ ಬೇಸಾಯ ಮಾಡುವವರೇ ಹೆಚ್ಚು. ಮಳೆಬಾರದೇ ಇರುವ ವರ್ಷಗಳಲ್ಲಿ ಅನೇಕ ಜನರು ಊರು ಬಿಟ್ಟು ಗುಳೇ ಹೋಗಿ ಮಳೆ ಬಂದಾಗ ಮತ್ತೆ ಊರಿಗೆ ಬಂದಿರುವ ದಿನಗಳೂ ಬೇಕಾದಷ್ಟಿವೆ. ಬಾವಿ, ಕೊಳವೆಬಾವಿಗಳಿಂದ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಾರೆ. ಅದರೆ ಇದು ಎಲ್ಲರಿಂದಲೂ ಸಾಧ್ಯವಿಲ್ಲ. ಇಲ್ಲಿ ಎಲ್ಲರಿಗೂ ಭೂಮಿ ಇಲ್ಲ. ಕೆಲವರಿಗೆ ಮಳೆಗಾಲದಲ್ಲಿ ಮಳೆ ಬಂದರೆ ಮಾತ್ರ ಬೆಳೆ ಇಲ್ಲವಾದರೆ ಏನೂ ಇಲ್ಲ. ಹಾಕಿದ ಬೀಜವೂ ಮರಳಿ ಬರುವುದಿಲ್ಲ. ಸಾಮಾನ್ಯ ರೈತ ವರ್ಗದವರಾದುದರಿಂದ ದುಡಿಮೆಗೆ ಎತ್ತು, ಹಸುಗಳನ್ನೇ ಬಳಸಿಕೊಳ್ಳುತ್ತಾರೆ.

ಇಲ್ಲಿನ ಅಂತರ್ಜಲ ಬಾರಿ ಕುಸಿದಿದ್ದು ಸುಮಾರು ೬೦೦ ಅಡಿಗಳಿಂದ ೧.೦೦೦ ಅಡಿಗಳವರೆಗೆ ಕೊಳವೇ ಬಾವಿಗಳನ್ನು ಕೊರೆಸಬೇಕಾಗುತ್ತದೆ. ಅಷ್ಟಾದರೂ ನೀರು ಸಿಗುವ ನಂಬಿಕೆ ಇಲ್ಲ. ವ್ಯವಸಾಯಕ್ಕೆ ಕೆಲವು ಬಾವಿಗಳಲ್ಲಿ ನೀರು ಬರುತ್ತಿದ್ದು, ಮಳೆಯ ಅಭಾವದಿಂದಾಗಿ ಅಂತರ್ಜಲ ಕುಸಿದಿದೆ. ಆದರೂ ಸಹ ಬೆಟ್ಟದ ಮೇಲೆಲ್ಲಾ ಕಲ್ಯಾಣಿಗಳಲ್ಲಿ ನೀರಿದ್ದು, ಕೆಳಗೆ ವ್ಯವಸಾಯಕ್ಕೆ ನೀರಿಲ್ಲದಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಬೆಳೆಗಳು : ಬಡವರ ಬಾದಾಮಿ 'ನೆಲಗಡಲೆ' ಈ ಭಾಗದಲ್ಲಿ ಸಾಮಾನ್ಯವಾಗಿ ಹೆಚ್ಚಿಗೆ ಬೆಳೆಯುವ ಬೆಳೆಯಾಗಿದೆ. ಇದು ವರ್ಷಕ್ಕೊಮ್ಮೆ ಬರುವ ಬೆಳೆಯಾದರೂ ಮಳೆಯಾಧಾರಿತ ಗಟ್ಟಿ ಬೆಳೆ. ಜನರ ಆರ್ಥಿಕ ವ್ಯವಸ್ಥೆ ಈ ಬೆಳೆಯ ಮೇಲೆಯೇ ನಿಂತಿರುತ್ತದೆ. ಈ ಬೆಳೆ ಕೈಕೊಟ್ಟರೆ ಅವನಿಗೆ ಗುಳೇ ಹೋಗುವುದೇ ದಾರಿ. ಕಡಿಮೆ ಮಳೆ ಬಿದ್ದರೂ ಹೊಂದಿಕೊಳ್ಳುವ ಇಲ್ಲಿನ ಹವಾಮಾನಕ್ಕೆ ಭೂಮಿಗೆ ಸರಿಯಾದ ಬೆಳೆ ಇದಾಗಿದೆ. ನೀರಾವರಿ ಸೌಲಭ್ಯವಿರುವರು ಬೇಸಿಗೆಯಲ್ಲಿಯೂ ಈ ಬೆಳೆಯನ್ನು ಬೆಳೆಯುತ್ತಾರೆ. ಇದು ಇಲ್ಲಿನ ಮುಖ್ಯ ವಾಣಿಜ್ಯ ಬೆಳೆ.

ಇದರ ಜೊತೆಗೆ ತೊಗರಿ, ಹಲಸಂದೆ, ಅವರೆ, ಜೋಳ, ಹುರುಳಿ, ರಾಗಿಯ ಬೆಳೆಯನ್ನು ಬೆಳೆಯುತ್ತಾರೆ. ನೀರಾವರಿಯಲ್ಲಿ ರಾಗಿ, ಭತ್ತ ಮೂಲ ಬೆಳೆಯಾದರೂ ಇತ್ತೀಚೆಗೆ ರೇಷ್ಮೆ ಕೃಷಿಗೆ ಮಾನ್ಯತೆ ಹೆಚ್ಚು ಏಕೆಂದರೆ ಕಡಿಮೆ ಅವಧಿಯಲ್ಲಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಹಣ ಪಡೆಯಬಹುದಾದ ಬೆಳೆ ಇದಾಗಿದೆ. ರೇಷ್ಮೆ ತಂದು ಪೋಷಿಸಿ ಅವು ಗೂಡಿ ಕಟ್ಟಿದ ನಂತರ ಈ ಗೂಡನ್ನು ರಾಮನಗರ, ಚಿಂತಾಮಣಿ, ಹಿಂದೂಪುರ ಮುಂತಾದ ಮಾರುಕಟ್ಟೆಗಳಿಗೆ ಕೊಂಡೊಯ್ದು ಮಾರಾಟ ಮಾಡುತ್ತಾರೆ. ಇದು ಸಹ ಬಡವರಿಂದ ಸಾಧ್ಯವಾಗದ ಕೆಲಸ ರೇಷ್ಮೆ ಹುಳು ಸಾಕಾಣಿಕೆಗೆ ಅದಕ್ಕೆ ಬೇರೆಯಾದ ಮನೆ, ಸಾಮಾನು ಸಲಕರಣೆಗಳ ಅಗತ್ಯವಿರುವುದರಿಂದ ಬಡವರಿಗೆ ನಿಲುಕುವುದಿಲ್ಲ. ನಾಲ್ಕೈದು ಮನೆಯವರು ಮಾತ್ರ ಈ ಬೆಳೆ ಬೆಳೆಯುತ್ತಿದ್ದಾರೆ. ಜೊತೆಗೆ ತರಕಾರಿ, ತೆಂಗು, ಮಾವು ತೀರ ಇತ್ತೀಚಿನದಾಗಿ ಬಾಳೆ, ಅಡಕೆ ಗಿಡಗಳನ್ನು ತೋಟಮಾಡಿ ಬೆಳಸತೊಡಗಿದ್ದಾರೆ.

ವ್ಯವಹಾರ : ನಿಡುಗಲ್ಲು ಪಾಳೇಗಾರರ ಕಾಲದಲ್ಲಿ ಇದೊಂದು ವಾಣಿಜ್ಯ ಕೇಂದ್ರವಾಗಿ ಮೆರೆದಿದ್ದಿತು. ಆದರೆ ಇಂದು ನಿರ್ಗತಿಕರಿಂದ ಕೂಡಿದ ಕಾರಣವಾಗಿ ಅಂತಹ ಹೇಳಿಕೊಳ್ಳುವ ವ್ಯವಹಾರವೇನೂ ಇಲ್ಲ. ಚಿಕ್ಕಪುಟ್ಟ ವ್ಯವಹಾರಗಳುಮಾತ್ರ ಹೊಟ್ಟೆಪಾಡಿಗಾಗಿ ಜೀವನಾಂಶಕ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದಷ್ಟೆ ಹೇಳಬಹುದು. ಕುರಿ ತುಪ್ಪಳದ ಖರೀದಿ ಮತ್ತು ಮಾರಾಟ ಕುರಿ ಮರಿ, ಮೇಕೆ ಮರಿಗಳನ್ನು ಸಂತೆಗೆ ಹೊಡೆಯುವುದು ಮುಂತಾದ ವ್ಯವಹಾರಗಳೇ ಇಲ್ಲಿಯ ವ್ಯವಹಾರ ಇನ್ನೂ ಕೆಲವು ಲಾಭಾಂಶದ ಮ್ಯವಹಾರವೆಂದರೆ ಹುಣಸೆ ಹಣ್ಣಿನ ವ್ಯವಹಾರ ಇದರಲ್ಲಿ ಹುಣಸೆ ಹೂ ಬಿಟ್ಟಾಗ ಮತ್ತು ಗಿಡದಲ್ಲಿ ಹಣ್ಣು ಬೀಜ, ತೊಗಟೆ ಎಲ್ಲವೂ ಮಾರಾಟವಾಗುತ್ತದೆ. ಹುಣಸೆ ಹಣ್ಣಿನಲ್ಲಿ ಬಿಡಿ ಹಣ್ಣು ಮತ್ತು ಕರುಪುಡಿ ಎಂಬ ಎರಡು ತರದ ಹಣ್ಣಿಗೆ ಕರುಪುಡಿಗೆ ಹೆಚ್ಚಿನ ಬೆಲೆ, ಸಾಮಾನ್ಯವಾಗಿ ಆಂಧ್ರ ಪ್ರದೇಶದ ಹಿಂದೂಪುರದಲ್ಲಿ ಇದರ ಮಾರಾಟವಾಗುತ್ತದೆ. ಮಳೆಯ ಅಭಾವವಿದ್ದರೂ ಈ ಬೆಳೆಗೆ ತೊಂದರೆ ಇಲ್ಲ. ಇದರ ಹಣ್ಣು ಕ್ವಿಂಟಾಲ್ ಒಂದಕ್ಕೆ ಕನಿಷ್ಠ ರೂ. ೨೦೦೦ ದಿಂದ ೪.೦೦೦ ಕರುಪುಡಿ ಒಂದಕ್ಕೆ ಕನಿಷ್ಠ ೪.೨೦೦ ರಿಂದ ೮.೦೦೦ ಬೆಲೆ ಬಾಳುತ್ತದೆ. ಹಾಗೆಯೇ ನೆಲಗಡಲೆ ವ್ಯವಹಾರವೂ ಒಂದು ಲಾಭಾಂಶದ್ದೇ ಆಗಿದೆ. ಇದು ಮಳೆಬಂದರೆ ಮಾತ್ರ ಇಲ್ಲವಾದರೆ ಇಲ್ಲ. ರೈತನಿಗೆ ಉಳುಮೆ

ಕಾಳದಲ್ಲಿಯೇ ಅವನಿಗೆ ಸಾಲಕೊಟ್ಟು ಬೆಳೆ ಬಂದ ನಂತರ ಸಾಲಕ್ಕೆ ಶೇಂಗಾ ತೂಕ ಹಾಕಿಕೊಳ್ಳಬೇಕಾಗುತ್ತದೆ. ಮತ್ತೆ ಮುಂದಿನ ವರ್ಷಕ್ಕೆ ಸಾಲ ಕೊಡಬೇಕಾಗುತ್ತದೆ. ಆದ್ದರಿಂದ ಇದು ಸಹ ಕಷ್ಟವಾದದ್ದೆ. ರೈತನಿಗೂ ಸಮಯಕ್ಕೆ ಸರಿಯಾಗಿ ಉತ್ತಮ ಬೆಲೆ ಲಭಿಸುವುದಿಲ್ಲ. ಹೀಗಾಗಿ ಇದೂ ಕ್ಷೀಣಿಸುತ್ತಾ ಸಾಗಿದೆ. ಉಳಿದಂತೆ ಹೇಳಿಕೊಳ್ಳುವ ಬೇರೆ ವ್ಯವಹಾರ ಕಂಡುಬರುವುದಿಲ್ಲ.

ರಾಜಕೀಯ ವ್ಯವಸ್ಥೆ : ಇಂದಿನ ಪರಿಸ್ಥಿತಿಯಲ್ಲಿ ರಾಜಕೀಯ ಎನ್ನುವುದು ತನ್ನ ಅರ್ಥವನ್ನು ಕಳೆದುಕೊಂಡಿದೆ. ಎಂದು ಹೇಳಬಹುದು ಅಥವಾ ಜನರೇ ಅದರ ಅರ್ಥವನ್ನು ಬದಲಾಯಿಸಿದ್ದಾರೆ ಎಂದರೂ ತಪ್ಪಾಗಲಾರದು ಯಾರಾದರೂ ಮೋಸ ಕುತಂತ್ರ ಮಾಡಿದರೆ ಅದನ್ನೇ ರಾಜಕೀಯ ಮಾಡಿದ್ದಾನೆ ಎಂದು ಜನ ಹೇಳುತ್ತಾರೆ. ಜೊತೆಗೆ ಈ ವ್ಯವಸ್ಥೆ ಎಲ್ಲ ರಂಗದಲ್ಲಿ ಎದ್ದು ಕಾಣುತ್ತದೆ. ಒಂದು ಊರಿನ ಮಧ್ಯದ ಟೀ ಅಂಗಡಿಯ ಮುಂದೆ ಅರ್ಧ ಗಂಟೆ ಕುಳಿತರೆ ಇಡೀ ದೇಶದ ವಿಚಾರವನ್ನು ತಿಳಿದುಕೊಳ್ಳಬಹುದು. ಇಂತಹ ಸ್ಥಿತಿ ಎಲ್ಲ ಕಡೆ ಇಂದು ಕಂಡುಬರುತ್ತದೆ.

ನಿಡುಗಲ್ಲು ಪಂಚಾಯ್ತಿಯಲ್ಲಿ ನ್ಯಾಯದ ಗುಂಟೆ ಪಂಚಾಯ್ತಿ ವ್ಯಾಪ್ತಿಗೂ ವದಕಲ್ಲು ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೂ ಮಂಗಳವಾದ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೂ ಒಳಪಡುತ್ತದೆ. ಎಲ್ಲಾ ಗ್ರಾಮಗಳಂತೆ ಇಲ್ಲಿಯೂ ಒಂದೊಂದು ಸಲ ಸೌಲಭ್ಯ ಆಧಾರಿತ, ಒಂದೊಂದು ಸಲ ಜಾತಿ ಆಧಾರಿತವಾಗಿ ಮತದಾರರು ಮತ ಚಲಾಯಿಸಿರುವುದನ್ನು ಕಾಣಬಹುದು.ಒಬ್ಬ ಸದಸ್ಯರ ಪಂಚಾಯ್ತಿ ಕ್ಷೇತ್ರ ಇದಾಗಿದೆ. ಹೀಗಾಗಿ ನಿಡುಗಲ್ಲು ಗ್ರಾಮ ದೇವರಾಯನ ರೊಪ್ಪ, ಮೇಗಳ ಪೇಟೆ ಸೇರಿ ಒಬ್ಬ ಪಂಚಾಯ್ತಿ ಸದಸ್ಯನನ್ನು ಚುನಾಯಿಸುವಷ್ಟು ಚಿಕ್ಕ ಕ್ಷೇತ್ರ ಇದಾಗಿದೆ. ಹೀಗಾಗಿ ರಾಜಕೀಯದಿಂದ ಅಂತಹ ಲಾಭವನ್ನೇನು ಹೊಂದಿಲ್ಲ ಮೊದಲೇ ಹೇಳಿದ ಹಾಗೆ ನಾಮ ಮಾತ್ರ ನಿಡುಗಲ್ಲು ಹೋಬಳಿ ಹೆಸರಿದ್ದು ಇದರ ಆಡಳಿತ ವ್ಯವಹಾರ ಸಂಬಂಧಿಸಿದ ಕಚೇರಿಗಳು ಸುಮಾತು ೧೦ ಕಿ.ಮೀ ಅಂತರದಲ್ಲಿರುವ ಮಂಗಳವಾಡ ಎನ್ನುವ ಗ್ರಾಮದಲ್ಲೇ ನಡೆಯುತ್ತವೆ. ಇದಕ್ಕೆ ಕಾರಣ ಸಾರಿಗೆ ಮತ್ತು ಸಂಪರ್ಕ ಸವಲತ್ತುಗಳ ಕೊರತೆ ಹಾಗಾಗಿ ಮೈಸೂರು ರಾಜ್ಯವಿದ್ದಾಗ ಒಂದು ತಾಲ್ಲೂಕು ಕೇಂದ್ರ ಆಗಿದ್ದ ನಿಡುಗಲ್ಲು ಆಗಲೂ ಸಹಾ ಇಂತಹುದೇ ತೊಂದರೆಯನ್ನು ಅನುಭವಿಸುತ್ತಿತ್ತು.

ಸರ್ಕಾರದ ಮೂಲಭೂತ ಸೌಲಭ್ಯಗಳು : ಒಂದು ಹಳ್ಳಿಯ ಅಭಿವೃದ್ದಿಗೆ ಅಲ್ಲಿನ ಮೂಲಭೂತ ಸೌಲಭ್ಯಗಳು ಅತ್ಯವಶ್ಯಕ ತನ್ನ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳಲಾರದ ಹಳ್ಳಿ ಆಧುನೀಕರಣಗೊಳ್ಳಲಾರದೆಂದೇ ಹೇಳಬೇಕು. ಅಲ್ಲಿನ ಜನತೆಗೆ ಶಿಕ್ಷಣ ಲಭ್ಯವಾದರೆ ಜನ ಪ್ರಜ್ಞಾವಂತರಾಗುತ್ತಾರೆ. ತಮಗೆ ಸಿಗಬೇಕಾದ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಆ ನಿಟ್ಟಿನಲ್ಲಿ ಒಂದು ಹಳ್ಳಿ ನಾಗರೀಕತೆ ಅಥವಾ ಆಧುನೀಕರಣಗೊಳ್ಳುವ

ಕ್ರಿಯೆಯನ್ನು ಗುರುತಿಸಬಹುದು. ಆದ್ದರಿಂದ ಸರ್ಕಾರ ಪೂರೈಸಬಹುದಾದ ಸೌಲಭ್ಯಗಳ ಬಳಸಿಕೊಳ್ಳುವಿಕೆಯ ಕ್ರಮ ಆ ಹಳ್ಳಿಯ ಬೆಳವಣಿಗೆಯ ಕ್ರಮವಾಗಿರುತ್ತದೆ. ಅಂತಹ ಪ್ರಾಥಮಿಕ ಸೌಲಭ್ಯಗಳು ಎಷ್ಟರ ಮಟ್ಟಿಗೆ ನಿಡುಗಲ್ಲಿನಲ್ಲಿ ಇವೆ. ಅವನ್ನು ಜನ ಪಡೆದಿದ್ದಾರೆ. ಸರ್ಕಾರ ಅವರಿಗೆ ಕಲ್ಪಿಸಿದೆ ಎಂಬುದನ್ನು ಈ ಕೆಳಗಿನಂತೆ ಅವಲೋಕಿಸಲಾಗಿದೆ.

ಶಿಕ್ಷಣ : ಆರೋಗ್ಯ ಮತ್ತು ಶಿಕ್ಷಣ ಮನುಷ್ಯನಿಗೆ ಎರಡು ಕಣ್ಣುಗಳಿದ್ದಂತೆ ದಾರಿ ದೀಪಗಳಾದ ಕಣ್ಣೇ ಇಲ್ಲ ಎಂದ ಮೇಲೆ ಅವನ ಬದುಕೇ ಕತ್ತಲು ಆದ್ದರಿಂದ ಮನುಷ್ಯನಿಗೆ ಈ ಶಿಕ್ಷಣ ಅತ್ಯವಶ್ಯಕ ವ್ಯಕ್ತಿಯ ಬೆಳವಣಿಗೆಯ ಕುಂಟಿತ ಎಂದರೆ ಸಮಾಜದ ಕುಂಟಿತ ಎಂದೇ ಭಾವಿಸಬೇಕು. ನಿಡುಗಲ್ಲು ಗ್ರಾಮದಲ್ಲಿ ಸರ್ಕಾರದ ವತಿಯಿಂದ ಅಂಗನವಾಡಿ, ಪ್ರಾಥಮಿಕ ಶಾಲೆ ಮತ್ತು ಮಾಧ್ಯಮಿಕ ಶಾಲೆಗಳನ್ನು ಕಲ್ಪಿಸಲಾಗಿದೆ. ಅಂದರೆ ಒಂದರಿಂದ ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಕಲ್ಪಿಸಲಾಗಿದೆ. ಇದು ತೀರಾ ಇತ್ತೀಚೆಗೆ ದೊರೆತಿದ್ದು ಮೊದಲು ಸುಮಾರು ೧೦, ೧೨ ಕಿ.ಮೀ ದೂರ ಪ್ರಾಥಮಿಕ ಶಿಕ್ಷಣಕ್ಕೆ ಹೋಗಬೇಕಾಗಿದ್ದಿತು. ಈಗ ಅಂಗನವಾಡಿಯಲ್ಲಿ ೩೦ ಹುಡುಗ, ಹುಡುಗಿಯರು ಹಾಜರಾತಿಯಲ್ಲಿದ್ದಾರೆ. ಹಾಗೆಯೇ ಪ್ರಾಥಮಿಕ ಶಾಲೆಯಲ್ಲಿ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಸುಮಾರು ೬೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಈ ಗ್ರಾಮದಲ್ಲಿ ಶಾಲೆ ಪ್ರಾರಂಭವಾಗುವುದಕ್ಕೆ ಮೊದಲು ವಿದ್ಯಾಭ್ಯಾಸ ಮಾಡಿದವರ ಸಂಖ್ಯೆ ಬಹಳ ಕಡಿಮೆ. ಈಗಲೂ ಪ್ರೌಢಶಾಲೆಗೆ ೫.೧೦ ಕಿ.ಮೀ ದೂರ ನಡೆದು ಹೋಗಿ ವಿದ್ಯಾಭ್ಯಾಸ ಪಡೆಯಬೇಕಾದ ಪರಿಸ್ಥಿತಿ ಇದೆ. ಕಾಲೇಜು ವಿದ್ಯಾಭ್ಯಾಸಕ್ಕೆ ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕು. ಇದು ಬಡವರಿಗೆ ಕಷ್ಟಸಾಧ್ಯದ ಕೆಲಸವಾದ್ದರಿಂದ ಊರಲ್ಲಿ ಇರುವವರೆಗೆ ಓದುತ್ತಾರೆ ತಂದೆ ತಾಯಿಯರು ಅಷ್ಟೇ ಆದರೂ ಇತ್ತೀಚಿನ ಕೆಲ ತರುಣರು ಈ ಸಾಹಸವನ್ನು ಮಾಡುತ್ತಿದ್ದಾರೆ. ಉಳಿದಂತೆ ಹೆಣ್ಣುಮಕ್ಕಳು ಊರಿನಲ್ಲಿರುವವರೆಗೆ ವಿದ್ಯಾಭ್ಯಾಸ ಮಾಡಿ ಮನೆ ಕೆಲಸ ಮದುವೆ ಇತ್ಯಾದಿ ಕಾರಣಗಳಿಂದ ಶಿಕ್ಷಣ ಮೊಟುಕುಗೊಳಿಸುತ್ತಾರೆ. ಇಲ್ಲಿ ಹೆಣ್ಣು ಮಕ್ಕಳ ಸ್ಥಿತಿಯೂ ಸುಧಾರಿಸಬೇಕಾಗಿದೆ.

ಆರೋಗ್ಯ : ಆರೋಗ್ಯವು ಸಹ ಶಿಕ್ಷಣದಷ್ಟೇ ಮಹತ್ವ ಪಡೆದಿದ್ದು ಹಾಗೂ ಪ್ರಾಥಮಿಕ ಸೌಲಭ್ಯಗಳಲ್ಲೊಂದು ಇಲ್ಲಿ ನಾಟಿ ವೈದ್ಯವೇ ಆರೋಗ್ಯ ಕೇಂದ್ರದ ಪಾತ್ರವಹಿಸುತ್ತದೆ. ಆದರೂ ಅನಿರೀಕ್ಷಿತ, ಆಕಸ್ಮಿಕ ಘಟನೆಗಳು ಬಂದೊದಗಿದಾಗ ಬಹಳ ಕಷ್ಟ. ನಿಡುಗಲ್ಲಿನಲ್ಲಿ ಸರ್ಕಾರ ಅಥವಾ ಖಾಸಗಿ ಯಾವುದೇ ರೀತಿಯ ಆಸ್ಪತ್ರೆ ಸೌಲಭ್ಯವಿಲ್ಲ. ಬೇಕಾದರೆ ೬-೧೦ ಕಿ.ಮೀ ದೂರದ ಲಿಂಗದಹಳ್ಳಿ ಅಥವಾ ಮಂಗಳವಾಡ ಗ್ರಾಮಗಳಿಗೆ ಹೋಗಬೇಕು ಹಾಗೆ ತುರ್ತು ಸ್ಥಿತಿಯಲ್ಲಿ ಆ ಸ್ಥಳವನ್ನು ತಲುಪಲು ಯಾವುದೇ ವಾಹನಗಳ ಸೌಲಭ್ಯವಾಗಲಿ, ಆದರೆ ಇತ್ತೀಚೆಗೆ ದ್ವಿಚಕ್ರವಾಹನಗಳು, ತ್ರಿಚಕ್ರವಾಹನಗಳು ಇದ್ದು ಸಾರಿಗೆ ವ್ಯವಸ್ಥೆ ಸ್ವಲ್ಪ ಸುಧಾರಿಸಿದೆ.

ಕುಡಿಯುವ ನೀರು : ಕುಡಿಯುವ ನೀರಿನ ಸೌಲಭ್ಯ ಚೆನ್ನಾಗಿದೆ. ಕೊಳವೆ ಬಾವಿ, ಕೈ ಪಂಪು ಮತ್ತು ಟ್ಯಾಂಕುಗಳ ವ್ಯವಸ್ಥೆ ಇದ್ದು, ಅಲ್ಲಿನ ಊರಿನ ಮಧ್ಯೆ ನಲ್ಲಿಗಳ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಮೊದಲು ದೂರದ ಬಾವಿಗಳನ್ನು ಜನ ಆಶ್ರಯಿಸಬೇಕಾಗಿದ್ದಿತು. ಈಗ ನೀರು ಬಿಡುವುದಕ್ಕೆ ಒಬ್ಬನನ್ನು ಗ್ರಾಮ ಪಂಚಾಯ್ತಿಯಿಂದ ನೇಮಿಸಲಾಗಿದ್ದು ಈಗ ಹೊಸದಾಗಿ ಶುದ್ಧಿಕರಣದ ನೀರನ್ನು ಗ್ರಾಮಕ್ಕೆ ಕಲ್ಪಿಸಲಾಗಿದೆ. ದುರ್ಗದಲ್ಲಿ ವಾಸಿಸುವವರಿಗೆ ಮಾತ್ರ ಇದಾವುದರ ಸೌಲಭ್ಯವಿಲ್ಲ. ಅವರು ಅಲ್ಲಿನ ಕಲ್ಯಾಣಿಯಲ್ಲಿ ದೊರೆಯುವ ನೀರನ್ನೇ ಆಶ್ರಯಿಸಿದ್ದಾರೆ.

ಸಾರಿಗೆ ವ್ಯವಸ್ಥೆ : ಒಂದು ಪ್ರದೇಶದ ಅಭಿವೃದ್ದಿಯಲ್ಲಿ ಆ ಪ್ರದೇಶದ ಸಾರಿಗೆ ವ್ಯವಸ್ಥೆ ಬಹು ಮುಖ್ಯ ಪಾತ್ರ ವಹಿಸುತ್ತದೆ. ಈ ಸಾರಿಗೆ ವ್ಯವಸ್ಥೆಯನ್ನು ಮಾನವನ ನರಕೋಶಕ್ಕೆ ಹೋಲಿಸಬಹುದು. ಮೈಸೂರು ರಾಜ್ಯವಾಗಿದ್ದಾಗ ತಾಲ್ಲೂಕಾಗಿ ಈಗ ಹೆಸರಿಗೆ ಹೋಬಳಿಯಾಗಿರುವ ನಿಸರ್ಗಧಾಮ, ಐತಿಹಾಸಿಕ ಸ್ಥಳ ಮತ್ತು ಯಾತ್ರ ಸ್ಥಳವಾಗಿ ಸುಮಾರು ನೂರಾರು ವರ್ಷಗಳಿಂದ ಪ್ರಸಿದ್ದಿಯಲ್ಲಿ ಇರುವ ಈ ನಿಡುಗಲ್ಲಿಗೆ ಇಂದು ಸಾರಿಗೆ ವ್ಯವಸ್ಥೆ ಇಲ್ಲದೆ ಇರುವುದು ದುರಂತದ ಸಂಗತಿ. ಅರಸೀಕೆರೆ ಲಿಂಗದಹಳ್ಳಿ ರಸ್ತೆಯಿಂದ ಸುಮಾರು ೪ ಕಿ.ಮೀ ನಡದೇ ಬರಬೇಕು. ಈ ಗ್ರಾಮ ತಲುಪಲು ಬೇರೆ ಕಡೆ ದಾರಿಯಿಲ್ಲ. ಸುತ್ತಲೂ ಬೆಟ್ಟವೇ ಚಾಚಿ ಕೊಂಡಿದೆ. ಇತ್ತೀಚೆಗೆ ಜಿಲ್ಲಾ ಪಂಚಾಯ್ತಿ ವತಿಯಿಂದ ಮಣ್ಣಿನ ರಸ್ತೆ ಆಗಿದೆ. ಆದರೆ ಯಾವುದೇ ವಾಹನ ಸೌಲಭ್ಯ ಇಲ್ಲ. ಹಾಗೆಯೇ ಬೆಳ್ಳಿ ಬಟ್ಟಲು ಕಡೆಯಿಂದ ಬರಬೇಕಾದರೂ ಬೆಟ್ಟಗಳ ಕಣಿವೆ ಮಧ್ಯದಲ್ಲಿ ಬರಬೇಕು. ಅಲ್ಲಿಯೂ ಮಣ್ಣಿನ ರಸ್ತೆ ವ್ಯವಸ್ಥೆ ಇದೆ. ಇದು ಸುಮಾರು ೫. ಕಿ.ಮೀ ದೂರದ ದಾರಿ, ಹತ್ತಿರದ ಬೇರೆ ಯಾವುದೇ ಮಾರ್ಗ ಮತ್ತು ವಾಹನ ಸೌಲಭ್ಯವಿರುವ ದಾರಿ ಇಲ್ಲ. ಇದು ಮೊದಲು ಆಗಬೇಕಾದ ಅತ್ಯವಶ್ಯಕ ಕಾರ್ಯವಾಗಿದೆ.

ಹೀಗೆ ನಿಡುಗಲ್ಲಿನಲ್ಲಿನ ಜನಾಂಗ ಕಸುಬುಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಹೊಂದಿದ ಸೌಲಭ್ಯಗಳು ಮತ್ತು ಅಲ್ಲಿನ ಶಿಕ್ಷಣ ಆರೋಗ್ಯ ವ್ಯವಸ್ಥೆಗಳನ್ನು ಸರ್ಕಾರವು ಪ್ರಾಥಮಿಕ ಸೌಲತ್ತುಗಳನ್ನು ಒದಗಿಸುವಲ್ಲಿ ಇನ್ನು ಹಿಂದೆ ಬಿದ್ದಿದೆಯೆಂದೇ ಹೇಳಬೇಕು. ಒಂದು ಐತಿಹಾಸಿಕ ಯಾತ್ರ ಸ್ಥಳವಾಗಿರುವ ನಿಡುಗಲ್ಲು ದುರ್ಗಕ್ಕೆ ತನ್ನದೆ ಆದ ವೈಶಿಷ್ಟ್ಯವಿದೆಯಾದರೂ ಅದನ್ನು ಎತ್ತಿ ಹಿಡಿಯುವ ಅದರ ಅಭಿವೃದ್ಧಿಗೆ ಶ್ರಮಿಸುವ ನಾಯಕರು ಕಂಡುಬಂದಿಲ್ಲ ಇದಕ್ಕೆಲ್ಲ ಇರುವ ಕೊರತೆ ರಾಜಕೀಯವಾಗಿ ಹಿಂದುಳಿದಿರುವುದೇ ಆಗಿದೆ.

ನಿಡುಗಲ್ಲಿನ ಪ್ರಮುಖ ಸಾಂಸ್ಕೃತಿಕ ಆಚರಣೆಗಳು

ಗ್ರಾಮೀಣ ಜೀವನದ ಸಾಂಸ್ಕೃತಿಕ ನೋಟವನ್ನು ಶುದ್ಧ ರೂಪದಲ್ಲಿ ಅಭ್ಯಸಿಸುವುದು ತುಂಬ ಕಷ್ಟವಾದ ಕೆಲಸ. ಅದು ಹಲವಾರು ಕ್ರಿಯಾವಿಧಿಗಳು, ಹಬ್ಬ ಹರಿದಿನಗಳು, ಸಂಸ್ಕಾರಗಳು ಮೊದಲಾದವುಗಳ ಒಟ್ಟು ಮೊತ್ತವಾಗಿರುವುದು. ಅವುಗಳೆಲ್ಲವೂ ಸಹ ಧಾರ್ಮಿಕ ನಂಬಿಕೆಗಳ ಜೊತೆಯಲ್ಲಿ ಬಹಳವಾಗಿ ಬೆಸೆದುಕೊಂಡಿರುವುವು. ಊರ ಹಬ್ಬಗಳು ಮತ್ತು ಜಾತ್ರೆ, ಉತ್ಸವಗಳು

ವಿವಿಧ ಜಾತಿ ಸಮುದಾಯ, ವಾಸಸ್ಥಳ, ಸಂಸ್ಕೃತಿ ಮೊದಲಾದವುಗಳಿಗೆ ಅನುಗುಣವಾಗಿ ವೈವಿಧ್ಯಮಯವಾಗಿರುವುವು. ರಾಷ್ಟ್ರೀಯ ಹಬ್ಬಗಳಾದ ಸಂಕ್ರಾಂತಿ, ಶಿವರಾತ್ರಿ, ಹೋಳಿ ಹುಣ್ಣಿಮೆ, ಯುಗಾದಿ, ವಿವಿಧ ಮಹನೀಯರ ಜಯಂತಿಗಳು, ಈದ್ ಮಿಲಾದ್, ಕ್ರಿಸ್‌ಮಸ್ ಮುಂತಾದ ಹಬ್ಬಗಳ ಜೊತೆಗೆ ಒಂದು ಹಳ್ಳಿ ತನ್ನದೇ ಸೀಮಿತದ, ಆ ಪರಿಸರದ ವಿಶಿಷ್ಟ ಹಬ್ಬ, ಜಾತ್ರೆ, ಆಚರಣೆಗಳನ್ನು ಜೊತೆ ಜೊತೆಯಲ್ಲಿ ರೂಢಿಸಿಕೊಂಡು ಬಂದಿರುತ್ತದೆ. ಆ ರೀತಿಯ ಹಬ್ಬ, ಜಾತ್ರೆ ಮತ್ತು ಆಚರಣೆಗಳು ಆಯಾ ಊರಿನ ಸಾಂಸ್ಕೃತಿಕ ಮೌಲ್ಯ ಮತ್ತು ಚರಿತ್ರೆಯನ್ನು ಹೇಳುತ್ತವೆ.

ಉಟ್ಲು ಪರಿಷೆ

ಈ ಉಟ್ಲು ಪರಿಷೆಯ ಪಾವಗಡ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಎಲ್ಲಾ ಊರುಗಳಲ್ಲೂ ಕಂಡುಬರುವ ಒಂದು ಜಾತ್ರೆ ಅಥವಾ ಎರಡು, ಮೂರು ಹಳ್ಳಿಯವರು ಒಂದು ಕಡೆ ಸೇರಿಯಾದರೂ ಈ ಜಾತ್ರೆಯನ್ನು ನೆರವೇರಿಸುವುದುಂಟು, ಆ ಜಾತ್ರೆಯ ಸಾಯಂಕಾಲ ನಡೆಯುವ ಆಟವೇ 'ಉಟ್ಲು ಮರದ ಆಟ'. ಈ ಆಚರಣೆ ಪಕ್ಕದ ಆಂಧ್ರ ಪ್ರದೇಶದಿಂದ ಬಂದದ್ದು. ಆಂಧ್ರ ಪ್ರದೇಶಕ್ಕೆ ಅಂಟಿಕೊಂಡಿರುವ ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕು, ತುಮಕೂರಿನ ಪಾವಗಡ ತಾಲ್ಲೂಕು ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ತಾಲ್ಲೂಕು,ಗಳಲ್ಲಿ ಈ ಹಬ್ಬ ಕಂಡುಬರುತ್ತದೆ. ತೆಲುಗಿನಲ್ಲಿ 'ಉಟ್ಲಮಾನು' ಎನ್ನುತ್ತಾರೆ. 'ಮಾನು' ಎಂದರೆ ಮರ ಎಂದರ್ಥ. ನಿಡುಗಲ್ಲಿನಲ್ಲಿ ತೀರ ಇತ್ತೀಚಿನವರೆಗೂ ನಡೆದುಕೊಂಡು ಬಂದ ಈ ಹಬ್ಬ ಯಾವುದೋ ಜಗಳಕ್ಕಾಗಿ ಸದ್ಯಕ್ಕೆ ನಿಂತು ಹೋಗಿದೆ. ಈ ಹಬ್ಬಕ್ಕೆ ಶತಮಾನಗಳ ಶತಮಾನಗಳ ಇತಿಹಾಸವೇ ಉಂಟು.

"ಪ್ರಾಚೀನ ಜಾನಪದ ಆಟಗಳ ಪೈಕಿ ಗ್ರಾಮೀಣ ಯುವಕರ ಶಕ್ತಿ, ಸಾಮರ್ಥ್ಯಗಳು ಪ್ರತಿಭೆ, ಪಾಂಡಿತ್ಯಗಳನ್ನು ಪ್ರಕಟಗೊಳಿಸಲು ಈ 'ಉಟ್ಲಮರ' ಒಳ್ಳೆಯ ಆಟ ಮತ್ತು ವಿಶಿಷ್ಟವಾದುದು. ಇದು ಯುವಜನರ ಶಕ್ತಿ ಸಾಮರ್ಥ್ಯಗಳಿಗೆ ಓರೆಗಲ್ಲು. ಹಿರಿಯ ಕಿರಿಯರೆಂಬ ಭೇದ ಅಳಿಸಿ ನರನಾಡಿಗಳನ್ನು ಸಡಿಲಗೊಳಿಸಲು ದಿವ್ಯೌಷಧ. ಸಮೃಧ್ಧ ಜಾನಪದ ಸೊಗಡಿನ ಅತಿದುರ್ಲಭ ದೃಶ್ಯ ಈ ಉಟ್ಲಮರದ ಆಟ. ಇದರಲ್ಲಿ ಎರಡು ವಿಧಗಳನ್ನು ನಾವು ಕಾಣಬಹುದು. ಹಳದಿ ನೀರಿನ ಉಟ್ಲಮರ ಮತ್ತು ಕೆಸರು ಮಣ್ಣಿನ ಉಟ್ಲಮರ. ಮೊದಲನೆಯದು ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ನಡೆಯುವ ಸೌಮ್ಯ ಸ್ವರೂಪದ ಆಟ. ಎರಡನೆಯದು ಕೆಸರು ಮಣ್ಣಿನ ಉಟ್ಲಮರ ಕಠಿಣ ವೀರೋಚಿತ ಸ್ಪರ್ಧೆ. ಇದು ತುಮಕೂರು ಜಿಲ್ಲೆಯ ಗಡಿ ತಾಲ್ಲೂಕಾದ ಪಾವಗಡ ಮತ್ತು ನಿಡುಗಲ್ಲು ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರತಿವರ್ಷ ಯುಗಾದಿಯ ನಂತರ ಪ್ರತಿ ಹಳ್ಳಿಗಳಲ್ಲಿ ನಡೆಯುವ ಸಾಂಪ್ರದಾಯಕ ಧಾರ್ಮಿಕ ಉತ್ಸವವಾಗಿ ಆಚರಿಸಲಾಗುತ್ತದೆ. ಇದರ ಪ್ರಾಚೀನತೆಯನ್ನು

ಜನರು ಭಾಗವತ ಪುರಾಣಗಳ ಕಾಲಕ್ಕೆ ಎಳೆದೊಯ್ಯುತ್ತಾರೆ. ಅಲ್ಲಿ ವರ್ಣಿತವಾಗಿರುವ ಶ್ರೀ ಕೃಷ್ಣನ ಬಾಲ ಲೀಲೆಗಳ ಪಳೆಯುಳಿಕೆಯೇ ಆಗಿದೆ. 'ಉಟ್ಟಿ' ಎನ್ನುವುದು ತೆಲುಗು ಪದ ಕನ್ನಡದಲ್ಲಿ 'ನೆಲೆವು' ಅಥವಾ 'ಸಿಂಬಿ' (ಈಗಲೂ ಹಳ್ಳಿಗಳಲ್ಲಿ ಹಾಲು, ಮೊಸರನ್ನು ಜಂತಿಗೆ ನೇತು ಹಾಕಿದ ನೆಲವುಗಳಲ್ಲಿ ಇಡುವುದನ್ನು ಕಾಣಬಹುದು) ಎಂದರ್ಥ. 'ಉಟ್ಟಿ'ಗಳನ್ನು ಕಟ್ಟಿರುವ ಮರವಾದುದರಿಂದ ಇದಕ್ಕೆ 'ಉಟ್ಲಿಮರ' ಎಂಬ ಹೆಸರು ರೂಢಿಗತವಾಗಿ ಬಂದಿದೆ." ಬಾಲಕರಾದ ಬಲರಾಮ, ಕೃಷ್ಣರು ತಮ್ಮ ಸಂಗಡಿರೊಡಗೂಡಿ ಉಟ್ಟು (ನೆಲವು)ಯಲ್ಲಿರುವ ಬೆಣ್ಣೆಯ ಗಡಿಗೆ ಕದಿಯುವ ಆಟವೇ ಈ ಉಟ್ಲಮರ ಹತ್ತುವ ಸ್ಪರ್ಧೆಯ ಮೂಲ. ಉಟ್ಲಮರ ಹತ್ತುವ ಪರಿಷೆ ಎಲ್ಲೆ ನಡೆದರೂ ಆ ಗ್ರಾಮದ ಯಾದವ ಜನಾಂಗದ ಯುವಕನಿಂದ ಪೂಜೆ ಸಲ್ಲಿಸಿ ಪ್ರಾರಂಭಿಸುವುದು ಇಂದಿಗೂ ನಡೆದುಕೊಂಡು ಬರುತ್ತಿರುವ ಆಚಾರವಾಗಿದೆ. ನಿಡುಗಲ್ಲು ಪ್ರದೇಶದಲ್ಲಿ ನಡೆಯುವ ಈ ಉಟ್ಲಮರ ಹತ್ತುವುದು ಬಹುಪಾಲು ಯಾದವ ಯುವಕರುಗಳೇ ಎಂಬುದು ಒಂದು ವೈಶಿಷ್ಟ್ಯ ಈ ಊರಿನಲ್ಲಿ ಈ ಜನಾಂಗದವರು ಇಲ್ಲದಿದ್ದರೆ ಪಕ್ಕದ ಊರಿನಿಂದ ಯುವಕರ ತಂಡವೊಂದನ್ನು ಕರೆಸುವ ಪದ್ಧತಿ ಕಂಡುಬರುತ್ತದೆ.

"ಈ 'ಉಟ್ಲಪರಿಷೆ' ಊರಿಗೆ ಊರೇ ಆಚರಿಸುವ ಧಾರ್ಮಿಕ ಮಹತ್ವ ಹೊಂದಿದ ಉತ್ಸವವಾಗಿದೆ. ಈ ಆಟಕ್ಕೆ ಬೇಕಾದ ಉಪಕರಣಗಳೂ ಅತಿ ಸರಳ. ತಬ್ಬಿಕೊಂಡರೆ ಪಟ್ಟಿಗೆ ಸಿಗದಷ್ಟು ದಪ್ಪವಾದ ಮತ್ತು ಸುಮಾರು ೪೦ ಅಡಿ ಉದ್ದದ ಡೊಂಕಿಲ್ಲದೇ ನೇರವಾಗಿರುವ ನೇರಳೆ ಮರದ ಕಾಂಡ ಮತ್ತು ೨ ಹಲಗೆಗಳು ಹಾಗೂ ೪ ಹಗ್ಗಗಳು, ಸುತ್ತಲಿನ ಹತ್ತಾರು ಗ್ರಾಮಗಳಿಗೆ ಇಂತಹ ಒಂದು ಮರವಿದ್ದರೆ ಸಾಕು. ಈ ಹಬ್ಬಗಳು, ಸಾಮಾನ್ಯವಾಗಿ ಯುಗಾದಿ, ಶ್ರೀರಾಮನವಮಿಯ ಸಮಯದಲ್ಲಿ ಏರ್ಪಡಿಸುವುದು ರೂಢಿಯಾಗಿದೆ. ನಿರ್ಧಿಷ್ಟ ದಿನದಂದು ಗ್ರಾಮದ ಯುವಕರೆಲ್ಲಾ ಒಟ್ಟಿಗೆ ಸೇರಿ ಹಿರಿಯರ ಅಪ್ಪಣೆ ಪಡೆದು ದೇವಾಲಯದ ಎದುರಿನ ಬಯಲಿನಲ್ಲಿ ಮರ ಹೂತು, ಮರದ ತುದಿಯಲ್ಲಿ ಹಲಗೆಗಳಿಂದ ಅಟ್ಟಣಿಗೆ ನಿರ್ಮಿಸಿ ಬಲವಾದ ಹಗ್ಗಗಳನ್ನು ಮರದ ತುದಿಯಿಂದ ನಾಲ್ಕು ದಿಕ್ಕುಗಳಿಗೆ ಎಳೆದು, ಮರ ಅಲುಗಾಡದಂತೆ ಕಟ್ಟುವರು. ನಂತರ ತಳಿರು ತೋರಣಗಳಿಂದ ಅಲಂಕರಿಸಿ ಕೊನೆಯದಾಗಿ ಅಟ್ಟಣಿಗೆಯ ನಾಲ್ಕು ಮೂಲೆಗಳಿಗೆ ನಾಲ್ಕು ತೆಂಗಿನಕಾಯಿಗಳನ್ನು ಎಲ್ಲರಿಗೂ ಕಾಣುವಂತೆ ನೇತು ಕಟ್ಟುವರು." ಯುವಕರು ಕೆರೆಯಿಂದ ಜೇಡಿಮಣ್ಣು ಮತ್ತು ದಿಣ್ಣೆಯಿಂದ ಕೆಂಪು ಹುಡಿಮಣ್ಣನ್ನು ಬಂಡಿಗಳಲ್ಲಿ ತಂದು ಮರದ ಬುಡಕ್ಕೆ ಸುರಿಯುವರು. ಯುವತಿಯರು ಸಿಂಗರಿಸಿಕೊಂಡು ಕೆರೆ ಬಾವಿಗಳಿಂದ ಕೊಡಗಳಲ್ಲಿ ನೀರನ್ನು ತುಂಬಿಕೊಂಡು ತಂದು ಈ ಮಣ್ಣಿಗೆ ಸುರಿಯುವರು. ಆದರೆ ಇತ್ತೀಚೆಗೆ ಗಂಡಸರೇ ನಲ್ಲಿಗಳಿಂದ ಪೈಪುಗಳ ಮುಖಾಂತರ ನೀರು ತುಂಬಿಸುವರು. ನಂತರ ಹಿರಿಯ ಕಿರಿಯರೆಲ್ಲರೂ ಸೇರಿ ಮಣ್ಣಿನಲ್ಲಿರುವ ಕಲ್ಲು, ಮುಳ್ಳು, ಗಾಜಿನ ಚೂರುಗಳನ್ನು ಆಯ್ದು ತೆಗೆದು ಮರದ ಸುತ್ತಾ ೧೦ ರಿಂದ ೧೨ ಅಡಿ ವ್ಯಾಸದ ಪರಿಧಿಯಲ್ಲಿ ಗಟ್ಟಿ ಮಣ್ಣಿನಿಂದ ವರ್ತುಲ

ಕಟ್ಟಿ ಕೆಸರು ಮಣ್ಣು ಸುತ್ತಲೂ ಹರಿದು ಹೋಗದಂತೆ ತಡೆಯುವರು. ನಂತರ ಮತ್ತಷ್ಟು ನೀರು ಹಾಕಿ ಮಣ್ಣನ್ನು ಚೆನ್ನಾಗಿ ತುಳಿದು ಪಾಯಸದಂತೆ ಮಣ್ಣಿನ ಕೆಸರನ್ನು ಹದಗೊಳಿಸಿ ಉಟ್ಲಮರಕ್ಕೆ ಮೇಲಿನಿಂದ ಕೆಳಗಿನವರಿಗೆ ಈ ಕೆಸರಿನ ರಾಡಿಯನ್ನು ಮಂದವಾಗಿ ಲೇಪಿಸುವರು. ನಂತರ ಈ ಕೆಸರಿನ ಹೊಂಡಕ್ಕೆ ಸಾಕಷ್ಟು ಹರಳೆಣ್ಣೆ ಮತ್ತು ಲೋಳೆ ರಸದ ಎಲೆಯ ರಸವನ್ನು ಜಾರುವ ಸಲುವಾಗಿ ಮಿಶ್ರಣ ಮಾಡುವರು. ಇಷ್ಟಾದ ನಂತರ ನೀರಗಂಟಿ ತನ್ನ ಸಹಾಯಕರೊಂದಿಗೆ ಅಟ್ಟವೇರಿ ಕುಳಿತು ಕೆಸರಿನ ರಾಡಿಯನ್ನು ದೊಡ್ಡ ದೊಡ್ಡ ಹಂಡೆಗಳಿಗೆ ತುಂಬಿಸಿಟ್ಟುಕೊಂಡು ಸ್ಪರ್ಧಾಳುಗಳ ಬರುವಿಕೆಗಾಗಿ ಕಾಯ ತೊಡಗುವನು. ಇಲ್ಲಿಗೆ ಉಟ್ಲಮರ ಹತ್ತುವುದಕ್ಕೆ ಸಿದ್ಧವಾಯಿತು ಎಂದರ್ಥ.

ಅಕ್ಕಪಕ್ಕದ ಊರುಗಳಿಂದ ಜನರು ಬೆಳಗಿನಿಂದಲೇ ಬಂದು ಉಟ್ಲಮರ ಹತ್ತುವ ಮೈದಾನದಲ್ಲಿ ಜಮಾಯಿಸತೊಡಗುವರು. ಪ್ರತಿಯೊಂದು ಮನೆಗೂ ನೆಂಟರಿಷ್ಟರು ಬಂದು ಸೇರಿಕೊಳ್ಳುವುದರಿಂದ ಹಬ್ಬಕ್ಕೆ ಮತ್ತಷ್ಟು ಕಳೆ ಬಂದು ಸಡಗರ ಸಂಭ್ರಮ ಹೆಚ್ಚುವುದು. ಮಧ್ಯಾಹ್ನ ೨ ಗಂಟೆಗೆ ಗ್ರಾಮದ ಹಿರಿಯರು ಬಂದು ಎಲ್ಲವೂ ಸರಿಯಾಗಿದೆಯೇ ಎಂದು ಪರೀಕ್ಷಿಸಿ ಉಪಸ್ಥಿತರಾಗುವರು. ಸಹಸ್ರಾರು ಜನರು ಕಿಕ್ಕಿರಿದು ತುಂಬಿರಲು ಸ್ಪರ್ಧೆಯಲ್ಲಿ ಭಾಗವಹಿಸುವ ಉತ್ಸಾಹಿ ತರುಣರು ಮಿಂದು ಹೂ ಮಾಲೆಗಳನ್ನು ಧರಿಸಿ ಗ್ರಾಮದೇವರ ಗುಡಿಗೆ ತೆರಳಿ ಕೈ ಮುಗಿದು ಉದ್ದನೆಯ ದೊಣ್ಣೆಗಳನ್ನು ಹಿಡಿದು ಕೊಂಬು, ಕಹಳೆ, ಮೇಳ, ತಮಟೆಗಳ ಜೊತೆ ಆ 'ಉಟ್ಲಮರ' ಇರುವ ಜಾಗಕ್ಕೆ ಆಗಮಿಸುವರು. ಗ್ರಾಮದ ಮುಖಂಡರು ಅವರನ್ನು ಬರಮಾಡಿಕೊಂಡು ಮರಕ್ಕೆ ಪ್ರದಕ್ಷಿಣೆ ಹಾಕಿಸಿ ಅನುಸರಿಸಬೇಕಾದ ಸ್ಪರ್ಧಾನಿಯಮಗಳನ್ನು ತಿಳಿಸುತ್ತಾರೆ. ಈ ಮರವನ್ನು ಹತ್ತಿ ಮೇಲೆ ಕಟ್ಟಿರುವ ಕಾಯಿ ಕೀಳುವ ಸಾಹಸಿಗೆ ಬಂಗಾರದ ಪದಕ ಅಥವಾ ಇಂತಿಷ್ಟು ಹಣ ಬಹುಮಾನ ಕೊಡಲಾಗುವುದು ಎಂದು ಆ ತುಂಬಿದ ಸಭೆಯಲ್ಲಿ ಘೋಷಿಸಿ ಅವುಗಳನ್ನು ಪ್ರದರ್ಶನಕ್ಕಿಡುತ್ತಾರೆ.

ರಣವಾದ್ಯಗಳ ಸಪ್ಪಳ ಗಗನವನ್ನು ಭೇದಿಸುತ್ತಿರಲು ಸ್ಪರ್ಧಿಗಳು ಮೇಲಂಗಿ ಕಳಚಿ ದೊಣ್ಣೆಗಳನ್ನು ಹಿಡಿದು 'ಉಟ್ಲಮರ'ದ ಸುತ್ತಲೂ ನಿಲ್ಲುವರು. ಯಾದವ ಯುವಕನು ಪೂಜೆ ಸಲ್ಲಿಸಿದ ನಂತರ ಅಟ್ಟವೇರಿ ಕುಳಿತ ನೀರಗಂಟಿ ಉದ್ದನೆಯ ಹಗ್ಗಕ್ಕೆ ತೆಂಗಿನಕಾಯಿ ಒಂದನ್ನು ಕಟ್ಟಿ ಇಳಿ ಬಿಡುವುದೇ ತಡ ಯುವಕರು ಕೈಲಿದ್ದ ದೊಣ್ಣೆಗಳಿಂದ ಆ ತೆಂಗಿನ ಕಾಯಿಯನ್ನು ಬಡಿಯತೊಡಗುವರು. ಚಾಣಾಕ್ಷನಾದ ನೀರಗಂಟಿ ಆ ಹಗ್ಗವನ್ನೂ ಕೆಳಕ್ಕೂ ಮೇಲಕ್ಕೂ ಎಳೆದೆಳೆದು ಬಿಡುತ್ತಾ ದೊಣ್ಣೆಯ ಏಟಿಗೆ ಕಾಯಿ ಸಿಗದಂತೆ ಚಳ್ಳೆ ಹಣ್ಣು ತಿನ್ನಿಸತೊಡಗುವನು. ಆಗ ಯಾವನಾದರೂ ಚಾಣಾಕ್ಷ ಯುವಕ ತನ್ನ ದೊಣ್ಣೆಯನ್ನು ಬೀಸಿ ಹಗ್ಗಕ್ಕೆ ಕಟ್ಟಿದ ತೆಂಗಿನಕಾಯಿಯನ್ನು ಹೊಡೆದು ಬೀಳಿಸುವುದೇ ತಡ ಪ್ರೇಕ್ಷಕರ ಸಿಳ್ಳೆ, ಕೇಕೆಗಳು ತಾರಕಕ್ಕೇರುತ್ತವೆ. ಇದರ ಅದಮ್ಯ ಉತ್ಸಾಹದಿಂದ ಆ ಯುವಕರು ದೊಣ್ಣೆಗಳನ್ನು ಎಸೆದು ಕೆಸರಿನ ಹೊಂಡಕ್ಕೆ

ಜಿಗಿಯುವರು. ಯುವಕರೆಲ್ಲಾ ಅಮಿತ ಉತ್ಸಾಹದಿಂದ ಒಬ್ಬರ ಮೇಲೊಬ್ಬರು ಬಿದ್ದು ಉಟ್ಲಮರವನ್ನು ಏರತೊಡಗುವರು. ಈ ಕ್ಷಣಕ್ಕಾಗಿ ಕಾಯುತ್ತ ಕುಳಿತ ನೀರಗಂಟಿ ದೊಡ್ಡ ಪಾತ್ರೆಯಲ್ಲಿ ಕೆಸರಿನ ರಾಡಿ, ಲೋಳೆರಸವನ್ನು ಅವರ ಮೇಲೆ ಸುರಿಯತೊಡಗುವನು. ಧಾರಾಕಾರವಾಗಿ ಕೆಸರು ಮಣ್ಣು, ಲೋಳೆರಸ ತಲೆಯ ಮೇಲೆ ಬಿದ್ದು ಕಣ್ಣು, ಕಿವಿ, ಮೂಗು, ಎಲ್ಲ ಮುಚ್ಚಿಕೊಂಡು ಮೈಯೆಲ್ಲಾ ಕೆಸರಾಗಿ ಮಣ್ಣಿನ ಗೊಂಬೆಯಂತೆ ಕಾಣುವರು. ಆ ಕೆಸರಿನ ಹೊಡೆತ ತಾಳಲಾರದೆ ಅವರೆಲ್ಲಾ ಜರ್ರನೆ ಜಾರಿ ಕೆಸರಿನ ಹೊಂಡಕ್ಕೆ ಬಿದ್ದು ಒದ್ದಾಡುವುದನ್ನು ನೋಡುವುದೇ ಒಂದು ಆನಂದ. ಬಿದ್ದವರು ಮತ್ತೆ ಎದ್ದು ಮರವೇರಿ ಜಾರಿ ಜಾರಿ ಬಿದ್ದರೂ ಮತ್ತದೇ ಪ್ರಯತ್ನ.

ಕೊನೆಗೆ ಮೇಲಿನ ಎಲ್ಲ ಪ್ರಯತ್ನಗಳೂ ನಿಷ್ಫಲವಾಗಿ ಸ್ಥೂಲಕಾಯರು ಮರವನ್ನು ತಬ್ಬಿಕೊಂಡು ಸುತ್ತಲೂ ನಿಲ್ಲುವರು. ಅವರ ಮೇಲೆ ಇನ್ನಷ್ಟು ಜನ ತರುಣರು ಹತ್ತಿ ಮೇಲಿನವರ ಹೆಗಲ ಮೇಲೆ ಕಾಲೂರಿ ನಿಂತು ಮರವನ್ನು ತಬ್ಬಿ ನಿಲ್ಲುವರು. ಹೀಗೆ ಮೂರು ನಾಲ್ಕು ಅಂತಸ್ತುಗಳಾದ ಮೇಲೆ ತೆಳುವಾದ ಚೂಟಿ ಯುವಕರನ್ನು ಅವರ ಮೇಲೆ ಹತ್ತಿಸಿ ಮರವೇರಲು ಬಿಡುವರು. ನೀರಗಂಟಿಯು ಮೇಲಿನಿಂದ ಕೆಸರಿನ ರಾಡಿ, ಲೋಳೆರಸ ಬೀಳುತ್ತಿರಲು ಕೆಳಗಿನ ಸ್ಥೂಲಕಾಯರು ಮೇಲಿನವರ ಭಾರ ತಡೆಯಲಾರದೆ ಸ್ವಲ್ಪ ಸ್ವಲ್ಪವೇ ಕುಸಿಯುತ್ತಾ ಕೊನೆಗೆ ಹತಾಶರಾಗಿ ಕೆಸರಿನ ಹೊಂಡಕ್ಕೆ ಬೀಳುವರು. ಮರವನ್ನು ತಬ್ಬಿನಿಂತ ಮೇಲಿನವರೆಲ್ಲಾ ಆಧಾರವಿಲ್ಲದೇ ಜರ್ರನೆ ಜಾರಿ ಒಬ್ಬರ ಮೇಲೊಬ್ಬರು ಬಿದ್ದು ಒದ್ದಾಡುವ ದೃಷ್ಯವಂತೂ ಅನನ್ಯವಾದದ್ದು. ನಕ್ಕುನಕ್ಕು ಪ್ರೇಕ್ಷಕರ ಹೊಟ್ಟೆ ಹುಣ್ಣಾಗುವುದು ದಿಟ. ನಂತರ ಹತ್ತುವ ತಂಡಕ್ಕೆ ನೆರೆದ ಜನರಿಂದ ಪ್ರೋತ್ಸಾಹ, ಶಿಳ್ಳು, ಕೇಕೆ ಹಾಕಿ ಹುರಿದುಂಬಿಸುವುದರಿಂದ ಮತ್ತಷ್ಟು ಉತ್ಸಾಹಗೊಳ್ಳುವ ಯುವಕರು ಛಲದಿಂದ ಮೇಲಕ್ಕೆ ಏರಿ ಕಾಯಿ ಕೀಳಲು ಪ್ರಯತ್ನಿಸುತ್ತಾರೆ. ಆ ಗುಂಪಿನಲ್ಲಿಯೇ ಯಾರಾದರೊಬ್ಬ ಮೇಲೇರಿ ಕಾಯಿ ಕಿತ್ತೆಸೆದು ವೀರ ನಗೆ ನಗುತ್ತಾನೆ.

ಈ ಅಪೂರ್ವ ಕಾತರದ ಕ್ಷಣಗಳಿಗಾಗಿ ಕಾದು ಕಾದು ತುದಿಗಾಲಲ್ಲಿ ನಿಂತ ಪ್ರೇಕ್ಷಕ ಸಮೂಹದ ಜಯಘೋಷಗಳು ಪ್ರತಿಧ್ವನಿಸುತ್ತಿರಲು, ರಣವಾದ್ಯಗಳ ಸಪ್ಪಳ ಗಗನ ಭೇದಿಸಲು ಗ್ರಾಮದ ಹಿರಿಯರು ವಿಜೇತನ ಕೊರಳಿಗೆ ಮಾಲೆ ಹಾಕಿ ಬಹುಮಾನ ನೀಡುತ್ತಾರೆ. ಮರಹತ್ತಲು ಬಂದ ಸಮೂಹವನ್ನೆಲ್ಲಾ ವಾದ್ಯಗಳ ಮೂಲಕ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಕುಣಿದು ಕುಪ್ಪಳಿಸಿ ಅವರವರ ಮನೆಗೆ ಹೋಗುತ್ತಾರೆ. ಇಲ್ಲಿಗೆ ಉಟ್ಲಮರದ ಆಟ ಅಥವಾ ಪರಿಷೆ ಮುಗಿದಂತಾಗುತ್ತದೆ.

ಬೇರೆ ಬೇರೆ ಊರುಗಳಿಂದ ಬಂದ ಜನರು, ಆಪ್ತೇಷ್ಟರು ಅವರವರ ಮನೆಗಳಿಗೆ ತೆರಳಿ ಹಬ್ಬದೂಟ ಮಾಡಿ, ಪಕ್ಕದ ಊರಿನವರು ಅಂದಿನ ರಾತ್ರಿಯೇ ತಮ್ಮ ಹಳ್ಳಿಗಳಿಗೆ ನಡೆದುಕೊಂಡು ಹೋಗುತ್ತಾರೆ. ದೂರದವರಾದರೆ ಅಂದು ಅಲ್ಲೇ ಇದ್ದು ಮರುದಿನ ಹೋಗುತ್ತಾರೆ. ಅಷ್ಟಲ್ಲದೆ ಉಟ್ಲಮರ ಹತ್ತುವುದಕ್ಕೆ ಮುಂಚೆ ಬೇರೆ ಊರುಗಳಿಂದ ಬಂದ ಜನರಿಗಾಗಿಯೇ ಆ ಊರಿನ

ಗ್ರಾಮ ದೇವಾಲಯದ ಮುಂದೆ ಊಟದ ವ್ಯವಸ್ಥೆಯನ್ನು ಮಾಡಿರಲಾಗುತ್ತದೆ. ಹೀಗೆ ನಡೆಯುವ ಈ 'ಉಟ್ಲ ಪರಿಷೆ'ಯು ಆ ಪರಿಸರದ ಯುವ ಜನಾಂಗದ ಪೌರುಷ ಪ್ರದರ್ಶನದ ಪ್ರತೀಕದ ಜೊತೆಗೆ ಸಾಂಸ್ಕೃತಿಕ ಆಚರಣೆಯಾಗಿ ಪ್ರತಿ ವರ್ಷವೂ ನಡೆದುಕೊಂಡು ಬರುವುದು ಒಂದು ಪರಂಪರೆಯ ಸೃಷ್ಟಿಯಾಗಿದೆ.

ಐದಾರು ಗ್ರಾಮಗಳು ಸೇರಿ ಈ ಜಾತ್ರೆಯನ್ನು ಒಂದೇ ಕಡೆ ಮಾಡುವುದಾದರೆ, ಒಂದೊಂದು ಊರಿನವರು ಒಂದೊಂದು ವರ್ಷ ಕ್ರಮವಾಗಿ ಉಟ್ಲಮರ ಹತ್ತುವುದು ರೂಢಿಯಲ್ಲಿರುವ ಪದ್ಧತಿಯಾಗಿದೆ.

ನಿಡುಗಲ್ಲು ಮಾರಮ್ಮನ ಜಾತ್ರೆ:

ನಿಡುಗಲ್ಲಿನ ಜನತೆಯ ಆರಾಧ್ಯದೈವ ಗ್ರಾಮದೇವತೆ ನಿಡುಗಲ್ಲು ಮಾರಮ್ಮ ಈಕೆಯನ್ನು ಆರಾಧಿಸುವುದರಿಂದ ಕಷ್ಟಗಳು ಕಳೆದು, ಇಷ್ಟಾರ್ಥಗಳು ಸಿದ್ಧಿಸುವುವು ಎಂದು ಜನರು ಬಹಳ ಹಿಂದಿನಿಂದಲೂ ನಂಬಿಕೊಂಡು ಬಂದಿದ್ದಾರೆ. ನಮ್ಮ ಬದುಕಿಗೆ ನಂಬಿಕೆಯೇ ತಾಯಿ, ಕರ್ತವ್ಯವೇ ತಂದೆ. ಈ ಮಾರಮ್ಮನ ಜಾತ್ರೆಯನ್ನು ಅಮ್ಮನ ಜಾತ್ರೆ ಎಂದೂ ಕರೆಯುತ್ತಾರೆ. ಈ ಜಾತ್ರೆಯು ಪ್ರತಿ ವರ್ಷವೂ ಆಗಸ್ಟ್ ತಿಂಗಳಿನ ಮೊದಲ ವಾರ ಅಥವಾ ತಪ್ಪದಂತೆ ಗೌರಸಂದ್ರದ ಮಾರಿ ಹಬ್ಬ ಆದ ಎಂಟು ದಿನಗಳ ನಂತರ ಮಾರಿ ಸಾರುವ. ಆಚರಿಸುವ ಪರಿಪಾಠವಿದೆ. ಸಾಮಾನ್ಯವಾಗಿ ಮಂಗಳವಾರದ ದಿನ ಜಾತ್ರೆಯು ನಡೆಯುತ್ತದೆ. ಅದರ ಮುಂದಿನ ದಿನ ವಿವಿಧ ಜನಾಂಗದವರಿಂದ ಆರತಿ ಆಚರಣೆ ಕಾರ್ಯಕ್ರಮವಿರುತ್ತದೆ.

ನಿಡುಗಲ್ಲಿನ ಸುತ್ತ ಏಳು ಹಳ್ಳಿಗಳಲ್ಲಿ ಒಂದೇ ದಿನ ಈ ಹಬ್ಬ ನಡೆಯುತ್ತದೆ. ನಿರ್ದಿಷ್ಟ ದಿನದಲ್ಲಿ ಏಳು ಊರಿನ ಮುಖ್ಯಸ್ಥರು ಸೇರಿ ಹಬ್ಬದ ದಿನವನ್ನು ಖಚಿತ ಪಡಿಸಿಕೊಂಡು ಎಲ್ಲಾ ಹಳ್ಳಿಗಳಿಗೆ ಆ ದಿನವನ್ನು ಪ್ರಕಟಿಸುತ್ತಾರೆ. ಅಂದಿನಿಂದಲೇ ಜಾತ್ರೆಯ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ತಮ್ಮ ಬಂಧುಗಳಿಗೆ, ನೆಂಟರಿಷ್ಟರಿಗೆ ಹೇಳಿ ಕಳಿಸುತ್ತಾರೆ. ಅಂದಿನಿಂದಲೇ ಆ ಊರುಗಳಲ್ಲಿ ಎಲ್ಲಿಲ್ಲದ ಸಡಗರವನ್ನು ಕಾಣಬಹುದು.

ಮಾರಮ್ಮನಿಗೆ ಬಲಿಕೊಡುವ ಪಟ್ಟದ ಕೋಣವನ್ನು ಜಾತ್ರೆಗೆ ಮುಂಚೆಯೇ ಆಯ್ಕೆ ಮಾಡುತ್ತಾರೆ. ಅದನ್ನು ಕೈ ವಾಡದವರು ತಮಟೆ ವಾದ್ಯಗಳೊಂದಿಗೆ ನಿಡುಗಲ್ಲು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಪಟ್ಟದ ಕೋಣ ಮನೆ ಮನೆಯ ಮುಂದೆ ಬಂದು ನಿಂತಾಗ, ಆ ಮನೆಯವರು ಕೋಣದ ಕಾಲಿಗೆ ನೀರೆರದು, ತಲೆಯ ಮೇಲೆ ಹರಳೆಣ್ಣೆ ಸುರಿದು, ಹರಿಶಿಣ, ಕುಂಕುಮವಿಟ್ಟು, ಹೂ ಮುಡಿಸಿ, ಕಡ್ಡಿ ಬೆಳಗಿ ಪೂಜಿಸುತ್ತಾರೆ. ಕೋಣ ಮೆರೆಸುವ ಕೈ ವಾಡದವರಿಗೆ ಪ್ರತಿ ಮನೆಯವರೂ ದವಸ, ಧಾನ್ಯ ಮತ್ತು ಹಣವನ್ನು ಕೊಡುವುದು ರೂಢಿಯಲ್ಲಿದೆ.

ನಿಡುಗಲ್ಲು ಗ್ರಾಮದೇವತೆ 'ಮಾರಮ್ಮ'ನ ಜಾತ್ರೆಯ ಆರಾಧನೆಯಲ್ಲಿ 'ಬಲಿ'ಯೇ ಪ್ರಧಾನವಾದುದು. ಆಗ ಮಾರಿಗೆ ಬಲಿಕೊಡುವ ಮರಿಗಳನ್ನು ಸಂದರ್ಭ, ಸ್ಥಳಕ್ಕೆ ಅನುಗುಣವಾಗಿ ಬೇರೆ ಬೆರೆ ಹೆಸರಿನಿಂದ ಗುರುತಿಸುತ್ತಾರೆ. 'ಮಾರಿಕಣ್ಣು ಹೋತನ' ಮೇಲೆ ಎಂಬ ಗಾದೆ ಬಲಿಯನ್ನೇ ಹೇಳುತ್ತದೆ. ದೃಷ್ಟಿ ಮರಿ ಮತ್ತು ಕೋಣ ಜಾತ್ರೆಯ ದಿನ ಊರೂರು ಮೆರೆದುಕೊಂಡು ಗುಡಿಯ ಬಳಿಗೆ ಬರುವ ತನಕ ಮಾರಮ್ಮನ ಮುಂದೆ ತೆರೆ ಹಾಕಿರುತ್ತಾರೆ. ಅಮ್ಮನಿಗೆ ದೃಷ್ಟಿ ಬೊಟ್ಟು ಇಟ್ಟು ಕೂಡಲೆ ಒಂದು ಮರಿಯನ್ನು ಬಲಿ ಕೊಡುತ್ತಾರೆ. ಸಾಮಾನ್ಯವಾಗಿ ಅದು ಮರಿಯಾಗಿರದೆ ಬಲಿತದ್ದಾಗಿರುತ್ತದೆ. ಈ ಬಲಿಯನ್ನು 'ದೃಷ್ಟಿ ಮರಿ' ಎಂದು ಕರೆಯುತ್ತಾರೆ. ಇದನ್ನು 'ಗದ್ದಿಗೆ ಮರಿ' ಎಂದೂ ಕರೆಯುವುದುಂಟು.

ದೃಷ್ಟಿ ಮರಿ ಬಲಿಯಾದ ನಂತರ 'ಪಟ್ಟದ ಕೋಣ'ನ ಬಲಿ ನಡೆಯುತ್ತದೆ. ಇದು ಜಾತ್ರೆಯ ವಿಶೇಷವಾದ ಬಲಿ. ಈ ಕೋಣ ಹಿಂದಿನ ಜನ್ಮದಲ್ಲಿ ಮಾರಮ್ಮನ ಗಂಡನಾಗಿದ್ದು, ಅನಂತರ ಶಾಪಕ್ಕೊಳಗಾಗಿಗೆ 'ಪಟ್ಟದ ಕೋಣ'ವಾಗಿ ಹುಟ್ಟಿದೆ ಎಂಬುದು ಜನಪದರ ನಂಬಿಕೆ. ಆ ರೀತಿಯ ಒಂದು ಕಥೆಯೇ ಪ್ರಚಲಿತದಲ್ಲಿದೆ. ನಂತರ ಗೌಡರ ಮನೆಯಿಂದ ಹೊರಿಸಿಕೊಂಡು ಬಂದ 'ಬಾನ'ದ ಮುಂದೆ ಒಂದು ಮರಿಯನ್ನು ಬಲಿಕೊಡುತ್ತಾರೆ. ಇದಕ್ಕೆ 'ಬಾನ ಕುರಿ' ಅಥವಾ 'ಬಾನದ ಕುರಿ' ಎಂದು ಕರೆಯುತ್ತಾರೆ.

ಮಾರಮ್ಮನ ಮೆರವಣಿಗೆ ದೇವರು ಊರಿನಿಂದ ಪಕ್ಕದ ಊರಿಗೆ ಹೋಗುವಾಗ ಒಂದು ಮರಿಯನ್ನು ಬಲಿಕೊಡುತ್ತಾರೆ. ಅದನ್ನು ಊರಿನ ಎಲ್ಲೆಯನ್ನು ಪ್ರಧಾನವಾಗಿಸಿಕೊಂಡು 'ಎಲ್ಲೆ ಮರಿ' ಎಂದು ಕರೆಯುತ್ತಾರೆ. ಹಾಗೆಯೇ 'ಮಾರಿ'ಯನ್ನು ಊರಿಂದಾಚೆ ಕಳುಹಿಸುವಾಗಲೂ ಒಂದು ಮರಿಯನ್ನು ಬಲಿ ಕೊಡುತ್ತಾರೆ. ಅದಕ್ಕೆ 'ಧೂಳು ಮರಿ' ಎಂದು ಕರೆಯುವುದುಂಟು. ಹೀಗೆ ಮಾರಮ್ಮನಿಗೆ ಅನೇಕ ರೀತಿಯ ಬಲಿಗಳನ್ನು ಜಾತ್ರೆಯ ದಿನಗಳಲ್ಲಿ ಕೊಡುವುದನ್ನು ಇಲ್ಲಿ ಕಾಣುತ್ತೇವೆ.

ಜಾತ್ರೆಯ ವಿವಿಧ ದಿನಗಳಲ್ಲಿ ನಿಡುಗಲ್ಲು ಮಾರಮ್ಮನಿಗೆ ಪಟ್ಟೆ (ಸೀರೆ) ಒಪ್ಪಿಸುವುದು, ಆರತಿ, ಕೊಂಡ ಹಾಯುವುದು, ಗುಗ್ಗರಿ ಸೇವೆ ಮುಂತಾದ ವಿವಿಧ ಕಾರ್ಯಕ್ರಮಗಳು ಕ್ರಮವಾಗಿ ನಡೆಯುತ್ತವೆ. ಮಂಗಳವಾರ ಮಾತ್ರ ಬಲಿಯೇ ಪ್ರಧಾನ. ಮೇಲೆ ತಿಳಿಸಿದ ಬಲಿಗಳ ನಂತರ ಅನೇಕರು ತಮ್ಮ ವಿವಿಧ ಕಷ್ಟಗಳ ಸಮಯದಲ್ಲಿ ಮಾರಮ್ಮನ ಹೆಸರಿನಲ್ಲಿ ಬಿಟ್ಟಿದ್ದ ಕೋಣ, ಕುರಿ, ಕೋಳಿ, ಮೇಕೆಗಳನ್ನು ಬಲಿಕೊಟ್ಟು ಅವರವರ ಮನೆಗಳಲ್ಲಿ ಬೇಯಿಸಿ ನೆಂಟರಿಷ್ಟರೊಡಗೂಡಿ ತಿನ್ನುತ್ತಾರೆ. ಇಲ್ಲಿಗೆ ಜಾತ್ರೆ ಮುಕ್ತಾಯವಾದಂತೆಯೇ ಸರಿ.

ನಿಡುಗಲ್ಲಿನ ಮಾರಮ್ಮನಿಗೆ ಜಾತ್ರೆಯ ಸಂದರ್ಭದಲ್ಲಿಯಲ್ಲದೆ ಇತರ ದಿನಗಳಲ್ಲಿಯೂ ಬಲಿಗಳು ನಡೆಯುತ್ತವೆ. ಸಾಮಾನ್ಯವಾಗಿ ಮಂಗಳವಾರ ಇಲ್ಲವೇ ಶುಕ್ರವಾರದ ದಿ ದೇವಸ್ಥಾನದ ಮುಂಭಾಗದಲ್ಲಿ ಈ ಬಲಿಗಳು ನಡೆಯುತ್ತವೆ. ಅನೇಕ ರೋಗ ರುಜಿನಗಳು ಕಾಣಿಸಿಕೊಂಡಾಗ,

ಮಳೆ ಬೆಳೆ ಸರಿಯಾಗಿ ಆಗದೇ ಇದ್ದಾಗ ಊರಿಗೆ ಗಂಡಾಂತರ ಒದಗಿ ಬಂದಾಗ, ಊರಿನ ಶಾಂತಿ ನೆಮ್ಮದಿಗಾಗಿ ಗ್ರಾಮಸ್ಥರು ಸೇರಿ ಮಾರಮ್ಮನಿಗೆ ಬಲಿಕೊಡುವ ಪದ್ಧತಿಯೂ ಉಂಟು.

ಮತ್ತೊಂದು ವಿಶೇಷವೆಂದರೆ ಮಾರಿ ಹಬ್ಬದ ದಿನ ಸಂಜೆ 'ಗಾವು' ಸಿಗಿಯುವ ಕಾರ್ಯಕ್ರಮವಿರುತ್ತದೆ. ಇದೇ ಈ ಜಾತ್ರೆಯ ವಿಶೇಷ ಮತ್ತು ಆಕರ್ಷಣೀಯ ಪ್ರಸಂಗ. ಇದನ್ನು ನೋಡಲು ಹತ್ತಾರು ಮೈಲುಗಳಿಂದ ಜನ ಬಂದು ತಂಡೋಪತಂಡವಾಗಿ ನೆರೆದಿರುತ್ತಾರೆ. ಇದರ ವಿವರಣೆಯನ್ನು ಮುಂದೆ ನೋಡಬಹುದು.

ಮುಗದಾಳ ಬೆಟ್ಟದ ಕರಿಯಮ್ಮನ ಜಾತ್ರೆ:

ಇದು ಸಹ ನಿಡುಗಲ್ಲು ಮಾರಮ್ಮನ ಜಾತ್ರೆಯಂತೆಯೇ ವಿಧಿ ವಿಧಾನಗಳನ್ನು ಒಳಗೊಂಡಿರುತ್ತದೆ. ಈ ಜಾತ್ರೆ ಐದು ವರ್ಷಕ್ಕೊಂದು ಸಲ ನಡೆಯುತ್ತದೆ. ಕೆಲವು ಸಲ ಹತ್ತು ಹದಿನೈದು ವಷಗಳೂ ಆಗಬಹುದು. ಇಲ್ಲಿಯೂ ಕರಿಯಮ್ಮ ವಕ್ಕಲಾಡುವ ಪದ್ಧತಿ ಇರುತ್ತದೆ. ಹಬ್ಬದ ದಿನ ಬಲಿಯೇ ಪ್ರಧಾನವಾಗಿದ್ದು. ಕರಿಯಮ್ಮನಿಗೆ ಆರತಿ, ಪಟ್ಟೆಸೀರೆ ಕೊಡುವುದು, ಕೊಂಡ ಹಾಯುವುದು ಮುಂತಾದ ಕಾರ್ಯಕ್ರಮಗಳು ನಿಗದಿತ ದಿನಗಳಲ್ಲಿ, ನಿಗಧಿತ ಸಮಯದಲ್ಲಿ ಸಂಬಂಧಿಸಿದವರ ಸಮ್ಮುಖದಲ್ಲಿ ನಡೆಯುತ್ತವೆ. ಇಲ್ಲಿಯೂ ಗಾವು ಸಿಗಿಯುವುದೇ ಪ್ರಮುಖ ಆಚರಣೆ. ಈ ವರ್ಷ ಇಲ್ಲಿ ಜೋಡಿ ಗಾವು ಸಿಗಿಯುವುದನ್ನು (ದಿನಾಂಕ ೨೦.೦೫.೨೦೦೦) ನೋಡಲು ಸಹಸ್ರ ಸಂಖ್ಯೆಯಲ್ಲಿ ಜನ ಬಂದು ಸೇರಿದ್ದರು, ಅದನ್ನು ನೋಡುವುದೇ ಒಂದು ಸಂತೋಷವಾಗಿತ್ತು. ಮುಗದಾಳ ಬೆಟ್ಟ ಗ್ರಾಮವು ನಿಡುಗಲ್ಲಿಗೆ ಸುಮಾರು ೭ ಕಿ.ಮೀ. ದೂರದಲ್ಲಿದೆ. ಇಲ್ಲಿಯೂ ಸಹ ಕಲ್ಯಾಣ ದುರ್ಗದ ಪೋತು ರಾಜರೇ ಗಾವು ಸಿಗಿಯುವುದು ಕಂಡುಬಂದಿತು. ಇದು ಐದು ವರ್ಷಕ್ಕೊಂದು ಸಲ ನಡೆಯುವ ಜಾತ್ರೆ.

ಗಾವು ಸಿಗಿಯುವ ಆಚರಣೆ

ಐದು ವರ್ಷಕ್ಕೊಂದು ಸಲ, ಕೆಲವು ಸಲ ಇಪ್ಪತ್ತು ವರ್ಷಕ್ಕೊಮ್ಮೆ ಜರುಗುವ ದೊಡ್ಡ ಪರಿಷೆಯಿದು. 'ಮಾರಮ್ಮ' ದೇವಿಗೆ ಶಾಂತಿ ನೀಡಲು ಅನೇಕ ಪೂಜಾ ಕಾರ್ಯಕ್ರಮಗಳನ್ನು, ಬಲಿ ಮುಂತಾದವುಗಳನ್ನು ಹಮ್ಮಿಕೊಂಡಿರುತ್ತಾರೆ. ಇದನ್ನು ಸುತ್ತಮುತ್ತಲಿನ ಹಳ್ಳಿಯವರೂ ಸೇರಿ ಮಾರಮ್ಮನ ವಕ್ಕಲಿನವರೆಲ್ಲರೂ ಕೂಡಿ ಅವರವರ ಊರುಗಳಲ್ಲಿ ಒಂದೇ ಸಮಯದಲ್ಲಿ ಆಚರಿಸುತ್ತಾರೆ. ಕಾಲರ, ಪ್ಲೇಗ್ ಮುಂತಾದ ರೋಗಗಳು ಕಾಣಿಸಿಕೊಂಡಾಗ ಈ ಆಚರಣೆಯ ಹಬ್ಬ ಹಮ್ಮಿಕೊಳ್ಳುತ್ತಾರೆ. ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದ ಈ ಹಬ್ಬದ ವಿಶೇಷ, ಆ ಊರಿನ ಗ್ರಾಮದೇವತೆ ದೇವಿ ಮಾರಮ್ಮನ ಮುಂದೆ ಗಾವು ಸಿಗಿಯುವುದು ಅಥವಾ ಜಗಿಯುವ ಜಾನಪದೀಯ ಆಚರಣೆ ರೂಢಿಯಲ್ಲಿದೆ.

'ಗಾವು' ಶಬ್ದದ ಮೂಲ 'ಘಾವ್' ಎಂಬ ಹಿಂದಿ ಪದವೆಂದು ಕೆಲವರು ಹೇಳುತ್ತಾರೆ. ಅದನ್ನು ಒಪ್ಪಿಕೊಳ್ಳಬಹುದಾದರೆ 'ಘಾವ್' ಎಂದರೆ ಗಾಯ ಮಾಡುವುದು ಎಂದರ್ಥ. ಈ

ಆಚರಣೆಯಲ್ಲಿ ಗಾಯಗೊಳಿಸುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಅಂದರೆ ಗಂಡು ಮೇಕೆ ಮರಿಯೊಂದನ್ನು (ಕರೀಹೋತ) 'ಪೋತ್' ರಾಜನೊಬ್ಬ ತನ್ನ ಹಲ್ಲುಗಳಿಂದ ಕಚ್ಚಿ, ಕಚ್ಚಿ ಅದರ ಜೀವ ತೆಗೆಯುವ ಮತ್ತು ಅದರ ಹಸಿ ಮಾಂಸವನ್ನು ತಿನ್ನುವ ಕ್ರಮ. ನಿಡುಗಲ್ಲಿನಲ್ಲಿ ಮತ್ತು ಆ ಸುತ್ತ ಮುತ್ತಲ ಪ್ರದೇಶದಲ್ಲಿ ಆಚರಣೆಯಲ್ಲಿರುವ ಈ ಪದ್ಧತಿ, ಕೆಲವು ಹಳ್ಳಿಗಳಲ್ಲಿ ಮೂರು ವರ್ಷಕ್ಕೊಂದು ಸಲ ನಡೆಯುವುದೂ ಉಂಟು. ಜನರೆಲ್ಲಾ ಬಿಡುವಾಗುವ ಸಮಯ ಅಂದರೆ, ಸಾಮಾನ್ಯವಾಗಿ ಮಾರ್ಚ ಮತ್ತು ಎಪ್ರಿಲ್ ತಿಂಗಳಿನಲ್ಲಿ ನಡೆಯುತ್ತದೆ. ಈ ಜಾತ್ರೆ ಮಂಗಳವಾರದಂದು ಆರಂಭವಾಗಿ ಶುಕ್ರವಾರ ಕೊನೆಗೊಳ್ಳುತ್ತದೆ. ಗಾವು ಸಿಗಿಯುವ ದಿನವನ್ನು ನಿರ್ದಿಷ್ಟಗೊಳಿಸಿದ ದಿನದಿಂದಲೇ ಪೋತರಾಜರು ನೀರು, ಹಾಲು, ಹಣ್ಣನ್ನು ಹೊರತುಪಡಿಸಿ ಮತ್ತೇನನ್ನೂ ಸೇವಿಸದೆ ಉಪವಾಸವಿರುತ್ತಾರೆ. ಈ ಕಟ್ಟಳೆ ಮೀರಿದ ಪೋತರಾಜರಿಗೆ ಭವಿಷ್ಯದಲ್ಲಿ ಅಪಾಯಗಳು ಸಂಭವಿಸುತ್ತವೆ ಎಂಬ ನಂಬಿಕೆ ಇವರಲ್ಲಿದೆ. ಸಾಮಾನ್ಯವಾಗಿ ಗುರುವಾರದಂದು ಸಂಜೆ ಹೊತ್ತಿನಲ್ಲಿ ಪೋತರಾಜರು ಉರಮೆ, ತಮಟೆ ವಾದ್ಯಗಳ ಸಮೇತ ಗಂಗೆ ಪೂಜೆ, ಸ್ನಾನ ಮುಗಿಸಿಕೊಂಡು ಗ್ರಾಮದ ನಿರ್ದಿಷ್ಟ ವ್ಯಕ್ತಿಗಳು ಒಂದು ವರ್ಷದ ಹೋತದ ಮರಿಯನ್ನು ಬಚ್ಚಿಟ್ಟಲ್ಲಿಗೆ ಬರುತ್ತಾರೆ. ಅದನ್ನು ಹುಡುಕಿ ಹೆಗಲ ಮೇಲೆ ಹೊತ್ತು ಕುಣಿಯುತ್ತಾ ದೇವಿಯ ಗುಡಿ ಮುಂದಿನ ಗಾವು ಸಿಗಿಯದ ಜಾಗಕ್ಕೆ ತರುತ್ತಾರೆ. ಆ ವೇಳೆಗಾಗಲೇ ಊರ ಮಡಿವಾಳ ಬಂದು ಗಾವಿನ ಗುಂಡಿಯನ್ನು ತೆಗೆದಿರುತ್ತಾನೆ. ಈ ಗುಂಡಿಯ ಮೇಲೆ ಪೋತರಾಜರು 'ಅಷ್ಟ ದಳದ ಪದ್ಮ'ವನ್ನು ಅರಿಷಿಣ, ಕುಂಕುಮ, ಅಕ್ಕಿ ಹಿಟ್ಟುಗಳಿಂದ ಹಾಕಿ ಎಲೆ, ಅಡಿಕೆ ಕೊಬ್ಬರಿ, ಬೆಲ್ಲ, ಬಾಳೆ ಹಣ್ಣು, ದಕ್ಷಿಣೆ ಇಟ್ಟು ತೆಂಗಿನಕಾಯಿ ಒಡೆದು ಪೂಜಿಸುತ್ತಾರೆ. ತದ ನಂತರ ಪೋತರಾಜ ಆದೇಶಭರಿತನಾಗಿ ಆ ಮೇಕೆಮರಿಯ ಕಿವಿಯಲ್ಲಿ ಮಂತ್ರ ಹೇಳುತ್ತಾನೆ. ಆ ಮಂತ್ರಕ್ಕೆ ಮನ ಸೋತ ಮೇಕೆಯ ಮರಿ ಗಪ್ ಚಿಪ್ ಎನ್ನದೆ ಸುಮ್ಮನೆ ನೆಲದಲ್ಲಿ ಮಲಗಿಕೊಳ್ಳುತ್ತದೆ. ಆಗ ಜನರಿಂದ ಹಣ, ವಸ್ತ್ರಗಳನ್ನು ಬೇಡಿ ಪಡೆದ ನಂತರ ದೇವಿ ಪೋತರಾಜನೋರ್ವನಲ್ಲಿ ಮೈದಳೆಯುತ್ತಾಳೆ.

ಆತ ಮತ್ತಷ್ಟು ಆವೇಶಭರಿತನಾಗಿ ಚಾಟಿಯಿಂದ ತನ್ನ ಬರಿ ಮೈಗೆ ಹೊಡೆದುಕೊಳ್ಳುತ್ತಾ, ನೆಲದಲ್ಲಿದ್ದ ಆ ಮರಿಯನ್ನು ಮೇಲಕ್ಕೆತ್ತಿಕೊಂಡು ಮುದ್ದಾಡುತ್ತಾನೆ. ಅತ್ತಿಂದಿತ್ತ ಇತ್ತಿಂದತ್ತಾ ತೂಗುತ್ತಾನೆ. ಅದರ ಹಣೆಗೂ ಕುಂಕುಮವಿಟ್ಟಿರುತ್ತಾರೆ. ಹಾಗೆ ಸುಮಾರು ಅರ್ಧಗಂಟೆ ಅಥವಾ ಒಂದು ಗಂಟೆಯ ತನಕ ಆಡಾಡಿಸಿ ಹೆಚ್ಚು ಕಡಿಮೆ ಮರಿಯನ್ನು ಸುಸ್ತುಗೊಳಿಸುತ್ತಾನೆ. ಇದನ್ನರಿತ ತಮಟೆಯ ದನಿ ತಾರಕಕ್ಕೇರುತ್ತದೆ. ಆಗ ಅದರ ಹಿಂದಿನ ಕಾಲುಗಳನ್ನು ತನ್ನ ತೊಡೆಯ ಸಂದಿನಲ್ಲಿ ಸಿಕ್ಕಿಸಿಕೊಂಡು, ಅದರ ಮುಂದಿನ ಕಾಲನ್ನು ಹಿಡಿದು ಮೇಲಕ್ಕೆತ್ತಿಕೊಂಡು ಕೆಳ ಬಾಯಿಯ ಕೆಳಭಾಗದ (ಗೋಮಾಳ) ಚರ್ಮವನ್ನು ತನ್ನ ಹಲ್ಲಿನಿಂದ ಕಚ್ಚಿ, ಕಚ್ಚಿ ಒಡಿದೆಳೆದು ಅದನ್ನು ಹತ್ಯ ಮಾಡುವಲ್ಲಿ ಯಶಸ್ವಿಯಾಗುತ್ತನೆ. ಇದೇ ವೇಳೆಯಲ್ಲಿ ಆತ ತನಗೆ

ಬೇಕಾದ ಹಸಿ ಮಾಂಸವನ್ನು ನಿಂತ ಸ್ಥಳದಲ್ಲೇ ತಿಂದು ತೇಗುತ್ತಾನೆ. ಗಾವು ಸಿಗಿಯುವಾಗ ಮರಿ ಅರಚಬಾರದೆಂಬ ನಂಬಿಕೆ ಕೂಡ ಇದೆ. ಆದ್ದರಿಂದಲೇ ಅದನ್ನು ಆಡಾಡಿಸಿ ಪ್ರಜ್ಞೆ ತಪ್ಪಿಸಿರುತ್ತಾನೆ. ಹಲ್ಲಿನಿಂದ ಚರ್ಮವನ್ನು ಎಳೆದೆಳೆದು ಕೊರಳ ಭಾಗವನ್ನು ಸೀಳುತ್ತಾನೆ. ಈ ಸಂದರ್ಭದಲ್ಲಿ ರಕ್ತ ಧಾರಾಕಾರವಾಗಿ ಸುರಿಯುತ್ತದೆ. ಇದನ್ನು ನೋಡಲು ಭಯವೂ ಆಗುವುದು. ಅವನ ರೌದ್ರ ಕುಣಿತ, ಕೆಂಪಾದ ಕಣ್ಣು, ಕಿವುಡು ಗಚ್ಚುವ ತಮಟೆಯ ಸದ್ದು ಎಲ್ಲವೂ ಭಯಂಕರ ಆದ್ದರಿಂದ ಮಕ್ಕಳನ್ನು ತಂದೆ ತಾಯಿಗಳು ಗಾವು ನೋಡಲು ಕಳಿಸುವುದಿಲ್ಲ. ಪೋತರಾಜರ ರೌದ್ರ ನರ್ತ, ಸೊಂಟಕ್ಕೆ ಸಿಕ್ಕಿಸಿಕೊಂಡಿರುವ ಬೇವಿನ ಸೊಪ್ಪು ಆಗಾಗ ಹೂಂಕರಿಸುವುದು, ದೊಡ್ಡದಾಗಿ ಕಣ್ಣು ಬಿಡುವುದು ಎಂಥಹವರನ್ನೂ ದಿಗಿಲುಗೊಳಿಸುವುದು. ಈ ಪೋತರಾಜ ತಿಂದು ಬಿಟ್ಟ ತಲೆ ಮತ್ತು ಕೆಳ ಸೋರಿದ ರಕ್ತಗಂಟಿದ ಮಣ್ಣನ್ನು ಈ ಮೊದಲೇ ತೆಗೆದು ಗುಂಡಿಯಲ್ಲಿಟ್ಟು ಮುಚ್ಚಿಬಿಡುತ್ತಾರೆ. ಉಳಿದ ದೇಹದ ಭಾಗವನ್ನು ಅಗಸ ಮತ್ತು ಊರಿನ ತಳವಾರನಿಗೆ ಸಮಾನವಾಗಿ ಹಂಚಿಕೊಳ್ಳುವಂತೆ ಹೇಳುತ್ತಾರೆ. ಇಲ್ಲಿಗೆ ಗಾವು ಆಚರಣೆ ಮುಕ್ತಾಯವಾಗುತ್ತದೆ.

ಪೋಟರಾಜನ ಬಗ್ಗೆ ಒಂದು ಸಾಂಕೇತಿಕ ಕಥೆಯನ್ನೇ ಹೇಳುತ್ತಾರೆ. ಒಂದು ದಿನ ನಿಡುಗಲ್ಲಿನಲ್ಲಿ ನಡೆಯುತ್ತಿದ್ದ ಗಾವು ಸಿಗಿಯುವ ಕಾರ್ಯಕ್ರಮಕ್ಕೊಬ್ಬ 'ಪೋತು' ರಾಜನು ರಂಗಸಮುದ್ರದ ಕಡೆಯಿಂದ ಬೆಟ್ಟವೇರಿ ನಡೆದುಕೊಂಡು ಬರುತ್ತಿರುತ್ತಾನೆ. ಅವನಿಗೆ ದಾರಿಹೋಕರಾರೋ ಆಗಲೇ 'ಗಾವು' ಸಿಗಿಯುವುದು ಮುಗಿದು ಹೋಯಿತು ಎಂದು ಹೇಳಿದರಂತೆ. ಹಾಗೆ ಹೇಳುತ್ತಿದ್ದಂತೆಯೇ ದೇವಿ ಮೈಮೇಲೆ ಬಂದು ಹೇಳಿದವನನ್ನೇ ಸಿಗಿದು ರಕ್ತವನ್ನು ಹೀರಿ ಅವನ ಮಾಂಸವನ್ನು ತಿಂದು ಸಾಯಿಸಿಯೇ ಬಿಟ್ಟನಂತೆ. ಈಗಲೂ ಆ ಜಾಗದಲ್ಲಿ ಪೋತುರಾಜನ ಗುಂಡು ಎಂಬುದೊಂದು ಇದ್ದು ಅದಕ್ಕೆ ಪೋತಪರಾಜನ ಚಿತ್ರವನ್ನು ಗುಂಡಿನಲ್ಲಿ ಕೆತ್ತಿರುವುದು ಕಂಡುಬರುತ್ತದೆ.

'ಪೋತುರಾಜಲು' ಎನ್ನುವ ತೆಲುಗಿ ಪದ 'ಪೋತರಾಜರು' ಆಗಿದೆ. 'ಪೋತ' ಎಂದರೆ ಹೋತ, ಹೋತವನ್ನು ಸಿಗಿಯುವವರು ಎಂದು. ಇವರು ಮೂಲತಃ ಆಂಧ್ರ ಪ್ರದೇಶದವರಾಗಿದ್ದರೂ ನಿಡುಗಲ್ಲು ಆಂಧ್ರ ಪ್ರದೇಶದಿಂದ ಸುತ್ತುವರಿದಿರುವ ಕಾರಣ ಅಲ್ಲಿನ ಕೆಲವು ಬೇಡ ನಾಯಕರೂ ಸಹ ಅವರ ವಂಶದವರೆಂದು ಹೇಳಿಕೊಳ್ಳುತ್ತಾರೆ. ನಿಡುಗಲ್ಲಿನಲ್ಲಿ ಗಾವು ಸಿಗಿಯಲು ಕಲ್ಯಾಣದುರ್ಗ ಮತ್ತು ರಾಯದುರ್ಗ (ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆ)ದ ಪೋತುರಾಜನ್ನೇ ಯಾವಾಗಲೂ ಕರೆಸುವ ಪದ್ಧತಿ ಉಂಟು, ಬೇರೆಯವರನ್ನು ಕರೆಯಿಸಿದರೆ ಅವರು ಜಗಳ ಮಾಡಿರುವ ಪ್ರಸಂಗಗಳೂ ಉಂಟೆಂದು ಸ್ಥಳೀಯರು ಹೇಳುತ್ತಾರೆ. ಇವರಿಗೆ ಸಂಭಾವನೆ ಕೊಡುವುದೂ, ಉಡುಗೊರೆ ಕೊಡುವುದೂ ಉಂಟು. ಇದೊಂದೇ ಪ್ರದೇಶದಲ್ಲಲ್ಲದೆ ಪಾವಗಡ ತಾಲ್ಲೂಕು. ಪಕ್ಕದ ಮಡಕಶಿರ ತಾಲ್ಲೂಕು (ಆಂಧ್ರ ಪ್ರದೇಶ)ಗಳಲ್ಲಿ ಇದು ಸಾಮಾನ್ಯ ಸಂಗತಿಯಾಗಿದೆ.

ಆಧುನಿಕತೆ ಎಲ್ಲೆಡೆ ವ್ಯಾಪಿಸುತ್ತಿದ್ದರೂ ಗ್ರಾಮದೇವತೆಯ ಸಾಂಪ್ರದಾಯಿಕ ಜಾತ್ರೆಗಳಲ್ಲಿ ಜೀವಂತ ಹೋತವನ್ನು ಕಚ್ಚಿ ತಿನ್ನುವ ಸಂಪ್ರದಾಯ ವಿದ್ಯಾವಂತ ನಾಗರೀಕರಿಗೆ ಖೇದಕರ ಸಂಗತಿಯಾದರೂ ಇದು ಆ ಸಮೂಹ ಮತ್ತು ಪರಿಸರದಲ್ಲಿ ದೇವಿಗೆ ಕೊಡುವ ಶಾಂತಿ ಮತ್ತು ಬಲಿ ಹಾಗೂ ಮನರಂಜನಾ ಕ್ರಿಯೆಯಾಗಿ ಕಾಣುತ್ತದೆ. ಸಾವಿರಾರು ಜನ ಈ ದೃಶ್ಯ ನೋಡಲು ಮುಗಿಬಿದ್ದಿರುತ್ತಾರೆ.

ಈಡಿನ ಹಬ್ಬ

ಈಡಿನ ಹಬ್ಬವು ನಿಡುಗಲ್ಲು ಪ್ರದೇಶದ ಪ್ರಮುಖ ಹಬ್ಬಗಳಲ್ಲೊಂದು. ಈ ಹಬ್ಬವನ್ನು ರೈತವರ್ಗದವರೇ ಬಹುಪಾಲು ಪಾಲ್ಗೊಂಡು ಕಾರ್ತೀಕ ಮಾಸದಲ್ಲಿ ಆಚರಿಸುವ ವಿಜೃಂಭಣೆಯ ಹಬ್ಬವೇ ಎತ್ತಿನ ಹಬ್ಬ. ಇದನ್ನು ಈಡಿನ ಹಬ್ಬವೆಂದೂ ತೆಲುಗಿನಲ್ಲಿ 'ಈಡ ಪಂಡಗ'ವೆಂದೂ ಕರೆಯುವುದುಂಟು. ಶಿಷ್ಟ ವರ್ಗದವರು ಆಚರಿಸುವ ದೀಪಾವಳಿಗೂ, ಮಧ್ಯಮ ವರ್ಗದವರು ಆಚರಿಸುವ ಎತ್ತಿನ ಹಬ್ಬಕ್ಕೂ ಆಚರಣೆಯಲ್ಲಿ ವ್ಯವತ್ಯಾಸವಿದೆ, ವೈವಿಧ್ಯತೆಯೂ ಇದೆ.

ಊರಿನ ಪ್ರಮುಖರೆಲ್ಲರೂ ಕಾರ್ತೀಕ ಮಾಸದ ಸಮಯದಲ್ಲಿ ಪಂಚಾಯ್ತಿ ಜಗುಲಿಯ ಮೇಲೆ ಸೇರಿ ಹುಣ್ಣಿಮೆಯಾದ ಎಷ್ಟನೇ ದಿನದಲ್ಲಿ ಹಬ್ಬ ಮಾಡಬೇಕೆಂದೂ ಆ ಹಬ್ಬದ ದಿನ ಗ್ರಾಮ ದೇವತೆಯ ಉತ್ಸವವನ್ನು ಮಾಡಬೇಕೆ? ಬೇಡವೇ? ಮುಂತಾದ ವಿಷಯಗಳನ್ನೆಲ್ಲಾ ಚರ್ಚಿಸಿ ಒಂದು ಒಳ್ಳೆಯ ದಿನವನ್ನು ನಿಶ್ಚಯಿಸುತ್ತಾರೆ. ಪ್ರತಿವರ್ಷಕ್ಕೊಂದು ಬಾರಿ ಈ ಹಬ್ಬ ನಡೆಯುತ್ತದೆ. ಹಬ್ಬದ ದಿನವನ್ನು ಊರಿನವರಿಗೆಲ್ಲಾ ಖಚಿತವಾಗಿ ತಿಳಿಯುವಂತೆ ಮಾಡುವ ರೀತಿಯೂ ಒಂದು. ಆ ಊರಿನ ತೋಟಿ ಅಥವಾ ತಳವಾರನ ಮುಖಾಂತರ ಸೂರ್ಯ ಹುಟ್ಟುವ ಮುಂಚೆ 'ತಂಗಟೇ' ಹೂಗಳನ್ನು ತಂದು ಆ ಹೂವನ್ನು ಪ್ರತಿ ಮನೆಯ ಹೊಸಲಿನ ಮೇಲೆ ಎರಚಿ ಹಬ್ಬದ ದಿನವನ್ನು ತಿಳಿಸುವಂತೆ ಹೇಳುತ್ತಾರೆ. ಇದಕ್ಕೆ 'ಹೂ ಚೆಲ್ಲುವುದು' ಎನ್ನುತ್ತಾರೆ. ಇದು ಮೂರು ದಿನ ಅಥವಾ ಐದು ದಿನ ನಡೆಯುತ್ತದೆ. ಈ ರೀತಿ ಹೂ ಚೆಲ್ಲಿದ ಮೇಲೆ ಹರಿಹರ ಬ್ರಹ್ಮ ಬಂದರೂ ಹಬ್ಬವನ್ನೂ ಮುಂದೂಡುವುದಿಲ್ಲ ಅಥವಾ ನಿಲ್ಲಿಸುವುದಿಲ್ಲ. ಆ ಹಕ್ಕು ಯಾರಿಗೂ ಇಲ್ಲ ಎನ್ನುವ ವಾಡಿಕೆ ಇದೆ. ಈ ಹಂತ ಮುಗಿದ ನಂತರ ಹುಡುಗಿಯರು ಬಸವನನ್ನು ಆರಾಧಿಸುವುದು, ಕುಂತಿಯನ್ನು ಆರಾಧಿಸುವುದು ನಡೆಯುತ್ತದೆ. ಊರಿನ ದನಗಾಹಿಗಳು ಈಡು ಹಾಕುವುದೂ– ಮೊದಲಾದ ಕಾರ್ಯಕ್ರಮಗಳು ಹಬ್ಬ ನಾಳೆ ಎನ್ನುವ ತನಕ ನಿರಂತರವಾಗಿ ನಡೆಯುತ್ತವೆ. ಡಾ.ಜಿ.ಆರ್, ತಿಪ್ಪೇಸ್ವಾಮಿಯವರು ಅಂಟಿ ಪಿಂಟಿ ಎಂಬ ಹೆಸರಿನಲ್ಲಿ ದೀಪ ದಾನ ಸಂಪ್ರದಾಯವು ಪ್ರತಿ ರಾತ್ರಿಯ ವೇಳೆ ನಡೆಯುತ್ತದೆ ಎಂದು ತಿಳಿಸುತ್ತಾರಾದರೂ[೨] ಅದನ್ನು ಇತ್ತೀಚೆಗೆ ಜನರು ಕೈಬಿಟ್ಟಿದ್ದಾರೆ ಎನ್ನುವುದು ಕ್ಷೇತ್ರಕಾರ್ಯದಲ್ಲಿ ಖಚಿತಗೊಂಡಿದೆ.

ಕಾರ್ತೀಕ ಮಾಸದ ಆರಂಭದಲ್ಲಿಯೇ ಊರ ಹೆಣ್ಣು ಮಕ್ಕಳು ಮಣ್ಣನ್ನು ತಂದು ಬಸವನ ವಿಗ್ರಹ ಮತ್ತು ಕುಂತಿಯ ಪ್ರತಿಮೆಯನ್ನು ಮಾಡಿ ಅದಕ್ಕೆ ಅನೇಕ ಹಲವು ಗರಿಕೆ ಉತ್ತರಾಣಿ ಕಡ್ಡಿ ಇತ್ಯಾದಿ ಗಿಡಗಳ ಸೊಪ್ಪಿನಿಂದ ಅಲಂಕೃತಗೊಳಿಸುತ್ತಾರೆ. ಅದೇ ಸಮಯದಲ್ಲಿ ಆ ಊರಿನ ಮೂಲಕ ಹಾದು ಹೋಗುವ ಅಪರಿಚಿತರನ್ನು ಅಡ್ಡಗಟ್ಟಿ ಆರತಿ ತಟ್ಟೆ ಹಿಡಿದು ಹಾಡು ಹೇಳುವ ಮುಖಾಂತರ ಹಣವನ್ನು ತಟ್ಟೆಗೆ ಹಾಕಿಸಿಕೊಳ್ಳುತ್ತಾರೆ. ಹಣ ತಟ್ಟೆಗೆ ಬೀಳುವವರೆಗೂ ಅವರೆಷ್ಟೇ ಎಂದರೂ ಆತನನ್ನು ಬಿಡದೆ ಎಳೆದಾಡುತ್ತಾರೆ. ಅಷ್ಟೊ ಇಷ್ಟೊ ಕೊಟ್ಟು ಹೋದವನು ದೂರ ಹೋದ ಮೇಲೆ 'ಅಲವಾದ್ರಗಿತ್ತೇರೆ, ರಂಕ್ಸೋಳೆರೆ' ಮುಂತಾಗಿ ಬೈಯಾತ್ತಾನೆ.[1] ಹೀಗೆ ಅಪರಿಚಿತರಿಂದ ಕೂಡಿಟ್ಟ ಹಣದಿಂದ ಒಡವೆಯನ್ನೊ, ವಸ್ತ್ರವನ್ನೊ ಕೊಂಡು ಗ್ರಾಮ ದೇವತೆಗೆ ಶೃಂಗಾರ ಮಾಡುತ್ತಾರೆ. ಇದರ ಜೊತೆಯಲ್ಲೇ ಮನೆ ಮನೆಗೂ ಎತ್ತಿದ ಭತ್ತ, ಅಕ್ಕಿಯನ್ನು ಒಂದೆಡೆಗೆ ಸೇರಿಸಿ ಹಬ್ಬದ ಹಿಂದಿನ ದಿನವೇ ಅಡಿಗೆ ಮಾಡಿ ಬಸವನಿಗೆ ಎಡೆ ಹಾಕಿ ನಂತರ ಬಂದವರಿಗೆಲ್ಲಾ ಊಟ ಬಡಿಸುತ್ತಾರೆ. ಹಬ್ಬದ ರಾತ್ರಿ ಕುಂಕುಮ ಉತ್ಸವವೂ ಇರುತ್ತದೆ.[2]

ಈ ಹಬ್ಬದ ದಿನ ದುಡಿಯುವ ಎತ್ತುಗಳ ದುಡಿಮೆಗೆ ಬಿಡುವು. ರೈತರೆಲ್ಲರೂ ತಮ್ಮ ತಮ್ಮ ಹೋರಿಗಳನ್ನೂ, ಎತ್ತುಗಳನ್ನೂ, ಹಳ್ಳ ಕೊಳ್ಳ, ಕೆರೆಗಳಲ್ಲಿ ಚೆನ್ನಾಗಿ ಮೈ ತೊಳೆದು ದುಂಡು ದುಂಡಾಗುವಂತೆ ಹೊಟ್ಟೆ ತುಂಬ ತಮ್ಮ ಹೊಲಗಳಲ್ಲಿ ಮೇಯಿಸುತ್ತಾರೆ. ಅಂದು ಸಂಜೆಯ ಹೊತ್ತಿಗೆ ಅವುಗಳ ಎರಡು ಕೊಂಬುಗಳನ್ನೆರೆದು ಬಣ್ಣ ಹಚ್ಚಿ ಮೈಗೆ ಬಣ್ಣ ಬಣ್ಣದ ಜರತಾರೀಗೌಸು (ಜೂಲು ಎಂದು ಕರೆಯುತ್ತಾರೆ) ಮತ್ತು ಸೀರೆಗಳನ್ನು ಹಾಕಿ ಕೊಂಬಿಗೆ ಕಳಸ, ಪೀಪಿ, ಟೇಪುಗಳನ್ನು ಕಟ್ಟುತ್ತಾರೆ. ಎರಡೂ ಕೊಂಬುಗಳ ಮಧ್ಯೆ ವೀಳೆದೆಲೆಯನ್ನು ಎಲೆ ಪೂಜೆ ಕಟ್ಟುವಂತೆ ಕಟ್ಟಿ ಹೂವಿನ ಕುಚ್ಚ ಮುಡಿಸುತ್ತಾರೆ, ಕಾಲಿಗೆ ಗೆಜ್ಜೆ, ಗಣೆಯ ಮೇಲೆ ಕಾಸಿನ ಸರವನ್ನು ಕಟ್ಟಿ ಅಲಂಕರಿಸುತ್ತಾರೆ. ಉಳ್ಳವರು ಅವುಗಳ ಕೊಂಬಿಗೆ ಒಡವೆಗಳನ್ನು ಕಟ್ಟುವುದುಂಟು, ಅಷ್ಟೇ ಅಲ್ಲದೆ ಅವುಗಳ ಕಾಲಿಗೆ, ಕುತ್ತಿಗೆಗೆ ಗೆಜ್ಜೆ ಸರಗಳನ್ನು ಹಾಕಿ ಕುಂಕುಮ ಅರಿಶಿಣಗಳನ್ನು ಹಚ್ಚಿ, ಅರೆ, ಡೋಲು, ತಮಟೆ ಮೊದಲಾದ ಜನಪದ ವಾದ್ಯಗಳ ಮುಖಾಂತರ ಸಾಲಾಗಿ ಆ ಊರಿನ ಗ್ರಾಮದೇವತೆಯ ಮುಂದೆ ವ್ಯವಸ್ಥಿತವಾಗಿ ನಿಲ್ಲಿಸುತ್ತಾರೆ.

ಅತ್ತ ಹೂ ಚೆಲ್ಲಿನ ದಿನದಿಂದ ಹಿಡಿದು ದನಗಾಹಿಗಳು ಬಾನ ಮಾಡುವವರೆಗೆ ಪ್ರತಿವರ್ಷ ಹಾಕುವ ಜಾಗದಲ್ಲಿಯೇ ಜಾಲಿ, ಬೇಲ, ರೋಜಿ ಮುಂತಾದ ಗಿಡಗಳ ಬೇಲಿಯನ್ನು ಕಡಿದು ಕುಂಬಳಕಾಯಿಯನ್ನು ಮಧ್ಯೆ ಇಟ್ಟು ದೊಡ್ಡದಾದ ರಾಸಿಯನ್ನೇ ಹಾಕಿರುತ್ತಾರೆ. ಇದನ್ನು 'ಈಡು' ಎಂದು ಕರೆಯುವರು. ಹೀಗೆ ಸಿದ್ಧಪಡಿಸಿದ ಈಡಿನ ಸಮೀಪಕ್ಕೆ ಪಟಾಕಿ, ಬಿರುಸು, ಬಾಣಗಳ ಸಹಿತ ಹಾಕುವ ಕೇಕೆಯೊಂದಿಗೆ ಹೊರಟ ಆ ಸಮೂಹವನ್ನು, ಆ ಶೃಂಗಾರ ದೃಶ್ಯಗಳನ್ನು ಒಮ್ಮೆ ನೋಡಬೇಕೆನಿಸುವ ಕುತೂಹಲವಾಗುತ್ತದೆ. ಅಲ್ಲಿಯ ಪೂಜಾ ಕಾರ್ಯಗಳು ಮುಗಿದ ಮೇಲೆ ಗೊಲ್ಲರೇ ಸಿದ್ಧಪಡಿಸಿಕೊಂಡು ಬಂದಿದ್ದ ಅಕ್ಕಿ ಬೆರಸದ ರಾಗಿ

ಮುದ್ದೆಗಳನ್ನು ದನ–ಕರುಗಳ ಮಧ್ಯೆ ಒಂದಿಬ್ಬರು ಎಸೆದಾಡುತ್ತಾರೆ. ಇದಕ್ಕೆ ಮುದ್ದೆಗಳು ಎಸೆಯೋದು ಎಂದು ಕರೆಯುತ್ತಾರೆ. ನಿಡುಗಲ್ಲಿನಲ್ಲಿ ಗೊಲ್ಲರಿಲ್ಲದ ಕಾರಣ ಪಕ್ಕದ ಊರಾದ ಚಿಕ್ಕ ತಿಮ್ಮನ ಹಟ್ಟಿಯಿಂದ ಕರೆಸುತ್ತಾರೆ ಎಂದು ಸ್ಥಳೀಯರು ಹೇಳುತ್ತಾರೆ.

ಇಂಥ ವಿಧಿಯುಕ್ತ ಕ್ರಿಯೆಗಳು ಮುಗಿದಾಗ ಊರಗೌಡ ಈಡಿಗೆ ಬೆಂಕಿ ಹಚ್ಚಲು ಹರಿಜನರಲ್ಲಿ ಒಬ್ಬನಿಗೆ ಆಜ್ಞೆ ಮಾಡುತ್ತಾನೆ. ಅದಕ್ಕೆ ಹರಿದನ ವ್ಯಕ್ತಿ ತನ್ನ ಸುಡಿಗೆಯಿಂದ ಬೆಂಕಿ ಹಚ್ಚಿ ಅದು ಧಗಧಗನೆ ಉರಿಯುತ್ತಿರುವಾಗಲೇ ಜಾನುವಾರುಗಳ ಸಮೇತ ಪ್ರದಕ್ಷಿಣೆ ಹಾಕಿ 'ವಾಲಗ' ಮಾಡಿಸಿಕೊಂಡು ಊರಿನ ಪ್ರಮುಖ ಜಾಗಗಲಲ್ಲಿ ಸ್ವಲ್ಪ ಹೊತ್ತು ನಿಲ್ಲಿಸಿ ಅಲ್ಲಿಯವರೆಲ್ಲಾ ಕುಣಿಯುತ್ತಾರೆ. ನಂತರ 'ಸುಡಿಗೆ' ಬೆಳಕಿನಲ್ಲಿ ವಾದ್ಯಗಳ ಸಮೇತ ಅವರವರ ಮನೆ ಬಾಗಿಲಿಗೆ ಜಾನುವಾರುಗಳನ್ನು ಹೊಡೆದುತರುತ್ತಾರೆ. ಇತ್ತೀಚೆಗೆ ಸುಡಿಗೆಗಳ ಬದಲಿಗೆ ಲೂಟಾನುಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ.

ಇದಾವುದೇ ಕಾರ್ಯದಲ್ಲಿ ಭಾಗವಹಿಸದ ಸ್ತ್ರೀಯರು ದಿನವೆಲ್ಲಾ ವಿವಿಧ ರೀತಿಯ ಅಡಿಗೆಯಲ್ಲಿ ತೊಡಗಿ ರಾತ್ರಿ ಇಡಿನಿಂದ ಮನೆಗೆ ಬರುವ ತಮ್ಮ ಜಾನುವಾರುಗಳಿಗೆ ಆರತಿ ಬೆಳಗಲು ಕಾಯುತ್ತಾ ನಿಂತಿರುತ್ತಾರೆ. ತಮ್ಮ ದನಗಳು ಮನೆ ಬಾಗಿಲಿಗೆ ಬಂದ ತಕ್ಷಣ ಆ ಹೆಣ್ಣು ಮಕ್ಕಳು ಮಂಗಳಾರತಿ ಬೆಳಗಿ ವಿವಿಧ ಹಾಡುಗಳನ್ನು ಹಾಡಿ ಬಸವನಿಗೆಂದು ಹಿಡಿದಿರುವ ಆರತಿ ತಟ್ಟೆಯಲ್ಲಿ ಕಾಸು ಹಾಕಿಸಿಕೊಂಡು ಒಳಗೆ ಬಿಡಿಸಿಕೊಳ್ಳುತ್ತಾರೆ. ಇಲ್ಲಿಗೆ ಈ ಹಬ್ಬ ಮುಕ್ತಾಯವಾಗುತ್ತದೆ.

ರೈತರಿಗೆ ತಮ್ಮ ವ್ಯವಸಾಯದ ಬೆನ್ನೆಲುಬಾದ 'ವೃಷಭ' ಅತ್ಯಂತ ಪೂಜ್ಯನೀಯವಾಗಿದ್ದು, ಕರಡಿಯಂತಹ ದುಷ್ಟ ಪ್ರಾಣಿಗಳನ್ನು ಸುಡಿಗೆ ಹಚ್ಚುವುದರಿಂದ ಓಡಿಸುವಂತೆಯೇ ಇಲ್ಲಿ ಬೆಂಕಿ (ಈಡು) ಒಂದು ಶಕ್ತಿಯಾಗಿ ಈ ಶಕ್ತಿಯ ಮೂಲಕ ಸಂಭವಿಸುವ ಅಥವಾ ಸಂಭವಿಸಬಹುದಾದ ದುಷ್ಟ ಶಕ್ತಿಗಳನ್ನು ಪಾರು ಮಾಡುವ ಸನ್ಮಾರ್ಗವೇನಾದರೂ ಇದ್ದು ಆ ಮೂಲಕ ಜಾನುವಾರುಗಳನ್ನು ಆರೋಗ್ಯವಾಗಿಡುವುದಕ್ಕೆ ಆಚರಿಸುವ, ಅನುಸರಿಸುವ ಕ್ರಮಗಳನ್ನು ಈಡು ಸುಡುವ ಆಚರಣೆಯಲ್ಲಿ ಕಂಡುಕೊಳ್ಳುವ ಸಾಧ್ಯತೆ ಉಂಟು.[೪] ಈ ಹಬ್ಬವು ಕರ್ನಾಟಕದಲ್ಲಿ ಬಹು ದಿನಗಳಿಂದಲೂ ಬಳಕೆಯಲ್ಲಿದ್ದು ಒಂದೊಂದು ಪ್ರದೇಶದಲ್ಲಿ ಒಂದೊಂದು ಹೆಸರಿನಿಂದ ಗುರುತಿಸಲ್ಪಡುತ್ತಿದೆಯಷ್ಟೆ.

ಈ ಹಬ್ಬವನ್ನು ಈಡಿನ ಹಬ್ಬ, ಬಸವನ ಹಬ್ಬ, ಕಾರ ಹಬ್ಬವೆಂದೂ ಕರೆಯುವುದುಂಟು. ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ ಮುಂತಾದ ಪ್ರದೇಶಗಳಲ್ಲಿರುವ ಈ ಕಾರ ಹುಣ್ಣಿಮೆ ಹಬ್ಬಕ್ಕೂ ನಿಡುಗಲ್ಲು ಮತ್ತು ಸುತ್ತಮುತ್ತ ಇರುವ ಈಡಿನ ಹಬ್ಬಕ್ಕೂ ಬಹಳ ಹತ್ತಿರದ ಸಂಬಂಧ ಇದೆ. ಕಾರ ಹುಣ್ಣಿಮೆ ಅಥವಾ ಕಾರ ಹಬ್ಬದ ವಿಚಾರವಾಗಿ ಶ್ರೀ ಬೆಟಗೇರಿ ಕೃಷ್ಣಶರ್ಮರು ಹೀಗೆ ಹೇಳುತ್ತಾರೆ.[೫] ಜೇಷ್ಠ ಶುದ್ಧ ಪೌರ್ಣಿಮೆಯು ಕಾರ ಹುಣ್ಣಿಮೆ ಎಂಬ ಹೆಸರಿನಲ್ಲಿ ನಮ್ಮ

ನಾಡಿನಲ್ಲಿ ಪ್ರಸಿದ್ಧವಾಗಿದೆ. ಬಯಲು ನಾಡಿನ ರೈತರಿಗಂತೂ ಈ ಹಬ್ಬ ದೊಡ್ಡ ದೊಡ್ಡ ಹಬ್ಬ. ಕಾರ ಎಂದರೆ ಮಳೆ. ಮಳೆಗಾಲದ ಆರಂಭದ ಹುಣ್ಣಿಮೆ ಎಂದೆ ಇದಕ್ಕೆ ಕಾರ ಹುಣ್ಣಿಮೆ ಎಂಬ ಹೆಸರು ಬಂದಿದೆ. ಹೊಲದಲ್ಲಿ ದುಡಿಯುವ ಎತ್ತುಗಳನ್ನು ದೇವರೆಂಬ ಭಾವನೆಯಿಂದ ಪ್ರತ್ಯೇಕವಾಗಿ ಪೂಜಿಸುವುದು ಈ ಹಬ್ಬದಲ್ಲಿ ಮುಖ್ಯ ಕಾರ್ಯಕ್ರಮ ಎಂದು ಹೇಳುತ್ತಾರೆ. ಈ ಹಬ್ಬಕ್ಕೂ ನಿಡುಗಲ್ಲಿನ ಹಬ್ಬಕ್ಕೂ ಹತ್ತಿರದ ಸಂಬಂಧವೆಂಬುದಕ್ಕೆ

ಕೋಟೆ ಕೊತ್ತೂರು ಕೊನೆಸೆರಗು ಬಳ್ಳಾರಿ
ಏಕ ರಾಜ್ಯೇವು ನಿಡುಗಲ್ಲು! ಶಿಖರದ
ಮೇಲೆ ಭೂಪನಾಗೆವ್ನೆ ಬಸವಣ್ಣ

ಎನ್ನುವ ಜಾನಪದ ಗೀತೆಯ ತುಣಕೊಂದು ನಿಡುಗಲ್ಲು ರಾಜ್ಯದ ವ್ಯಾಪ್ತಿಯನ್ನು ತೋರಿಸುವುದರ ಮೂಲಕ ಅಲ್ಲಿನ ಧಾರ್ಮಿಕ, ಸಾಮಾಜಿಕ ವಿಧಿ ವಿಧಾನಗಳು ಮೂಲದಲ್ಲಿ ಒಂದೆ ಆಗಿದ್ದು ತದನಂತರ ಮಾರ್ಪಾಟಾಗಿರುವ ಸಾಧ್ಯತೆ ಇದೆ ಎಂಬುದನ್ನು ತೋರಿಸುತ್ತದೆ. ಹೀಗೆ ಈಡಿನ ಹಬ್ಬ ಎನ್ನುವುದು ವಿವಿಧ ಭಾಗಗಲಲ್ಲಿ ವಿವಿಧ ಹೆಸರುಗಳಿಂದ ಕರೆಸಿಕೊಳ್ಳುತ್ತದೆಯಾದರೂ ಹಬ್ಬದ ಉದ್ದೇಶ ಒಂದೇ ಆಗಿದೆ ಹಾಗೂ ಅದು ಒಂದು ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ಭಾಗವಾಗಿ ಪಾರಂಪರ್ಯವಾಗಿ ಮುಂದುವರೆಸಿಕೊಂಡು ಬಂದು ಆ ಪ್ರದೇಶದ ರೈತರ ಜೀವನದ ಬದುಕಿನ ಹಾಸು ಹೊಕ್ಕಾಗಿದೆ. ಅದು ಅವರಿಗೆ ನೆಮ್ಮದಿ, ಸಂತೋಷ, ಸಡಗರ, ಉತ್ಸಾಹಗಳನ್ನು ತಂದುಕೊಡುತ್ತದೆ, ಇಂತಹ ಆಚರಣೆಯ ಮೂಲಕ ರೈತರು ತಮ್ಮ ದನ-ಕರುಗಳನ್ನು ಪೂಜಿಸಿ ಅವುಗಳ ದುಡಿಮೆಗೆ ಗೌರವ ಪೂಜ್ಯ ಭಾವನೆ ಕೊಡುತ್ತಾರೆ ಎನ್ನಬಹುದು.

ಮೀರ್ಜಾ ಹುಸೇನ ವಾರಿ ಉರುಸ್

ನಿಡುಗಲ್ಲಿನಲ್ಲಿರುವ ಮಿರ್ಜಾ ಹುಸೇನವಾಲಿಯೆಂಬ ಸಾಧುವಿನ ಗೋರಿಗೆ ಸುಂದರವಾದ ರಚನೆಯನ್ನು ಕೊಟ್ಟು ವರ್ಷಕ್ಕೊಮ್ಮೆ ಆ ಗೋರಿಗೆ ಉರುಸು (ಜಾತ್ರೆ) ನಡೆಸಿಕೊಂಡು ಬರುತ್ತಿದ್ದಾರೆ. ಈ ಊರಿನ ಮುಸ್ಲಿಂ ಬಾಂಧವರು, ಸುತ್ತಮುತ್ತಲಿನ ಅನೇಕ ಹಳ್ಳಿಗಳಿಂದ, ದೂರ ದೂರದ ಪ್ರದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದು ಸೇರುವ ಜನರು ಹಿಂದು-ಮುಸ್ಲಿಂ ಎನ್ನುವ ಜಾತಿ, ಧರ್ಮದ ಭೇದವಿಲ್ಲದೆ ಭಾಗವಹಿಸುವ ಈ ಜಾತ್ರೆ ಸಾಮಾನ್ಯವಾಗಿ ಮಾರ್ಚ್, ಏಪ್ರಿಲ್ ತಿಂಗಲುಗಳಲ್ಲಿ ನಡೆಯುತ್ತದೆ. ಇದು ಹಿಂದೂ- ಮುಸ್ಲಿಂ ಐಕ್ಯತಾ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದಲೇ ಕರ್ನಾಟಕದಲ್ಲಿ ಈ ಜಾತ್ರೆಗೆ ವಿಶೇಷ ಮನ್ನಣೆ ಇರುವುದು.

ಹೆಸರಿಗೆ ಮಾತ್ರ ಮುಸ್ಲಿಂರದಾಗಿರುವ ಈ ಜಾತ್ರೆಗೆ ಹೆಚ್ಚಿಗೆ ಭಾಗವಹಿಸಿಸುವವರು ಹಿಂದೂ ಧರ್ಮೀಯರೇ ಎನ್ನುವುದು ಒಂದು ವೈಶಿಷ್ಟ ಇನ್ನೊಂದು ಗಮನ ಸೆಳೆಯುವ

ಸಂಗತಿ ಎಂದರೆ ಈ ವರ್ಷ ಒಂದು ಕುದುರೆಯ ಮೇಲೆ ಅಲ್ಲಿನ ಉತ್ಸವ ಮಾಡಿದರೆ ಅದರ ಜೊತೆಗೆ ಒಂದು ಕುದುರೆ ಮರಿಯನ್ನು ತಂದು ಅಲಂಕರಿಸಿ ಪೂಜಿಸಿ ಬೆಳಗಿನ ಜಾವ ಅದನ್ನು ಬಿಟ್ಟು ಬಿಡುತ್ತಾರೆ. ಮುಂದಿನ ವರ್ಷ ಆ ಕುದುರೆ ಮರಿ ಎಲ್ಲಿದ್ದರೂ ಆ ಸಮಯಕ್ಕೆ ಸರಿಯಾಗಿ ನಿಡುಗಲ್ಲಿಗೆ ಬರುತ್ತದೆಯಂತೆ. ಹಾಗೆ ಪ್ರತಿವರ್ಷವೂ ಒಂದೊಂದು ಕುದುರೆ ಮರಿಯನ್ನು ತಂದು ಅಲ್ಲಾಹನಿಗೆ ಬಿಡುತ್ತಾರೆ. ನಾನು ಭೇಟಿ ನೀಡಿದ ಈ ಜಾತ್ರೆಯ ದಿನ)೨೪.೦೪.೨೦೦೦) ಕುದುರೆಯನ್ನು ಪಕ್ಕದ ಊರಿನಲ್ಲಿತ್ತೆಂದು ಹೊಡೆದುಕೊಂಡು ಬಂದಿದ್ದರಾದರೂ ಅದು ಬೆದರುತಿದ್ದುದ್ದರಿಂದ ಅದನ್ನು ಸುಮ್ಮನೆ ಪೂಜಿಸಿ ಬಿಟ್ಟು ಬಿಟ್ಟರು. ಅದರ ಬದಲಿಗೆ ಟಿ.ವಿ.ಎಸ್.೫೦ರ ಮೇಲೆ ಅಲ್ಲಿನ ಮೂರ್ತಿಯನ್ನು ಕಟ್ಟಿ ಅಲಂಕರಿಸಿ ಮೆರವಣಿಗೆ ಮಾಡುತ್ತಿದ್ದುದು ಬಹಳ ಆಶ್ಚರ್ಯವಾಗಿ ಕಂಡು ಬಂದಿತು.

ಅಂದು ಊರಿನವರೆಲ್ಲರೂ ಧರ್ಮಭೇದವಿಲ್ಲದೆ ಹಬ್ಬ ಮಾಡಿ ರಾತ್ರಿ ಊಟ ಮುಗಿಸಿದ ನಂತರ ಸುಮಾರು ಹತ್ತು ಗಂಟೆಗೆ ಈ ಉತ್ಸವ ಪ್ರಾರಂಭವಾಗುತ್ತದೆ. ಇಡೀ ರಾತ್ರಿ ವಿವಿಧ ವೇದಿಕೆಗಳಲ್ಲಿ ಹಿಂದೂ–ಮುಸ್ಲಿಂರ ವಿನೋದಾವಳಿಗಳು ನಡೆಯುತ್ತವೆ. ಕುರಾನ್ ಉಪನ್ಯಾಸ, ಕೀಲು ಕುದುರೆ ಆಟ, ಕವ್ವಾಲಿ ಪದಗಳು, ತಂದಾನಿತಾನಗಳು ಮನರಂಜನಾ ಕಾರ್ಯಕ್ರಮಗಳಾಗಿ ನಡೆಯುತ್ತವೆ. ಹಾಗೆಯೇ ಮೊಹರಂನ ಕೊನೆಯ ದಿನದಂದೂ ಸಹ ಈ ಸಮಾಧಿಗೆ ಸುತ್ತಮುತ್ತಲಿನ ಮುಸಲ್ಮಾನರು ಸೇರಿ ಅಲ್ಲಾಹನನ್ನು ನೆನಯುವ ಪದ್ಧತಿ ಉಂಟು

ಬಾಬಯ್ಯನ ಹಬ್ಬ

ಕರ್ನಾಟಕದ ಗಡೀ ಭಾಗದಲ್ಲಿ ಈ ಬಾಬಯ್ಯನ ಹಬ್ಬವಂತೂ ತುಂಬ ಪ್ರಸಿದ್ಧವಾದುದು. ಹಬ್ಬ ನಿಗದಿಯಾದ ದಿನದಿಂದಲೇ ಸುತ್ತಮುತ್ತಲ ಊರುಗಳಿಂದ ಮುಸ್ಲಿಂ ಯುವಕರು ಕಾಣಿಕೆ ಎತ್ತುತ್ತಾರೆ. ಹಬ್ಬದ ಮುಂದಿನ ದಿನ ಬಾಬಯ್ಯ ಕೊಂಡ ಹಾಯುತ್ತಾನೆ. ಎರಡನೇ ದಿನ ನೀರಿಗೆ ಬೀಳುವ ಕಾರ್ಯಕ್ರಮವಿರುತ್ತದೆ. ಹಬ್ಬದ ದಿನ ಅನ್ನ ಸಂತರ್ಪಣೆಯೂ ಇರುತ್ತದೆ. ಈ ಹಬ್ಬದಲ್ಲಿಯೂ ಸಹ ಹಿಂದೂ ಮುಸ್ಲಿಂ ಧರ್ಮದವರು ಜೊತೆಗೂಡಿರುತ್ತಾರೆ. ಯಾವುದೇ ಭೇದಭಾವವಿಲ್ಲದೆ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಬಾಬಾಯ್ಯನ ಉತ್ಸವದಲ್ಲಿ ಬಾಬಯ್ಯನ ಮೇಳ, ಕೀಲು ಕುದುರೆ, ಬಾಯಿಯಲ್ಲಿ ಕಬ್ಬಿಣದ ತಂತಿ ಆ ಕಡೆಯಿಂದ ಈ ಕಡೆ ದವಡೆಗೆ ಏರಿಸಿ ಕೊಳ್ಳುವುದು ಮುಂತಾದ ನೃತ್ಯಗಳ ಮೂಲಕ ಬಾಬಯ್ಯನ ಉತ್ಸವ ಸಾಗಿ ಊರ ಹೊರಗಿರುವ ಕಲ್ಯಾಣಿಯೊಂದರಲ್ಲಿ ಅವುಗಳನ್ನು ಹಾಕುವ ಸಂಕೇತದ ಮುಖಾಂತರ ಹಬ್ಬ ಕೊನೆಗೊಳ್ಳುತ್ತದೆ.

ಹೀಗೆ ನಿಡುಗಲ್ಲಿನ ಧಾರ್ಮಿಕ ಆಚರಣೆಗಳು ಆಯಾ ಧರ್ಮದ ಒಳ ಸಂಪ್ರದಾಯ, ಪೂಜಾ ವಿಧಾನಗಳನ್ನು ಅನುಸರಿಸಿದರೂ ಹಬ್ಬ, ಜಾತ್ರೆ, ಉತ್ಸವ, ಮೆರವಣಿಗೆ, ಕುಣಿತ, ಮುಂತಾದ ಸಂದರ್ಭಗಳಲ್ಲಿ ಧರ್ಮ ಭೇದವಿಲ್ಲದೆ, ಜಾತಿ ಭೇದವಿಲ್ಲದೆ ಒಗ್ಗಟ್ಟಿನಲ್ಲಿ ಆಚರಿಸುವುದು

ಒಂದು ಸಂತೋಷದ ಸಂಗತಿಯಾಗಿ ಕಂಡುಬರುತ್ತದೆ. ಇಲ್ಲಿರುವ ಎಲ್ಲಾ ಧರ್ಮೀಯರು, ಜಾತಿಯವರು ಎಲ್ಲಾ ಸಂದರ್ಭದಲ್ಲೂ ಅನ್ಯೋನ್ಯವಾಗಿಯೇ ಬಾಳಿಕೊಂಡು ಬಂದಿರುವುದಾಗಿ ಊರಿನ ಮುದುಕರು, ಹಿರಿಯರು, ಯುವಕರು ತಿಳಿಸುತ್ತಾರೆ.

ಕುಂಬೆ ಬಸವನ ಜಾತ್ರೆ

ನಿಡುಗಲ್ಲು ದುರ್ಗದ ಶಿಖರದಲ್ಲಿರುವ ಬಸವಣ್ಣನೇ ಕುಂಬೆ ಬಸವ. ಈ ಬಸವೇಶ್ವರ ದೇವಾಲಯವನ್ನು ಕ್ರಿ.ಶ. ೧೬೫೩ರಲ್ಲಿ ಹೊಟ್ಟೆಣ್ಣ ನಾಯಕ ಎಂಬುವನು ತನ್ನ ತಂದೆ ತಾಯಿಗಳಿಗೆ ಪುಣ್ಯಲೋಕ ಪ್ರಾಪ್ತಿಯಾಗಲೆಂದು ಕಟ್ಟಿಸಿದನೆಂದು ಶಾಸನವೊಂದು ತಿಳಿಸುತ್ತದೆ.[೬] ಈ ಕುಂಬೆ ಬಸವನಿಗೆ ಪ್ರತಿವರ್ಷ ಶ್ರಾವಣ ಮಾಸದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗುತ್ತವೆ. ಶ್ರಾವಣದ ಕೊನೆಯ ಸೋಮವಾರ ಜನಗಳ ಜಾತ್ರೆ ನಡೆಯುತ್ತದೆ. ಈ ಕ್ಷೇತ್ರಕ್ಕೆ ಸುತ್ತಮುತ್ತಲಿನ ಪ್ರದೇಶವಲ್ಲದೆ ಪಕ್ಕದ ಆಂಧ್ರಪ್ರದೇಶದ ಮಡಕಶಿರಾ, ಅಮರಾಪುರ, ಕಲ್ಯಾಣದುರ್ಗದ ಹಾಗೂ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ ಪರಶುರಾಂಪುರ ಮುಂತಾದ ಸ್ಥಳಗಳಿಂದ ಸಾವಿರಾರು ಜನ ಭಕ್ತರು, ಯಾತ್ರಾರ್ಥಿಗಳು ಆಗಮಿಸಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಜಾತ್ರೆ ಬಹಳ ಪೂರ್ವದಿಂದಲೂ ನಡೆದುಕೊಂಡು ಬಂದಿದ್ದು ಸುಮಾರು ಮೂರು ನೂರು ವರ್ಷಗಳ ಇತಿಹಾಸವನ್ನು ಹೊಂದಿದೆ. ಅಂದರೆ ಕ್ರಿ.ಶ. ೧೭೦೦ರ ಸುಮಾರಿಗೆ ಇಲ್ಲಿ ವಾಸವಾಗಿದ್ದ ನಿಡುಗಲ್ಲು ಚನ್ನಪ್ಪ ಎನ್ನುವ ಕವಿ ಈ ಜಾತ್ರೆಯನ್ನು ನೋಡಿ ಇದೇ ಬಸವೇಶ್ವರ ಮಂಟಪದಲ್ಲಿ ಕುಳಿತುಕೊಂಡು 'ಶಿಖರದ ಬಸವನ ಜಾತ್ರೆಯ ತಾರಾವಳಿ' ಎನ್ನುವ ಸುಂದರ ಕಾವ್ಯವನ್ನು ರಚಿಸಿದ್ದಾನೆ. ಇದು ಅಂದು ಜಾತ್ರೆ ನಡೆಯುತ್ತಿದ್ದ ರೀತಿ, ಅದರಲ್ಲಿ ಪಾಲ್ಗೊಳ್ಳುತ್ತಿದ್ದ ಜನಗಳ ಸೊಬಗನ್ನು ವೈಭವಪೂರಿತವಾಗಿ ವರ್ಣಿಸುತ್ತದೆ. ಈ ಕಾವ್ಯದಿಂದ ಜಾತ್ರೆಗಿರುವ ಮಹತ್ವ ಮತ್ತು ಅದರ ಇತಿಹಾಸ ತಿಲಿದುಬರುತ್ತದೆ.

ಜಾತ್ರೆಯ ದಿನ ಆ ಪ್ರದೇಶಕ್ಕೆ ವಿವಿಧ ವಾಹನಗಳ ಸೌಲಭ್ಯವಿರುತ್ತದೆ. ಆ ಮೂಲಕ ಮತ್ತು ಎತ್ತಿನ ಗಾಡಿಗಳು ಮುಂತಾದ ವಾಹಗಳಲ್ಲಿ ಜನರು ಮುಂಜಾನೆಯೇ ಬಂದು ಬೀಡು ಬಿಡುತ್ತಾರೆ. ಜೊತೆಗೆ ಅಲ್ಲಿಗೆ ತಂದ ಅಡಿಗೆ ಸಾಮಾನುಗಳಿಂದ ಅಲ್ಲಿಯೇ ಒಲೆ ಹೂಡಿ ಅಡಿಗೆ ಮಾಜಿ ಊಟ ಮಾಡುತ್ತಾರೆ. ಮತ್ತೆ ಕೆಲವರು ಅನ್ನ ಸಂತರ್ಪಣೆ, ದಾಸೋಹವನ್ನು ತಮ್ಮ ಹರಕೆಯ ಭಾಗವಾಗಿ ಏರ್ಪಡಿಸಿ ಜನಗಳಿಗೆ ನೀಡುತ್ತಾರೆ. ಎಲ್ಲಿ ನೋಡಿದರೂ ಬೆಟ್ಟದಲ್ಲಿ, ದೇವಾಲಯಗಳಲ್ಲಿ ಗುಂಡುಗಳ ನೆರಳಿನಲ್ಲಿ ಜನವೋ ಜನ! ಅಂದು ಕಂಡುಬರುತ್ತಾರೆ. ತಮ್ಮ ತಮ್ಮ ಹರಕೆಗಳನ್ನು, ಪೂಜೆಗಳನ್ನು ತಮ್ಮ ಇಷ್ಟ ದೈವಗಲಿಗೆ ಒಪ್ಪಿಸುತ್ತಾರೆ.

ದುರ್ಗವನ್ನೆಲ್ಲಾ ಸುತ್ತಿ ಸಂಜೆಯ ವೇಳೆಗೆ ಶಿಖರದಲ್ಲಿರುವ ಬಸವನ ದರ್ಶನಕ್ಕಾಗಿ ಮೇಲಕ್ಕೆ ಹತ್ತುತ್ತಾರೆ. ಅಲ್ಲಿ ಪೂಜೆ ಮಾಡಿಸಿ ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಅಲ್ಲೆ ಪಕ್ಕದಲ್ಲಿರುವ ಸುಮಾರು ಆರು ಅಡಿ ಎತ್ತರದ ಕಬ್ಬಿಣದ ದೀಪಸ್ತಂಭಕ್ಕೆ ಎಣ್ಣೆ ಬೆಣ್ಣೆಗಳನ್ನು

ಹಾಕಿ ಹತ್ತಿಯ ಬತ್ತಿಗಳು, ತೆಂಗಿನ ಚಿಪ್ಪುಗಳು ಮುಂತಾದವುಗಳಿಂದ ದೀಪ ಹಚ್ಚಿ ಕೈಮುಗಿದು ಕೆಳಗೆ ಇಳಿಯುತ್ತಾರೆ. ಈ ದೀಪ ಸ್ತಂಭಕ್ಕೆ ವಿಶೇಷ ಮಹತ್ವವಿದೆ. ಈ ಸುತ್ತಮುತ್ತಲ ಭಾಗದ ಜನರು ತಮ್ಮ ದನಕರುಗಳಿಗೆ, ಕುರಿ ಮೇಕೆಗಳಿಗೆ ರೋಗ ರುಜಿನಗಳು ಬಂದಾಗ ಶಿಖರದ ಬಸವನಿಗೆ ಶ್ರಾವಣ ಮಾಸದಲ್ಲಿ ದೀಪ ಹಚ್ಚಿ ಬರುತ್ತೇವೆಂದು ಹರಕೆ ಮಾಡಿ ಕೊಳ್ಳುವುದುಂಟು. ಅ ನಂಬಿಕೆ ಇಂದಿಗೂ ಜೀವಂತವಾಗಿದ್ದು ಅದರಲ್ಲಿ ಹೆಚ್ಚಿನ ಭಕ್ತಿ ತೋರಿಸುತ್ತಾರೆ. ಬಹಳ ಎತ್ತರದಲ್ಲಿರುವ ಈ ದೀಪಸ್ತಂಭದ ಬೆಂಕಿಯ ಉರಿ ಸುಮಾರು ೧೫ ರಿಂದ ೨೦ ಕಿ.ಮೀ. ದೂರದವರೆಗೂ ಕಾಣಿಸುತ್ತದೆ. ಇವಿಷ್ಟು ಹಗಲಿನ ಕಾರ್ಯಕ್ರಮ, ಉಳಿದಂತೆ ರಾತ್ರಿಯೆಲ್ಲಾ ಕೋಲಾಟ, ಡೊಳ್ಳು ಕುಣಿತ, ನಾಟಕಗಳು ಮುಂತಾದ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತವಲ್ಲದೇ ಕೆಲವು ವರ್ಷಗಳ ಹಿಂದೆ ಚೆನ್ನಪ್ಪ ಕವಿಯ 'ಶರಣ ಲೀಲಾಮೃತ'ದ ಯಕ್ಷಗಾನವೂ ಮತ್ತು ಅದನ್ನು ಓದುವ, ಪಠಿಸುವ, ಪರಿಪಾಠವಿದ್ದು ಈಗ ಓದುವವರು ಯಾರೂ ಇಲ್ಲದ ಕಾರಣ ಅದರಲ್ಲಿ ಆಸಕ್ತಿ ತೋರಿಸುತ್ತಿಲ್ಲ ಎಂದು ಸ್ಥಳೀಯರು ಕಳವಳ ವ್ಯಕ್ತಪಡಿಸುತ್ತಾರೆ.

ಹೀಗೆ ವರ್ಷಕ್ಕೊಂದು ಸಲ ನಡೆಯುವ ಈ ಜಾತ್ರೆಗೆ ಅಲ್ಲಿನ ಅನೇಕ ದೇವಾಲಯಗಳು ಸುಣ್ಣ ಬಣ್ಣಗಳಿಂದ ಅಲಂಕೃತಗೊಳ್ಳುತ್ತವೆ. ಇಲ್ಲಿ ಭಕ್ತಾದಿಗಳ ಕಾಣಿಕೆಗಾಗಿ ಯಾರ್‍ಯಾರೋ ಯಾವುದ್ಯಾವುದೋ ದೇವಾಲಯಕ್ಕೆ ಪೂಜಾರಿಗಳಾಗುತ್ತಾರೆ. ಅದಕ್ಕಾಗಿ ಕಿತ್ತಾಟಗಳೂ ನಡೆಯುವುದುಂಟು. ಭವ್ಯ ಪರಂಪರೆಯುಳ್ಳ ರಾಜಾಧಿರಾಜರು ನಿರ್ಮಿಸಿದ ಈ ದೇವಾಲಯಗಳಿಗೆ ಯಾವುದೇ ರಕ್ಷಣೆ ಇಲ್ಲದೆ ಹೇಳುವವರು ಕೇಳುವವರಿಲ್ಲದೆ ಇರುವುದು ಖೇದವನ್ನುಂಟು ಮಾಡುವ ಸಂಗತಿಯಾಗಿದೆ. ಅವುಗಳ ರಕ್ಷಣೆ ಈಗ ಅತ್ಯಗತ್ಯವಾಗಿದೆ. ಇಲ್ಲವಾದರೆ ಕೆಲವೇ ವರ್ಷಗಳಲ್ಲಿ ದೇವಾಲಯಗಳು ಮಂಟಪಗಳಾಗಿಯೋ ಕಲ್ಲು ರಾಶಿಗಳಾಗಿಯೋ ಕಂಡುಬರುತ್ತವೆ.

ವದನ ಕಲ್ಲು ಶ್ರೀ ತಿಪ್ಪೇರುದ್ರಸ್ವಾಮಿ ಉತ್ಸವ ಮತ್ತು ಜಾತ್ರೆ

ನಿಡುಗಲ್ಲು ದುರ್ಗದ ಹಿಂಭಾಗದಲ್ಲಿ ಸುಮಾರು ೩ ಕಿ.ಮೀ. ದೂರದಲ್ಲಿ ಗಿರಿ ಶಿಖರಗಳ ನಡುವೆ ಚಿತ್ರದುರ್ಗ-ಪಾವಗಡ ಹೆದ್ದಾರಿಯ ಎಡಭಾಗದಲ್ಲಿ ಸುಂದರವಾದ ಪ್ರಕೃತಿಯ ಮಧ್ಯೆ ಈ ತಿಪ್ಪೇರುದ್ರಸ್ವಾಮಿಯ ದೇವಾಸ್ಥಾನವು ನೆಲೆಗೊಂಡಿದೆ. ಈ ದೇವಾಲಯವನ್ನು ನಿಡುಗಲ್ಲಿನ ಹೊಟ್ಟೆಣ್ಣ ನಾಯಕನು ಕಟ್ಟಿಸಿದನೆನ್ನಲಾಗಿದೆ.[೬] ೧೬೫೩ರಲ್ಲಿ ನಿಡುಗಲ್ಲು ಶಿಖರದ ಬಸವನಗುಡಿಯನ್ನು ನಿರ್ಮಿಸಿದ್ದು ಅದೇ ಸಂದರ್ಭದಲ್ಲಿ ಈ ದೇವಾಲಯವನ್ನು ನಿರ್ಮಿಸಿರಬಹುದೆನ್ನಲಾಗಿದೆ. ಚಿತ್ರದುರ್ಗ ಜಿಲ್ಲೆಯ ನಾಯಕನ ಹಟ್ಟಿ ಗ್ರಾಮದ ಪವಾಡ ಪುರುಷ ಜಂಗಮ ತಿಪ್ಪೇರುದ್ರಸ್ವಾಮಿಗಳ ಕೃಪೆಗೆ ಪಾತ್ರನಾದ ಹೊಟ್ಟೆಣ್ಣ ನಾಯಕನು ಈ ಸ್ವಾಮಿಗಳ ಮಹಿಮಾ ವಿಶೇಷದಿಂದ ಮುಂದೆ ಶ್ರೀ ಸ್ವಾಮಿಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿದನು ಎಂದು ಹೇಳುತ್ತಾರೆ. ಇದೇ ತರಹ ದೇವಾಲಯ ನಿಡುಗಲ್ಲಿ ಬೆಟ್ಟದಲ್ಲಿಯೂ ಇರುವುದನ್ನು ಕಾಣಬಹುದು.

ಈ ದೇವಾಲಯವು ಭಕ್ತಿರಿಗೆ ಕಲ್ಪವೃಕ್ಷವಾಗಿದ್ದು ಇಲ್ಲಿ ವರ್ಷಕ್ಕೊಮ್ಮೆ ಶಿವರಾತ್ರಿಯಂದು ನಡೆಯುವ ಜಾತ್ರೆ ಮತ್ತು ದೇವರ ಉತ್ಸವ ವೈಶಿಷ್ಟ್ಯ ಪೂರ್ಣವಾದದ್ದು. ಅಂದಿನ ರಾತ್ರಿ ತಿಪ್ಪೇರುದ್ರ ಸ್ವಾಮಿಗಳ ಕುರಿತು ಭಜನೆ, ಕೋಲಾಟ ಮುಂತಾದ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತವೆ, ಅಲ್ಲದೆ ಶ್ರೀ ಸ್ವಾಮಿಗಳ ಉತ್ಸವ ಹೂವಿನ ತೇರು ಜರುಗುತ್ತವೆ. ಇದಕ್ಕೆ ಸುತ್ತಮುತ್ತಲಿನ ಊರುಗಳಿಂದ ಜನರು ಆಗಮಿಸಿ ಈ ಉತ್ಸವದಲ್ಲಿ ಭಾಗವಹಿಸಿ ಆನಂದ ಹೊಂದುತ್ತಾರೆ. ತಮ್ಮ ಕಾಣಿಕೆ, ಹರಕೆಗಳನ್ನು ಒಪ್ಪಿಸಿ, ಚರ್ಮ ವಾದ್ಯ, ನಂದಿ ಕೋಲು ಕುಣಿತಗಳಲ್ಲಿ ಪಾಲ್ಗೊಂಡು ಅಂದಿನ ರಾತ್ರಿಯೆಲ್ಲಾ ಕುಣಿದು ಕುಪ್ಪಳಿಸಿ ಹರ್ಷ ಚಿತ್ತರಾಗುತ್ತಾರೆ. ಜಾತ್ರೆಯ ಕೊನೆಯ ದಿನ ಬೆಳ್ಳಿ ಪಲ್ಲಕ್ಕಿಯನ್ನು ಏರ್ಪಡಿಸುತ್ತಾರೆ.

ಅಷ್ಟೇ ಅಲ್ಲದೆ ಪಾವಗಡ ತಾಲ್ಲೂಕಿನಲ್ಲಿ ನಡೆಯುವ ದನಗಳ ಜಾತ್ರೆಯಲ್ಲಿ ವದನ ಕಲ್ಲು ಜಾತ್ರೆ ಬಹಳ ಪ್ರಮುಖವಾದುದಾಗಿದ್ದು ಬಹಳ ದೂರದಿಂದ ಜಾನುವಾರುಗಳು ಇಲ್ಲಿ ಬಂದು ಮಾರಾಟಗೊಳ್ಳುತ್ತವೆ. ಸರ್ಕಾರದ ವತಿಯಿಂದ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆಯೂ ನಡೆಯುತ್ತದೆ. ೧೦ ರಿಂದ ೩೦ ದಿನಗಳ ವರೆಗೆ ನಡೆಯುವ ಈ ಜಾತ್ರೆಯಲ್ಲಿ ನಿತ್ಯ ವಿವಿಧ ಕಾರ್ಯಕ್ರಮಗಳಲ್ಲಿ ತೊಗಲುಬೊಂಬೆ ಆಟ, ಪೌರಾಣಿಕ ಸನ್ನಿವೇಶಗಳನ್ನು ತೋರಿಸುವ ಹಗಲು ವೀರರು, ಪಂಡರೀ ಭಜನೆ ಮಾಡುವವರು, ಮೈಲಾರ ಲಿಂಗರು ಮುಂತಾದ ಜನಪದ ಕಲೆಗಳ ಪ್ರದರ್ಶನ ನಡೆಯುತ್ತಿದ್ದು ಈ ಜಾತ್ರೆ ಪ್ರತಿವರ್ಷ ಮಾರ್ಚ್ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ನಡೆಯುತ್ತದೆ.

ಶ್ರೀ ತಿಪ್ಪೇರುದ್ರಸ್ವಾಮಿಯ ಪವಾಡಗಳು

೧. ತಿಪ್ಪೇರುದ್ರಸ್ವಾಮಿಯ ಮೂಲ ಸ್ಥಳ ರಾಯದುರ್ಗ, ಅಲ್ಲಿಂದ ನಾಯಕನ ಹಟ್ಟಿಗೆ ಓಡಾಡಿಕೊಂಡು ವ್ಯಾಪಾರ ಮಾಡಿಕೊಂಡಿದ್ದು ಅಲ್ಲಿಯೇ ಪಣಿಯಪ್ಪ ಎಂಬುವವನ ಜೊತೆ ವಾಸವಾಗಿ ಅಲ್ಲೇ ಆಶ್ರಯ ಪಡೆದ.

೨. ಪಣಿಯಪ್ಪನು ಒಮ್ಮೆ ಕಪಿಲೆ ಬಾವಿಯಿಂದ ನೀರೆತ್ತುವ ಚರ್ಮದ ಬಾನಿಯನ್ನು ಸರಿ ಮಾಡಿಸಲು ಅದನ್ನು ಮಾದಿಗರ ಕೇರಿಗೆ ಎತ್ತಿಕೊಂಡು ಹೋದಾಗ ಅವರ ಮನೆ ಒಳಗೆ ತಿಪ್ಪೇಸ್ವಾಮಿ ಊಟ ಮಾಡುತ್ತಿದ್ದುದು ಕಂಡಿತು. ಅದನ್ನು ಕಂಡ ಪಣಿಯಪ್ಪ ಸೆಡವಿನಿಂದ ವಾಪಸ್ಸು ಮನೆಗೆ ಬಂದು ನೋಡಿದ್ರೆ ಅಲ್ಲಿಯೂ ತಿಪ್ಪೇಸ್ವಾಮಿ ಇರುತ್ತಾನೆ.

೩. ಒಮ್ಮೆ ಸತ್ತು ಹೋಗಿದ್ದ ಎಮ್ಮೆಗೆ ಜೀವ ಬರಿಸಿ ಅದರಿಂದ ಹಾಲನ್ನು ಕರೆದು ಪವಾಡ ಮಾಡುತ್ತಾನೆ.

೪. ನಾಯಕನ ಹಟ್ಟಿಯಲ್ಲಿ ಹಿರೇಕೆರೆ, ಚಿಕ್ಕಕೆರೆ ಕಟ್ಟಿಸುವಾಗ ಕೆರೆ ನಿರ್ಮಾಣದ ಒಂದು ಹಂತದಲ್ಲಿ ಪಾಳೆಗಾರನಲ್ಲಿದ್ದ ದ್ರವ್ಯ ತೀರಿ ಹೋಯಿತು. ಆಗ ತಿಪ್ಪೇರುದ್ರನು ಕೂಲಿಗಳನ್ನು ನಿಲ್ಲಿಸಿ ಅವರವರು ಎಷ್ಟೆಷ್ಟು ಶ್ರಮಪಟ್ಟಿದ್ದರೂ ಅಷ್ಟು ಮರಳುರಾಶಿ ಮಾಡಿಕೊಳ್ಳಿ ಎಂದು

ಹೇಳುತ್ತಾನೆ. ಅವುಗಳನ್ನೆಲ್ಲಾ ಬೆತ್ತದಲ್ಲಿ ಮುಟ್ಟುತ್ತಾ ಹೋಗುತ್ತಾನೆ. ಅದು ಅವರ ಶ್ರಮಕ್ಕೆ ತಕ್ಕಂತೆ ದ್ರವ್ಯವಾಗುತ್ತದೆ.

೫. ೧೨ನೇ ಶತಮಾನದ ವಚನಕಾರರ ಅಥವಾ ಶರಣರ ಧ್ಯೇಯೋದ್ದೇಶಗಳನ್ನು ಪರಿಪಾಲಿಸುತ್ತಿದ್ದವನಾಗಿದ್ದರಿಂದ ಕಾಯಕ ಮಹತ್ವಕ್ಕೆ ಬೆಲೆ ಕೊಟ್ಟು ತನಗೆ ಆಶ್ರಮ ಕೊಟ್ಟ ಪಣಿಯಪ್ಪನ ತೋಟಕ್ಕೆ ನೀರು ಕಟ್ಟುತ್ತಾನೆ.

೬. ಕೊನೆಯಲ್ಲಿ ಏಕಾಂತ ಬಯಸಿ ಒಂದು ನೆಲವಿನಲ್ಲಿ ಐಕ್ಯನಾಗುತ್ತಾನೆ.

ಸ್ವಾರಮ್ಮನ ಜಾತ್ರೆ

ನಿಡುಗಲ್ಲಿನಿಂದ ದಕ್ಷಿಣದಕ್ಕೆ ಸುಮಾರು ೭ ಕಿ.ಮೀ. ದೂರದಲ್ಲಿರುವ ಪಾವಗಡ ಶಿರಾ ಹೆದ್ದಾರಿಯಲ್ಲಿರುವ ಕರೆಕ್ಯಾತಾಗಾನ ಹಳ್ಳಿ ಪಕ್ಕದ ಬೆಟ್ಟ ತಪ್ಪಲಿನಲ್ಲಿ ಈ ದೇವಸ್ತಾನ ಕಂಡು ಬರುತ್ತದೆ. ಇದನ್ನು ನಿಡುಗಲ್ಲು ಚೋಳರ ಕಾಲದಲ್ಲಿ ಕಟ್ಟಿಸಲಾಗಿದ್ದ ಅದಕ್ಕೆ ಚೋಳಮ್ಮನೆಂದೇ ಹೆಸರಿದೆ. ಅದನ್ನು ಆಡುಮಾತಿನಲ್ಲಿ ಚೋಳಮ್ಮ>ಸೋಳಮ್ಮ>ಸೋರಮ್ಮ >ಸ್ವಾರಮ್ಮ ಆಗಿದೆ. ಪ್ರತಿ ವರ್ಷದ ಹೋಳಿ ಹುಣ್ಣಿಮೆಯ ದಿನ ಜಾತ್ರೆ ಪ್ರಾರಂಭವಾಗಿ ಕ್ರಮವಾಗಿ ಅಗ್ನಿ ಕುಂಡ, ಹತ್ತು ಬೆರಳಾರುತಿ, ಮೊದಲ ಸಿಡಿ, ಎರಡನೇ ಸಿಡಿ, ಕೊನೆ ಸಿಡಿ, ತೇರು, ಹೂವಿನ ರಥೋತ್ಸವ ಹೀಗೆ ಏಳು ದಿನಗಳ ಕಾಲ ಜನಗಳ ಜಾತ್ರೆ ನಡೆಯುತ್ತದೆ. ನಿಡುಗಲ್ಲು ಹೋಬಳಿಯಲ್ಲೇ ಪ್ರಸಿದ್ಧವಾದ ಈ ಜಾತ್ರೆಗೆ ಬಹಳ ದೂರದಿಂದ ಸಾವಿರಾರು ಜನರು ಬಂದು ಸೇರಿ ಸಂಭ್ರಮದಿಂದ ಈ ಸಾಂಸ್ಕೃತಿಕ ಉತ್ಸವವನ್ನು ಆಚರಿಸುತ್ತಾರೆ. ಸ್ವಾರಮ್ಮ ಈ ಭಾಗದ ಕುಂಚಿಟಿಗರ ಒಳಪಂಗಡವಾದ 'ಬೆಳ್ಳೆನೋರು' ಹೆಣ್ಣು ಮಗಳೆಂದು ತಿಳಿದು ಬರುತ್ತದೆ. ಅಲ್ಲದೇ ಈ ದೇವಸ್ಥಾನ 'ಮದ್ದೆ' ಗ್ರಾಮಕ್ಕೆ ಸೇರಿದ್ದುದಾಗಿದೆ.

ಮೊದಲ ದಿನದ ಉತ್ಸವ ಹೋಲಿ ಹುಣಿಮೆಯ ಸಾಯಂಕಾಲ ಅಗ್ನಿ ಕುಂಡದಿಂದ ಪ್ರಾರಂಭವಾಗುತ್ತದೆ. ಬಂದ ಭಕ್ತರು, ಸಾರ್ವಜನಿಕರು ಅಗ್ನಿ ಕುಂಡದಲ್ಲಿ ತಮ್ಮ ಅನಿಸಿಕೆಗಳು ಈಡೇರಲೆಂದು ಧೂಪ ಹಾಕಿ ಪ್ರಾರ್ಥನೆ ಸಲ್ಲಿಸುತ್ತಾರೆ. ತದ ನಂತರ ರಾತ್ರಿ ಕೆಂಡ ತುಳಿಯುವ ಕಾರ್ಯಕ್ರಮವಿರುತ್ತದೆ. ಇದರಲ್ಲಿ ಪಾಲ್ಗೊಳ್ಳುವವರು ಉಪವಾಸ ವ್ರತದಿಂದ ಮಡಿಯಾಗಿ ಬಂದು ದೇವಸ್ಥಾನದ ದ್ವಾರಬಾಗಿಲಿನ ಎದುರಿಗೆ ಹಾಕಿರುವ ಬೆಂಕಿ ಹೊಂಡದಲ್ಲಿ ಹಾದು ಹೋಗುತ್ತಾರೆ. ಕಾಲು ಸುಟ್ಟರೆ ಸರಿಯಾದ ಬಕ್ತಿಯಿಂದ ಬಂದಿಲ್ಲವೆಂಬ ನಂಬಿಕೆಯನ್ನು ಇವರು ತಾಳುತ್ತಾರೆ. ಇದಕ್ಕೂ ಮೊದಲು ಸ್ವಾರಮ್ಮನಿಗೆ ರೇಷ್ಮೆ ಸೀರೆಯನ್ನು ಉಡಿಸಿ ಎಲ್ಲರೆದುರಿಗೆ ಆಕೆಯ ಪ್ರತಿಮೆಗೆ ಉಡಿಸಿರುವ ರೇಷ್ಮೆ ಸೀರೆ ಮಡಿಲಿಗೆ ಪೂಜಾರಿ ಕೆಂಡವನ್ನು ಸುರಿದು ಕಟ್ಟುತ್ತಾನೆ. ಇದು ಬಹಳ ಆಕರ್ಷಣೀಯ ಪ್ರಸಂಗವೆಂದೇ ತಿಳಿಯಬೇಕು.

ತಂಬಿಟ್ಟಿನ ಆರತಿ

ಇದೊಂದು ಬಗೆಯ ಸಿಹಿ ತಿಂಡಿ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಯಾವುದೇ

ಧಾರ್ಮಿಕ ಕಾರ್ಯಕ್ರಮದಲ್ಲಿ ಈ ಬಗೆಯ ತಿಂಡಿ ಮಾಡುತ್ತಾರೆ. ಅಕ್ಕಿ ಹಿಟ್ಟು ಹಾಗೂ ಬೆಲ್ಲದಿಂದ ಈ ತಿನಿಸು ತಯಾರಿಸುತ್ತಾರೆ. ಅಕ್ಕಿಯನ್ನು ನೆನೆಹಾಕಿ, ಒಣಗಿಸಿ, ಹಿಟ್ಟು ಮಾಡಿಕೊಂಡು ಸ್ವಲ್ಪ ಏಲಕ್ಕಿ ಪುಡಿ ಸೇರಿಸಿ ಬೆಲ್ಲದ ಪಾಕದೊಂದಿಗೆ ಮಿಶ್ರಮ ಮಾಡಿ ಮುದ್ದೆ ಮಾಡುವರು. ಇದನ್ನು ತಮಗೆ ಬೇಕಾದ ಆಕಾರಕ್ಕೆ ತಿರುಗಿಸಿಕೊಳ್ಳುವರು. ವಿಶೇಷವಾಗಿ ಹಬ್ಬ ಹರಿದಿನಗಳಲ್ಲಿ, ಜಾತ್ರೆ/ಉತ್ಸವಗಳಲ್ಲಿ ದೇವರಿಗೆ ಆರತಿ ಬೆಳಗುವರು. ಗೋಪುರಾಕಾರದ ಮುದ್ದೆ ಮಾಡಿ ಒಂದು ತುದಿಯಲ್ಲಿ ಸ್ವಲ್ಪ ತಗ್ಗು ಮಾಡಿ ಅದರಲ್ಲಿ ಎಣ್ಣೆ ಅಥವಾ ತುಪ್ಪ ಹಾಕಿ ಹತ್ತಿಯ ಬತ್ತಿಯನ್ನು ಇಟ್ಟು ಉರಿಸುವರು. ಇದಕ್ಕೆ 'ತಂಬಿಟ್ಟಿನ ದೀಪ' ಅಥವಾ 'ತಂಬಿಟ್ಟಿನ ಆರತೆ' ಎಂದು ಕರೆಯುತ್ತಾರೆ.

ಸ್ವಾರಮ್ಮನಿಗಷ್ಟೇ ಅಲ್ಲದೆ ಈ ಪ್ರದೇಶದಲ್ಲಿ ನಡೆಯುವ ಬಹುಪಾಲು ದೇವತಾ ಕಾರ್ಯಕ್ರಮಗಳಲ್ಲಿ, ಶುಭ ಕಾರ್ಯಗಳಲ್ಲಿ ಈ ತಂಬಿಟ್ಟಿನ ಆರತಿ ಮಾಡುತ್ತಾರೆ. ಜಾತ್ರೆ ಹಬ್ಬಗಳಲ್ಲಿ ಪ್ರತಿಯೊಂದು ಮನೆಯವರೂ ಅಕ್ಕಿ ಪುಡಿಯಿಂದ ತಂಬಿಟ್ಟನ್ನು ತಯಾರಿಸಿ ಜೋಡಿ ದೀಪ ಮಾಡಿಕೊಂಡು ಸಾಮೂಹಿಕವಾಗಿ ಉತ್ಸವ ದೇವತೆಯ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಹೋಗಿ ದೇವರಿಗೆ ಆರತಿ ಬೆಳಗಿಸಿಕೊಂಡು ಬರುವರು. ಅಥವಾ ಒಂದೊಂದು ಊರಿನವರು ಒಂದೊಂದು ದಿನ ಆ ದೇವರಿಗೆ ಆರತಿ ಬೆಳಗುವ ಪರಿಪಾಠವೂ ಉಂಟು. ಹೀಗೆ ಆರತಿ ಬೆಳಗಿದ ನಂತರ ಅದನ್ನು ಪ್ರಸಾದವೆಂದು ಹಂಚಿಕೊಂಡು ತಿನ್ನುತ್ತಾರೆ. ಕೆಲವರು ಅದನ್ನು ಚಿಕ್ಕ ಚಿಕ್ಕ ಉಂಡೆ ಕಟ್ಟಿ ಬೇಯಿಸಿ ತಿನ್ನುವುದೂ ಉಂಟು, ಅದು ಬಹಳ ರುಚಿಯಾಗಿರುತ್ತದೆ ಎನ್ನುತ್ತಾರೆ.

ಅಷ್ಟೇ ಅಲ್ಲದೆ ಕೆಲವು ವೇಳೆ ಮಕ್ಕಳಿಗೆ ಅಮ್ಮ, ದಡಾರ, ಸಿಡುಬು ಇತ್ಯಾದಿ ಕಾಯಿಲೆಗಳು ಬಂದಾಗ ಮನೆಯವರು ಆ ಗ್ರಾಮದೇವತೆಗೆ ತಂಬಿಟ್ಟಿನ ಆರತಿ ಹೊರುವೆ ಎಂದು ಹರಕೆ ಮಾಡಿಕೊಳ್ಳುವುದೂ ಉಂಟು.

ಹತ್ತು ಬೆರಳಾರತಿ

ಅತ್ತ ಆ ಕಾರ್ಯಕ್ರಮ ನಡೆಯುತ್ತಿದ್ದರೆ ಅದೇ ರಾತ್ರಿ ದೇವಸ್ಥಾನದ ಹಿಂಭಾಗದಲ್ಲಿ 'ಆರತಿ ಬಂಡೆ' ಮೇಲೆ ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಗಂಡು ಹೆಣ್ಣಿನ ತಾರತಮ್ಯವಿಲ್ಲದೆ ಒಂದು ಕಡೆ ಸೇರಿ ಆರತಿ ಕಾರ್ಯಕ್ರಮಕ್ಕೆ ಸಜ್ಜಾಗುವುದು ಒಂದು ಮನೋಹರವಾದ ದೃಶ್ಯ. ಆ ಜನಸಾಗರದಲ್ಲಿ ಅವರ ಆರತಿಯಲ್ಲಿ ಉರಿಯುತ್ತಿರುವ ದೀಪಗಳನ್ನು ನೋಡಿದರೆ ನಕ್ಷತ್ರ ಸಾಗರದಲ್ಲಿ ತೇಲಿದಂತೆ ಬಾಸವಾಗುತ್ತದೆ. ಇದನ್ನು ನೋಡುವುದಕ್ಕೆಂದೇ ಸಾವಿರಾರು ಜನ ಬಂದು ಸೇರುತ್ತಾರೆ (ನಾನು ಕಂಡ ಸಮಯದಲ್ಲಿ ಸುಮಾರು ೩ ರಿಂದ ೪ ಸಾವಿರದಷ್ಟು ಜನ ಇದರಲ್ಲಿ ಪಾಲ್ಗೊಂಡಿದ್ದರು). ಎರಡೂ ಕೈಗಳನ್ನು ಜೋಡಿಸಿ ಐದು+ಐದು ಹತ್ತು ಬೆರಳುಗಳನ್ನು ಕೈಮುಗಿಯುವಂತೆ ಮಾಡಿ ಕಿರುಬೆರಳು ಮತ್ತು ಹೆಬ್ಬೆರಳುಗಳನ್ನು ಒಂದು ತಂತಿ

ಅಥವಾ ದಾರದ ಸಹಾಯದಿಂದ ಎರಡೆರಡು ಬೆರಳನ್ನು ಸೇರಿಸಿ ಕಟ್ಟುತ್ತಾರೆ. ಆ ಬೆರಳುಗಳಿಗೆ ತಂಬಿಟ್ಟಿನಿಂದ ಆಯತಾಕಾರದ ಆರತಿಗಳನ್ನು ತಯಾರಿಸಿ ಕಚ್ಚಿಸಿ ಅದಕ್ಕೆ ಮಧ್ಯೆ ತಗ್ಗಿರುವಂತೆ ತಯಾರಿಸುತ್ತಾರೆ. ಹೆಣ್ಣಾಗಲಿ, ಗಂಡಾಗಲಿ, ಮಗುವಾಗಲಿ, ವೃದ್ಧರಾಗಲಿ ಉಪವಾಸದಿಂದ ಬಂದಿದ್ದು, ಹೂವಿನ ಹಾರ, ಕುಂಕುಮ, ವಿಭೂತಿಗಳಿಂದ ಅಲಂಕೃತವಾಗಿರುತ್ತಾರೆ. ನಿಗದಿತ ಸಮಯಕ್ಕೆ ಸರಿಯಾಗ ಆರತಿ ಬಂಡೆಯಿಂದ ಮೆರವಣಿಗೆ ಹೊರಟು ದೇವಸ್ಥಾನ ಸುತ್ತಿ ಪ್ರಾರ್ಥನೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಒಬ್ಬ ಆರತಿ ಬೆಳಗುವ ವ್ಯಕ್ತಿಗೆ ಇನ್ನೊಬ್ಬ ಬತ್ತಿಗೆ ಎಣ್ಣೆ ಹಾಕುವವನು ಜೊತೆಯಲ್ಲಿ ಇರುತ್ತಾನೆ. ಈ ಕಾರ್ಯಕ್ರಮ ರಾತ್ರಿ ಎರಡು ಗಂಟೆಯಿಂದ ಸುಮಾರು ಐದು ಗಂಟೆಯವರೆಗೆ ನಡೆಯುತ್ತದೆ. ಅಲ್ಲಿಗೆ ಮೊದಲ ದಿನದ ಕಾರ್ಯಕ್ರಮ ಮುಗಿಯುತ್ತದೆ. ಇದರಲ್ಲಿ ಪಾಲ್ಗೊಂಡಿದ್ದವರೆಲ್ಲರೂ ತಮ್ಮ ಹರಕೆಯನ್ನು ತೀರಿಸಲೆಂದೇ ಬಂದವರು ಮಕ್ಕಳ ಫಲ, ರೋಗ ರುಜಿನ ಮುಂತಾದ ಕಾರಣಗಳನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ನನಗೆ ನೀಡುದ್ದಾರೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೆಚ್ಚಿನದಾಗಿ ನವ ವಧುವರರು ಕಂಡುಬಂದರು.

ಎರಡನೇ ದಿನ ಕೋಲಾಟ, ಭೂತನ ಕುಣಿತ, ಭೂತನ ಕವಳ ಮುಂತಾದ ಪ್ರಸಂಗಗಳು ಸಾಂಸ್ಕೃತಿಕ ಕಲೆಗಳ ಪ್ರದರ್ಶನ ಜರುಗುತ್ತವೆ. ಅದರ ಜೊತೆಗೆ ಅಂದಿನ ಸಾಯಂಕಾಲ ಸಿಡಿ ಪ್ರಾರಂಭವಾಗುತ್ತದೆ. ಆ ದಿನ ನಿರ್ಧಿಷ್ಟವಾದ ಕೆಲವೇ ಕೆಲವು ವ್ಯಕ್ತಿಗಳು ಅಂದರೆ ಹತ್ತು ಜನರು ಮಾತ್ರ ಸಿಡಿಯಾಡುತ್ತಾರೆ. ಇದು ಸುಮಾರು ವರ್ಷಗಳಿಂದ ರೂಢಿಸಿಕೊಂಡು ಬಂದ ನಿಯಮಬದ್ಧ ಆಚರಣೆಯಾಗಿದೆ.

ಸಿಡಿ ಆಚರಣೆ

ಮೂರನೇ ದಿನದ ಮುಖ್ಯ ಪ್ರಸಂಗಗಳೆಂದರೆ 'ಸಿಡಿ' ಮತ್ತು ಬಾಯಿಬೀಗ ಕಾರ್ಯಕ್ರಮಗಳು. ಸುಮಾರು ಮೂವತ್ತೈದು ಅಡಿ ಎತ್ತರವಿರುವ ಸಿಡಿ ಕಂಬವನ್ನು ಮರದಿಂದ ತಯಾರಿಸಿದ್ದು ಹತ್ತು ಅಡಿ ತಿರುಗಮಿ ಮೇಲೆ ಸುಲಭವಾಗಿ ತಿರುಗುವಂತೆ ನಿರ್ಮಾಣ ಮಾಡಿರುತ್ತಾರೆ. ಪಕ್ಕದಲ್ಲೇ ನೊಳಂಬರ ರಾಜಧಾನಿ ಹೆಂಜೇರು (ಹೇಮಾವತಿ)ನಲ್ಲಿಯೂ ಸಿಡಿ ಆಡುವ ಪದ್ಧತಿ ಇಂದಿಗೂ ಇದೆಯಾದರೂ ಇಷ್ಟೊಂದು ವಿಶೇಷವಾಗಿ ಮತ್ತು ಇಷ್ಟೊಂದು ಎತ್ತರವಾದ ಸಿಡಿ ಅಲ್ಲಿಲ್ಲ. ಜೊತೆಗೆ ಇಷ್ಟೊಂದು ಸಿಡಿ ಆಟ ಆಡುವವರ ಸಂಖ್ಯೆಯೂ ಅಲ್ಲಿ ಕಡಿಮೆ ಎಂದು ಹೇಳಬೇಕು.

ಮೂಲದಲ್ಲಿ (ರಾಜರ ಕಾಲದಲ್ಲಿ) ಬರುವ ಗರುಡರು, ಲೆಂಕರು, ತಮ್ಮ ರಾಜನಿಗೆ ನಿಷ್ಠೆಯಿಂದ ಇದ್ದು ಅವನು ಆಕಸ್ಮಿಕ ಮರಣವನ್ನಪ್ಪಿದಾಗ ಇವರೂ ಸಾಯುತ್ತಿದ್ದರು. ಅಂತಹ ಸಂದರ್ಭದಲ್ಲಿ ಈ ಸಿಡಿ ಕ್ರಮವನ್ನು ಉಪಯೋಗಿಸುತ್ತಿದ್ದರು. ಅದು ತಲೆ ಕತ್ತರಿಸಿಕೊಂಡು ಸಾಯುವ ಪದ್ಧತಿಯಾಗಿದ್ದಿತು. ಆದರೆ ಸ್ವಾರಮ್ಮನ ಜಾತ್ರೆಯಲ್ಲಿ ನಡೆಯುವ ಈ ಸಿಡಿಯಲ್ಲಿ

ಮಕ್ಕಳ ಫಲ, ಕಷ್ಟ ಪರಿಹಾರ, ನಿಮಿತ್ತ ಹರಕೆ ಮಾಡಿಕೊಂಡು ಭಕ್ತರು ತಲೆಗೆ ಬಿಳಿ ಪೇಟ, ಸೊಂಟಕ್ಕೆ ಡಾಬು ಮತ್ತು ಬಿಳಿ ಕಚ್ಚೆ ಪಂಚೆ ಧರಿಸಿ ಮೈಗೆಲ್ಲಾ ಗಂಧವನ್ನು ಹಚ್ಚಿಕೊಂಡು ಮೆರವಣಿಗೆಯಲ್ಲಿ ವಾದ್ಯಗಳೊಂದಿಗೆ ಕುಣಿದು ಕುಪ್ಪಳಿಸಿ ತಮ್ಮ ವೀರತ್ವದ ಪ್ರದರ್ಶನ ನೀಡಿ ಕೊನೆಯಲ್ಲಿ ದೇವಸ್ಥಾನವನ್ನು ಸುತ್ತಿ ಪ್ರಾರ್ಥನೆ ಸಲ್ಲಿಸಿಯಾದ ಮೇಲೆ ಒಬ್ಬೊಬ್ಬರಾಗಿ ಸಿಡಿಯಾಡುತ್ತಾರೆ.

ಸಿಡಿಯಾಡುವ ವಿಧಾನವೆಂದರೆ ಗರುಡನನ್ನು (ಭಕ್ತ) ಆ ಸಿಡಿ ಭಾಗಕ್ಕೆ ನಿಲ್ಲಿಸಿ ಸಿಡಿ ಮರದ ಕೊನೆಯನ್ನು ಹಗ್ಗ ಅಥವಾ ಸರಪಳಿಯ ಸಹಾಯದಿಂದ ಕೆಳಕ್ಕೆ ಎಳೆದು ಆ ಭಕ್ತನ ಸೊಂಟದಲ್ಲಿರುವ ಡಾಬನ್ನು ಕಂಕುಳಕ್ಕೆ ಜರುಗಿಸಿ ಆ ಡಾಬಿಗೆ ಸಿಡಿಯ ಕೊನೆಯ ತುದಿಯಲ್ಲಿರುವ ಕೊಕ್ಕೆಯನ್ನು ಸಿಕ್ಕಿಸಿ ಮತ್ತೆ ಅವನನ್ನು ಮೇಲಕ್ಕೆ ಎಳೆದು ಮೂರು ಸುತ್ತು ತಿರುಗಿಸುತ್ತಾರೆ. ಅವನು ಸಿಡಿ ಮರದ ಕೊನೆ ಭಾಗದಲ್ಲಿ ನೇತಾಡುತ್ತಿರುತ್ತಾನೆ. ಅಂಥ ಭಯದ ವಾತಾವರಣದಲ್ಲಿಯೂ ಅವನು ವೀರಾವೇಶದಿಂದ ಆರ್ಭಟಿಸುತ್ತಾ ಕೂಗುತ್ತಾನೆ, ಕೇಕೆ ಹಾಕುತ್ತಾನೆ (ಕೆಲವರು ಭಯದಿಂದ ಅರಚಿದರೂ ಜನರ ಗದ್ದಲ ವಾದ್ಯಗಳ ಶಬ್ದದಲ್ಲಿ ಕೇಳಿಸುವುದಿಲ್ಲ). ಹೀಗೆ ಎಲ್ಲರನ್ನು ಸಿಡಿಯಾಡಿಸುತ್ತಾರೆ, ಚಿಕ್ಕ ಮಕ್ಕಳನ್ನು ಅದಕ್ಕೆ ಮುಟ್ಟಿಸುವುದರ ಮುಖಾಂತರ ಹರಕೆ ತೀರಿಸುತ್ತಾರೆ.

ಬಾಯಿ ಬೀಗ

ಇದು ಜಾತ್ರೆಯ ವಿಶೇಷ ಕಾರ್ಯಕ್ರಮವಾಗಿದ್ದು ಇದು ಸಹ ಅವರವರ ಹರಕೆಯ ರೂಪವೇ ಆಗಿದೆ. ಇದನ್ನು ವ್ರತ, ಉಪವಾಸದಿಂದ ಕೈಗೊಳ್ಳುತ್ತಾರೆ. ಬಾಯಿ ಬೀಗ ಹಾಕಲು ಒಂದು ಸಣ್ಣ ಬೆಳ್ಳಿಯ ಕಡ್ಡಿಯನ್ನು ಉಪಯೋಗಿಸುತ್ತಾರೆ. ಇದು ಚಚ್ಚೌಕವಾಗಿದ್ದು, ಒಂದು ಕಡೆಯಲ್ಲಿ ಮೊನಚಾಗಿರುತ್ತದೆ. ಇನ್ನೊಂದು ಕಡೆ ಒಂದು ತೂತಿರುವಂತೆ ಗಂಡಾಗಿ ಮಡಚಿರುತ್ತಾರೆ. ತಮಗೆ ಕಾಯಿಲೆ ಕಸಾಲೆ ಹಾಗೂ ತೊಂದರೆಗಳು ಸಂಭವಿಸದಿರಲೆಂದು ಹರಕೆ ಹೊತ್ತು ಚೂಪಾದ ಭಾಗದಿಂದ ಕೆನ್ನೆಗಳ ಮೃದು ಭಾಗದಲ್ಲಿ ಚುಚ್ಚಿ ಮತ್ತೊಂದು ಕಡೆಯ ತೂತಿಗೆ ಸೇರಿಸುವುದು– ಇದೇ ಬಾಯಿ ಬೀಗ. ಇದನ್ನು ಅಕ್ಕಸಾಲಿಗರಿಂದ ಮಾಡಿಸುತ್ತಾರೆ. ಇದು ದೇವರಿಗೆ ತಮ್ಮ ಪ್ರಣಾಮಗಳನ್ನು ಮೌನ ವ್ರತಾಚರಣೆಯಿಂದ ಸಲ್ಲಿಸುವ ಒಂದು ಸಂಪ್ರದಾಯ. ಗಂಡಸರು ಹಾಗೂ ಹೆಂಗಸರು ಇಬ್ಬರೂ ಬಾಯಿ ಬೀಗ ಹಾಕಿಸಿಕೊಳ್ಳುತ್ತಾರೆ. ಮಕ್ಕಳಾದರೆ ಕೆನ್ನೆಗೆ ಚುಚ್ಚದೆ ತಲೆಗೆ ಹೊಸ ಕುಲಾವಿ (ಟೋಪಿ)ಯನ್ನು ಇಟ್ಟು ಅದಕ್ಕೆ ಚುಚ್ಚುತ್ತಾರೆ. ಬಾಯಿಗೆ ಬೀಗ ಹಾಕಿಸಿಕೊಳ್ಳುವವರು ಅಂದು ಉಪವಾಸವಿದ್ದು ಸ್ನಾನ ಮಡಿ ಶುಭ್ರವಾದ ಬಟ್ಟೆ ಹಾಕಿರುತ್ತಾರೆ. ಕೆಲವು ವೇಳೆ ಬೆಳ್ಳಿಯ ಬಾಯಿ ಬೀಗದ ಬದಲು ತಾಮ್ರದ ಬಾಯಿ ಬಿಗವನ್ನು ಬಳಸುವುದುಂಟು. ಈ ರೀತಿ ಬಾಯಿ ಬೀಗ ಹಾಕಿಸಿಕೊಂಡ ನಂತರ 'ಆರತಿ ಬಂಡೆಯಿಂದ' ಹೊರಟು ದೇವಸ್ಥಾನ ಸುತ್ತಿ ಪ್ರಾರ್ಥನೆ ಸಲ್ಲಿಸುತ್ತಾರೆ. ಬೀಗ ಹಾಕುವುದಕ್ಕೆ ಮತ್ತು ತೆಗೆಯುವುದಕ್ಕೆ

ಸ್ಥಳ ನಿಗದಿಪಡಿಸಿರುತ್ತಾರೆ. ಇನ್ನು ಉಳಿದಂತೆ ರಥೋತ್ಸವ ಮತ್ತು ಹೂವಿನ ಪಲ್ಲಕ್ಕಿ ಕಾರ್ಯಕ್ರಮಗಳು ಎಲ್ಲಾ ದೇವರುಗಳ ಉತ್ಸವದಲ್ಲಿದ್ದಂತೆಯೇ ಇರುತ್ತದೆ. ಇಲ್ಲಿಗೆ ಜಾತ್ರೆ ಮುಕ್ತಾಯವಾಗುತ್ತದೆ.

ಇದೇ ಸಂದರ್ಭದಲ್ಲಿ ಕಂಡು ಬಂದ ಇನ್ನೊಂದು ವಿಶೇಷವೆಂದರೆ ಸ್ವಾರಮ್ಮನ ದೇವಸ್ಥಾನದ ಬಲಭಾಗದ ಗುಟ್ಟೆ ಮೇಲೆ "ಶಂಕರಲಿಂಗ'ನ ದೇವಾಲಯವಿದೆ. ಆ ಶಂಕರ ಲಿಂಗ ಸ್ವಾರಮ್ಮನ ಗಂಡ ಎಂದು ಹೇಳುತ್ತಾರೆ. ಒಮ್ಮೆ ಅವನೊಂದಿಗೆ ಜಗಳವಾಡಿ ಅವನ ತಲೆ ಜುಟ್ಟನ್ನು ಕಿತ್ತು ದೂರಕ್ಕೆ ತಳ್ಳಿಹಾಕಿದ್ದಳಂತೆ, ಅದಕ್ಕಾಗಿ ಈಗಲೂ ಅಲ್ಲಿ ಜುಟ್ಟು ಇಲ್ಲದ ಬೋಳು ತೆಂಗಿನಕಾಯಿಯನ್ನೇ ಒಡೆಯುತ್ತಾರೆ. ಹಾಗೂ ಸ್ವಾರಮ್ಮನ ಗರ್ಭಗುಡಿಯಲ್ಲಿರುವ ಸ್ವಾರಮ್ಮನ ಶಿಲ್ಪದ ಮುಖವು ಎಡಕ್ಕೆ ತಿರುಗಿದ್ದು ಅದನ್ನು ಜನರು ಸಿಟ್ಟಿನಿಂದ ಆ ಕಡೆ ತಿರುಗಿಸಿದ್ದಾಳೆಂದು ಹೇಳುತ್ತಾರೆ." ಸ್ವಾರಮ್ಮನ ದೇವಾಲಯ ಎರಡು ಬೆಟ್ಟಗಳ ಮಧ್ಯೆ ಕೆಳಭಾಗದಲ್ಲಿದ್ದರೆ ಶಂಕರಲಿಂಗ ದೇವಾಲಯವನ್ನು ಬೆಟ್ಟದ ಮೇಲೆ ಕಟ್ಟಿದ್ದಾರೆ. ಈ ದೇವಾಲಯಗಳ ಮುಂದೆ ಒಂದು ಕೆರೆ ಇದ್ದು ಇಲ್ಲಿನ ಜಾತ್ರೆಯಲ್ಲಿ ಬೇಕಾಗುವ ನೀರನ್ನು ಒದಗಿಸುತ್ತಿದ್ದು ವಿವಿಧ ಕಾರ್ಯಗಲಿಗೆ ಅನುಕೂಲಕರವಾಗಿದೆ.

ಈಗ ಶಂಕರಲಿಂಗ ದೇವಾಲಯವಿರುವ ಬೆಟ್ಟವನ್ನು ಬಂಡೆಗಳಿಗಾಗಿ ಕಲ್ಲುಗಳಿಗಾಗಿ, ಚಪ್ಪಡಿಗಳಿಗಾಗಿ, ಕಂಬಗಳಿಗಾಗಿ ತೋಡಿ ಬೆಟ್ಟದ ಬಂಡೆಯನ್ನು ಮದ್ದು ಗುಂಡುಗಲಿಂದ ಸಿಡಿಸಿದ್ದಾರೆ. ಆ ಕಾರಣವಾಗಿ ದೇವಾಲಯವನ್ನು ಬಿಟ್ಟು ಉಲಿದಂತೆ ಸುತ್ತಲೂ ಇರುವ ಬಂಡೆಯನ್ನು ಕೊರೆದು ಅಲ್ಲಿಗೆ ಹೋಗಲು ಸಾಧ್ಯವಿಲ್ಲದಂತೆ ಹಾಳು ಮಾಡಿದ್ದಾರೆ. ಇದೇ ರೀತಿ ಕೇವಲ ಇನ್ನೆರಡು ಮೂರು ವರ್ಷ ನಡೆದರೆ ದೇವಾಲಯ ಇತಿಹಾಸದ ಹೇಳಿಕೆಗೆ ದಂತ ಕಥೆಗಳಿಗೆ ಸೇರ್ಪಡೆಯಾಗುತ್ತದೆ. ಆದಷ್ಟು ಇದರ ರಕ್ಷಣೆಗೆ ಸ್ಥಳೀಯರು ಗಮನ ನೀಡುವುದು ಒಳ್ಳೆಯದು. ಇದು ಸಾಧ್ಯವಿಲ್ಲದಿದ್ದರೆ ಒಂದು ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಳವನ್ನು ಕಳೆದುಕೊಂಡಂತೆ ಆಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಇದುವರೆವಿಗೂ ನೋಡಿದ ಎಲ್ಲಾ ಜಾತ್ರೆ, ಉತ್ಸವ, ಹಬ್ಬಗಳು ಸಹ ಗ್ರಾಮೀಣ ಜನರ ಬದುಕಿನ ಸುಪ್ತ ಕಾರ್ಯ ಚಟುವಟಿಕೆಗಳ ಪ್ರಕಟಣೆಯಾಗಿ ಕಂಡುಬರುತ್ತದೆ. ಇಂಥಹವುಗಳ ಸಾಂಸ್ಕೃತಿಕ ಅಧ್ಯಯನವನ್ನು ದಾಖಲಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಮುಂದಿನ ಪೀಳಿಗೆಗೆ ಆಚರಣೆಯ ದಾಖಲೆಗಳ ಕಣಜಗಳಲ್ಲಿ ಕಾಳುಗಳೇ ದೊರೆಯದಂತಾಗಬಹುದು. ಜೊತೆಗೆ ಇಂಥ ಆಚರಣೆಗಳ ವಿಧಿ ವಿಧಾನಗಳ ಗಂಭೀರವಾದ ಅಧ್ಯಯನ ವರ್ತಮಾನವನ್ನು ಭೂತದೊಂದಿಗೆ ಗುರುತಿಸಿಕೊಳ್ಳುವಲ್ಲಿ ಹಾಗೂ ಭವಿಷ್ಯವನ್ನು ರೂಢಿಸುವಲ್ಲಿ ಉತ್ಕೃಷ್ಟ ಕೊಡುಗೆಯಾಗಬಲ್ಲದು.

ಒಟ್ಟಾರೆ ಹೇಳುವುದಾದರೆ ಈ ಹಬ್ಬ, ಜಾತ್ರೆ, ಉತ್ಸವಗಳು, ನಿರ್ದಿಷ್ಟ ಸಮಯದಲ್ಲಿ ಇಡೀ ಸಮುದಾಯದ ಸಾಂಪ್ರದಾಯಿಕ ಆಚಾರ, ವಿಚಾರಗಳು, ಆಸೆ, ಆಶೋತ್ತರಗಳನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸುತ್ತವೆ. ಇತ್ತೀಚೆಗೆ ಇಂಥಹ ಸಂದರ್ಭಗಳಲ್ಲಿ ಮೊದಲು ನಡೆಯುತ್ತಿದ್ದ ಎಷ್ಟೋ ಆಚರಣೆಯ ಅಂಶಗಳು ಮಾರ್ಪಡುತ್ತಾ ಇಲ್ಲವೇ ಕೈಬಿಟ್ಟು ಹೋಗುತ್ತಾ ಮೂಲದ ಸೊಗಡು, ಸೊಗಸನ್ನು ಕಡಿಮೆಗೊಳಿಸಿಕೊಂಡು, ಆಕರ್ಷಣೆ ಮಾತ್ರವಾಗಿ ಉಳಿದಿವೆ ಎನಿಸುತ್ತದೆ.

ಇಷ್ಟೇ ಅಲ್ಲದೆ "ನಿಡುಗಲ್ಲು ಮತ್ತು ಆ ಪರಿಸರದಲ್ಲಿ ಇನ್ನೂ ಅನೇಕ ಜಾತ್ರೆ, ಸಂತೆ, ಊರ ಹಬ್ಬಗಳು, ಆಚರಣೆಗಳನ್ನು ಕಾಣಬಹುದು. ಅವುಗಳೆಂದರೆ ಚನ್ನಕೇಶವಪುರದ ಹರಿಹರೇಶ್ವರನ ದನಗಳ ಜಾತ್ರೆ, ನಾಗಲಮಡಿಕೆ ಸುಬ್ರಹ್ಮಣ್ಯೇಶ್ವರನ ದನಗಳ ಜಾತ್ರೆ, ರಥೋತ್ಸವಗಳು ಹಾಗೂ ಪಾವಗಡದ ಶ್ರೀ ಶನಿಮಹಾತ್ಮನ ಭಾರಿ ದನಗಳ ಜಾತ್ರೆ ಮತ್ತು ರಥೋತ್ಸವಗಳು ಕರ್ನಾಟಕದಲ್ಲಿಯೇ ಪ್ರಸಿದ್ಧಿ ಪಡೆದಂತಹವುಗಳು. ಅವುಗಳನ್ನು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಬೇಕಾಗುತ್ತದೆ. ಇವುಗಳ ಜೊತೆಗೆ ಅನೇಕ ಚಿಕ್ಕ ಪುಟ್ಟ ಸಂಪ್ರದಾಯದ ಧಾರ್ಮಿಕ ಆಚರಣೆಗಳು ಸಹ ಅಭ್ಯಾಸ ಯೋಗ್ಯವಾಗಿವೆ. ಆದರೂ ನನ್ನ ಅಧ್ಯಯನದಲ್ಲಿ ನಿಡುಗಲ್ಲನ್ನು ಪ್ರಧಾನವಾಗಿಸಿಕೊಂಡು ಅಭ್ಯಸಿಸಲಾಗಿದೆ ಎಂದಷ್ಟೇ ಹೇಳಬಹುದು. ಉಳಿದಂತೆ ಪಾವಗಡ ತಾಲ್ಲೂಕಿನ ಸಾಂಸ್ಕೃತಿಕ ಆಚರಣೆಯನ್ನು ಕುರಿತು ಅಧ್ಯಯನ ಕೈಗೊಳ್ಳುವವರಿಗೆ ಅಪಾರವಾದ ವಸ್ತು ವ್ಯಾಪ್ತಿಗಳು ಅನುಮಾನವಿಲ್ಲದೆ ಇಲ್ಲಿ ದೊರೆಯುತ್ತವೆ. ಸಂಶೋಧಕರು ಆ ನಿಟ್ಟಿನಲ್ಲಿ ಯೋಚಿಸಬಹುದು ಅಥವಾ ಮುಂದಾಗುವುದಕ್ಕೆ ಇಲ್ಲಿ ಅವಕಾಶವಿದೆ." [2]

ತೆರಿಗೆ ಪದ್ಧತಿ:

ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಕೊಡುವ ಪ್ರತಿಫಲವೇ ತೆರಿಗೆಗಳೆಂದು ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಸ್ಮೃತಿಗಳು ಭಾವಿಸುತ್ತವೆ. ರಾಜನ ಆದಾಯದ ಬಹುಭಾಗವನ್ನು ತೆರಿಗೆಗಳಿಂದ ಬರುತ್ತಿದ್ದಿತು ಧರ್ಮದಿಂದ ರಾಜ್ಯವನ್ನಾಳುವ ರಾಜನಿಗೆ ದೇಶದಲ್ಲಿ ಬೆಳೆಯುವ ಬೆಳೆಯ ಆರನೆಯ ಒಂದು ಭಾಗವು ಸಲ್ಲಿಸಬೇಕೆಂದು ವಶಿಷ್ಠನು ಅಭಿಪ್ರಾಯ ಪಡುತ್ತಾನೆ. ಇದು ರಾಜನಿಗೂ ಪ್ರಜೆಗಳಿಗೂ ಮಧ್ಯೆ ಒಂದು ರೀತಿಯ ಒಪ್ಪಂದವಿದ್ದಂತೆ ಎನ್ನುವ ಮಾತಿನಲ್ಲಿ ಸತ್ಯಾಂಶವಿದೆ.

ನಿಡುಗಲ್ಲಿನ ಶಾಸನಗಳನ್ನು ಅಧ್ಯಯನ ಮಾಡುವಾಗ ಎದುರಾಗುವ ಸಮಸ್ಯೆ ಎಂದರೆ ಅವುಗಳಲ್ಲಿ ಕಂಡು ಬರುವ ಕೆಲವು ತೆರಿಗೆಗಳು ಅರ್ಥವೇ ಆಗದಿರುವುದು. ಉಳಿದ ತೆರಿಗೆಗಳನ್ನು ಸರಳವಾಗಿ ಅರ್ಥ ಮಾಡಿಕೊಳ್ಳಬಹುದು. ಅವುಗಳನ್ನು ವಿಂಗಡಿಸಿ ಒಂದೊಂದರ ವಿಷಯವನ್ನು ಚರ್ಚಿಸುವುದು ಈ ಅಧ್ಯಯನಕ್ಕೆ ಹೊರತಾದುದು ಒಟ್ಟಾರೆಯಾಗಿ ಅಲ್ಲಿ ಪ್ರಚಲಿತವಿದ್ದ ತೆರಿಗೆಗಳ ಪಟ್ಟಿಯನ್ನು ಮಾತ್ರ ಈ ಕೆಳಗೆ ಕೊಡಲಾಗಿದೆ.

"ಕ್ರಿ.ಶ. ೧೧೫೦ರ ಶಾಸನವೊಂದರಲ್ಲಿ ತಿಪ್ಪೆ ಸುಂಕ, ಗಾಣದ ಸುಂಕ, ಎಲೆ ಹೇರಿಂಗೆ ೧೦೦, ಅಡಕೆ ಹೇರಿಂಗೆ ೫೦, ಮೆಣಸು ಹೇರಿಂಗೆಮಾನ ೩, ಅರಿಸಿನ ಹೇರಿಂಗೆ ಹಲ್ಲ ೨, ಸೀರೆಯ ಮಾಳವೆಗೆ ವೀಸ-೧, ಬಂಡಿಯಲ್ಲಿ ಭತ್ತ-ಕೊಳಗ ೧, ಹೇರಿಂಗೆ ಭತ್ತ-ಬಳ್ಳ ೧ ಎನ್ನುವ ತೆರಿಗೆಗಳು ಕಂಡುಬರುತ್ತವೆ." [8] ಮತ್ತೊಂದು ಶಾಸನದಲ್ಲಿ ಈ ತೆರಿಗೆಗಳ ಪಟ್ಟಿಯನ್ನೇ ಮುಖ್ಯವಾಗಿ ಹೇಳಲಾಗಿದ್ದು ಅವು ಈ ಕೆಳಗಿನಂತಿವೆ. ನಿಡುಗಲ್ಲಿನಲ್ಲಿ ಯಾವ ಯಾವ ತೆರಿಗೆಗಳು ಜಾರಿಯಲ್ಲಿದ್ದವು ಎನ್ನುವುದಕ್ಕೆ ಈ ಪಟ್ಟಿ ನಿದರ್ಶನ. "ಒಂದೇ ಶಾಸನದಲ್ಲಿ

ಇಷ್ಟೊಂದು ಮಾಹಿತಿ ಇರುವುದು ನಿಡಗಲ್ಲಿನ ಶಾಸನಗಳಲ್ಲಿ ಬಹಳ ಅಪರೂಪ. ಅದಕ್ಕಾಗಿ ಇಲ್ಲಿ ಅದರ ಪಟ್ಟಿಯನ್ನು ನೀಡಲಾಗಿದೆ.

೧. ಗಾಣಕ್ಕೆ – ಗಿದ್ದನ ೧

೨. ಅವರೆ, ಹಾಲುವಳ್ಳಿ ಮೊದಲಾದ ಧಾನ್ಯಗಳಿಗೆ ಹೊಂಗೆ ಮಾನ ೧

೩. ಉದ್ದು, ಗೋಧಿ ಮೊದಲಾದ ದಿದಳ ಧಾನ್ಯಗಳಿಗೆ ಹೊಂಗೆ ಸೊಲ್ಲಗೆ –೨

೪. ಸಕ್ಕರೆ – ಹೊಂಗೆ ಕಾಣೆ ೨

೫. ಮೆಣಸು – ಹೊಂಗೆ ಕಾಣೆ ೨

೬. ಅಡಕೆ ಹೊಂಗೆ ೧೦

೭. ಎಲೆ ಹೇರಿಂಗೆ ೫೦

೮. ಮಳಿಗೆಯಲ್ಲಿ ಸುಂಕ ಮಾಡುವುದಕ್ಕೆ ಲಕ್ಕಕ್ಕೆ ೨೦ ಮತ್ತಂ

೯. ಓವ, ಸಾಸುವೆ, ಮೆಂಥೆಯ, ಜೀರಿಗೆ, ಸಬ್ಬಸಗೆ, ಕೊತ್ತಂಬರಿ, ಅರಸಿನ, ಉಳ್ಳಿ ಮೊದಲಾದ ಸಾಂಬರ ಧಾನ್ಯಗಳಿಗೆ ಹೇರಿಗೆ ಮಾನ–೧

೧೦. ಕಂಮಟದಲ್ಲಿ ಒಟ್ಟುವ ಬಂಗಾರದಿಂ ಹೊಂಗೆ ಕಾ–೧ ಕಮ್ಮಟ ಎಂದರೆ ನಾಣ್ಯಗಳನ್ನು ಮುದ್ರಿಸುವ ಸ್ಥಳ

೧೧. ಗದ್ಯಾಣವೊಂದರ ಬೆಳ್ಳಿಗೆ ಹೊಂಗೆ ಕಾಣೆ–೧

೧೨. ನಾಲ್ಕು ಚರಣಯನ ಖರಂಗಳ ಪೂಸಗೆ, ಉತ್ಸಾಹಂಗಳಾದಲ್ಲಿ ದೇವರಿಗೆ ಕೊಟ್ಟ ವರಮಾನ

೧೩. ಮದುವೆಯಾಡಂಬಡಿಕೆಯ ಹೊಂನಿಗೊಳಗೆ – ಗಂಡಿನಲ್ಲಿ ಹೊಂಗೆ–೧, ಹೆಣ್ಣಿನಲ್ಲಿ ಹೊಂಗೆ ಹಾಗಾ–೧

೧೪. ಕನ್ಯಾದಾನ ಮದುವೆಗೆಯಿತ್ತಂಡದಲ್ಲಿ ಗದ್ಯಾಣ–೧

೧೫. ಮತ್ತಂ ಮಯಿನೆರೆದರೆ, ಗೌಡಿಕೆಯಾದರೆ, ಪುತ್ರೋತ್ಸಾಹ, ನಾಮಕರಣ ವೋದಲಿಡುವು (ವಿದ್ಯಾಭ್ಯಾಸಕ್ಕಾಗಿ) ಯಾದಲಿ – ಪರಣ ೧

೧೬. ಪುತ್ರಿಯುತ್ಸಾಹಕ್ಕೆ ಹಾಗ–೨

೧೭. ನಾನದೇಶಿ ಮಲೆಯಾಳರು ಬೆಟ್ಟದ ಕುದುರೆಗೆ ಹಾಗ–೧

೧೮. ಸೀರೆಯ ಮಳಮೆಗೆ ವೀಸ–೩

೧೯. ಉಪ್ಪಿನ ಹೇರಿಂಗೆ ಸೊಲಗೆ–೨

೨೦. ಹೆಡಗೆಗೆ ಸೊಲಗೆ–೧

೨೧. ತುಪ್ಪದ ಹೇರಿಂಗೆ ಅದ್ದನ-೧

೨೨. ಕಬ್ಬು, ತೆಂಗು, ಮಾವು, ಬಾಳೆ ಮೊದಲಾದ ಹಣ್ಣುಫಲ ನೂರಕ್ಕೆ -೧

೨೩. ಅಲ್ಲ (ಹಸಿಶುಂಠಿ) ಹೇರಿಂಗೆ ಫಲ-೧

೨೪. ಎಲೆ ವಾದ್ರ ಕಾಯಿಗೆ ಹೊಂಗೆ-೨

"ಮತ್ತೊಂದು ಶಾಸನವು ತಿಪ್ಪೆ ಸುಂಕ, ಗಾಣದ ಎಣ್ಣೆ, ಹೇರಿಂಗೆ ಎಲೆ-೧೦೦, ಅಡಕೆ ಹೇರಿಂಗೆ ೫೦, ಮೆಣಸು ಹೇರಿಂಗೆ ಮಾನ-೧, ಅರಿಸಿನ ಹೇರಿಂಗೆ ಫಲ-೨, ಸೀರೆಯ ಮಳವೆಗೆ ವಿಸ-೧, ಬಂಡಿಯ ಭತ್ತಕ್ಕೆ-೧, ಭತ್ತ-ಬಳ್ಳ ೧ ಎಂದು ತಿಳಿಸುತ್ತದೆ."

"ಮೇಲಿನ ಎಲ್ಲಾ ತೆರಿಗೆಗಳನ್ನು ಗಮನಿಸಿದರೆ ತೆರಿಗೆಗಳು ಜನತೆಗೆ ಹೊರಲಾರದಷ್ಟು ಭಾರವಾಗಿದ್ದುವೆ? ಎಂಬ ಪ್ರಶ್ನೆಗೆ ಹೌದು ಎಂಬುದು ಖಚಿತವಾದ ಉತ್ತರವಾಗಿ ತಿಳಿದು ಬರುತ್ತದೆ. ತೆರಿಗೆಗಳನ್ನು ಹೆಚ್ಚಾಗಿ ಹಾಕಿದರೆ ಜನರಿಗೆ ಹೊರಲಾರದ ಹೊರೆಯಾಗಿ ಪರಿಣಮಿಸಬಹುದೆಂದು ಮಹಾಭಾರತವು ಸ್ಪಷ್ಟೋಕ್ತಿಗಳಲ್ಲಿ ಎಚ್ಚರಿಸುತ್ತದೆ. "ದೇಶವು ಹಸುವಿದ್ದಂತೆ, ಪ್ರಜೆಗಳು ಕರುಗಳಿದ್ದಂತೆ, ಎಲ್ಲಾ ಹಾಲನ್ನು ಸ್ವಂತಕ್ಕೆ ಕರೆದುಕೊಂಡರೆ ಕರುಗಳು ಬಡವಾಗಿ ಮುಂದೆ ಭಾರವನ್ನು ಹೊರಲು ಅಸಮರ್ಥವಾಗುತ್ತವೆ. ಬಳ್ಳಿಗೆ ನೋವಾಗದಂತೆ ದುಂಬಿಯು ಜೇನನ್ನು ಸ್ವೀಕರಿಸುವ ರೀತಿಯಲ್ಲಿ ಜನರಿಂದ ತೆರಿಗೆಗಳನ್ನು ಎತ್ತ ಬೇಕು. ಸರಿಯಾದ ದೇಶ, ಕಾಲ ರೀತಿಗಳಲ್ಲಿ ತೆರಿಗೆಗಳನ್ನು ಪಡೆಯಬೇಕು ಹಾಲನ್ನು ಕರೆಯಲಿ ಆದರೆ ಕೆಚ್ಚಲಿಗೆ ನೋವಾಗದಿರಲಿ" ಎಂದು ಡಾ. ಎಂ. ಚಿದಾನಂದಮೂರ್ತಿಯವರು ಹೇಳುತ್ತಾರೆ. ತೆರಿಗೆಗಳು ವ್ಯವಸ್ಥೆಯು ತುಂಬಾ ಜಟಿಲವಾದದ್ದಾಗಿತ್ತು. ಧಾನ್ಯ ರೂಪವಾಗಿ ಬರುವ ತೆರಿಗೆಗಳಿಗೆ ಹೇಗೆ ಲೆಕ್ಕವಿಡುತ್ತಿದ್ದರೋ ತಿಳಿಯದು. ಹಾಗೆ ಸಂಗ್ರಹವಾದ ಧಾನ್ಯಗಳನ್ನು ರಕ್ಷಿಸಲು ಅಲ್ಲಲ್ಲಿ ದೊಡ್ಡ ಉಗ್ರಾಣಗಳಿದ್ದಿರಬೇಕು. ಅಥವಾ ಕಣಜಗಳಿದ್ದರಬೇಕೆ. ಶಾಸನಗಳಲ್ಲಿ ಇವುಗಳ ವಿಚಾರ ಕಂಡು ಬಂದಿಲ್ಲವಾದರೂ ಅಲ್ಲಲ್ಲಿ ಈ ಕಣಜಗಳನ್ನು, ಉಗ್ರಾಣಗಳನ್ನು ಇಂದಿಗೂ ಈ ನಿಡಗಲ್ಲು ದುರ್ಗದಲ್ಲಿ ನೋಡಬಹುದು. ತೆರಿಗೆಗಳನ್ನು ಬರೆದಿಡಲು ಕಡತಗಳಿದ್ದಿರಬೇಕು. ತೆರಿಗೆಗಳಂತೆಯೇ ಅವುಗಳನ್ನು ನೋಡಿಕೊಳ್ಳಲು ಅಧಿಕಾರಿಗಳೂ ಇರುತ್ತಿದ್ದರು."

ಸಾಮಾನ್ಯವಾಗಿ ತೆರಿಗೆಗಳನ್ನು ಸಂಗ್ರಹಿಸಲು ಅಧಿಕಾರಿಗಳು ಸುಗ್ಗಿಯ ಕಾಲದಲ್ಲಿ ಬರುತ್ತಿದ್ದಿರಬಹುದು. ತೆರಿಗೆಗಳು ಅಧಿಕವಾದಾಗ ಜನರು ಊರಿಗಿಂತ ಕಾಡೇ ವಾಸಿಯೆಂದು ಕಾಡು ಸೇರಿದ್ದು ಉಂಟು. "ಅಗ್ರಹಾರದಿಂದ ಬರುವ ತೆರಿಗೆಗಳನ್ನು ಅಲ್ಲಿಯ ಬ್ರಾಹ್ಮಣರೇ ಉಪಯೋಗಿಸುತ್ತಿದ್ದರು. ಒಬ್ಬ ರೈತನು ಮನೆಗೆ, ತಿಪ್ಪೆಗೆ, ಹಸುಗಳಿಗೆ, ಹೊಲಕ್ಕೆ, ಬೆಳೆಗೆ, ತೋಟಕ್ಕೆ, ಬಾವಿಗೆ ತೆರಿಗೆಗಳನ್ನು ಕೊಡಬೇಕಾಗಿದ್ದಿತು." ತಾನು ಬೆಳದದ್ದನ್ನು ಮಾರಲು ಸಂತೆಗೆ ಕೊಂಡಯ್ದೊರೆ ಅಲ್ಲಿಯೂ ಸುಂಕವನ್ನು ತೆರಬೇಕಾಗಿದ್ದಿತು ಎಂದರೆ ತೆರಿಗೆಗಳೂ ಮೊದಲೇ ಜನರಿಗೆ ಎಷ್ಟು ಹೊರೆಯಾಗಿದ್ದವೆಂಬುದನ್ನು ತಿಳಿಯುತ್ತದೆ. ಇವು ನೇರವಾದ ತೆರಿಗೆಗಳು

ಮೊದಲೇ ಹೇಳಿದ ಹಾಗೆ ಅಗ್ರಹಾರಗಳು ತೆರಿಗೆಗಳಿಂದ ಮುಕ್ತವಾಗಿದ್ದವು, "ಅಂದರೆ ಜನರು ಹೆದರುತ್ತಿದ್ದುದು ಎರಡಕ್ಕೆ ಮೊದಲನೆಯದು ಸೈನಿಕರು ಮತ್ತು ಬಿಟ್ಟ ಕೆಲಸಕ್ಕೆ. ಎರಡನೆಯದು ತೆರಿಗೆಗಳಿಗೆ ಎಂದು ತಿಳಿದುಬರುತ್ತದೆ. ಒಟ್ಟಾರೆ ಈ ಎಲ್ಲಾ ಮೂಲಗಳಿಂದ ರಾಜ್ಯದ ಬೊಕ್ಕಸವನು ತುಂಬಿಸಿಕೊಳ್ಳುತ್ತಿದ್ದರೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ."

ಅದೇನೆ ಇರಲಿ ಜನರಿಂದ ಸಂಗ್ರಹಿಸಿದ ತೆರಿಗೆಯನ್ನು ಕೆಲವು ಭಾಗಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಾರ್ವಜನಿಕರಿಗೆ ರಾಜನ ಕೆಲವು ಅಭಿವೃದ್ಧಿ ಕಾರ್ಯಗಳ ರೂಪದಲ್ಲಿ ತಲುಪುತ್ತಿದ್ದವು ಎನ್ನುವುದರಲ್ಲಿ ಎರಡು ಮಾತಿಲ್ಲ. ಇಪ್ಪತ್ತನೇ ಶತಮಾನದಲ್ಲಿಯೂ ಸಹ ದೇಶದ ರಕ್ಷಣೆಗೆ ದೇಶದ ಸಂಪನ್ಮೂಲದ ಬಹುಭಾಗ ಖರ್ಚು ಆಗುತ್ತಿರುವುದನ್ನು ಕಾಣುತ್ತೇವೆ.

ಹಾಗೆಯೇ ರಾಜರ ಕಾಲದಲ್ಲಿಯೂ ರಾಜ್ಯ ರಕ್ಷಣೆ ಪ್ರಮುಖವಾದುದ್ದಾಗಿದ್ದಿತು. "ಯುದ್ಧಕ್ಕೆ ರಾಜ್ಯದ ತೆರಿಗೆಯ ಬಹುಪಾಲು ಹಣ ವ್ಯಯವಾಗುತ್ತಿತ್ತು. ಒಂದು ರಾಜ್ಯದ ಸುತ್ತಲೂ ಪ್ರಬಲ ರಾಜರುಗಳಿದ್ದರಂತೂ ಪದೇ ಪದೇ ಆಕ್ರಮಣಗಳಿಂದ ಆ ರಾಜ್ಯದ ಆರ್ಥಿಕ ಸ್ಥಿತಿ ಅಧೋಗತಿಗೆ ಇಳಿಯುತ್ತಿತ್ತು." ಇಂತಹ ಕಾರ್ಯ ಚಟುವಟಿಕೆಗಳಿಗೆ ತೆರಿಗೆಯ ಹಣ ವ್ಯಯವಾಗುತ್ತಿತ್ತೆಂಬುದು ನಿಃಶ್ಸಂಶಯವಾದ ವಿಷಯವಾಗಿದೆ. ಯಾವ ಯಾವ ರಾಜ್ಯಗಳ ರಾಜರ ಆಳ್ವಿಕೆಯ ಕಾಲದಲ್ಲಿ ತೆರಿಗೆಗಳನ್ನು ಹೆಚ್ಚಾಗಿ ಪ್ರಜೆಗಳಿಂದ ರಾಜರು ಪಡೆಯುತ್ತಿದ್ದರೊ ಆ ರಾಜ್ಯ ಸಾಮಾನ್ಯವಾಗಿ ಯುದ್ಧಗಳಿಂದ ತತ್ತರಿಸಿತ್ತು ಎಂದು ಊಹಿಸಬಹುದಾಗಿದೆ. ಒಟ್ಟಾರೆ ಜನರಿಂದ ಗಳಿಸಿದ ತೆರಿಗೆ ಜನರಿಗೆ ಉಪಯೋಗವಾಗುತ್ತಿದ್ದದ್ದು ಕೆಲವೇ ಭಾಗ ಎನ್ನುವ ಮಾತು ಸತ್ಯವಾದದ್ದು ಎಂದು ಅರ್ಥೈಸಿಕೊಳ್ಳಬಹುದು.

ಕೊನೆಟಿಪ್ಪಣಿಗಳು

೧. ತಿಪ್ಪೇಸ್ವಾಮಿ ಡಾ.ಜಿ.ಆರ್., ಪ್ರಸ್ತಾಪ, ಪುಟ–೬೭

೨. ಇದೇ, ಪುಟ – ೭೧

೩. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಪುಟ–೭೯

೪. ಎ.ಕ.ಸಂ. XII ಪಾವಗಡ ೪೬, ಕ್ರಿ.ಶ. ೧೬೫೩

೫. ಇದೇ, ೪೩, ೧೧೫೦.

೬. ಇದೇ, ೨೪, ೧೫೪೦.

೭. ಇದೇ, ೫೦, ೧೨೪೮.

೮. ಇದೇ, ೫೩, ೧೨೯೨.

೯. ಇದೇ, ೫೭, ೧೦೨೨.

೧೦. ಇದೇ, ೩೫, ೧೧೬೭.

೧೧. ಪರಮಶಿವಮೂರ್ತಿ ಡಾ.ಡಿ.ವಿ., ಸಂಶೋಧನ ಸಿರಿ, ಪುಟ ೧೭.

೧೨. ಕಲಬುರ್ಗಿ ಎಂ.ಎಂ., ಮಾರ್ಗ–೩, ಪುಟ, ೨೮.

೧೩. ಹಿರೇಮಠ ಬಿ.ಆರ್., ಕನ್ನಡ ಶಾಸನಗಳಲ್ಲಿ ವರ್ತಕರು, ಪುಟ – ೬೬

೧೪. ಚಿದಾನಂದಮೂರ್ತಿ ಡಾ.ಎಂ., ಕನ್ನಡ ಸಾಹಿತ್ಯ ಸಾಂಸ್ಕೃತಿಕ ಅಧ್ಯಯನ, ಪುಟ ೩೮೩

೧೫. ಇದೇ, ಪುಟ – ೪೦೪.

೧೬. ಇದೇ, ಪುಟ – ೩೯೫.

೧೭. ಚಲುವರಾಜನ್ ವಿ.ಆರ್., ಪಾವಗಡ ತಾಲ್ಲೂಕು ದರ್ಶನ, ಪುಟ–೩೮

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಇತ್ತೀಚೆಗಂತೂ ಒಂದು ಪ್ರದೇಶದ ಅಥವಾ ಒಂದು ಸ್ಥಳದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕುರಿತ ಅಧ್ಯಯನ ಗಮನಾರ್ಹ ಬದಲಾವಣೆಯಲ್ಲಿ ತೊಡಗಿದೆ. ಆದರೂ ಅದರ ಜೊತೆಗೆ ಆ ಪ್ರದೇಶದ ಗತವೈಭವ ಹೇಳುವ ಐತಿಹಾಸಿಕ ಸ್ಮಾರಕಗಳಾದ ಶಾಸನಗಳು, ದೇವಾಲಯಗಳು, ಪ್ರಾಚೀನ ಪ್ರದೇಶದ ನಗರಕ್ಕೆ ಬೇಕಾದ ಜಲಮೂಲಗಳು ಮುಂತಾದವುಗಳನ್ನು ಒಳಗೊಂಡ ಅಧ್ಯಯನ ಅಗತ್ಯವೆನಿಸುತ್ತದೆ. ಇತ್ತೀಚೆಗೆ ಅವುಗಳನ್ನು ರಕ್ಷಿಸುವುದಿರಲಿ, ಅವುಗಳನ್ನು ಉಳಿಸಿಕೊಳ್ಳುವ ಯಾವ ಪ್ರಯತ್ನವು ನಡೆಯದೆ ಅವನತಿಯ ಹಾದಿಯನ್ನು ಹಿಡಿಸಿರುವುದು ಅಧ್ಯಯನಾಸಕ್ತರಿಗೆ, ಇತಿಹಾಸಕ್ತರಿಗೆ ಮತ್ತು ಸಂಶೋಧಕರಿಗೆ ಅತ್ಯಂತ ನೋವಿನ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ಶಕ್ತಿ ಮೀರಿ ಅವುಗಳನ್ನು ಶೋಧಿಸಿ, ಸಂಗ್ರಹಿಸಿ ಅಧ್ಯಯನ ನಡೆಸುವುದು ಜವಾಬ್ದಾರಿಯುತ ಕೆಲಸ. ಈ ದೃಷ್ಟಿಯಿಂದ ಒಂದು ಪ್ರದೇಶದ ಸಾಂಸ್ಕೃತಿಕ ಅಂಶಗಳ ಜೊತೆಗೆ ಐತಿಹಾಸಿಕ ಸ್ಮಾರಕಗಳು, ಶಾಸನಗಳು, ದೇವಾಲಯ ಮುಂತಾದ ಅವಶೇಷಗಳನ್ನು ಒಟ್ಟಾರೆ ಕಲೆಹಾಕಿ ಅಧ್ಯಯನ ಮಾಡಿರುವುದು ಕರ್ನಾಟಕದ ಸಾಂಸ್ಕೃತಿಕ ಅಧ್ಯಯನದ ಇತಿಹಾಸದಲ್ಲಿ ಮೊಟ್ಟಮೊದಲ ಪ್ರಯತ್ನವಾಗಿದೆ ಎಂಬುದನ್ನು ವಿನಮ್ರವಾಗಿ ತಿಳಿಸಲು ಬಯಸುತ್ತೇನೆ.

ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಅಧ್ಯಯನಕ್ಕೆ ಪೂರಕವಾಗಿ ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಹೇಗೆ ನೆರವಾಗುತ್ತದೆ ಎಂಬುದನ್ನು ತಿಳಿಯವುದೇ ಈ ಅಧ್ಯಯನದ ಮುಖ್ಯ ಉದ್ದೇಶ. ಇದರ ಜೊತೆಯಲ್ಲಿಯೇ ಆ ಪ್ರದೇಶದ ಇತಿಹಾಸ, ರಾಜ ಮಹಾರಾಜರ, ಮಾಂಡಲೀಕರ ಮತ್ತು ಪ್ರಾದೇಶಿಕ ಪಾಳೆಗಾರರ ಅಧ್ಯಯನ ಮಾಡುವುದು ಇನ್ನೊಂದು ಉದ್ದೇಶವಾಗಿದೆ. ಈ ಎರಡು ಉದ್ದೇಶಗಳೊಂದಿಗೆ ಪ್ರಾರಂಭವಾಗುವ ನಿಡುಗಲ್ಲು ಸಾಂಸ್ಕೃತಿಕ ಅಧ್ಯಯನವು ಮುಂದುವರಿದಂತೆ ನಾನಾ ರೀತಿಯ ವಿವಿಧ ವಿಷಯಗಳು ಗೋಚರವಾದವು.

ಹೀಗೆ ಗೋಚರವಾದ ಅವುಗಳೆಲ್ಲವನ್ನು ಅಧ್ಯಯನದಲ್ಲಿ ಸೇರಿಸಿಕೊಳ್ಳುವುದು ಅತ್ಯಗತ್ಯವಾಗಿ ಕಂಡುಬಂದಿತು. ಹೀಗಾಗಿ ನಿಡುಗಲ್ಲು ಪ್ರದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಶಾಸನಗಳ ಹಿನ್ನೆಲೆಯಲ್ಲಿ ಇಲ್ಲಿ ಕೈಗೊಳ್ಳಲಾಗಿದೆ.

ನಿಡುಗಲ್ಲಿನ ಸಾಂಸ್ಕೃತಿಕ ಅಧ್ಯಯನ ಕ್ಷೇತ್ರವು ಸಾಗರದಷ್ಟು ವಿಸ್ತಾರವಾದುದು. ಮೊಗೆದಷ್ಟು ಅದು ಮುಗಿಯುವುದಿಲ್ಲ. ಎಲ್ಲಾ ಸಾಂಸ್ಕೃತಿಕ ಅಂಶಗಳನ್ನು ಒಂದೆಡೆ ಕಲೆಹಾಕಿ ಅಧ್ಯಯನ ಮಾಡಿದ್ದೇವೆಂದು ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಾರಣ ಸಾಂಸ್ಕೃತಿಕ ಅಂಶಗಳಿಗೆ ನಿರ್ದಿಷ್ಟವಾದ ವ್ಯಾಪ್ತಿ ಇಲ್ಲದಿರುವುದು. ಒಂದು ಸ್ಥಳದ ಸಾಂಸ್ಕೃತಿಕ ಅಂಶಗಳೆಂದರೆ ಅಲ್ಲಿ ಬದುಕಿದ ಮಾನವನ ನಡೆ, ನುಡಿಯಿಂದ ಹಿಡಿದು ನಂಬಿಕೆ, ದೈವ, ಆಚರಣೆ, ಪದ್ಧತಿ ಮುಂತಾದ ಅಂಶಗಳನ್ನೊಳಗೊಂಡ ಶತಮಾನದ ಜನಜೀವನದ ಬದುಕು, ಉದಾಹರಣೆಗೆ ಒಂದು ಜನಾಂಗದ ಆಚರಣೆಯೆಂದರೆ ಆದೆಷ್ಟೋ ಅಂಶಗಳು ಅದರಲ್ಲಿ ಅಡಕವಾಗಿರುತ್ತವೆ. ಹೀಗಾಗಿ ಸಾಂಸ್ಕೃತಿಕ ಅಧ್ಯಯನದ ವಿಷಯದಲ್ಲಿ 'ಇದಮಿತ್ತಂ' ಎಂದು ಹೇಳುವುದು ಕಷ್ಟವಾಗುತ್ತದೆ.

ನಮ್ಮ ಅಧ್ಯಯನದಲ್ಲಿ ಅನಾಧಾರಕ್ಕೆ ಒಳಗಾದ ಒಂದು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಕ್ಷೇತ್ರವೆನಿಸಿಕೊಂಡ ನಿಡುಗಲ್ಲಿನ ಸಮಗ್ರ ಚಿತ್ರಣವನ್ನು ಕಟ್ಟಿಕೊಡಲು ಮೊದಲ ಬಾರಿಗೆ ಪ್ರಯತ್ನಿಸಲಾಗಿದೆ. ಈಗಾಗಲೇ ಅಧ್ಯಯನ ನಡೆದಿರುವ ಅಥವಾ ಜನಮನದಲ್ಲಿ ಅಚ್ಚೊತ್ತಿರುವ ವಿಷಯಗಳಿಗಿಂತ ಇಂತಹ ಮರೆತು ಹೋಗುವ ಐತಿಹಾಸಿಕ ಸಂಸ್ಕೃತಿಯ ದಾಖಲಾತಿ ಒಂದು ಉತ್ತಮ ಕೆಲಸವೆಂದೇ ಭಾವಿಸಿದ್ದೇನೆ. ಇಲ್ಲಿನ ಜನಪದದ ಬಗ್ಗೆ ಇನ್ನೂ ಹೆಚ್ಚಿನ ಕ್ಷೇತ್ರಕಾರ್ಯ ನಡದದ್ದೇ ಆದರೆ ಹಲವಾರು ಅದ್ಭುತಗಳನ್ನು ಹೊರಗೆಡವಬಹುದು. ಇಂತಹ ಹಲವಾರು ಪ್ರದೇಶಗಳು ಕರ್ನಾಟಕ ಮತ್ತು ಭಾರತ ಸಂದರ್ಭದಲ್ಲಿ ಅಸಡ್ಡೆಯಿಂದ ಮರೆಯಾಗಿವೆ. ಇದಕ್ಕೆ ಎರಡು ಪ್ರಮುಖ ಕಾರಣಗಳನ್ನು ನೀಡಬಹುದು. ಮೊದಲನೇ ಕಾರಣವೆಂದರೆ ಆಯಾ ಸ್ಥಳಗಳಲ್ಲಿರುವ ಐತಿಹಾಸಿಕ ಸ್ಮಾರಕಗಳ ಬಗೆಗೆ ಅವರಿಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದು. ಶಾಸನಗಳ ಮಹತ್ವ, ಅವು ತಿಳಿಸುತ್ತಿರುವ ವಿಷಯ, ದೇವಾಲಯಗಳು ಮುಂತಾದ ಪ್ರಾಚೀನ ಅವಶೇಷಗಳ ಬಗೆಗೆ ಅಲ್ಲಿನ ಜನಸಾಮಾನ್ಯರಿಗೆ ತಿಳಿದರೆ ಅವುಗಳನ್ನು ಜೋಪಾನವಾಗಿ ಕಾಪಾಡುತ್ತಾರೆ. ಎರಡನೆಯ ಕಾರಣವೆನೆಂದರೆ ಪ್ರಸ್ತುತ ಸಮಯದಲ್ಲಿ ಆದರಿಂದ ಯಾವ ಪ್ರಯೋಜನವು ಇಲ್ಲ ಎಂಬ ಅವಿವೇಕ, ಹಳೆಯದನ್ನು ಕಟ್ಟಿಕೊಂಡು ಏನು ಮಾಡುವುದು? ಆದರಿಂದ ಏನು ಮಾಡಲಾದಿತು ಎಂದು ಬಾಹ್ಯ ಲಾಭವನ್ನು ಲೆಕ್ಕ ಹಾಕುವವರಿಗೆ ಅದರ ಮಹತ್ವದ ಅರಿವಿರುವುದಿಲ್ಲ. ವಿದ್ಯಾವಂತರು, ವಿಚಾರವಂತರು ಮತ್ತು ಸಂಶೋಧಕರು ಇಂತಹ ಸಮಸ್ಯೆಗಳನ್ನು ಗಮನಹರಿಸಿದರೆ ಒಳ್ಳೆಯದೆಂಬುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ಶಾಸನಗಳು ಮೂಲ ಉದ್ದೇಶ ನಡೆದ ವಿಷಯಗಳನ್ನು ಮುಂದಿನ ತಲೆಮಾರಿಗೂ ತಲುಪಿಸುವುದೇ ಆಗಿದೆ. ಇದರ ಜೊತೆಯಲ್ಲಿ ಶಾಸನಗಳಲ್ಲಿ ಕಂಡುಬರುವ ವಿವಿಧ ಸಾಂಸ್ಕೃತಿಕ

ಅಂಶಗಳಾವುವು? ಅವುಗಳ ಮೂಲ ಉದ್ದೇಶವೇನು? ಅವುಗಳನ್ನು ಯಾವ ಯಾವ ದೃಷ್ಟಿಯಿಂದ ನೋಡಬಹುದು ಎಂದು ವಿವರವಾಗಿ ಚರ್ಚಿಸಿ, ಹಲವು ಹೊಸ ಆಲೋಚನೆಗಳನ್ನು ಇಲ್ಲಿ ಮಂಡಿಸಲಾಗಿದೆ. ಈ ವಿಷಯದಲ್ಲಿ ವಿದ್ವಾಂಸರ ಈವರೆಗಿನ ಆಲೋಚನೆಗಳನ್ನು ಗಮನಿಸಿ ಅವುಗಳನ್ನು ಮತ್ತಷ್ಟು ಮುಂದುವರೆಸಲಾಗಿದೆ. ಅವುಗಳಲ್ಲಿ ಜನಜೀವನದ ಮೌಖಿಕ ಚಿತ್ರಣವಿರುವಂತೆಯೇ ಜನ ಜೀವನದ ಕ್ರಮವನ್ನು ಅರಿಯಲು ದೇವಾಲಯಗಳು ಮತ್ತು ಅದರ ಹೆಸರಿನಲ್ಲಿ ನಡೆಯುವ ಆಚರಣೆಗಳು ಹೆಚ್ಚು ಪ್ರಯೋಜನಕಾರಿಯಾಗಿವೆ. ಹೀಗಾಗಿ ಸಂಸ್ಕೃತಿ, ಇತಿಹಾಸ ರಚನಾ ಸಂದರ್ಭದಲ್ಲಿ ಇವುಗಳ ಅಧ್ಯಯನ ಅನಿವಾರ್ಯವಾಗಿದೆ. ಇವುಗಳಿಂತ ಉತ್ತಮ ಆಕರಗಳು ಬೇರೊಂದಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಆದಾರ ಸಹಿತ ನಿರೂಪಿಸಲಾಗಿದೆ.

ಈ ಅಧ್ಯಯನದಲ್ಲಿ ಶಾಸನಗಳಲ್ಲಿ ಕಂಡುಬರುವ ಐತಿಹಾಸಿಕ ಅಂಶಗಳನ್ನಷ್ಟೆ ಗಮನಿಸದೆ ದಾನ ಕಾರ್ಯಗಳು, ದಾನಿಗಳು, ಆಡಳಿತ ಪದ್ಧತಿ, ತೆರಿಗೆ ಪದ್ಧತಿ ಉಲ್ಲೇಖವಾಗಿರುವ ಬಿರುದು ಬಾವಲಿಗಳು ಮತ್ತು ಇವೆಲ್ಲವುಗಳ ಜೊತೆಗೆ ಶಾಸನದಲ್ಲಿ ಕಂಡುಬರುವ ಶಿಲ್ಪ, ಸಾಂಕೇತಿಕ ಚಿತ್ರಣಗಳು ಮೊದಲಾದ ಅಂಶಗಳನ್ನು ವಿವಿಧ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ನಿಡುಗಲ್ಲಿನ ಶಾಸನಗಳ ಜೊತೆಗೆ ಪೂರಕವಾದ ಕೆಲವು ಇತರೆ ಶಾಸನಗಳನ್ನು ಬಳಸಿಕೊಳ್ಳಲಾಗಿದೆ.

ನಿಡುಗಲ್ಲು ನಗರದ ಪ್ರಾಚೀನ ಇತಿಹಾಸದಿಂದ ಪ್ರಾರಂಭಿಸಿ ಹದಿನೆಂಟನೇ ಶತಮಾನದವರೆಗಿನ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಕಾಲದ ದೃಷ್ಟಿಯಿಂದ ಮತ್ತು ವಿಷಯಗಳ ವ್ಯಾಪ್ತಿಯಿಂದ ಇದು ವಿಸ್ತಾರವಾಗಿ ಕಂಡರೂ ಅಧ್ಯಯನದ ಸಮಗ್ರತೆಯ ದೃಷ್ಟಿಯಿಂದ ಸಮಂಜಸವೆಂದು ಕಂಡುಬಂದಿತು. ಈ ಅಧ್ಯಯನಕ್ಕೆ ಪೂರಕವಾಗಿ ಈ ಸ್ಥಳದಲ್ಲಿ ಸೃಷ್ಟಿಯಾದ ಶಿಷ್ಟ ಹಾಗೂ ಜನಪದ ಸಾಹಿತ್ಯ ಪ್ರಕಾರಗಳೆರಡನ್ನೂ ಬಳಸಿಕೊಳ್ಳಲಾಗಿದೆ. ಮೇಲೆ ತಿಳಿಸಿದ ಸಾಂಸ್ಕೃತಿಕ ಅಂಶಗಳು ನಿಡುಗಲ್ಲು ಜನರ ಬದುಕಿನ ನಡುವೆಯೇ ಮೂಡಿ ಬಂದವುಗಳಾಗಿರುವುದರಿಂದ ಅಲ್ಲಿನ ಜನರ ನಿತ್ಯಭಾವನೆಗಳಿಗೂ ಮತ್ತು ಅಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳಿಗೂ ನೇರ ಸಂಬಂಧವಿದೆ. ಅಲ್ಲದೆ ಅಲ್ಲಿ ಅನೇಕ ಮಹಾಸತಿ ಶಿಲ್ಪಗಳು, ವೀರರ ಶಿಲ್ಪಗಳು ಮತ್ತು ಆತ್ಮಬಲಿ ಶಿಲ್ಪಗಳು ದೇವತೆಗಳಾಗಿ ಮಾರ್ಪಟ್ಟಿರುವುದು ಮೇಲಿನ ಅಂಶಕ್ಕೆ ಸಾಕ್ಷಿಗಳಾಗಿವೆ. ಜೊತೆಗೆ ೯೦೦ ವರ್ಷಗಳ ಕಾರಿದ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ನಿಡುಗಲ್ಲಿನ ಮೇಲೆ ಅನೇಕ ಕಥೆ, ಲಾವಣಿ, ಹಾಡುಗಳು ಅಲ್ಲಿನ ಜನರ ಬಾಯಿಯಲ್ಲಿ ಓಡಾಡುತ್ತಿದ್ದು, ಅವುಗಳನ್ನು ಸಂಗ್ರಹಿಸಿ ನಿಬಂಧದಲ್ಲಿ ನೀಡಬೇಕಾದುದು ಸಂಶೋಧಕನ ಕಾರ್ಯವಾಗಿದ್ದು ನನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡದಿರುವುದು ದುರದೃಷ್ಟಕರವಾದ ವಿಷಯವಾಗಿದೆ. ಒಂದು ಸ್ಥಳದ ಸಾಂಸ್ಕೃತಿಕ ಅಧ್ಯಯನದ

ಸಂದರ್ಭದಲ್ಲಿ ಅದರಲ್ಲಿಯೂ ಐತಿಹಾಸಿಕ ಸ್ಥಳವಾದ ನಿಡುಗಲ್ಲು ಪ್ರದೇಶದಲ್ಲಿ ಪರಂಪರಾಗತವಾಗಿ ಬಂದಿರುವ ಹಬ್ಬ-ಹರಿದಿನ, ಜಾತ್ರೆ-ಉತ್ಸವ, ನಂಬಿಕೆಗಳು ಇಂದಿಗೂ ಪ್ರಚಲಿತದಲ್ಲಿವೆ. ಅವುಗಳನ್ನು ಇಲ್ಲಿ ದೊರೆತಿರುವ ಆಕರಗಳ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

ಸಂಸ್ಕೃತಿ, ಕಲೆ, ಧರ್ಮದ ಪುನರುಜ್ಜೀವನ ಕಾರ್ಯದಲ್ಲಿ ಕರ್ನಾಟಕದ ಅರಸು ಮನೆತನಗಳ ಕೊಡುಗೆ ಅಪಾರವಾದುದು. ತಮ್ಮದೆ ಆದ ಕೊಡುಗೆಗಳನ್ನು ಜಗತ್ತಿನ ಇತಿಹಾಸಕ್ಕೆ ಅಮೂಲ್ಯವಾದ ಕಾಣಿಕೆಯಿತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಸ್ಥಳೀಯ ಅರಸರ, ಮಾಂಡಲೀಕರ, ಪಾಳೆಗಾರರ ಕೊಡುಗೆಯಂತೂ ಕಡಿಮೆಯಿಲ್ಲ. ಇಂತಹ ಸಂದರ್ಭದಲ್ಲಿ ನಿಡುಗಲ್ಲಿನ ವಿವಿಧ ಧರ್ಮದ ದೇವಾಲಯಗಳು, ಅವುಗಳ ರಚನೆ, ಉದ್ದೇಶ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಮುಂತಾದವುಗಳ ಬಗ್ಗೆ ಶಾಸನ, ಕ್ಷೇತ್ರಕಾರ್ಯ, ಐತಿಹ್ಯಗಳ ಹಿನ್ನೆಲೆಯಲ್ಲಿ ಸಮಗ್ರ ಅಧ್ಯಯನವನ್ನು ಮಾಡಲಾಗಿದೆ. ಹಾಗೆಯೇ ನಿಡುಗಲ್ಲು ಗ್ರಾಮದ ಈಗಿನ ಗ್ರಾಮ ದೇವತೆಗಳ ಉಗಮ, ವಿಕಾಸ ಈಗಿನ ಸ್ಥಿತಿಗತಿ ಮತ್ತು ಅವುಗಳ ಹೆಸರಿನಲ್ಲಿ ನಡೆಯುವ ಸಾಂಪ್ರಾದಾಯಿಕ, ಸಾಂಸ್ಕೃತಿಕ ಆಚರಣೆಗಳನ್ನು ಕುರಿತು ಅಧ್ಯಯನ ಮಾಡಲಾಗಿದ್ದು ಇದು ಈ ಪ್ರದೇಶದ ಮೊಟ್ಟ ಮೊದಲ ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕ, ಸಾಂಸ್ಕೃತಿಕ ಅಧ್ಯಯನವಾಗಿದೆ.

ನಿಡುಗಲ್ಲು ಸಾಂಸ್ಕೃತಿಕ ಅಧ್ಯಯನ ಸಮರ್ಪಕವೆನಿಸಬೇಕಾದರೆ ಆ ಸ್ಥಳದ ಈಗಿನ ಸಾಮಾಜಿಕ ಸ್ವರೂಪವು ಸಹ ಮುಖ್ಯ ಪಾತ್ರವಹಿಸುತ್ತದೆ. ಅದಕ್ಕಾಗಿ ಇಂದಿನ ಜನಾಂಗದ ಸ್ವರೂಪ, ವ್ಯವಹಾರ ಅವರು ಪಡೆದುಕೊಳ್ಳತ್ತಿರುವ ಸರ್ಕಾರದ ಸವಲತ್ತುಗಳು ಅವರ ಆರ್ಥಿಕ ಪರಿಸ್ಥಿತಿ, ಬೆಳೆ, ವೃತ್ತಿ, ರಾಜಕೀಯ ವ್ಯವಸ್ಥೆಗಳನ್ನು ಸಹ ಇಲ್ಲಿ ಅಧ್ಯಯನ ಮಾಡಲಾಗಿದೆ. ಮತ್ತೊಂದು ಪ್ರಮುಖ ಅಂಶವೆಂದರೆ ಈ ಅಧ್ಯಯನದ ಸಂದರ್ಭದಲ್ಲಿ ಶಾಸನಗಳನ್ನು ಮುಖ್ಯ ಆಕಾರಗಳಾಗಿ ಕೈಗೊಂಡು ಮಾಹಿತಿ ಸಂಗ್ರಹಿಸಿದ್ದೇನೆ. ಈ ಪ್ರದೇಶದ ಬಗೆಗೆ ಇದುವರೆವಿಗೂ ಯಾವುದೇ ರೀತಿಯ ಸಮಗ್ರ ಅಧ್ಯಯನ ನಡೆದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸಮಗ್ರ ಕ್ಷೇತ್ರಕಾರ್ಯ ನಡೆಸಿ ಆ ಕೊರತೆಯನ್ನು ಹೋಗಲಾಡಿಸಿದ್ದೇನೆ ಎಂಬ ತೃಪ್ತಿ ನನ್ನದಾಗಿದೆ. ಈ ಕಾರ್ಯದ ಮೂಲಕ ಆ ದುರ್ಗದಲ್ಲಿ ಮತ್ತು ಗ್ರಾಮದಲ್ಲಿ ಅಡಗಿದ್ದ ಶಾಸನಗಳನ್ನು ಮತ್ತು ದೇವಾಲಯಗಳನ್ನು ಮಹತ್ವದ ಆಕರ ಸಾಮಾಗ್ರಿಗಳ ಹಿನ್ನೆಲೆಯಲ್ಲಿ ಪ್ರಮುಖ ಅಂಶಗಳನ್ನೊಳಗೊಂಡ ನಿಡುಗಲ್ಲಿನ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಅಧ್ಯಯನವನ್ನು ಮೊಟ್ಟ ಮೊದಲ ಬಾರಿಗೆ ಈ ನಿಬಂಧದಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ.

ಇಷ್ಟೆಲ್ಲಾ ಹೇಳಿದರೂ ಇನ್ನೂ ಬೆಳಕಿಗೆ ಬಾರದ ಎಷ್ಟೋ ಚಿಕ್ಕ ಚಿಕ್ಕ ಸಾಂಸ್ಕೃತಿಕ ಆಚರಣೆಗಳು, ವಿಧಿ ವಿಧಾನಗಳು, ಪದ್ಧತಿಗಳು, ಜನಪದ ಸಾಹಿತ್ಯದ ಅಂಶಗಳನ್ನು ಕಾಣಬಹುದು. ಸಾಮಾಜಿಕ ಅಧ್ಯಯನ ಎನ್ನುವುದಕ್ಕೆ ವಿಸ್ತಾರವಾದ ಅರ್ಥ, ವಸ್ತು ಉಂಟು. ನಮ್ಮ ಅಧ್ಯಯನದಲ್ಲಿ ಅದಕ್ಕೆ ಕಡಿವಾಣ ಹಾಕಿ ಒಂದು ವ್ಯಾಪ್ತಿಯನ್ನು ಅಳವಡಿಸಿಕೊಳ್ಳಲಾಗಿದೆ. ಇಲ್ಲಿನ ಐತಿಹಾಸಿಕ

ಸ್ಮಾರಕಗಳನ್ನು ನೋಡಿದರೆ ಅವುಗಳ ದುಸ್ಥಿತಿಯ ಬಗೆಗೆ ನೋವಾಗುತ್ತದೆ. ಹೀಗೆ ನಮ್ಮ ಅಸಡ್ಡೆ ಮುಂದುವರೆದದ್ದೇ ಅದಲ್ಲಿ ಇನ್ನು ಕೆಲವು ವರ್ಷಗಳಲ್ಲಿ ಅದು ಸಂಪೂರ್ಣ ನಾಮಾವಶೇಷವಾಗಿ ಹೋಗಬಹುದು. ಇಲ್ಲಿನ ಬಹಳಷ್ಟು ದೇವಾಲಯಗಳ ಗರ್ಭ ಗುಡಿಯಲ್ಲಿ, ವೀರಗಲ್ಲುಗಳ ಕೆಳಗೆ, ವಿಗ್ರಹಗಳ ಕೆಳಗೆ, ಶಿಲ್ಪಗಳ ಕೆಳಗೆ, ಕೋಟೆಯ ಆಯಕಟ್ಟಿನ ಜಾಗಗಳಲ್ಲಿ ಅರಮನೆಯ ಗೋಡೆಯಲ್ಲಿ ನಿಧಿ ಹೂತಿರುತ್ತಾರೆ ಎಂಬ ಅಜ್ಞಾನದ ಫಲವಾಗಿ ಅವುಗಳನ್ನು ಆಗೆದು ಚಲ್ಲಾಡಿ ಹಾಳುಗೆಡವಿದ್ದಾರೆ. ಇವುಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಬೇಕು. ಆದರೆ ಈ ಕರ್ತವ್ಯಕ್ಕೂ ಅನೇಕ ಅಡ್ಡಿ ಆತಂಕಗಳಿವೆ. ಮೊದಲಿಗೆ ಜನಸಾಮಾನ್ಯರಲ್ಲಿ ಈ ಐತಿಹಾಸಿಕ ಸ್ಮಾರಕಗಳ ಬಗೆಗೆ ಜಾಗೃತಿಯನ್ನು ಮೂಡಿಸಬೇಕು.

ಮೊಟ್ಟ ಮೊದಲ ಬಾರಿಗೆ ಈ ಕ್ಷೇತ್ರದ ಕ್ಷೇತ್ರಕಾರ್ಯ ಕೈಗೊಂಡು ಪ್ರಾಚೀನ ನಿಡುಗಲ್ಲಿನ ಜನರ ಬದುಕನ್ನು ಅರಿಯಲು ನಮಗೆ ಅನೇಕ ರೀತಿಯ ದಾಖಲೆಗಳು ನೆರವಾಗಿವೆ. ಅವುಗಳಲ್ಲಿ ಶಾಸನಗಳು ಈಗಾಗಲೇ ದಾಖಲೆಗೊಂಡಿದ್ದರೂ ಅಲ್ಲಿನ ವಿಷಯಗಳ ಚರ್ಚೆ ಆಗಿರಲಿಲ್ಲ. ನಮ್ಮ ಅಧ್ಯಯನದಲ್ಲಿ ಮುಖ್ಯವಾಗಿ ಶಾಸನಗಳು, ದೇವಾಲಯಗಳು ಅದಕ್ಕೆ ಕೆಲವು ಪ್ರಮುಖ ಆಚರಣೆಗಳನ್ನು ಮೊದಲಾದ ಅಂಶಗಳನ್ನು ವಿವರವಾಗಿ ಮೊದಲ ಬಾರಿಗೆ ಚರ್ಚಿಸಲಾಗಿದೆ. ಇದರಿಂದಾಗಿ ಇಲ್ಲಿನ ಪ್ರಾಚೀನ ಸಂಸ್ಕೃತಿಯನ್ನು ಅದರ ವೈಭವ, ಇತಿಹಾಸ ಮತ್ತು ಜನಜೀವನವನ್ನು ಅರಿಯವವರಿಗೆ ಈ ನನ್ನ ನಿಬಂಧ ಸಹಾಯಕವಾಗುತ್ತದೆಂಬುದು ನನ್ನ ಆಶಯವಾಗಿದೆ.

ಒಂದು ಸಮಾಧಾನದ ಸಂಗತಿಯೆಂದರೆ ಇಲ್ಲಿನ ಅನೇಕ ದೇವಾಲಯಗಳಲ್ಲಿ ಮತ್ತು ಇತರೆಡೆಗಳಲ್ಲಿ ಅನಾದಾರಕ್ಕೆ ಒಳಗಾಗಿದ್ದ ಮೂರ್ತಿಗಳನ್ನು, ವಿಗ್ರಹಗಳನ್ನು ಇತ್ತೀಚೆಗೆ ಕೆಲವು ಯುವಕರು ಅಲ್ಲಲ್ಲಿ ಸುಸ್ಥಿತಿಯಲ್ಲಿರುವ ದೇವಾಲಯಗಳಲ್ಲಿ ಇಟ್ಟು ರಕ್ಷಿಸಿದ್ದಾರೆ. ಆದರೂ ಆ ಕೆಲಸ ಸಮರ್ಪಕವಾಗಿ ಆಗಿಲ್ಲ. ರಾಜ್ಯ ಸರ್ಕಾರದ ಪುರಾತತ್ವ ಇಲಾಖೆಯವರು, ಪ್ರವಾಸೋದ್ಯಮ ಇಲಾಖೆಯವರು ಮ್ಯೂಸಿಯಂ ಮಾಡಿ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿ ಸಿಗುವ ಅನೇಕ ವಿಗ್ರಹಗಳನ್ನು, ಮೂರ್ತಿಗಳನ್ನು ಫಿರಂಗಿ ತುಂಡುಗಳನ್ನು ಮುಂತಾದವುಗಳನ್ನು ಒಂದೆಡೆ ಸಂಗ್ರಹಿಸಿಟ್ಟರೆ ಮಹಾಉಪಯೋಗವಾಗುತ್ತದೆ ಎಂಬುದು ನನ್ನ ಕ್ಷೇತ್ರಕಾರ್ಯದಿಂದ ಬಂದ ನಂಬಿಕೆ.

ಅಧ್ಯಯನದ ಫಲಿತಗಳು:

ನಿಡುಗಲ್ಲಿನ ಶಾಸನಗಳಲ್ಲಿ ಅಂದಿನ ರಾಜ್ಯ ಆಡಳಿತದ ಹೊಲಮೇರೆ ಅಥವಾ ಸೀಮೆಯನ್ನು ಗುರುತಿಸಿರುವುದು ಕಂಡುಬರುತ್ತದೆ. ದೊಡ್ಡೇರಿ ಸೀಮೆ, ಸೀರ್ರ್ಯಾ (ಶಿರಾ), ತಾವರೆಗೆರೆ, ಹಿರಿಯೂರು, ಐಮಂಗಲ ಎಂದು ಗುರುತಿಸಿದ್ದೇನೆ.

ನಿಡುಗಲ್ಲಿನ ಆಡಳಿತದಲ್ಲಿ ಶೈವಧರ್ಮ ರಾಜಧರ್ಮವಾಗಿದ್ದು, ಇದಕ್ಕೆ ಸಾಕ್ಷಿಯಂಬಂತೆ ಅತಿ ಹೆಚ್ಚಿನ ಶೈವ ದೇವಾಲಯಗಳು ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ನೀಡಿದ ದಾನ, ಧರ್ಮ, ದತ್ತಿ ನೀಡಿದ ಶಾಸನಗಳು ಅಗ್ರಹಾರಗಳ ಉಲ್ಲೇಖಗಳಿಂದ ತಿಳಿಮುಬರುತ್ತದೆ.

ನಿಡುಗಲ್ಲಿನಲ್ಲಿ ಹತ್ತನೇ ಶತಮಾನದವರೆಗೂ ಜೈನಧರ್ಮ ಪ್ರವರ್ಧಮಾನದಲ್ಲಿದ್ದು ಹನ್ನೆರಡನೇ ಶತಮಾನದಲ್ಲಿ ಶೈವಧರ್ಮ ಪ್ರಬಲವಾಯಿತೆಂದು ಶಾಸನಗಳಿಂದ ತಿಳಿದುಬರುತ್ತದೆ.

ಅಂದಿನ ನಿಡುಗಲ್ಲು ಸಂಸ್ಥಾನದಲ್ಲಿ ಶಿಕ್ಷಣ ಕೇಂದ್ರಗಳಾಗಿ ಅಗ್ರಹಾರಗಳು, ಘಟಿಕಾಸ್ಥಾನಗಳು, ಮತ್ತು ಬ್ರಹ್ಮಪುರಿಗಳಲ್ಲಿ ವಿದ್ಯಾರ್ಜನೆ ನಡೆಯುತ್ತಿದ್ದುದೆಂದು ತಿಳಿದುಬರುತ್ತದೆ.

ನಿಡುಗಲ್ಲು ಸಂಸ್ಥಾನದ ಅರಸರು ಮತ್ತು ಮಾಂಡಲೀಕರು ನೀರಾವರಿ ವ್ಯವಸ್ಥೆಗೆ ಹೆಚ್ಚಿನದಾಗಿ ಪ್ರೋತ್ಸಾಹ ನೀಡಿದ್ದರೆಂದು ಹಾಗೂ ವಿಭಿನ್ನ ರೀತಿಯ ತೆರಿಗೆಗಳು ಅಸ್ತಿತ್ವದಲ್ಲಿದ್ದವೆಂದು ಶಾಸನಧ್ಯಯನದಿಂದ ತಿಳಿದುಬರುತ್ತದೆ.

ಭಾಷಿಕ ವಿಚಾರಗಳಿಗೆ ಸಂಬಂಧಿಸಿದಂತೆ ನಿಡುಗಲ್ಲಿನ ಶಾಸನಗಳು ಕನ್ನಡ, ತೆಲುಗು, ಸಂಸ್ಕೃತ ಮಿಶ್ರಿತವಾಗಿ ರಚನೆಯಾಗಿದ್ದು, ಕನ್ನಡ ಭಾಷೆಯ ತೆಲುಗು ಲಿಪಿಯಲ್ಲಿ ರಚನೆಯಾಗಿರುವುದು ಕೆಲವು ಶಾಸನಗಳನ್ನು ಗಮನಿಸಬಹುದು.

ನಿಡುಗಲ್ಲಿನ ಪ್ರದೇಶದಲ್ಲಿ ಅತಿ ಹೆಚ್ಚಿನದಾಗಿ ಆತ್ಮಬಲಿದಾನ ಶಿಲ್ಪಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು ಮತ್ತು ನಿಷೇಧಗಲ್ಲುಗಳು ಹೆಚ್ಚಿನದಾಗಿ ಕಂಡುಬರುತ್ತವೆ.

ನಿಡುಗಲ್ಲು ದುರ್ಗವು ಪುಣ್ಯಕ್ಷೇತ್ರವಾಗಿದ್ದು, ಮಹಾಭಾರತದ ಕಾಲದಲ್ಲಿ ಪಾಂಡವರು ವನವಾಸಕ್ಕಾಗಿ ರಾಮಾಯಣದ ಕಾಲದಲ್ಲಿ ಶ್ರೀರಾಮನು ಸೀತಾನ್ವೇಷಣೆಗಾಗಿ ಬಂದಂತಹ ಕೆಲವು ಐತಿಹ್ಯಗಳು ಇಲ್ಲಿ ಕಂಡುಬಂದಿವೆ.

ನಿಡುಗಲ್ಲು ರಾಜರು ಮತ್ತು ಮಾಂಡಲೀಕರು ಭೂಮಿಯನ್ನು ದಾನನೀಡಿದ ಅದರ ಮೇರೆಯನ್ನು ಗುರುತಿಸಲು ಶೈವರಿಗೆ ನೀಡಿದ ಭೂಮಿಯ ಮೇರೆಯನ್ನು ಗುರುತಿಸಲು ಲಿಂಗಮುದ್ರೆ ಕಲ್ಲು ಮತ್ತು ಜೈನರಿಗೆ ನೀಡಿದ ಭೂಮಿಯನ್ನು ಗುರುತಿಸಲು ಮುಕ್ಕೂಡೆಕಲ್ಲು ಎಂದು ಮುಕ್ಕೂಡೆ ಚಿತ್ರವಿರುವ ಕಲ್ಲನ್ನು ಮತ್ತು ಶಿವಲಿಂಗದ ಚಿತ್ರವಿರುವ ಕಲ್ಲನ್ನು ಸ್ಥಾಪಿಸುತ್ತಿದ್ದರೆಂದು ಈ ಜೈನರ ಪಾದಮುದ್ರಿಕೆ ಕಲ್ಲುಗಳು ಕಾಣಬಹುದಾಗಿದೆ.

ನಿಡುಗಲ್ಲಿನ ಮಾಂಡಲೀಕರು ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಕೆರೆಗಳು, ದೋಣೆಗಳು, ಕಲ್ಯಾಣಿಗಳು, ಕೊಳಗಳು ನಿರ್ಮಿಸಿರುವುದು ಶಾಸನಗಳಿಂದ ಮತ್ತು ಪ್ರಸ್ತುತ ಇಂದಿಗೂ ಕಾಣಬಹುದಾಗಿದೆ.

ನಿಡುಗಲ್ಲಿನ ಅರಸರ ಕಾಲದಲ್ಲಿ ನಿರ್ಮಿತವಾದ ಹಲವಾರು ದೇವಾಲಯಗಳು, ಹಾಳಾಗುತ್ತಿದ್ದ ಸಂಬಂಧಪಟ್ಟ ಇಲಾಖೆಗಳು ಸೂಕ್ಷ್ಮ ಕ್ರಮಕೈಗೊಳ್ಳುವುದು ಅವಶ್ಯಕವಾಗಿ ತಿಳಿದುಬರುತ್ತದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಮೂಲ ಆಕರಗಳು

Epigraphic carnatica,vols, 12th and 16th old edition.

Karnataka inscription, vols, 1,2,3, Karnataka university

South Indian inscription, vols, 4th -11th

Mysore archaeological annual reports, Mysore

Tumukur district gazetteer

Andhra Pradesh government report on epigraphy

ಆನುಷಂಗಿಕ ಆಕರಗಳು

ಕಲಬುರ್ಗಿ ಎಂ.ಎಂ, ಶಾಸನ ವ್ಯಾಸಾಂಗ೨, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ. ೧೯೭೫

ಕಲಬುರ್ಗಿ ಎಂ.ಎಂ, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಐ.ಬಿ.ಎಚ್ ಪ್ರಕಾಶನ ಬೆಂಗಳೂರು, ೧೯೮೦

ಗಣೇಶ ಕೆ.ಆರ್, ಆಂದ್ರಪ್ರದೇಶದ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

ಚಿದಾನಂದಮೂರ್ತಿ ಎಂ, ಸಂಶೋಧನ ತರಂಗ ೨, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೦

ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬

ಚಿದಾನಂದಮೂರ್ತಿ ಎಂ, ಹೊಸತು ಹೊಸತು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೧೯೯೮

ಚೆಲುವರಾಜನ್. ವಿ.ಆರ್, ಪಾವಗಡ ತಾಲೂಕು ದರ್ಶನ, ಐ.ಬಿ.ಎಚ್ ಪ್ರಕಾಶನ ಬೆಂಗಳೂರು, ೧೯೮೪

ಚಿತ್ತಯ್ಯ ಪೂಜಾರ್.ಡಿ.ಕೆ, ನಿಡುಗಲ್ಲು ದುರ್ಗದ ಕಥನ, ಸೃಷ್ಟಿ ಪ್ರಕಾಶನ ಬೆಂಗಳೂರು, ೨೦೦೦

ಚಿತ್ತಯ್ಯ ಪೂಜಾರ್.ಡಿ.ಕೆ, ಗಡಿನಾಡ ನುಡಿಸೇವಕ, ಶ್ರೀ ರೇಣುಕಾದೇವಿ ಶೈಕ್ಷಣಿಕ ದತ್ತಿ ಪ್ರಕಾಶನ, ಮಹದೇವಪುರ, ೨೦೦೩

ತಿಪ್ಪೇರುದ್ರಸ್ವಾಮಿ. ಎಚ್. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ ಮೂರ್ತಿ. ಮೈಸೂರು. ೧೯೬೮

ತಿಪ್ಪೇಸ್ವಾಮಿ ಜಿ.ಆರ್. ಪ್ರಸ್ತಾಪ. ಶಂಬೂಕ ಪ್ರಕಾಶನ. ಗೌರಿಬಿದನೂರು. ೧೯೭೧

ನರಸಿಂಹಾಚಾರ್. ಆರ್. ಶಾಸನ ಪದ್ಯಮಂಜರಿ. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ೧೯೮೬

ನಾಗರಾಜು. ಎಂ.ಜಿ. ಶಾಸನ ಶಿಲ್ಪಗಳು. ಶ್ರೀಗೌರಿಗಂಗಾ ಪ್ರಕಾಶನ. ಬೆಂಗಳೂರು. ೧೯೯೦

ನಾಗರಾಜಯ್ಯ. ಹಂಪಾ. ಯಾಪನೀಯ ಸಂಗಢ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ. ೧೯೯೯

ಪ.ಷ. ತಾ.ಸ. ನಿಡುಗಲ್ಲು ವೈಭವ, ಶ್ರೀಗೀತಾ ಪ್ರಕಾಶನ, ಚಿತ್ರದುರ್ಗ, ೧೯೭೫

ಪರಮಶಿವಮೂರ್ತಿ.ಡಿ.ವಿ. ಸಂಶೋಧನ ಸಿರಿ, ಗುಣನಿಧಿ ಪ್ರಕಾಶನ, ಬೆಂಗಳೂರು, ೧೯೯೬

ಪರಮಶಿವಮೂರ್ತಿ.ಡಿ.ವಿ. ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೫

ಬಸವರಾಜ. ಡಿ.ಆರ್, ನಿಡುಗಲ್ಲು ದುರ್ಗ, ಪ್ರಮೋದ ಪ್ರಕಾಶನ, ಬೆಂಗಳೂರು, ೧೯೯೪

ಮೇವುಂಡಿ ಮಲ್ಲಾರಿ, ಕನ್ನಡ ನಾಡಿನ ಶಾಸನ ಕವಿಗಳು, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೭೮

ರಘುನಾಥ ಭಟ್ಟ್. ಎಚ್.ಆರ್, ಕರ್ನಾಟಕ ಶಾಸನ ಕಲೆ, ಮೈಸೂರು ಭಾರತಿ ಪ್ರಕಾಶನ, ೧೯೭೭

ರಮೇಶ. ಕೆ.ವಿ. ಕರ್ನಾಟಕ ಶಾಸನ ಸಮೀಕ್ಷೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೧

ರಾಮಚಂದ್ರರಾವ್ ಎಸ್.ಕೆ, ಮೂರ್ತಿಶಿಲ್ಪ ನೆಲೆ-ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

ಶೆಟ್ಟರ್.ಎಸ್, ಶ್ರವಣಬೆಳಗೊಳ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು, ೧೯೮೦


ಶೇಷಶಾಸ್ತ್ರಿ. ಆರ್. ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

ಸ್ವಾಮಿ. ಬಿ.ಜಿ.ಎಲ್, ಶಾಸನಗಳಲ್ಲಿ ಗಿಡಮರಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫


ಹಿರೇಮಠ. ಬಿ.ಆರ್, ವೀರಗಲ್ಲುಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

ಹಿರೇಮಠ. ಬಿ.ಆರ್, ಕರ್ನಾಟಕ ಶಾಸನಗಳಲ್ಲಿ ವರ್ತಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

ಚಿತ್ರಪಟಗಳು




ನಿಡುಗಲ್ಲು ದುರ್ಗ



ನಗರೇಶ್ವರ ದೇವಾಲಯ



ಲಕ್ಷ್ಮಣೇಶ್ವರ ದೊಣೆ



ನಗರೇಶ್ವರ ದೇವಸ್ಥಾನದಲ್ಲಿರುವ ಶಾಸನ




ಕಾಳಹಸ್ತೇಶ್ವರ ದೇವಾಲಯದಲ್ಲಿರುವ ಶಾಸನ



ಸೋಮೇಶ್ವರ ಮತ್ತು ವೀರಭದ್ರೇಶ್ವರ ದೇವಾಲಯಗಳು



ಜೋಗವಟ್ಟಿಗೆ ಬಸದಿಯಲ್ಲಿರುವ ಪಾರ್ಶ್ವನಾಥ ಜಿನಪ್ರತಿಮೆ



ನಿಡುಗಲ್ಲು ನಕ್ಷೆ

ಕನ್ನಡ ವಿಶ್ವವಿದ್ಯಾಲಯ

ಶಾಸನಶಾಸ್ತ್ರ ವಿಭಾಗ